
ಪ್ರಬುದ್ಧ ಕರ್ಣಾಟಕ



೧೮೨

ಪ್ರಸಾರಾಂಗ :: ಮೈಸೂರು ವಿಶ್ವವಿದ್ಯಾನಿಲಯ

ಲೇಖಕರಿಗೆ ಸೂಚನೆಗಳು

೧. 'ಪ್ರಬುದ್ಧ ಕರ್ಣಾಟಕ'ದಲ್ಲಿ ಪ್ರಕಟನೆಗಾಗಿ ಎಲ್ಲ ಬಗೆಯ ಲೇಖನಗಳಿಗೂ ಸ್ವಾಗತವಿದೆ. ಲೇಖನಗಳು ಸ್ವತಂತ್ರವಾಗಿರಬಹುದು, ಇಲ್ಲವೆ ಅನುವಾದಗಳಾಗಿರಬಹುದು. ಅನುವಾದವಾಗಿದ್ದರೆ ಮೂಲಲೇಖಕರ ಹಾಗೂ ಲೇಖನದ ಹೆಸರನ್ನು ತಪ್ಪದೆ ಸೂಚಿಸಿದ್ದು, ಲೇಖನದ ಜೊತೆಯಲ್ಲಿಯೇ ಮೂಲಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನು ಕಳುಹಿಸಬೇಕು.

೨. ಲೇಖನಗಳನ್ನು ಕಾಗದದ ಒಂದೇ ಮಗ್ಗುಲಿನಲ್ಲಿ ಸ್ಪಷ್ಟವಾಗಿ ಬರೆದಿರಬೇಕು. ಇಲ್ಲವೇ ಟೈಪ್ ಮಾಡಿರಬೇಕು. ಲೇಖನದೊಂದಿಗೆ ಲೇಖಕರ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು. ಲೇಖಕರಿಗೆ ಕರಡನ್ನು ತಿದ್ದುವ ಅವಕಾಶವಿಲ್ಲದಿರುವುದರಿಂದ ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿರಬಾರದು; ಅಸಂಪೂರ್ಣವಾಗಿರಬಾರದು. ಲೇಖನಗಳು ಸಚಿತ್ರವಾಗಿದ್ದರೆ, ಲೇಖನದಲ್ಲಿ ಚಿತ್ರಗಳು ಇರಬೇಕಾದ ಜಾಗವನ್ನು ನಿರ್ದೇಶಿಸಿರಬೇಕು.

೩. ಲೇಖನಗಳಲ್ಲಿ, ಇಂಗ್ಲಿಷನ್ನುಳಿದ ಅನ್ಯಭಾಷೆಗಳ ಉದ್ಧರಿತ ಭಾಗಗಳು ಕನ್ನಡ ಲಿಪಿಯಲ್ಲೇ ಇರಬೇಕು. ಅಡಿ ಟಿಪ್ಪಣಿಗಳಲ್ಲಿ, ಲೇಖಕರ ಹೆಸರು, ಪುಸ್ತಕ ಅಥವಾ ಲೇಖನಗಳ ಹೆಸರು, ಪ್ರಕಾಶಕರ ಹೆಸರು, ಸ್ಥಳ, ಪ್ರಕಟಣೆಯ ವರ್ಷ ಹಾಗೂ ಸಂಬಂಧಿಸಿದ ಪುಟಸಂಖ್ಯೆ ಇವುಗಳನ್ನು ಖಚಿತವಾಗಿ ನಮೂದಿಸಿರಬೇಕು. ಮಾದರಿಗಾಗಿ ಇಲ್ಲಿ ಎರಡು ಉದಾಹರಣೆಗಳನ್ನು ಕೊಟ್ಟಿದೆ:

ನರಸಿಂಹಾಚಾರ್, ಡಿ. ಎಲ್., ಕನ್ನಡ ಗ್ರಂಥಸಂಪಾದನೆ (ಶಾರದಾಮಂದಿರ, ಮೈಸೂರು), ೧೯೬೪, ಪು. ೧೬.

Sreekantaiya, T. N., 'A Century and a Half of Literary Activity in Kannada,' Kannada Studies, Vol. 1, No. 2 (Mysore 1965), p.62.

೪. ಕನ್ನಡ, ಇಂಗ್ಲಿಷ್, ಸಂಸ್ಕೃತ, ತೆಲುಗು ಮತ್ತು ಹಿಂದಿ ಭಾಷೆಗಳ ಪುಸ್ತಕಗಳನ್ನು ವಿಮರ್ಶೆಗಾಗಿ ಸ್ವೀಕರಿಸಲಾಗುತ್ತದೆ. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು.

೫. ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಒದಗಿಸಲಾಗುತ್ತದೆ. ತಗಲಬಹುದಾದ ವೆಚ್ಚವನ್ನು ವಹಿಸಿದರೆ ಹೆಚ್ಚಿಗೆ ಪ್ರತಿಗಳನ್ನೂ ಒದಗಿಸಲಾಗುತ್ತೆ. ಲೇಖನ ಸ್ವೀಕೃತವೇ ಇಲ್ಲವೇ ಎಂಬುದನ್ನು ತಿಳಿಯಬಯಸುವವರು, ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆ ಚೀಟಿಗಳನ್ನು ಕಳುಹಿಸಬೇಕು.

೬. ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು, **ಸಂಪಾದಕರು, ಪ್ರಬುದ್ಧ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೬,** ಇವರಿಗೆ ಕಳುಹಿಸಬೇಕು.

ಪ್ರಬುದ್ಧ ಕರ್ಣಾಟಕ

ಸಂಪುಟ ೭೨ ಸಂಚಿಕೆ–೧

೨೮೩

ಶ್ರೀ ಪ್ರಮೋದ ಸಂವತ್ಸರ

ಚೈತ್ರ ಸಂಚಿಕೆ

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೯೦

PRABUDDHA KARNATAKA, Kannada Quarterly of the *University of Mysore*, Volume 72, Number 1, April 1990, Edited by G. H. Nayak and Lakshminarayana Aurora.

ಪ್ರಧಾನ ಸಂಪಾದಕರು

ಡಾ. ಸಿ. ಪಿ. ಕೃಷ್ಣಕುಮಾರ್

ಸಂಪಾದಕರು

ಜಿ. ಎಚ್. ನಾಯಕ

ಲಕ್ಷ್ಮೀನಾರಾಯಣ ಅರೋರಾ

ಪ್ರಕಾಶಕರು

ಕೆ. ಟಿ. ವೀರಪ್ಪ

ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೫೭೦ ೦೦೬

ಮುದ್ರಕರು

ಬಿ. ಎಸ್. ಸಿದ್ದೇಗೌಡ

ಕಾರ್ಯಭಾರಿ ನಿರ್ದೇಶಕರು

ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು ೫೭೦ ೦೦೬

ವಿಷಯ ಸೂಚಿ

ಈ ಸಂಚಿಕೆಯ ಲೇಖಕರು

೧.	ಡಾ. ಟಿ. ವಿ ವೆಂಕಟಾಚಲಶಾಸ್ತ್ರೀ	ಕನ್ನಡ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ೫೭೦೦೦೬
೨.	ಟಿ. ಸಿ. ಪೂರ್ಣಿಮಾ	ನಂ.೨೨/೫, ಪೂರ್ವ ಆಂಜನೇಯ ರಸ್ತೆ, ಬಸವನಗುಡಿ, ಬೆಂಗಳೂರು ೫೬೦೦೦೪
೩.	ಡಾ. ನೀ. ಕೃ. ರಾಮಶೇಷನ್	೧೪೭೪, ೭ನೇ ಅಡ್ಡರಸ್ತೆ, ಕೃಷ್ಣಮೂರ್ತಿಪುರಂ, ಮೈಸೂರು–೪
೪.	ಸೀತಾರಾಮ ಜಾಗೀರ್‌ದಾರ್	ಶಾಸನ ಸಹಾಯಕರು, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ೫೭೦೦೦೬
೫.	ಎನ್. ಎಸ್. ಶಾರದಾಪ್ರಸಾದ್	ಸಹಾಯಕ ಭಾಷಾಂತರಕಾರರು, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ೫೭೦೦೦೬
೬.	ಡಾ. ಹಿ. ಶಿ. ರಾಮಚಂದ್ರೇಗೌಡ	ಜಾನಪದ ರೀಡರ್, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ೫೭೦೦೦೬
೭.	ಡಾ. ಮ. ಸು. ಕೃಷ್ಣಮೂರ್ತಿ	ಪ್ರಾಧ್ಯಾಪಕರು, ಸ್ನಾತಕೋತ್ತರ ಹಿಂದಿ ಅಧ್ಯಯನ ಮತ್ತು ಸಂಶೋಧನ ವಿಭಾಗ, ಮಾನಸಗಂಗೋತ್ರಿ, ಮೈಸೂರು ೫೭೦೦೦೬
೮.	ಡಾ. ಕೆ. ಕೆಂಪೇಗೌಡ	ಭಾಷಾವಿಜ್ಞಾನ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ೫೭೦೦೦೬
೯.	ಡಾ. ಎಚ್. ಎಸ್. ಸುಜಾತಾ	ಕನ್ನಡ ರೀಡರ್, ಡಿ. ಬನುಮಯ್ಯನವರ ಕಾಲೇಜು, ಮೈಸೂರು ೫೭೦೦೦೧
೧೦.	ಸಾ. ರಾ. ನರಸಿಂಹಪ್ರಸಾದ್	ದ್ವಿತೀಯ ಎಂ.ಎ. (ಕನ್ನಡ), ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾನಿಲಯ, ಜ್ಞಾನಭಾರತಿ, ಬೆಂಗಳೂರು–೫೬೦೦೫೬

ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರೀ

ವರ್ಣಸಮ ವೃತ್ತಗಳ ನಾಮಾಂಕನದ ಔಚಿತ್ಯವಿಚಾರ

ಪಿಂಗಲನೂ ಅನಂತರಕಾಲದ ಛಂದಶ್ಶಾಸ್ತ್ರಕಾರರೂ ಕಾವ್ಯ ಮತ್ತು ಶಾಸ್ತ್ರೋಪಯುಕ್ತ ಹಾಗೂ ಸ್ವನಿದರ್ಶಿತ ವರ್ಣಸಮ ವೃತ್ತಗಳಿಗೆ ಗುರುತಿಗಾಗಿ ಕೊಟ್ಟಿರುವ ನಾಮಾಂಕನಗಳು ಸು. ೬೦೦ಕ್ಕೆ ಹೆಚ್ಚಾಗಿವೆ ಎಂದು ತಿಳಿಯಲಾಗಿದೆ. ಇವುಗಳಲ್ಲಿ ಮಾಲಾವೃತ್ತಗಳೂ ಸೇರಿವೆ. ದಂಡಕಗಳು, ಅರ್ಧಸಮ ಮತ್ತು ವಿಷಮವೃತ್ತಗಳನ್ನು ಇಲ್ಲಿ ಸದ್ಯಕ್ಕೆ ಗಣಿಸಬೇಕಾಗಿಲ್ಲ.

ವೃತ್ತಗಳಿಗೆ ಹೀಗೆ ಗುರುತಿಗೆ ಹೆಸರುಗಳನ್ನು ಕೊಡುವುದರಲ್ಲಿ ಏನಾದರೂ ಕ್ರಮವುಂಟೇ, ಸಾರ್ಥಕತೆಯುಂಟೇ ಎಂಬುದು ಪರಿಶೀಲಿಸತಕ್ಕ ವಿಚಾರ. ಅಂತಹ ಪರಿಶೀಲನೆ ತಕ್ಕ ವ್ಯಾಪ್ತಿಯಲ್ಲಿ ಈವರೆಗೆ ನಡೆದಿರುವ ಹಾಗೆ ನನಗೆ ಕಂಡುಬಂದಿಲ್ಲ. ಪ್ರಾಸ್ತಾವಿಕ ಪ್ರಯತ್ನಗಳೇನೋ ಉಂಟು. ವೃತ್ತದ ಸಾಮಾನ್ಯಲಕ್ಷಣ, ವಿನಿಯೋಗದ ಔಚಿತ್ಯ, ರಸಭಾವಗಳ ಸಂಚಾರ ಉತ್ಕರ್ಷ ಮೊದಲಾದುವುಗಳಿಗೆ ವರ್ಣವಿನ್ಯಾಸ ಪದವಿನ್ಯಾಸಗಳಿಂದ ಉಂಟಾಗುವ ಪ್ರಯೋಜನ–ಈ ಕೆಲವು ಅಂಶಗಳಿಗೆ ಕೊಂಚಮಟ್ಟಿಗೆ ಗಮನ ಸಂದಿದೆಯಾದರೂ, ವೃತ್ತ ನಾಮಾಂಕನದ ಔಚಿತ್ಯ ವಿಚಾರಚರ್ಚೆ ಬಲುಮಟ್ಟಿಗೆ ಅಲಕ್ಷಿತವೆಂದೇ ಹೇಳಬೇಕಾಗಿದೆ.

(ಅ) ಶ್ರೀ ಕೃಷ್ಣ ಚೈತನ್ಯ ತಮ್ಮ ಸಂಸ್ಕೃತ ಸಾಹಿತ್ಯಚರಿತ್ರೆಯಲ್ಲಿ ಹೇಳಿರುವುದು :

The names of metres suggest an intimate bond between art and life, lyrical feeling and the world of nature which quickens it (*ANHSL.*, 1962, pp. 241–42).

(ಆ) ಎಚ್. ಡಿ. ವೇಲಣಕರ್ ಅವರು ತಮ್ಮ ಸಂಕಲಿತ ಕೃತಿ 'ಜಯದಾಮನ್' ಪೀಠಿಕೆಯಲ್ಲಿ, ಈ ಮೊದಲೇ, ಇನ್ನೂ ವಿವರವಾಗಿ ಹೀಗೆ ನಿರೂಪಿಸಿದ್ದಾರೆ (*J.D., 1949, pp. 58–59*):

"The names appear to have been given at random and only rarely do they signify the rhythm, the nature, the appearance or the figure when drawn in a picture, of the particular metre. Such for example are to be found among those which end in words like gati, vilāsa, vibhrama, vilasita, lalita, vikrīḍita and the like, attached to the names of birds and animals. Names of animals and birds, of trees and creepers particularly the flowering ones, of ornaments and decorations are freely used; but proper names of human beings are extremely rare, though romantically significant adjectives used by the Sanskrit poets for men and women are quite in abundance here. When the names consist of compounds, words like mālā, latā, mukha, prabhā, locana, pada, bhāṣiṇi, madhyā, lekhā, dāma and their synonyms, besides the words indicative of movement noted above, are employed as the second members."

ಮುಂದುವರಿದು ಅವರು ಇನ್ನೂ ಒಂದು ಸಂಗತಿಯನ್ನು ಕುರಿತಿದ್ದಾರೆ: ಒಂದೇ ಛಂದಸ್ಸಿಗೆ ಬೇರೆ ಬೇರೆ ಲೇಖಕರು ಬೇರೆ ಬೇರೆ ಹೆಸರುಗಳನ್ನು ಕೊಟ್ಟಿದ್ದಾರೆ; ಹಾಗೆಯೇ ಬೇರೆ ಬೇರೆ ಛಂದಸ್ಸುಗಳಿಗೆ ಬೇರೆ ಬೇರೆ ಲೇಖಕರು ಒಂದೇ ಹೆಸರು ಕೊಟ್ಟಿರುವುದೂ ಇದೆ. ಈ ಎರಡನೆಯ ರೀತಿಯ ಹೆಸರುಗಳಲ್ಲಿ, ಐದು ಛಂದಸ್ಸುಗಳಿಗೂ ಹೆಚ್ಚಿನವಕ್ಕೆ ಚಂದ್ರಲೇಖಾ, ಚಂದ್ರಿಕಾ, ಜಯಾ, ನಂದಿನೀ, ರುಚಿರಾ, ಲಕ್ಷ್ಮೀ, ಲಲಿತಾ ಎಂಬುದಾಗಿ ಹೆಸರುಗಳನ್ನು ಹೇಳಿರುವುದುಂಟು. ಛಂದಸ್ಸುಗಳ ಹೆಸರುಗಳ ಸಂಬಂಧದಲ್ಲಿ ಜೈನಕರ್ತೃಗಳ ನಡುವೆ ಒಂದು ನಿರ್ದಿಷ್ಟಸಂಪ್ರದಾಯವನ್ನು ಗುರುತಿಸುವುದೂ ಕೆಲವೊಮ್ಮೆ ಸಾಧ್ಯವಾಗುತ್ತದೆ.

ಹೀಗೆ ಪ್ರಕೃತಿಯ ಜೈವಿಕ ಮತ್ತು ಭೌತ ವಸ್ತುಗಳ ನಾಮ ರೂಪ ಕ್ರಿಯೆಗಳಿಗೂ ಕವಿ ಕಂಡರಿಸುವ ಸೌಂದರ್ಯವಸ್ತು ಎನ್ನಬಹುದಾದ ಕವಿತೆಗೂ ಸಂಬಂಧವುಂಟೆಂದು ತಿಳಿಯಲು ಅವಕಾಶವಿದೆ; ಬದುಕು ಕಲೆಗಳ ನಡುವೆ, ಆಸ್ವಾದ್ಯವಾಗುವ ಕಾವ್ಯಭಾವ ಮತ್ತು ಅದನ್ನು ಉನ್ಮೀಲನಗೊಳಿಸುವ ಅಥವಾ ಉದ್ಬೋಧಗೊಳಿಸುವ ಪ್ರಕೃತಿಪ್ರಪಂಚದ ನಡುವೆ ಒಂದು ಆತ್ಮೀಯ ಸಂಬಂಧವುಂಟೆಂದು ವೃತ್ತನಾಮಗಳ ಪರಿಶೀಲನೆಯಿಂದ ಭಾವಿಸಬಹುದಾಗಿದೆ–ಎನ್ನುವ ವಿಷಯದಲ್ಲಿ ಪ್ರಮಾಣಭೇದವೇನೇ ಇದ್ದರೂ ಕೆಲಮಟ್ಟಿಗೆ ತಥ್ಯವುಂಟು ಎಂದಾಯಿತು. ವೃತ್ತಗತಿಗೂ ವೃತ್ತಾಂತರ್ಗತ ಭಾವವಿಶೇಷಕ್ಕೂ ಅಂತಹ ಅನ್ಯೋನ್ಯಸಂಬಂಧ ಗೋಚರಿಸದೆ, "ಗುರುತಿಗಾಗಿ ಒಂದು ಹೆಸರು" ಎನ್ನುವುದೇ ಹೆಚ್ಚಿನ ಸಂದರ್ಭಗಳಲ್ಲಿ ನಿಜ ಎಂದಿಟ್ಟುಕೊಂಡರೂ,

ಹಾಗೆ ಸಂಬಂಧ ಗೋಚರಿಸುವ ವೃತ್ತಗಳ ಮಟ್ಟಿಗಾದರೂ ನಾಮಾಂಕನದ ಔಚಿತ್ಯ ವನ್ನು ಪರಿಶೀಲಿಸುವ ಕೆಲಸ ವ್ಯರ್ಥವಲ್ಲ ಎಂದೇ ತಿಳಿಯಬೇಕಾಗಿದೆ.

ವೃತ್ತನಾಮಗಳು ಸ್ವತಂತ್ರ ಶಬ್ದಗಳಾಗಿರಬಹುದು, ಸಮಾಸಶಬ್ದಗಳಾಗಿರ ಬಹುದು. ಸ್ವತಂತ್ರ ಶಬ್ದಗಳು ಒಂದಕ್ಷರದಿಂದ ಹಿಡಿದು (ಉದಾ : ಗೌ, ನೌ, ಸ್ತ್ರೀ, ಹ್ರೀ) ಬಹುಶಃ ನಾಲ್ಕಕ್ಷರಗಳ ವರೆಗೆ (ಉದಾ. ಅಮಲಕೀ, ಸೌದಾಮಿನೀ) ಇರಬಹುದು. ಸಮಾಸ ಶಬ್ದಗಳು ಎರಡಕ್ಕಿಂತ ಹೆಚ್ಚು ಶಬ್ದಗಳಿಂದ ಆಗಿದ್ದು, ಒಟ್ಟು ಎಂಟು–ಒಂಬತ್ತು ಅಕ್ಷರಗಳವರೆಗೆ ಅದರ ವ್ಯಾಪ್ತಿಯಿರಬಹುದು (ಉರುತರಂಗ ಮಾಲಿಕಾ, ಋಷಭ ಗಜವಿಲಸಿತ, ಸುವಿಕಸಿತ ಕುಸುಮ, ಲಘುಮಣಿಗುಣನಿಕರ).

ಪದಗಳು ಸ್ವತಂತ್ರವಾಗಿರಲಿ, ಸಮಸ್ತ ರೂಪದಲ್ಲಿರಲಿ ಅವು ಸ್ತ್ರೀವಾಚಕ ಗಳೋ ಪಶುಪಕ್ಷಿ ವಾಚಕಗಳೋ ತರುಲತಾದಿ ವಾಹಕಗಳೋ ಹೊಳೆ ಹೊನಲು ಗಳನ್ನೂ ರತ್ನಾಭರಣಾದಿಗಳನ್ನೂ ಕುರಿತ ಮಾತುಗಳೋ ಆಗಿರುವುದೇ ಸಾಮಾನ್ಯ. ಪುರುಷವ್ಯಕ್ತಿ ವಾಚಕಗಳು ಬಹುಶಃ ದುರ್ಲಭ. ಸಮಾಸಗಳಲ್ಲಿ ಪೂರ್ವಶಬ್ದಗಳು ಸೌಂದರ್ಯ ವಾಚಕಗಳಾದ ಚಂದ್ರ, ಚಿತ್ರ, ಮಂಜು, ಮದ, ಮತ್ತ, ಲಲಿತ, ವಸಂತ ಇತ್ಯಾದಿಗಳಿಂದ, ಗತಿವಿಶೇಷ ವಾಹಕಗಳಾದ ಪಶು ಪಕ್ಷಿ ವಾಚಕಗಳಿಂದ, ಗತ್ಯರ್ಥಕ ಗಳಾದ ದ್ರುತ, ವಿಲಂಬಿತ, ಮಂದ ಇತ್ಯಾದಿಗಳಿಂದ, ಪ್ರಮಾಣವಾಚಕಗಳಾದ ಲಘು, ಉಪ, ಅತಿ, ಸು ಇತ್ಯಾದಿಗಳಿಂದ ಆಗಿರುತ್ತವೆ; ಹಾಗೆಯೇ ಉತ್ತರ ಅಥವಾ ಪರ ಪದಗಳು ಆವಲಿ, ಕ್ರೀಡಾ, ಗತಿ, ಚರಿತ, ಪದ, ಮಾಲಾ, ಲತಾ, ಲಲಿತ, ಲಯ, ಲೇಖಾ, ವಿಲಸಿತ, ವಿಜೃಂಭಿತ ಮೊದಲಾದ ಪದಗಳಿಂದ ಆಗಿರುತ್ತವೆ.

ಇಲ್ಲೆಲ್ಲ ಸಾಮಾನ್ಯವಾಗಿ ಕಾಣುವ ಅಂಶವೆಂದರೆ, ವೃತ್ತಗಳು ಮನೋಜ್ಞ ವಾಗುವ ಭಾವರಸಗಳ ಸಂಪನ್ನತೆಯಿಂದಲೂ ಚೆಲುವುಸೂಸುವ ಬೆಡಗಿನ ನಡೆ ಗಳಿಂದಲೂ ಕೂಡಿರುವುದು ಕವಿಗಳಿಗೂ ಸಹೃದಯರಿಗೂ ಸಮಾನವಾಗಿ ಇಷ್ಟವಾಗಿ ರುವ ವಿಷಯ ಎನ್ನುವುದು; ಅಲ್ಲಿ ಸೌಕುಮಾರ್ಯ, ಲಾಲಿತ್ಯ, ಮಾಧುರ್ಯ, ಗಾಂಭೀರ್ಯ, ಪ್ರೌಢಿಮೆ ಮೊದಲಾದ ಗುಣವಿಶೇಷಗಳು ಎಂದೂ ಅಪೇಕ್ಷಣೀಯವಾದವು ಎನ್ನುವುದು. ಮುಖ್ಯವಾಗಿ ಕ್ರೀಡಾ, ಮಂಜು, ಮದ, ಮತ್ತ, ಲತಾ, ಲಲಿತ, ವಿಕ್ರೀಡಿತ, ವಿಲಸಿತ, ವಿಜೃಂಭಿತ ಇಂತಹ ಮಾತುಗಳು ವೃತ್ತಗತಿಯಲ್ಲಿ ಭಾವದ ಅಭಿವ್ಯಕ್ತಿಯ ಲಕ್ಷಣವನ್ನೂ ಗತಿ, ಪದ, ಲಯ ಇವು ಗುರುಲಘುವಿನ್ಯಾಸದ ಧಾಟಿ ಯನ್ನೂ ಆವಲಿ, ನಿಕರ, ಮಾಲಾ ಇಂತಹವು ಗಣಗಳ ಸರಣಿ ಸಂಖ್ಯೆಗಳನ್ನೂ ಲೇಖಾ, ಶೋಭಾ, ಕಾಂತಾ ಇಂತಹವು ರಸದ ಔಜ್ವಲ್ಯವನ್ನೂ ಸೂಚಿಸುತ್ತವೆ ಎಂದು ಸಾಮಾನ್ಯವಾಗಿ ಭಾವಿಸಬಹುದಾಗಿದೆ. ವೃತ್ತನಾಮಗಳನ್ನು ಸೂಚಿಸುವ ಕವಿಗೋ ಕವಿ–ಲಾಕ್ಷಣಿಕರಿಗೋ ತಾವರೆ, ನೈದಿಲೆ, ಸಂಪಗೆ, ಇರುವಂತಿಗೆ ಇಂತಹ ಹೂವುಗಳು ಬಹು ಇಷ್ಟವಾದವು. ಅವನ್ನು ಮಾಲೆಯಾಗಿ ಕಟ್ಟಿದರೆ, ಆ ಮಾಲೆ ಹೇಗೆ ಚೆಲುವಾಗಿ ಕಾಣಬಹುದೋ, ಹಾಗೆ ಅಕ್ಷರವಿನ್ಯಸ್ತ, ಪದವಿನ್ಯಸ್ತ ಆದ ತಮ್ಮ

ವೃತ್ತಗಳು ಚೆಲುವಾಗಿರಬೇಕು ಎನ್ನುವುದು ಅವರ ಅಪೇಕ್ಷೆ. ಹಾಗೆಯೇ ತಮ ತಮಗೆ ಪ್ರತ್ಯೇಕವಾದ ಗತಿವಿಶೇಷಗಳನ್ನುಳ್ಳ ಆನೆ, ಕುದುರೆ, ಜಿಂಕೆ, ಹುಲಿ, ಎತ್ತು ಈ ಮೊದಲಾದ ಪ್ರಾಣಿಗಳ, ಕೋಗಿಲೆ, ಕ್ರೌಂಚ, ಹಂಸ, ನವಿಲು ಈ ಮೊದಲಾದ ಪಕ್ಷಿಗಳ ನಡೆದಾಟ ಕುಣಿದಾಟಗಳ, ಏರಾಟ ಹಾರಾಟಗಳ ಬೆಡಗುಬಿನ್ನಣಗಳು ತಮ್ಮ ವೃತ್ತಗಳ ಭಾವಾಭಿವ್ಯಕ್ತಿ ಲಯಾಭಿವ್ಯಕ್ತಿಗಳಲ್ಲಿ ಸಂಕ್ರಮಿಸಲಿ ಎಂಬುದು ಅವರ ಆಸೆಯಾಗಿರಬೇಕು. ಹೀಗೆಯೇ ನಳನಳಿಸಿ ಹಬ್ಬುವ ಹೂಬಳ್ಳಿಗಳ, ಅರಳಿ ಪರಿಮಳಿಸುವ ಗಿಡಮರಗಳ ಸೊಂಪಾದ ಬೆಳವಣಿಗೆ, ಹೊಳೆಹೊಳೆಯುವ ಮುತ್ತುರತ್ನಗಳ ಕಲಾತ್ಮಕ ಮಾಲೆಗಳ ಹಾಗೂ ಆಭರಣಗಳ ಆಕರ್ಷಣೆ, ಅವರ ಮನಸ್ಸನ್ನು ಮೆಚ್ಚಿಸಿವೆ. ಎಂದರೆ ತಮ್ಮ ಸುತ್ತಣ ಪ್ರಕೃತಿಪ್ರಪಂಚದ ಸುಂದರ ವಸ್ತುವಿಸ್ತಾರದ ಪ್ರತಿಯೊಂದು ಕಣಕಣವೂ ಅವರ ಮನಸ್ಸನ್ನು ತಟ್ಟಿ, ಮುಟ್ಟಿ, ಕಲಕಿ, ತುಳುಕಿ, ಉಬ್ಬಿಸಿ, ಎಬ್ಬಿಸಿ ಅವರಲ್ಲಿ ಸೌಂದರ್ಯದ ಆಹ್ಲಾದ ಆವೇಶಗಳು ಹುಟ್ಟಿದುದರ ಫಲವೇ ಈ ವೃತ್ತನಾಮಗಳ ಪ್ರಪಂಚ ಎಂದು ಭಾವಿಸಬಹುದಾಗಿದೆ.

ಕೆಲವು ನಿದರ್ಶನಗಳ ಪರಿಶೀಲನೆ :

೧. ಸ್ತ್ರೀವ್ಯಕ್ತಿನಾಮಗಳು ಮತ್ತು ಅನ್ವರ್ಥಕ ನಾಮಗಳು

ಉರ್ವಶೀ, ಗೌರೀ, ಚಂಡೀ, ಲಕ್ಷ್ಮೀ ಇ.

ಇವು ವೃತ್ತಭಾವ ಅಥವಾ ಗತಿಗೆ ಸಂಬಂಧಿಸಿವೆಯೆಂದು ತಿಳಿಯುವುದಕ್ಕೆ ಸದ್ಯದಲ್ಲಿ ಆಧಾರವೇನೂ ಇಲ್ಲ. ಇವು ಸಹ ವಿಶಿಷ್ಟಭಾವಗಳನ್ನು ದ್ಯೋತನ ಮಾಡಬಹುದಾದರೂ, ಆ ಉದ್ದೇಶ ವಿವಕ್ಷಿತವೆಂದು ಸಾಧಿಸುವುದು ಕಷ್ಟ. ಆದರೆ ಶೃಂಗಾರಾತ್ಮಕ ವಿಶೇಷಣಗಳ ಮೂಲಕವಾಗಿ, ಎಂದರೆ ಸೌಂದರ್ಯವತಿಯ ಹಾವ ಭಾವ ವಿಲಾಸ ವಿಭ್ರಮಗಳನ್ನು ದ್ಯೋತಿಸುವಂತಿರುವ ವೃತ್ತನಾಮಗಳು ಸಾಕಷ್ಟು ಇವೆ:

ಇಂದುಮುಖಿ, ಇಂದುವದನಾ, ಕಮಲಲೋಚನಾ, ಕಲಾವತಿ, ಕುಟ್ಮಲದಂತಿ, ಕುಟಿಲಾ, ಕುಂತಲತನ್ವಿ, ಕುಮಾರಿ. ಗುರುಮಧ್ಯಾ, ಚಂಚಲಾಕ್ಷಿ, ಚಾರುಹಾಸಿನಿ, ತನುಮಧ್ಯಾ, ತನ್ವಿ, ತರಲನಯನಾ, ಪೀನಶ್ರೋಣಿ, ಪ್ರಮದಾ, ಭಾಮಿನಿ, ಮಂಗಲಮಂಗನಾ, ಮಂಜುಭಾಷಿಣಿ, ಮಂದಭಾಷಿಣಿ, ಮಧ್ಯಕ್ಷಾಮಾ, ರುಚಿರಮುಖಿ, ಲಲನಾ, ವಿಲಾಸಿನಿ, ವನಸುಂದರಿ. ಶೋಭಾವತಿ ಇ.

ಇವುಗಳಲ್ಲಿ ಕೆಲವು ಪರಿಶೀಲನಾರ್ಹವಾಗಿವೆ :

(i) (ii) ಗುರುಮಧ್ಯಾ, ತನುಮಧ್ಯಾ : ಇವುಗಳ ಲಕ್ಷಣ ಕ್ರಮವಾಗಿ ಸಭ, ತಯ. ಮೇಲುನೋಟಕ್ಕೆ ಇವು ದಪ್ಪಸೊಂಟದ ಹೆಂಗಸು, ತೆಳುಸೊಂಟದ ಹೆಂಗಸು ಎಂಬರ್ಥಗಳನ್ನು ಕೊಡುವ ಹೆಸರುಗಳು. ಆದರೆ ಪ್ರಸ್ತಾರಿಸಿದರೆ, ಪಾರ್ಶ್ವಸ್ಥಗಳಾದ ೨-೨ ಲಘುಗಳ ನಡುವೆ ೨ ಗುರುಗಳಿರುವುದು ಗುರುಮಧ್ಯಾ

ಎಂದೂ ೨-೨ ಗುರುಗಳ ನಡುವೆ ೨ ಲಘುಗಳಿರುವುದು ತನುಮಧ್ಯಾ ಎಂದೂ ತಿಳಿಯುವುದರಿಂದ ವೃತ್ತನಾಮಗಳು ಅನ್ವರ್ಥವಾಗಿವೆ.

(iii) ತರಲನಯನಾ : ೪ ನಗಣಗಳು ಇದರ ಲಕ್ಷಣ. ಲಘುಪ್ರಚುರತೆ ಯಿಂದಾಗಿ ವೃತ್ತದ ಗತಿ ಸಹಜವಾಗಿಯೇ ಚಂಚಲ, ತ್ವರಿತ ಅಥವಾ ದ್ರುತ ಆಗಿರು ವುದು. ಹೀಗಾಗಿ 'ಚಂಚಲವಾದ ಕಣ್ಣುನೋಟದ ಹೆಂಗಸು' ಎಂಬುದನ್ನು ಹೇಳುವ 'ತರಲನಯನಾ' ಉಚಿತವೇ ಆಗಿದೆ. (iv) ಪೀನಶ್ರೋಣಿ : ಮಭಸಗಗ ಇದರ ಲಕ್ಷಣ. ಇಲ್ಲಿ ೪ ಗುರು ೪ ಲಘು ೩ ಗುರು ಹೀಗೆ ಅಕ್ಷರರಚನೆಯಿರುವುದು ಕಾಣುತ್ತದೆ. ಗುರುಬಾಹುಳ್ಯದಿಂದಾಗಿ ವೃತ್ತದ ಗತಿ ಅಲಸ. ಹಾಗಾಗಿ ಗುರು ನಿತಂಬಬಿಂಬದ ಸ್ತ್ರೀನಾಮವನ್ನು ಕೊಟ್ಟಿರುವುದು ಒಪ್ಪತಕ್ಕದಾಗಿದೆ.

(v) ಮಧ್ಯಕ್ಷಾಮಾ/ಕುಟಿಲಾ/ಕುಟಿಲ : ಮಭನಯಗಗ ಇದರ ಲಕ್ಷಣ. ಇಲ್ಲಿ ಪಾರ್ಶ್ವಸ್ಥಗಳಾದ ೪-೪ ಗುರುಗಳ ನಡುವೆ ಅನುಸ್ಯೂತವಾಗಿ ೬ ಲಘುಗಳು ಬಂದಿವೆ. ಹೀಗಾಗಿ 'ತೆಳ್ಳನೆಯ ನಡುವಿನ ಹೆಂಗಸು' ಎಂದು ಅರ್ಥಬರುವ ವೃತ್ತನಾಮ ಒಪ್ಪೀತು. ೪,೬ರ ಯತಿಯಿಂದಾಗಿ ಗತಿಯಲ್ಲಿ ಉಂಟಾಗುವ ಬಳುಕು ಬಹುಶಃ 'ಕುಟಿಲಾ' ಎಂಬುದನ್ನು ಸಮರ್ಥಿಸಬಹುದು.

೨. ಪ್ರಾಣಿಗಳು ಮತ್ತು ಅವುಗಳ ಗತಿ ಚೇಷ್ಟಿತಗಳನ್ನು ಹೇಳುವ ವೃತ್ತನಾಮಗಳು

(i) ಆನೆ–ಇಭಲಲಿತ, ಗಜಗತಿ, ಗಜಲಲಿತ, ಗಜವರವಿಲಸಿತ, ಮತ್ತೇಭ, ಮತ್ತೇಭವಿಕ್ರೀಡಿತ. (ii) ಕುದುರೆ–ಅಶ್ವಕ್ರಾಂತಾ/ಅಶ್ವಗತಿ, ಅಶ್ವಲಲಿತ/ಹಯಲೀಲಾ ಗತಿ. (iii) ಹುಲಿ–ಶಾರ್ದೂಲ, ಶಾರ್ದೂಲಲಲಿತ, ಶಾರ್ದೂಲವಿಕ್ರೀಡಿತ (iv) ಸಿಂಹ–ಸಿಂಹನಾದ, ಸಿಂಹಲೀಲಾ, ಸಿಂಹಲೇಖಾ, ಸಿಂಹವಿಕ್ರೀಡಿತ, ಸಿಂಹ ವಿಸ್ಫೂರ್ಜಿತಾ, ಸಿಂಹಾಕ್ರಾಂತಾ, ಸಿಂಹೋದ್ಧತಾ/ಸಿಂಹೋನ್ನತಾ, (v) ಶರಭ–ಶರಭ, ಶರಭಲಲಿತ, ಶರಭಾ. (vi) ಎತ್ತು–ವೃಷಭಚರಿತ, ವೃಷಭಲಲಿತ (vii) ಜಿಂಕೆ–ಹರಿಣಪ್ಲುತ, ಹರಿಣೀ, ಹರಿಣೀಪದ. (viii) ಹಾವು–ಭುಜಗಶಿಶುಸೃತಾ, ಭುಜಗೇರಿತ, ಭುಜಂಗಪ್ರಯಾತ, ಭುಜಂಗವಿಜೃಂಭಿತ, ಭುಜಂಗಸಂಗತಾ, ಭುಜಂಗೇರಿತ. (ix) ಮಿಶ್ರ–ಗಜತುರಗವಿಲಸಿತ, ವೃಷಭಗಜವಿಲಸಿತ (x) ಇತರ–ಕಚ್ಛಪಿ, ದರ್ದುರಕ.

ಇಲ್ಲಿ ಕೆಲವು ಪ್ರಾಣಿಗಳ ಸ್ವಭಾವ, ಸ್ವಭಾವಕ್ಕೆ ಅನುಗುಣವಾದ ಚಲನೆ, ಚಟುವಟಿಕೆ ಮತ್ತು ನಡಗೆಯನ್ನು ಕುರಿತ ಮಾತುಗಳು ವೃತ್ತಗಳ ಹೆಸರುಗಳಾಗಿವೆ. ಸಾಧಾರಣವಾಗಿ ಆನೆ ಹುಲಿ ಸಿಂಹ ವೃಷಭಗಳು ವೀರ ರೌದ್ರತೆಗಳು, ಗಾಂಭೀರ್ಯ ಮತ್ತು ಗಂಭೀರವೂ ವಿಲಂಬಿತವೂ ಆದ ಪದಗತಿ ಇವನ್ನು ಸೂಚಿಸಲು ಸಮರ್ಥವಾದ ಪ್ರತೀಕಗಳಾಗಿವೆ. ಜಿಂಕೆ ಚಟುಲತೆಯನ್ನು ಸೂಚಿಸುತ್ತದೆ; ಹಾವು ಚಾಂಚಲ್ಯ

ಚಟುಲತೆ ಕುಟಿಲತೆಗಳನ್ನು ಸೂಚಿಸುತ್ತದೆ. ಹೀಗೆಯೇ ಆನೆ ಮಂದಗತಿಗೂ ಕಪ್ಪೆ ಉತ್ಪ್ಲುತಿಗೂ ಪ್ರತೀಕಗಳು.

ಪ್ರಸ್ತುತ, ಈಗ ಕೊಂಚ ವಿಶ್ಲೇಷಣೆಯನ್ನು ಮಾಡೋಣ:

ಶಾರ್ದೂಲ-ಶಾರ್ದೂಲ ಲಲಿತ-ಶಾರ್ದೂಲ ವಿಕ್ರೀಡಿತ : ಈ ಮೂರೂ ವೃತ್ತಗಳು ಪರಸ್ಪರ ಸಂಬಂಧವುಳ್ಳವು ಎಂದು ಹೇಳಬಹುದು. ಶಾರ್ದೂಲವು 'ಮಸಜಸರಮ' ಎಂಬ, ಶಾರ್ದೂಲಲಲಿತವು 'ಮಸಜಸತಸ' ಎಂಬ, ಶಾರ್ದೂಲ ವಿಕ್ರೀಡಿತವು 'ಮಸಜಸತತಗ' ಎಂಬ ಲಕ್ಷಣ ಹೊಂದಿದ್ದು ಮೊದಲ ನಾಲ್ಕೈದು ಗಣಗಳ ಸಾಮ್ಯ ಅದನ್ನು ದೃಢಪಡಿಸುತ್ತದೆ. ಶಾರ್ದೂಲ ವಿಕ್ರೀಡಿತದ ಪಾದಾದಿಯ ಗುರುವಿನ ಸ್ಥಾನದಲ್ಲಿ ದ್ವಿಲಘುವನ್ನಿಟ್ಟು ಮತ್ತೇಭವಿಕ್ರೀಡಿತವನ್ನು ಮಾಡಿಕೊಂಡಿರುವುದು ಸ್ಪಷ್ಟ. ಶಾರ್ದೂಲ ಮತ್ತು ಶಾರ್ದೂಲವಿಕ್ರೀಡಿತದಲ್ಲಿ ೧೧ ಗುರುಗಳೂ ೮ ಲಘುಗಳೂ ಶಾರ್ದೂಲಲಲಿತದಲ್ಲಿ ೯ ಗುರುಗಳೂ ೯ ಲಘುಗಳೂ ಚೆದುರಿದಂತೆ ಬಂದಿದ್ದು, ಸಹಜವಾಗಿಯೇ ಗುರುಗಳ ಒತ್ತಡ ಮೇಲುಗೈ ಪಡೆಯುತ್ತವೆ. ಶಾರ್ದೂಲ ವಿಕ್ರೀಡಿತದ ೧೯ ಅಕ್ಷರಗಳಲ್ಲಿ ೧೨ ಅಕ್ಷರಗಳ ವರೆಗೆ ಅವಿಚ್ಛಿನ್ನೋಚ್ಚಾರಣ ವಿಧಿಸಲ್ಪಡುವುದರಿಂದ ಈ ವೃತ್ತವನ್ನು ವಕ್ತೃಪ್ರಾಣಶ್ರಾಂತಿಕರ, ದುಃಖಾವಹ. ಓಜೋಸ್ವಿತ ಮಂತಾಗಿ ತಿಳಿಯಲಾಗಿದೆ. ಇದಕ್ಕೆ ಅನ್ವಯಿಸುವ ಪ್ರಸ್ತಾರವಿಧಿ ಪತನಪರಿಣಾಮಗಳು ಹುಲಿಯ ನಡೆ, ಗರ್ಜನ ತರ್ಜನಗಳನ್ನು ಕವಿ-ಲಾಕ್ಷಣಿಕರ ನೆನಪಿಗೆ ಮೊದಲ ಸಲ ತಂದಿರಬಹುದೇನೋ. ಪಾದಾದಿಯ ಅಲ್ಪವ್ಯತ್ಯಾಸದ ಮತ್ತೇಭವಿಕ್ರೀಡಿತದ ಗತಿ ನಾದಗಳು ಗಜಗತಿ ಘೀಂಕಾರಗಳಿಗೆ ಸದೃಶವೆಂದೇ ಹೇಳಬಹುದಾದ್ದು. ಶಾರ್ದೂಲ ಮತ್ತೇಭವಿಕ್ರೀಡಿತಗಳೆರಡೂ ವೀರ ರೌದ್ರಾದಿ ರಸಗಳನ್ನು ವ್ಯಂಜಿಸುವ ವಿಲಂಬಿತ ಗತಿಯ ಗಂಭೀರವೃತ್ತಗಳೆನ್ನುವುದು ವಿದಿತವೇ ಇದೆ.

ಸಿಂಹಸಮುದಾಯದ ವೃತ್ತಗಳು ಸಾಕಷ್ಟು ಇವೆ. ಇವುಗಳಲ್ಲಿ ರಜಗಗ ವಿನ್ಯಾಸದ ಸಿಂಹಲೀಲಾ/ಸಿಂಹಲೇಖಾ, ನನರರರ ವಿನ್ಯಾಸದ ಸಿಂಹವಿಕ್ರೀಡಿತ, ಮಮಭಮಯಯ ವಿನ್ಯಾಸದ ಸಿಂಹವಿಸ್ಫೂರ್ಜಿತಾ ಹೇಗೆ ಗುರುಪ್ರಾಬಲ್ಯವನ್ನು ತೋರಿಸುವುವೆಂಬುದನ್ನು ಗಮನಿಸಬೇಕು. 'ಸಿಂಹವಿಸ್ಫೂರ್ಜಿತಾ'ದಲ್ಲಿಯಂತೂ ೩ ಮಾತ್ರ ಲಘುಗಳಿದ್ದರೆ, ಉಳಿದ ೧೫ ಅಕ್ಷರಗಳೂ ಗುರುಗಳಾಗಿವೆ. ಮೃಗರಾಜನ ಗತಿಯ ವಿಡಾಯಕ್ಕೆ ಇನ್ನೇನು ಬೇಕಾಗಿದೆ?

ಅಶ್ವಗತಿ ಎಂಬ ಹೆಸರಿನ ಎರಡು ವೃತ್ತಗಳಿವೆ: (೧) ೧೬ ಅಕ್ಷರಗಳದು, (೨) ೧೮ ಅಕ್ಷರಗಳದು. ಎರಡರ ಗತಿಯೂ ಸದೃಶವಾದ್ದು. ೧೬ ಅಕ್ಷರಗಳ ವೃತ್ತದ ಲಕ್ಷಣ ಭಭಭಭಭಗ, ೧೮ ಅಕ್ಷರಗಳ ವೃತ್ತದ ಲಕ್ಷಣ ಭಭಭಭಭಸ. ಇಲ್ಲಿ ವ್ಯತ್ಯಾಸ ೨ ಲಘುಗಳಲ್ಲಿದೆ, ಅಷ್ಟೆ. ಇಲ್ಲಿ ಗುರುಲಘು ವಿನ್ಯಾಸದ ನಿಯತತೆ ಸ್ಪಷ್ಟ. ನಿಯತತೆ ಲಯಬದ್ಧ ಅಶ್ವಗತಿಯ ಲಕ್ಷಣ ಸಹ. ೧೬ ಅಕ್ಷರಗಳ ವೃತ್ತಕ್ಕೆ ಅಶ್ವಕ್ರಾಂತಾ ಪರ್ಯಾಯನಾಮ. ಅಶ್ವಲಲಿತ/ಹಯಲೀಲಾಗತಿಯ ರಚನೆಯಾದರೂ ಈ ನಿಯತತೆ

ಯನ್ನೇ ತೋರಿಸುವಂತಹುದು. ಅದನ್ನು ನಜಭಜಭಜಜಲಗ ಎಂಬ ಲಕ್ಷಣದಿಂದ ತಿಳಿಯಬಹುದಾಗಿದೆ.

ವೃಷಭ (ಋಷಭ) ಗಜವಿಲಸಿತ/ಗಜತುರಗವಿಲಸಿತ ಭರನನನಗ ಎಂಬ ಲಕ್ಷಣವುಳ್ಳದ್ದು. ಎಂದರೆ ಇಲ್ಲಿ ಎತ್ತು–ಆನೆಗಳ ಇಲ್ಲವೆ ಆನೆ–ಕುದುರೆಗಳ ಗತಿ ಬೆರೆತಿದೆಯೆಂದು ಹೇಳಲವಕಾಶವಿದೆ. ವಿನ್ಯಾಸವನ್ನು ಗಮನಿಸಿದರೆ, ಮೊದಲ ಆರಕ್ಷರಗಳ ವರೆಗೆ ಗುರುಲಘುಗಳು ಸಮವಾಗಿ ಬೆರೆತರೂ ಗುರುಪ್ರಾಬಲ್ಯ ಸಹಜವಾಗಿಯೇ ವಿಲಂಬಿತಗತಿಗೆ ಎಡೆಮಾಡುತ್ತದೆ; ಆ ಗತಿ ಎತ್ತು ಅಥವಾ ಆನೆಯ ಗತಿಗೆ ಸದೃಶ. ಅನಂತರದ ಅನುಸ್ಯೂತವಾದ ೬ ಲಘುಗಳ ದ್ರುತಗತಿ ಕುದುರೆನಡೆಯ ಒಂದು ಭಂಗಿಯೆನ್ನಬಹುದಾದ್ದು.

ಈಗ ಹಾವಿನ ಸರಿದಾಟದ ವೃತ್ತಗಳ ಬಗ್ಗೆ ನೋಡೋಣ: ೪ ಯಗಣಗಳ ವೃತ್ತ ಭುಜಂಗಪ್ರಯಾತ. ಒಂದೊಂದು ಲಘುವಿನ ಬಳಿಕ ಎರಡೆರಡು ಗುರುಗಳ ದೀರ್ಘತೆ ಹಾವಿನ ನಡೆಯ ನಿಡುಪನ್ನೂ ಸೂಚಿಸಬಹುದು. ಈ ನಿಡುಪು ಇನ್ನೂ ಸ್ಫುಟವಾಗಿ ಕಾಣುವುದು ಮಮತನನನರಸಲಗ ಲಕ್ಷಣವುಳ್ಳ ಭುಜಂಗವಿಜೃಂಭಿತದಲ್ಲಿ. ಸರ್ಪಸಂಚಾರದ ದೀರ್ಘತೆ ಕುಟಿಲತೆಗಳನ್ನು ಇಲ್ಲಿಯ ಗುರುಲಘುವಿನ್ಯಾಸದಲ್ಲಿ ಗಮನಿಸಬಹುದಾಗಿದೆ. ಮೊದಲ ೮ ಗುರುಗಳ ಅವಿರಳ ರಚನೆ ನಡೆಯ ನಿಡುಪನ್ನಷ್ಟೇ ಅಲ್ಲದೆ ಹೆಡೆಯೆತ್ತುವ ರೀತಿಯನ್ನೂ ಮನಗಾಣಿಸಲು ಶಕ್ತವಾಗಿದೆ. ಇದಕ್ಕೆ ಪ್ರತಿಯಾಗಿ ಎನ್ನುವಂತೆ ೧೦ ಲಘುಗಳ ಅನುಸ್ಯೂತವಾದ ಆವೃತ್ತಿ ಸರ್ಪಗತಿಯ ಚಟುಲತೆ ಕುಟಿಲತೆಗಳನ್ನು ನಿದರ್ಶಿಸುವಂತಿದೆ. ಅಲ್ಪ ಸ್ವಲ್ಪ ಗುರುಲಘುವ್ಯತ್ಯಯದ ಭುಜಂಗೇರಿತದ ನಡೆಯೂ ಹೀಗೆಯೇ (ಮಯನತನನರಯಲಗ/ಮಯನತನನರಸಲಗ).

೩. ಹಕ್ಕಿಗಳು ಮತ್ತು ಕೀಟಗಳ ಚಲನೆ ಚಟುವಟಿಕೆಗಳನ್ನು ಕುರಿತ ವೃತ್ತನಾಮಗಳು

ಅಂಚೆ ಕೊಂಚೆಗಳು, ನವಿಲು ಕೋಗಿಲೆಗಳು ಮುಂತಾದ ಪಕ್ಷಿಗಳ ನಡಗೆ ಮತ್ತು ಏರಾಟ ಹಾರಾಟಗಳು, ಝೇಂಕರಿಸುವ ಭ್ರಮರದ ವಿಲಕ್ಷಣ ಸುತ್ತುಬಳಸಿನ ಸುಳಿದಾಟ ನಲಿದಾಟಗಳು ತಮತಮಗೆ ವಿಶಿಷ್ಟವಾದ ಲಯಗತಿಯಲ್ಲಿರುವುದು ನಮಗೆಲ್ಲ ತಿಳಿದ ವಿಷಯಗಳೇ. ಇದನ್ನು ಕವಿ ಪಾದರಚನೆಯ ಹ್ರಸ್ವದೀರ್ಘಾಕ್ಷರ ವಿನ್ಯಾಸವೈಚಿತ್ರ್ಯದ ಮೂಲಕ ತರುವ ಪ್ರಯತ್ನಮಾಡಿದ್ದರೆ, ಅದು ಸಹಜವೇ ಆಗಿದೆ. ಈಗ ಕೆಲವು ನಿದರ್ಶನಗಳನ್ನು ನೋಡೋಣ:

ಕಲಹಂಸ, ಕೋಕಿಲಕ, ಕ್ರೌಂಚಾ, ಕ್ರೌಂಚಪದಾ, ಚಕ್ರಪದ, ಭ್ರಮರ, ಭ್ರಮರಪದ, ಭ್ರಮರಮಾಲಾ, ಭ್ರಮರವಿಲಸಿತ, ಭ್ರಮರಾವಲಿ, ಭ್ರಮರೀ, ಮತ್ತಕೋಕಿಲ, ಮತ್ತಮಯೂರ, ಘನಮಯೂರ, ಮಯೂರಗತಿ, ವನಮಯೂರ, ಮಯೂರಪಿಚ್ಛ, ಮಯೂರಲಲಿತ, ಮಯೂರಸಾರಿಣೀ, ಮರಾಲಿಕ, ಹಂಸ, ಹಂಸಕ್ರೀಡಾ, ಹಂಸಗತಿ, ಹಂಸಪದ, ಹಂಸಪದಾ, ಹಂಸಮಾಲಾ, ಹಂಸಲಯ ಇ.

ಕ್ರೌಂಚಾ ಎಂಬ ಹಕ್ಕಿ ಯಾವುದೇ ಇರಲಿ; ಹಕ್ಕಿಗಳ ಗತಿ ನಮಗೆ ಸಾಮಾನ್ಯವಾಗಿ ಪರಿಚಿತವಾದ್ದು ತಾನೆ? ಅದನ್ನು ಹಿಡಿದು ಇದರ ಲಕ್ಷಣವಾದ ಮತಯನನನಸಗ ಎಂಬುದನ್ನು ವಿಶ್ಲೇಷಿಸಿದರೆ, ಮೊದಲ ಐದು ಗುರುಗಳು, ಬಳಿಕಣ ಎರಡು ಲಘು ಮತ್ತು ಎರಡು ಗುರುಗಳು, ಆ ಮುಂದಿನ ನಿರ್ಗಳಗತಿಯ ೧೨ ಲಘುಗಳು, ಅಂತ್ಯದ ಗುರು ಇವು ಹಕ್ಕಿಯ ನಿಧಾನಗತಿಯ, ಮಧ್ಯಮಗತಿಯ, ಮತ್ತು ದ್ರುತಗತಿಯ ರೆಕ್ಕೆಬೀಸಾಟಗಳ ದೃಶ್ಯಚಿತ್ರವನ್ನು ಕಣ್ಣೆದುರು ನಿಲ್ಲಿಸಬಹುದೆಂದು ಭಾವಿಸುವಂತೆ ವಿನ್ಯಾಸಗೊಂಡಿವೆಯೇನೋ ಎನಿಸುತ್ತದೆ.

ಹಂಸಪಕ್ಷಿಯ ಹೆಸರಿನ ವೃತ್ತಗಳು ಕವಿ-ಲಾಕ್ಷಣಿಕರಿಗೆ ತುಂಬ ಇಷ್ಟವಾದವು. ಇವು ಸಂಖ್ಯೆಯಲ್ಲಿ ೧೪ ಇವೆ. ಇವುಗಳಲ್ಲಿ ಒಂದೆರಡನ್ನು ಮಾತ್ರ ಇಲ್ಲಿ ನೋಡಬಹುದು. ಹಂಸವು ಅದೊಂದು ವಿಶಿಷ್ಟವಾದ ಬಳುಕುನಡೆಗೆ, ಮಂದಗತಿಗೆ ಹೆಸರಾದುದು ತಾನೇ? ಹಂಸಕ್ರೀಡಾದಲ್ಲಿ ೪ ಗುರು ೪ ಲಘು ಮತ್ತು ೨ ಗುರು ಎಂಬ ವಿನ್ಯಾಸವಿದ್ದು, ಹಂಸಗತಿಯಲ್ಲಿ ೪ ಲಘುಗಳು ಮುಗಿಯುತ್ತಿದ್ದ ಹಾಗೆಯೇ ಗುರ್ವಂತವಾಗುವ ಮುನ್ನ ಅನುಸ್ಯೂತವಾಗಿ ೬ ಸಲ ೧ ಗುರುವಿನ ಮುಂದೆ ಲಘುದ್ವಿಕಗಳು ಲಯಾನ್ವಿತವಾಗಿ ಬರುವಂತೆ ವಿನ್ಯಾಸವಿದ್ದು, ಈ ಎರಡೂ ವಿನ್ಯಾಸಗಳು ವಿಶಿಷ್ಟ ರೀತಿಯ ಹಂಸದ ನಡಗೆಯ ಬೆಡಗನ್ನು ನಿದರ್ಶಿಸುತ್ತವೆ ಎನ್ನಬಹುದು. ಹಂಸಗತಿಯಲ್ಲಿ ವೃತ್ತದ ಶರೀರಭಾಗ ಮಧ್ಯಗುರುವಿನ ಗಣದ ಆವೃತ್ತಿಯಲ್ಲಿರುವಂತೆ ಲಕ್ಷಣನಿರ್ವಚನದಂತೆ ಭಾವಿಸಿದರೆ, ತುಸು ವೇಗವಾಗಿ ಮೊದಲು ಮೂರು ಲಘುಗಳ ವೇಗದಲ್ಲಿ ಹೆಜ್ಜೆ ಹಾಕಿ, ಬಳಿಕ ತನಗೆ ವಿಶಿಷ್ಟವಾದ ಬಳುಕುನಡೆಯಲ್ಲಿ ಜಗಣವಿನ್ಯಾಸವನ್ನನುಸರಿಸಿ, ೬ ಜಗಣಗಳವರೆಗೆ ಹಂಸದ ನಡೆಯನ್ನು ಅನುಕರಿಸಿ ವೃತ್ತ ಸಾಗುತ್ತದೆ. ಜಗಣದ ನಡೆ ಉತ್ಪ್ಲುತ ಗತಿಯದು. ಹೀಗೆಯೇ ದ್ರುತದಿಂದ ಆರಂಭಿಸಿ, ಮಧ್ಯಮಗತಿಯಲ್ಲಿ ಸಾಗುವ ಹಂಸದ ನಡೆಯ ಬೆಡಗಿಗೆ ೧೨ ಲಘುಗಳು ಮೊದಲು ಬಂದು, ಬಳಿಕ ಗುರುಲಘು ಮಿಶ್ರವಾಗಿ ಹರಿಯುವ ಹಂಸಲಯವೃತ್ತವನ್ನು ನೋಡಬಹುದು (ನನನನಸಭಭಭಗ).

ಹೀಗೆಯೇ, ೭ ಭಗಣ + ೨ ಗುರುಗಳ ಲಕ್ಷಣವುಳ್ಳದ್ದು ಮಯೂರಗತಿ; ಎಂದರೆ ೨-೨ ಲಘುಗಳನ್ನು ದಾಟುತ್ತಿದ್ದ ಹಾಗೆಯೇ ಗುರುವಿನ ಮೇಲೆ ಬೀಳುವ ಪೆಟ್ಟು ನವಿಲಿನ ನಡೆಯ ಅದೊಂದು ಭಂಗಿಯನ್ನು ತೋರಿಸುವುದು ಸಾಧ್ಯ. ವನಮಯೂರದಲ್ಲಿ ಸಹ (ಭಜಸನಗಗ) ಗುರ್ವನಂತರದಲ್ಲಿ ೩ ಲಘುಗಳು ೩ ಬಾರಿ ಅನುಸ್ಯೂತವಾಗಿ ಬರುತ್ತ, ಕೊನೆಗೆರಡು ಗುರುವಿನಿಂದ ವಿಲಂಬಿತವಾಗಿ ತಡೆದು ನಿಲ್ಲುವುದು ನವಿಲಿನ ಇನ್ನೊಂದು ಗತಿವೈಖರಿಯನ್ನು ತೋರಿಸುವುದು.

ಚಕ್ರಪದ ಬಹುಶಃ ಚಕ್ರವಾಕದ ಗತಿಯ ಹೆಸರಿನ ವೃತ್ತವಿರಬೇಕು. ಇದರ ಲಕ್ಷಣ ಭನನನಲಗ. ಇಲ್ಲಿಯೂ ಆದ್ಯಂತವಾದ ಒಂದೊಂದು ಗುರುವಿನ ನಡುವಣ ಶರೀರಭಾಗದಲ್ಲಿ ೧೨ ಲಘುಗಳು ಸಾಲುಗಟ್ಟಿ ಹರಿದಿವೆ. ಎಂದರೆ ಇದು ಹಕ್ಕಿಯ

ಚಟುಲಗತಿಯನ್ನು ಸೂಚಿಸುತ್ತದೆ; ಮಾತ್ರವಲ್ಲ, ಚಟುಲಗತಿಯು ಹಕ್ಕಿಗಳ ಸರಳ ರೇಖೆಯು ಅಥವಾ ಬಗ್ಗಿದ ಬಿಲ್ಲಿನಂತಹ ರೇಖೆಯ ಸಾಲನ್ನೂ ಸಂಕೇತಿಸುತ್ತದೆ.

ಹಾಗೆ ನೋಡಿದರೆ, ಪಕ್ಷಿನಾಮದ ವೃತ್ತಗಳಲ್ಲಿ ಹಕ್ಕಿಗಳ ತ್ವರಿತಗಮನವನ್ನೂ ಹಗುರಗತಿಯನ್ನೂ ಸೂಚಿಸಲೋ ಎಂಬಂತೆ, ಲಘುಪ್ರಚುರತೆಯನ್ನು ಎದುರುಗೊಳ್ಳುತ್ತೇವೆ; ರೆಕ್ಕೆಗಳ ಬೀಸಾಟದ ಏರಿಳಿತಗಳನ್ನೂ ಹಾರಾಟದ ತ್ವರೆ ವಿಲಂಬಗಳಲ್ಲಿಯ ಕ್ರಮಬದ್ಧತೆಯನ್ನೂ ತೋರಿಸುವಂತೆ ನಿಯತವಾಗಿ ಆರೋಹಣ ಅವರೋಹಣಗಳನ್ನು ಹಿಡಿದು ಸಾಗುವ ಲಘುಗುರು ವಿಮಿಶ್ರಿತ ಗಣಸಂಘಟನೆಯನ್ನೂ ಕಾಣುತ್ತೇವೆ. ಭಗಣವನ್ನು ಸ್ತಂಭಿತಗೊಳಿಸಿ ಜಗಣವನ್ನೂ ಜಗಣವನ್ನು ಸ್ತಂಭಿತಗೊಳಿಸಿ ಭಗಣವನ್ನೂ ಸಾಧಿಸುವುದರ ಮೂಲಕ ಲಯಭೇದವನ್ನು ತರುವ ಸಾಧ್ಯತೆಯಂತೂ ಇದ್ದೇ ಇರುತ್ತದೆ. ಹೀಗೆ ದ್ರುತೋತ್ಪ್ಲುತ, ದ್ರುತಾವರೋಹಣಗತಿ ಪಕ್ಷಿಸಂಚರಣದಲ್ಲಿ ಸಾಮಾನ್ಯ.

ಇನ್ನು ಭ್ರಮರನಾಮದ ವೃತ್ತಗಳ ಬಗೆಗೆ ನೋಡೋಣ : ಭ್ರಮರಿ ಸಗ ಎಂಬ, ಭ್ರಮರಮಾಲಾ ತಸಗ ಎಂಬ, ಭ್ರಮರಪದ ಭರನನನಸ ಎಂಬ, ಭ್ರಮರ/ಭ್ರಮರಿ ಸಜಸಸಗ ಎಂಬ, ಭ್ರಮರಾವಲಿ ಸಸಸಸಸ ಎಂಬ ಲಕ್ಷಣಗಳನ್ನು ಕ್ರಮವಾಗಿ ಉಳ್ಳವಾಗಿವೆ. ಎಂದರೆ ಈ ವೃತ್ತಗಳು ಸಾಮಾನ್ಯವಾಗಿ ಸಗಣಪ್ರಚುರವಾದವು. ಹೀಗಾಗಿ ಅದೊಂದು ರೀತಿಯಲ್ಲಿ ∪∪– ಎಂಬ ಗತಿಯ ಚತುರ್ಮಾತ್ರಾ ಗಣವಿನ್ಯಾಸದ ನಿಯತಲಯಕ್ಕೆ ಇವು ಹೊಂದಿಬರುವಂತೆ ತೋರುತ್ತದೆ. ಭ್ರಮರಿಯಲ್ಲಿ ೨ ಲಘು ೨ ಗುರು, ಭ್ರಮರಮಾಲಾದಲ್ಲಿ ೨ ಗುರು ೩ ಲಘು ೨ ಗುರು, ಭ್ರಮರಪದದಲ್ಲಿ ಗುರು ಲಘು, ಲಘು ಗುರು ವಿಪರ್ಯಯಪೂರ್ವಕವಾದ ನಿರಂತರ ಲಘುಗತಿ–ಹೀಗೆ ತೆರತೆರನ ಭ್ರಮರಗತಿಗಳನ್ನು ಇಲ್ಲಿ ಕಾಣುವಂತೆ ಭಾಸವಾಗುತ್ತದೆ. ಈ ಗತಿಗಳು ಸಗಣ ಭಗಣ ಜಗಣಗಳು ಒಂದನ್ನೊಂದು ಸ್ಥಗಿತಗೊಳಿಸುವುದರಿಂದ ಏರ್ಪಡುವುವು.

೪. ಹೂವುಗಳು, ಬಳ್ಳಿಗಳು ಮತ್ತು ವೃಕ್ಷಗಳು ಹೆಸರಾಗುವ ವೃತ್ತನಾಮಗಳು

ಇವು ಅಂಬುಜ, ಅಭಿನವಮಾಲಿಕಾ, ಉತ್ಪಲಮಾಲಾ, ಕಮಲದಲ, ಕರ್ಣೋತ್ಪಲ, ಕುಮುದ, ಕುಸುಮ, ಕುವಲಯಮಾಲಾ, ಚಂಪಕಮಾಲಾ, ನಲಿನಿ, ನವನಳಿನ, ನವಮಾಲಿಕಾ, ಪುಂಡರೀಕ, ಮಧುಮಾಧವಿ, ಮಂದಾರಮಾಲಾ, ಮಲ್ಲಿಕಾಮಾಲಾ, ಮಾಲತಿ, ಮಾಲಾ, ವನಮಂಜರಿ, ವಾಸಂತಿ; ಕನಕಲತಾ, ಕಾಮಲತಾ, ಕೋಮಲಲತಾ, ಲಲಿತಲತಾ; ಚೂತಕುಜ, ತಾಲ, ವಸಂತತಿಲಕ ಇ.

ಇಲ್ಲಿ ತಾವರೆ ನೈದಿಲೆ ಸಂಪಗೆ ಮೊದಲಾದ ಹೂಗಳ ದಳಗಳ ರಚನೆಯಂತೆ, ಆ ಹೂಗಳನ್ನು ಕಟ್ಟಿ ಸಿದ್ಧಮಾಡಿದ ಮಾಲೆಗಳಂತೆ ವೃತ್ತಗಳ ಗುರುಲಘುವಿನ್ಯಾಸವೂ ಪಾದರಚನೆಯೂ ಇರುತ್ತವೆಯೆಂಬುದು ಇಂತಹ ವೃತ್ತನಾಮಗಳ ನಾಮಕರಣದ ಹಿನ್ನೆಲೆಯ ಪ್ರೇರಣೆಯಾಗಿರಬಹುದು.

ಸಾಮಾನ್ಯ ಪುಷ್ಪನಾಮಗಳ ವಿಚಾರ ಹೀಗೇ ಎನ್ನುವಂತಿಲ್ಲ. ಪರಪದವು 'ಮಾಲಾ' ಎಂಬುದಾಗಿರುವ ವೃತ್ತನಾಮಗಳು ಕುತೂಹಲಕರವಾದವು. ಪ್ರಸಿದ್ಧವಾದ ಚಂಪಕೋತ್ಪಲ ಮಾಲೆಗಳು ಪಾದಾದಿ ಅಲ್ಪವ್ಯತ್ಯಾಸದ ಹೊರತು ಏಕರೀತಿಯ ಗುರುಲಘುವಿನ್ಯಾಸವುಳ್ಳವು ಎಂಬುದು ತಿಳಿದೇ ಇದೆ. ೨೧ ಅಕ್ಷರಗಳ ಚಂಪಕಮಾಲೆ ದ್ರುತೋತ್ಪ್ಲುತಗತಿಯಲ್ಲಿ ಸಾಗುವ ಜಗಣಪ್ರಚುರವಾದ ವೃತ್ತ. ಪದಸಂಘಟನೆಯಲ್ಲಿ ಜಗಣಗಳು ಸ್ಥಗಿತಗೊಂಡು ಭಗಣಗಳು ವ್ಯವಸ್ಥೆಗೊಂಡರೆ ನಡೆ ದ್ರುತಾವರೋಹಣಗತಿಯಾಗಿರುತ್ತದೆ. ೧೪ ಲಘುಗಳಿಂದಾಗಿ ಚಂಪಕಮಾಲೆಯದು ವಿಶೇಷವಾಗಿ ದ್ರುತಗತಿ; ೧೨ ಲಘುಗಳು ಮತ್ತು ೮ ಗುರುಗಳಿಂದಾಗಿ ಉತ್ಪಲಮಾಲೆಯದು ಮಧ್ಯಮಗತಿ. ಈ ಗತಿಗಳ ಸ್ಥಿತಿ ಹೇಗೆ ಇರಲಿ, ಈ ಪುಷ್ಪನಾಮಗಳ ಔಚಿತ್ಯವೇನು? ಪ್ರಸಾದ ಮಾಧುರ್ಯ ವ್ಯಂಜಕವಾಗಿ ಶೃಂಗಾರಾದಿ ರಸಸಂದರ್ಭಗಳಿಗೆ ಇವು ಪ್ರಯುಕ್ತವಾಗುವುದೇ ಸಾಮಾನ್ಯವೆಂಬ ಕಾರಣ, ಹೆಸರು ಉಚಿತವೆಂದೇ ಹೇಳಲವಕಾಶವಿದೆ. ಇದು ಭಗಣಗಳ ವ್ಯವಸ್ಥೆಯಿಂದ ಎಂದು ಬಲುಮಟ್ಟಿಗೆ ತಿಳಿಯಲಾಗಿದೆ.

ರಸಜಜಭರ ಎಂಬ ವಿನ್ಯಾಸದ ಮಲ್ಲಿಕಾಮಾಲೆ ೩-೪ರ ಮಿಶ್ರಲಯದಲ್ಲಿ ನಡೆಯುತ್ತದೆ. ಲಯದ ದೃಷ್ಟಿಯಿಂದ ಹರನರ್ತನ ಎಂಬ ಹೆಸರೂ ಇದಕ್ಕೆ ಸಾರ್ಥಕವಾಗಿದೆ. ಖ್ಯಾತಿಯ ದೃಷ್ಟಿಯಿಂದ ಅಷ್ಟೇ ಸಾರ್ಥಕವಾದುದು 'ವಿಬುಧಪ್ರಿಯಾ' ಎಂಬ ಹೆಸರು ಸಹ. ರೂಪಕಗಳಲ್ಲಿ ಪ್ರಚುರವಾದ 'ಚರ್ಚರಿ' ಎಂಬ ಹೆಸರು ಸಹ ಇದಕ್ಕೆ ಕಂಡು ಬರುತ್ತಿದ್ದು, ನಾಟ್ಯಸಂದರ್ಭದಲ್ಲಿ ಬರುವ ಆ ಹೆಸರು ಈ ವೃತ್ತದ ತಾಳಲಯಗತಿಯನ್ನು ಹಿಡಿದು ಕೊಟ್ಟ ಹೆಸರಾಗಿದ್ದರೂ ಇರಬಹುದು; ಮಲ್ಲಿಕಾಮಾಲೆಯ ಇನ್ನೊಂದು ರೂಪವನ್ನು ನಭರಸಜಜಗ ವಿನ್ಯಾಸದ ತರಳದಲ್ಲಿ ಕಾಣಬಹುದು. ಪಾದಾದಿಯ ಗುರುವಿಗೆ ದ್ವಿಲಘುವನ್ನಿಟ್ಟು ಪಡೆದ ವೃತ್ತವಿದು. ತರಲವೆಂದರೆ ಉಜ್ವಲವೆಂದೂ ಅರ್ಥವಿರುವುದರಿಂದ, ಮಲ್ಲಿಕಾಮಾಲೆಗೆ ಪ್ರತಿನಾಮವಾದ ಉಜ್ವಲಕ್ಕೆ ಇದು ಸದೃಶವೆಂಬ ಕಾರಣದಿಂದ. ಈ ಹೆಸರು ಒಂದು ರೀತಿಯಲ್ಲಿ ಒಪ್ಪುತ್ತದೆ.

ಪುಷ್ಪಗುಚ್ಛಗಳಂತೆ ವ್ಯವಸ್ಥಿತವಾಗಿ ೭ ಭಗಣಗಳು ಗುರ್ವಂತವಾಗಿ ಬರುವ ವನಮಂಜರಿ ಹೀಗೆ ಸಾರ್ಥಕನಾಮದ ವೃತ್ತವೇ ಆಗಿದೆ. ಲತಾ ಪರಶಬ್ದದ ವೃತ್ತಗಳು ಸಾಮಾನ್ಯವಾಗ ಲಘುಪ್ರಚುರತೆಯಿಂದ ಕೂಡಿರುತ್ತವೆ ಇಲ್ಲವೆ ಲಘುಗುರುಗಳ ಸಮಂಜಸ ವಿನ್ಯಾಸದ ರಚನೆಗಳಾಗಿರುತ್ತವೆ. ಇಂತಹವು ಬಳ್ಳಿಯ ಹಬ್ಬುಗೆಯ ಲಕ್ಷಣವನ್ನೇ ತೋರಿಸುತ್ತವೆ. ಉದಾ. ಗೆ ವನಲತಿಕಾ ವೃತ್ತದಲ್ಲಿ ೮ ನಗಣಗಳು ೨ ಗುರುಗಳಿಂದ ಕೊನೆಗೊಳ್ಳುತ್ತವೆ. ಕೋಮಲಲತಾದಲ್ಲಿ ಇದಕ್ಕೆ ಪ್ರತಿಯಾಗಿ ಗುರುಬಾಹುಳ್ಯವನ್ನು (– – – – – ∪ ∪ ∪ – – – ∪ – – ∪ –) ಕಾಣಬಹುದು.

೫. ಹೊಳೆ ಹೊನಲುಗಳ ಸಂಬಂಧವಾದ ವೃತ್ತನಾಮಗಳು

ಉರುತರಂಗಮಾಲಿಕಾ, ತರಂಗ/ತರಂಗಮಾಲಿಕಾ, ತರಂಗಕ, ನದಿ, ನಂದಿನಿ/ ಸುನಂದಿನಿ, ವಾಹಿನಿ, ವೇಗವತಿ, ಶಿಖರಿಣಿ ಇ.

ಜುಳುಜುಳು ಹರಿಯುವ ಹೊಳೆ ಹೊನಲುಗಳ ಹರಿಯುವಿಕೆಯಲ್ಲಿ ಒಂದು ಚೆಲುವುಂಟು. ಆ ಹೊಳೆಹೊನಲುಗಳ ಏಳಿಳಿಯುವ ಅಲೆಗಳಲ್ಲಿ ಒಂದು ಆಕರ್ಷಣೆಯುಂಟು. ಈ ಚೆಲುವು ಆಕರ್ಷಣೆಗಳು ಜಲದ ಸ್ನಿಗ್ಧತೆ ಆರ್ದ್ರತೆಗಳಿಂದ ಮಾತ್ರವಲ್ಲದೆ, ಲಯಬದ್ಧವಾಗಿ ಏಳಿಳಿಯುವ ಅಲೆಗಳ ನಿಯತವಾದ, ನಿಯಮಶೀಲವಾದ ಚಟುವಟಿಕೆ ಹಾಗೂ ಅಪ್ಪಳಿಸುವ ನಾದದ ಶ್ರವಣಮಾಧುರ್ಯ ಇವುಗಳಿಂದಲೂ ಉತ್ಪನ್ನವಾಗುತ್ತವೆ. ಕವಿ-ಲಾಕ್ಷಣಿಕರು ವೃತ್ತದ ಗುರುಲಘುವಿನ್ಯಾಸದ ವಿಶಿಷ್ಟ ಗತಿಗಳಲ್ಲಿ ಅವನ್ನು ಹಿಡಿದಿಡುವ ಯತ್ನ ಮಾಡಿರುವುದು ಈ ಸಮುದಾಯದ ಕೆಲವು ವೃತ್ತಗಳಲ್ಲಿ ಕಂಡುಬರುತ್ತದೆ. ಸಜಸಜಗ ವಿನ್ಯಾಸದ ನಂದಿನಿ/ಸುನಂದಿನಿ ಮತ್ತು ಸಜಸಸಗ ವಿನ್ಯಾಸದ ನಂದಿನಿ/ಸವನಂದಿನಿ ಚತುರ್ಮಾತ್ರಾಗತಿಯಲ್ಲಿ ಸಾಗಬಹುದಾದ ಸದೃಶರಚನೆಗಳು. ಹಾಗೆಯೇ ತರಂಗ/ತರಂಗಮಾಲಿಕಾ ರನರನರನರ ಎಂಬ ಲಕ್ಷಣದ ವೃತ್ತವಾಗಿದ್ದು, ಇಲ್ಲಿ ೫ ಮಾತ್ರೆಗಳ ದೊಡ್ಡದೊಂದು ಗಣದ ಬಳಿಕ ಅನುಕ್ರಮ ತಪ್ಪದಂತೆ ಬರುವ ೩-೫ರ ಗಣ ವಿನ್ಯಾಸದಿಂದ ದೊಡ್ಡದೊಂದು ಅಲೆಯ ಬಳಿಕ ಸಣ್ಣ-ದೊಡ್ಡ ಅಲೆಗಳ ಮೂರು ಶ್ರೇಣಿಗಳ ಗತಿಯನ್ನು ಕಾಣಬಹುದಾಗಿದೆ; ನಾದವನ್ನು ಕೇಳಬಹುದಾಗಿದೆ. ೯ರ ಬಳಿಕಣ ಯತಿ ಗತಿಗೆ ಚೆಲುವು ತರುತ್ತದೆ. ಈ ವೃತ್ತಕ್ಕೆ ಸುರನರ್ತಕೀ ಎಂಬ ಹೆಸರಿರುವಂತೆಯೂ ತೋರುತ್ತದೆ. ಈ ವೃತ್ತದ ಬೆಳವಣಿಗೆಯನ್ನು ಒಂದು ಲಗದಿಂದ ವರ್ಧಿಸಿದ ಉರುತರಂಗಮಾಲಿಕಾದಲ್ಲಿ ಕಾಣಬಹುದು. ಆದ್ದರಿಂದಲೇ ತರಂಗಮಾಲಿಕಾ 'ಉರು' ಎನಿಸಿದ್ದು. ನಿರ್ದಿಷ್ಟಗತಿಯ ತರಂಗಕ (ಭಭಭಭಗಗ) ಚತುರ್ಮಾತ್ರಾಗತಿಗೆ ಹೊಂದಿದರೆ, 'ಲಹರಿಕಾ' (ನನನನನನನನನನಗ) ತ್ರಿಮಾತ್ರಾಗತಿಗೆ ಹೊಂದಿಬರುತ್ತದೆ. ಸಹಜವಾಗಿಯೇ ತರಂಗಕ ಭಗಣಬಹುಳ ವೃತ್ತವಾದುದರಿಂದ ಶೀಘ್ರಾವರೋಹಣ ಮಂದಾರೋಹಣ ಸ್ವಭಾವದಿಂದ ಪ್ರಸಾದ ಮಾಧುರ್ಯ ವ್ಯಂಜಕವಾಗಿರುತ್ತದೆ; ಇನ್ನು ಲಹರಿಕಾವೃತ್ತ ಹತ್ತು ನಗಣಗಳಿಂದ ದ್ರುತಗತಿಯನ್ನು ಪೋಷಿಸುತ್ತದೆ. 'ವೇಗವತಿ' ಯಲ್ಲಿಯೂ ಲಘುಬಾಹುಳ್ಯವಿದ್ದು (ನಜನಸಭನನನಲಗ), ಎಂದರೆ ೨೨ ಲಘುಗಳೂ ೪ ಗುರುಗಳೂ ಇದ್ದು, ದ್ರುತಗತಿ ಸ್ಪಷ್ಟ; ವೇಗವತಿ ಎಂಬ ನಾಮಾಂಕನ ಸಾರ್ಥಕ.

ಮೂರು ಭಗಣ ೨ ಗುರುಗಳ ದೋಧಕ ಪ್ರಸಿದ್ಧವಾದ್ದು; ಆದರೆ ನಾಲ್ಕು ಭಗಣಗಳ ದೋಧಕವೂ ಕ್ವಚಿತ್ತಾಗಿ ಉಕ್ತವಾಗಿದೆ. ಇದರ ಗತಿಯನ್ನು ಭರತನು 'ಸ್ಖಲಿತಘೂರ್ಣಿತ ಗತಿ' ಎಂದೂ ವ್ಯಾಖ್ಯಾಕಾರ ಅಭಿನವಗುಪ್ತನು ಮಂದಮಂದವಾದ ಸ್ಖಲನಗಳಿಂದ ಗೀಯಮಾನವೆಂದೂ ವಿವರಿಸಿದ್ದಾರೆ.

೬. ಸಂಕೀರ್ಣ 'ಮಾಲಾ' ಶ್ರೇಣಿಯ ವೃತ್ತನಾಮಗಳು

ಈ ಗುಂಪಿನ ಕೆಲವು ವೃತ್ತಗಳು ಎಂದರೆ: ಕಾಂಚನಮಾಲಾ, ಚಂದ್ರಮಾಲಾ, ಜಲಧರಮಾಲಾ, ದೀಪಕಮಾಲಾ, ಪಿಪೀಲಿಕಾಮಾಲಾ, ಮಣಿಮಾಲಾ, ಮಾಣಿಕ್ಯಮಾಲಾ, ಮುಕ್ತಾಮಾಲಾ, ಮೇಘಮಾಲಾ, ಮೌಕ್ತಿಕಮಾಲಾ, ರತಿಮಾಲಾ, ವಿದ್ಯುನ್ಮಾಲಾ, ಶರಮಾಲಾ, ಶ್ರೇಯೋಮಾಲಾ, ಸ್ಮರಶರಮಾಲಾ, ಹಂಸಮಾಲಾ ಇ.

ಇವುಗಳಲ್ಲಿ ಸಾಮಾನ್ಯವಾಗಿ ಗೊತ್ತಾದ ಗಣಗಳು ಮಾಲೆಗಟ್ಟಿದಂತೆ ಬರುವುದೇ ಸಾಮಾನ್ಯ. ಉದಾಹರಣೆಗೆ ಚಂದ್ರಮಾಲಾದ ಒಂದು ಬಗೆಯಲ್ಲಿ ನನ ಮಮ ಯಯ; ಇನ್ನೊಂದು ಬಗೆಯಲ್ಲಿ ನನನ ಜ ನನಲ. ಪಿಪೀಲಿಕಾಮಾಲಾದಲ್ಲಿ ಮ ಮ ತ ನನನನ + ೧೫ ಲಘು + ಜಭರ. ಒಂದು ಬಗೆಯ ಮಣಿಮಾಲಾದಲ್ಲಿ ೫ ಭಗಣ + ಸಗಣ; ಇನ್ನೊಂದು ಬಗೆಯಲ್ಲಿ ತಯ ತಯ. ಮಂದಾರಮಾಲಾ ನಡೆಯುವುದು ಸತನಯಯಯ ಎಂಬ ವಿನ್ಯಾಸದಲ್ಲಿ. ಮಾಣಿಕ್ಯಮಾಲಾ ಮತ್ತು ಸದ್ರತ್ನಮಾಲಾಗಳಲ್ಲಿ ರಚನೆಯಲ್ಲಿ ಕೆಲಮಟ್ಟಿಗೆ ಸಮ್ಮಿಶ್ರತೆ ಇದೆ. ಆದರೆ ಮೇಘಮಾಲಾದಲ್ಲಿ ೨ ನಗಣಗಳ ಮುಂದೆ ೬ ರಗಣಗಳು ಅನುಕ್ರಮವಾಗಿ ಬರುತ್ತವೆ. ರತಿಮಾಲಾ ನನಗಗಗಳಿಂದ ಆದುದು; ವಿದ್ಯುನ್ಮಾಲೆ ಮಮಗಗಗಳಿಂದ ಆದುದು; ವಿದ್ಯುನಾಲೆಯ ಇನ್ನೂ ಎರಡು ಬಗೆಗಳು ಮಮ ಗಳಿಂದಲೇ ಆರಂಭಗೊಂಡಿವೆ (ಮಮ ತನಗ: ಮಮ ತನನನನಲಗ). ಶರಮಾಲಾ ಅಥವಾ ಸ್ಮರಶರಮಾಲಾ ಭಭಭಭಸಗ ವಿನ್ಯಾಸನಿರ್ಮಿತವಾದ್ದು. ಶ್ರೇಯೋಮಾಲಾ ಮಮಜಜಗಗಳಿಂದ ಕಟ್ಟಿದ್ದು. ವಿಧ್ಯಂಗಮಾಲಾ ೩ ತಗಣ + ೨ ಗುರುಗಳಿಂದಾದದ್ದು. ಹಂಸಮಾಲಾದ ಒಂದು ಬಗೆ ೨ ರಗಣಗಳಿಂದ ಆದರೆ, ಇನ್ನೊಂದು ೨ ರಗಣ ಮತ್ತು ಗುರುವಿನಿಂದಾಗಿದೆ; ಮತ್ತೂ ಒಂದು ಸರಗ ವಿನ್ಯಾಸದ್ದು.

ಮಾಲೆಯಂತೆಯೇ ದಾಮವೂ ವಿಶಿಷ್ಟವಾದ್ದು. ಮೌಕ್ತಿಕದಾಮದಲ್ಲಿ ಮುತ್ತು ಹವಳಗಳನ್ನು ಸರಗೊಳಿಸಿದಂತೆ ೪ ಜಗಣಗಳಲ್ಲಿ ಗುರು ಲಘು ವಿನ್ಯಾಸನೇರ್ಪಟ್ಟಿದೆ.

೭. ಸಂಕೀರ್ಣ 'ಗತಿ' ವಿಶೇಷಗಳನ್ನು ತಿಳಿಸುವ ವೃತ್ತನಾಮಗಳು

ಈ ವೃತ್ತನಾಮಗಳಲ್ಲಿ ಕೆಲವು ಹೀಗಿವೆ: (i) ಅಮೃತಗತಿ, ಕುಟಿಲಗತಿ, ಚಪಲಗತಿ, ಚಿತ್ರಗತಿ, ಜಲೋದ್ಧತಗತಿ, ತ್ವರಿತಗತಿ, ದ್ರುತಪಾದಗತಿ, ದ್ರುತಲಘುಪದಗತಿ, ಪಂಚಮಗತಿ, ಲಘುಗತಿ, ಲಲಿತಗತಿ, ಹಂಸಗತಿ (ii) ಚಿತ್ರಪದ, ದ್ರುತಪದ, ಲಲಿತಪದ, ಸಾಂದ್ರಪದ (iii) ದ್ರುತವಿಲಂಬಿತ.

ಲಘುಗುರುಗಳ ವಿನ್ಯಾಸದ ಮೂಲಕ ವೃತ್ತದ ನಡೆ ದ್ರುತವೇ ಮಂದವೇ ಮಧ್ಯಮವೇ ಎಂಬುದನ್ನು ಸೂಚಿಸುವಂತೆ, ಬೆಡಗು ವಿಡಾಯ ವಿಭ್ರಮಗಳಿಂದ ಕೂಡಿದುದೇ ಎಂಬುದನ್ನು ಸೂಚಿಸುವಂತೆ ಈ ಹೆಸರುಗಳು ಕಂಡುಬರುತ್ತವೆ. ಲಘುಬಾಹುಳ್ಯವು ತ್ವರಿತಗತಿಗೂ ಗುರುಬಾಹುಳ್ಯವು ಮಂದಗತಿಗೂ ಇವುಗಳ ವಿಶಿಷ್ಟತೆಯು

ಮಧ್ಯಮಗತಿಗೂ ಸಹಕಾರಿಯಾದವು ಎಂಬುದು ತಿಳಿದಿದೆ. ಬಹುಶಃ ವಿಮಿಶ್ರತೆಯಲ್ಲಿಯ ವೈವಿಧ್ಯ ಗತಿವೈಚಿತ್ರ್ಯವನ್ನು ರೂಪಿಸಲು ಸಮರ್ಥವಾಗಿರುತ್ತದೆ. ಈಗ ನಿದರ್ಶನಗಳನ್ನು ಸ್ವಲ್ಪ ಗಮನಿಸೋಣ:

ಅಮೃತಗತಿ/ತ್ವರಿತಗತಿ ನಜನಗ ಎಂಬ ವಿನ್ಯಾಸದಲ್ಲಿದ್ದು, ೨ ಗುರುಗಳನ್ನು ಹೊರತುಪಡಿಸಿ ಎಲ್ಲವೂ ಲಘುಗಳಾಗಿರುವ ದೆಸೆಯಿಂದ ನಿಜವಾಗಿ ತ್ವರಿತಗತಿಯಲ್ಲಿಯೇ ಇದೆ. ದ್ರುತಪಾದಗತಿ ಎಂಬುದು ಸಹ (ನಜ ಜಲಗ) ೩ ಗುರುಗಳನ್ನು ಹೊರತು ಪಡಿಸಿ ಎಲ್ಲವೂ ಲಘುಗಳಿಂದಾಗಿರುವುದರಿಂದ ವೇಗವಾದ ಹೆಜ್ಜೆಯ ನಡೆಯೆಂಬ ತನ್ನ ಹೆಸರನ್ನು ಸಾರ್ಥಕಪಡಿಸಿಕೊಂಡಿದೆ. ದ್ರುತಲಘುಪದಗತಿ/ಸ್ಖಲಿತಾ ೧೮ ಲಘುಗಳು, ೫ ಗುರುಗಳ ವೃತ್ತವಾಗಿದ್ದು (ಭಭಭತನನನಸ), ವೇಗವೂ ಹಗುರವೂ ಆದ ಹೆಜ್ಜೆ ನಡೆಯು ಈ ವೃತ್ತದಲ್ಲಿ, ಅದರ ನಡೆ ವೇಗವಾಗಿ ವೃತ್ತವನ್ನು ನಡಸುವ ಲಘುಗಳ ಮೂಲಕ ಸಿದ್ಧವಾದುದು ಎನ್ನುವುದು ಶ್ಲೇಷಾರ್ಥದಿಂದ ಇಂಗಿತವಾಗುತ್ತದೆ. ಇನ್ನು ಲಘುಗತಿ/ಚಪಲಾ / ತ್ವರಿತಗತಿ ೪ ನಗಣಗಳಿಂದಲೂ ಒಂದು ಗುರುವಿನಿಂದಲೂ ಕಟ್ಟಿದ್ದಾಗಿದ್ದು, ಹೆಸರಿನ ಸಾರ್ಥಕತೆಯಂತೂ ಸುಲಭವೇದ್ಯ. ಚಪಲಾ ಎಂದರೆ ಮಿಂಚು ಎಂದು ತಾನೇ ? ಬಳ್ಳಿವರಿದು ಫಳ್ಳನೆ ಹೊಳೆಯುವ ಮಿಂಚಿನ ಗತಿಯು ವೃತ್ತದ ನಡೆ ಲಘುಗಳ ಸರಣಿಯಿಂದ ಸಾಧ್ಯ. ಲಲಿತಗತಿಯೆಂಬುದಾದರೂ ಹೀಗೆಯೇ ; ೬ ಲಘು ೨ ಗುರುಗಳಿಂದ ಲಲಿತವಾದ ಓಟವನ್ನುಳ್ಳದ್ದು. ಹಂಸಗತಿಯನ್ನು ಈಗಾಗಲೇ ಇನ್ನೊಂದು ವಿಭಾಗದಲ್ಲಿ ಗಮನಿಸಿದ್ದೇವೆ.

ಹಂಸಗತಿಯಲ್ಲಿ ನಿರ್ದಿಷ್ಟ ಗಣಾವೃತ್ತಿಯಿದ್ದರೆ, ಕುಟಿಲಗತಿಯಲ್ಲಿ ಅನಿರ್ದಿಷ್ಟ ಆವೃತ್ತಿಯಿದೆ (ನಜತತಗ, ನನತತಗ); ಇನ್ನೂ ಅನಿರ್ದಿಷ್ಟತೆ ಚಪಲಗತಿಯದು (ಭಮಸಭನನನಲಗ). ಜಲೋದ್ಧತಗತಿಯಲ್ಲಿ (ಜಸಜಸ) ಆದಿಯ ಲಘುವನ್ನು ಹಿಂದಿಕ್ಕಿದರೆ ಎರಡು ಖಂಡಗಳಲ್ಲಿ ೧-೧ ಗುರುವಿನ ನಡುವೆ ೩-೩ ಲಘುಗಳು ಲಯಬದ್ಧವಾಗಿ ಬರುತ್ತವೆ. ಪ್ರವಾಹಶೀಲತೆಯ ಒಂದು ವೈಖರಿ ಇದು. ಚೇಟೀಗತಿ (೮ ಯುಗಣ+ಲಗ) ಗುರುಬಾಹುಳ್ಯದ ಮಂದಗತಿಯಿಂದ ದಿಟವಾಗಿ ಮಂದಗಮನೆಯಾದ ಚೇಟಿಯ ನಡಗೆಯೇ ಆಗಿದೆ. ವಿಲಂಬಿತಾ (ಜರಗ) ೪ ಗುರು ೩ ಲಘುಗಳಿಂದ ದಿಟವಾಗಿ ವಿಲಂಬಿತವೇ. ದ್ರುತಲಂಬಿತವೋ ಎಂದರೆ (ನಭಭರ) ಮೊದಲೆರಡು ಗಣಗಳ ಲಘುಬಾಹುಳ್ಯದಿಂದ ದ್ರುತವೂ ಬಳಿಕಣ ಎರಡು ಗಣಗಳ ಗುರುಪ್ರಾಬಲ್ಯದಿಂದ ವಿಲಂಬಿತವೂ ಆಗಿ ತಾನು ಸಹ ಸಾರ್ಥಕವಾಗಿ ದ್ರುತವಿಲಂಬಿತವೇ. ಕೆಲವರು ವಿಲಂಬಿತಗತಿ ಎಂದು ಕರೆದಿರುವ ಪೃಥ್ವೀವೃತ್ತವು ಜಸಜಸಯಲಗ ಎಂಬ ವಿನ್ಯಾಸದಲ್ಲಿರುವುದು ತಿಳಿದದ್ದೇ. ಇದನ್ನು ವಿನ್ಯಾಸದ ದೃಷ್ಟಿಯಿಂದ ನೋಡಿದರೆ, ೭ ಗುರು ೧೦ ಲಘುಗಳ ರಚನೆಯಿಂದ ಗುರುಪ್ರಾಬಲ್ಯದ ವೃತ್ತವಾಗಿ ಅನ್ವರ್ಥನಾಮವಾಗಿದೆ. ಇದರ ಒಂದು ಭಾಗ ಜಲೋದ್ಧತಗತಿಯ ಲಯವೇ.

ದ್ರುತಪದದ ಒಂದು ಬಗೆಯಲ್ಲಿ (ನಭಜಯ) ೮ ಲಘುಗಳು ೩ ಗುರುಗಳೂ ಇನ್ನೊಂದು ಬಗೆಯಲ್ಲಿ (ನಭನಯ) ೯ ಲಘುಗಳು ೨ ಗುರುಗಳೂ ಬರುವುದರಿಂದ

ಎರಡೂ ಹೆಸರಿಗೆ ತಕ್ಕವೇ. ಆದರೆ ಇವರ ಪ್ರತಿಯಾಗಿ, ಸಾಂದ್ರಪದ/ಭದ್ರಪದ (ಭತನಗಗ) ೫ ಗುರು ೬ ಲಘುಗಳ ದೆಸೆಯಿಂದ ಗುರುವಿನ ಒತ್ತು ಸ್ಪಷ್ಟ. ಆದ್ದರಿಂದ ನಿಧಾನಗತಿಯದು ಈ ವೃತ್ತ. ಲಲಿತಪದವೂ ದ್ರುತಪದದ ಹಾಗೆಯೇ ೮ ಲಘು ೪ ಗುರುಗಳದು (ನಜಜಯ).

೮. ಸಂಕೀರ್ಣ ವೃತ್ತನಾಮಗಳು

ಕೆಲವು ವೃತ್ತಗಳು, ಉದಾಹರಣೆಗೆ, ಮಣಿಗಣನಿಕರ – ಲಘುಮಣಿಗಣನಿಕರ, ಮಾಲಿನಿ-ಲಘುಮಾಲಿನಿ – ನವಮಾಲಿನಿ/ವನಮಾಲಿನಿ, ವಾತೋರ್ಮಿ-ಊರ್ಮಿಮಾಲಾ, ಚಾಮರ–ಪಂಚಚಾಮರ/ವಸಂತಚಾಮರ ಈ ಕೆಲವು ಪರಸ್ಪರ ಸಂಬಂಧವನ್ನು ತಮ್ಮ ಹೆಸರುಗಳಿಂದಲೇ ಸೂಚಿಸುತ್ತವೆ. ಇವುಗಳ ವಿಶ್ಲೇಷಣೆಯೂ ಫಲಪ್ರದವಾದುದು.

ಮಣಿಗಣನಿಕರದಲ್ಲಿ ಒಂದೊಂದು ಲಘುವೂ ಒಂದೊಂದು ಮಣಿಯೋ ಎನ್ನುವಂತೆ ೧೪ ಲಘುಗಳು ಸರಣಿಯಾಗಿ ಬಂದು ಗುರ್ವಂತವಾಗಿ ಮುಗಿಯುತ್ತದೆ (ನನನನಸ). ಲಘುಮಣಿಗಣನಿಕರ ಅದಕ್ಕೆ ಚಿಕ್ಕದು ಎಂಬುದರಿಂದ ೮ ಲಘುಗಳ ಸರಣಿ ಗುರ್ವಂತವಾಗಿ ಕೊನೆಗೊಳ್ಳುತ್ತದೆ (ನನಸ).

ಮಾಲಿನಿ (ನನಮಯಯ) ಮತ್ತು ಲಘುಮಾಲಿನಿ (ನಸತಭರ) ವೃತ್ತಗಳು ಸಮಾನಸಂಖ್ಯೆಯ ಅಕ್ಷರಗಳನ್ನು ಉಳ್ಳವಾದರೂ ಲಘುಗಳ ಬಹಳಿಕೆಯಿಂದಾಗಿ ಲಘುಮಾಲಿನಿ ಚಿಕ್ಕಮಾಲಿನಿಯೂ ಹೌದು, ಲಘುಪ್ರಚುರ ಮಾಲಿನಿಯೂ ಹೌದು. ನವಮಾಲಿನಿಯ ರಚನೆ ಹಿಂದಿನ ಎರಡರಿಂದ ಕೊಂಚ ಭಿನ್ನವಾದುದು (ನಜಭಯ); ಆದ್ಯಂತ ಗಣಗಳಲ್ಲಿಯ ಸಾಮ್ಯವಷ್ಟೇ ಮಾಲಿನಿ-ನವಮಾಲಿನಿಯ ಸಾಮ್ಯ.

ಈಗ ಚಾಮರ ವೃತ್ತಗಳು: ಉತ್ಸಾಹಾದಿ ನಾಮಾಂತರಗಳ ಚಾಮರವೃತ್ತ ರಜರಜರ ಎಂಬ ವಿನ್ಯಾಸದ ಮಾತ್ರಾಲಯನಿಷ್ಠವಾದೊಂದು ವೃತ್ತ. ಇದು ಜರಜರಜಗ ಎಂದು ವಿನ್ಯಸ್ತಗೊಂಡಾಗ ಅದೇ ಬಗೆಯ ಗತಿಯಲ್ಲಿ ನಡೆಯುವ ಪಂಚಚಾಮರ ವೃತ್ತವಾಗುವುದು. ಆದಿಯ ಜಗಣದ ಸ್ಥಾನದಲ್ಲಿ ಎರಡು ನಗಣಗಳನ್ನಿಟ್ಟರೆ ಪಂಚಚಾಮರದ ಅದೇ ಹೆಸರಿನ ಇನ್ನೊಂದು ಬಗೆಯಾಗುವುದು. ಪಂಚಚಾಮರದ ಇನ್ನೊಂದು ಬಗೆ ಜರಜರ ಎಂಬಷ್ಟು ವಿನ್ಯಾಸದಿಂದಲೇ ಉಕ್ತವಾಗಿರುವುದು ಸಹ ಉಂಟು. ಇದಕ್ಕೆ ಪಂಚಚಾಮರ/ವಸಂತಚಾಮರವೆಂದೇ ಹೆಸರಿದೆ. ಎಂದರೆ ಚಾಮರ ಸಂಬಂಧದ ಈ ವೃತ್ತಗಳೆಲ್ಲ ಜರಜರ ಎಂಬುದರ ಸುತ್ತ ಅರಳಿಕೊಂಡಿರುವಂತೆ ತೋರುತ್ತದೆ.

ವಾತೋರ್ಮಿ/ಊರ್ಮಿಮಾಲಾ/ವಾತೋರ್ಮಿಮಾಲಾ ಮಭತಗಗ ಎಂಬ ವಿನ್ಯಾಸದ ವೃತ್ತ ತನ್ನ ಬಹುಸಂಖ್ಯೆಯ ಗುರುಗಳ ಬೀಸು ಕಾರಣವಾಗಿ ಗಾಳಿಯಲೆಗಳ ಸಾಲುಸಾಲು ಬೀಸಿದಂತೆಯೇ ಎಂದು ಹೆಸರು ಕೊಟ್ಟವರು ತಿಳಿದಿರಬೇಕು. ಆದ್ದರಿಂದ ಇದು ವಾತೋರ್ಮಿ; ಬರಿಯಲೆಗಳ ಸಾಲು ಎಂದಾದರೆ ಊರ್ಮಿಮಾಲಾ.

ಗುರುಲಘುಗಳು ಸಮಾನ ಸಂಖ್ಯೆಯಲ್ಲಿ ಬರುವುದೇ ಅಲ್ಲದೆ, ಗೊತ್ತಾದ ಗಣಗಳು ದ್ವಿರಾವೃತ್ತಿಗೊಳ್ಳುವುದೂ ಕಾರಣವಾಗಿ (ರಜರಜ) ವೃತ್ತವೊಂದು 'ಸಮಾನ'ವೆನಿಸಿದ್ದು ಸಹಜವೇ ಇದೆ. ಚಾಮರ ವೃತ್ತಗಳ ಜೊತೆಯಲ್ಲಿ ಹೋಲಿಸಬಹುದಾದ ವಿನ್ಯಾಸ ಇಲ್ಲಿಯದು. ಮಣಿಗಣನಿಕರದಲ್ಲಿ ಮಣಿಗಳಂತೆ ಲಘುಗಳ ಹವಣಿಕೆಯನ್ನು ನಾವು ಕಂಡಂತೆಯೇ, ನಿರರ್ಗಳ ಲಘುಸರಣಿಯನ್ನು ಹೀಗೆಯೇ ಚಿನ್ನದ ಮಳೆ ಕರೆದಂತೆ ವಸುಧಾರಾ ವೃತ್ತದಲ್ಲಿ ಸಹ ನಾವು ಕಾಣುತ್ತೇವೆ (೫ ನಗಣ+ಗಗ). ಪಣವಕದಲ್ಲಿ ಪಾರ್ಶ್ವಸ್ಥಗಳಾದ ೩–೩ ಗುರುಗಳ ನಡುವಿನ ೪ ಲಘುಗಳು (ಮನಯಗ) ನಡು ಸಣ್ಣನೆಯ ಚರ್ಮವಾದ್ಯದ ಆಕಾರ ನೆನಪಿಸುತ್ತದೆ.

ಜರಲಗ ಎಂಬ ವಿನ್ಯಾಸದ ವೃತ್ತವೊಂದನ್ನು ಒಂದು ಆಕರ ನಗಸ್ವರೂಪಿಣಿಯೆಂದೂ ಇನ್ನೊಂದು ಆಕರ ಬಾಲಗರ್ಭಿಣಿಯೆಂದೂ ಕರೆದಿರುವುದು ಸ್ವಾರಸ್ಯಕರ. ಲಘುಗುರುಗಳು ಕ್ರಮಾಗತವಾಗಿ ಕಾಣಿಸಿಕೊಳ್ಳುವ ಈ ವೃತ್ತದಲ್ಲಿ, ಅವುಗಳ ಹಬ್ಬುಗೆ ಬೆಟ್ಟದ ಶ್ರೇಣಿಯ ಸ್ವರೂಪದಲ್ಲಿರುವುದನ್ನು ಕಲ್ಪಿಸಿಕೊಳ್ಳಲು ಸಾಧ್ಯ; ಹಾಗೆಯೇ ನಮ್ಮ ಕವಿಗಳ ವರ್ಣನೆಯ ಗರ್ಭಿಣಿಸ್ತ್ರೀ ಚಿತ್ರಗಳ ಹಿನ್ನೆಲೆಯಲ್ಲಿ, ಎಂದರೆ ಗರ್ಭವತಿಯಾಗುವ ಪೂರ್ವದಲ್ಲಿ ಆಕೆ ರಗಣದಂತೆ ಇದ್ದಳೆಂದೂ ಗರ್ಭವತಿಯಾದಾಗ ಜಗಣದಂತೆ ಇದ್ದಳೆಂದೂ ನಿರೂಪಿಸಿರುವುದರ ಹಿನ್ನೆಲೆಯಲ್ಲಿ, ಈ ಹೆಸರಿನ ಸಾರ್ಥಕತೆಯನ್ನು ಮನಗಾಣಬಹುದಾಗಿದೆ.

ಇನ್ನೆರಡು ವೃತ್ತಗಳ ಉಲ್ಲೇಖದೊಂದಿಗೆ ಈ ಪ್ರಬಂಧವನ್ನು ಮುಗಿಸಬಹುದಾಗಿದೆ. ಇವುಗಳಲ್ಲಿ ಸಂಸ್ಕೃತ ಛಂದೋಗ್ರಂಥಗಳಲ್ಲಿ ಅನುಕ್ತವಾದ ಶಂಭುನಟನ (ಜಸನಭಜಸನಭಲಗ) ಉತ್ಕೃತಿ ಛಂದಸ್ಸಿನ ಒಂದು ಗಮನಾರ್ಹವೃತ್ತ. ಇಲ್ಲಿಯ ಗತಿ ಪಂಚಮಾತ್ರೆಗಳದಾಗಿದ್ದು, ಪ್ರತಿಗಣಕ್ಕೆ ತಾಳದ ಪೆಟ್ಟು ಖಚಿತವಾಗಿ ಬೀಳುತ್ತದೆ. ಆದ್ಯಂತಗಳ ಲಗ ವಿನ್ಯಾಸಗಳ ಉತ್ಫುಲ್ಲತೆ ಶಿವನ ನಾಟ್ಯವೈಖರಿಯನ್ನು ಚೆನ್ನಾಗಿಯೇ ಕಟ್ಟಬಲ್ಲದು. ಹೀಗೆಯೇ ಲಗ ವಿನ್ಯಾಸವುಳ್ಳದ್ದು ಹರನರ್ತನ ವೃತ್ತ ಸಹ (ರಜಜಜಭರ). ಇನ್ನೊಂದು ವೃತ್ತವೂ ನರ್ತನ ಸಂಬಂಧವಾದುದೇ; ಬಹುಶಃ ಕನ್ನಡದ ಮೂಲಕವೇ ಸಂಸ್ಕೃತ ಛಂದೋಗ್ರಂಥಗಳಲ್ಲಿ ಉಲ್ಲೇಖಗೊಂಡುದೇ. ಅದೆಂದರೆ, ಲಲಿತವೃತ್ತ/ವೃತ್ತಲಲಿತ/ಲಲಿತನೃತ್ತ/ನೃತ್ತಲಲಿತ (ಭಜಸನಭಜಸನಭಯ). ಇದೊಂದು ೩೦ ಅಕ್ಷರಗಳ ಮಾಲಾವೃತ್ತ. ಇಲ್ಲಿಯ ಗತಿಯೂ ಪಂಚಮಾತ್ರಕವೇ. ಈ ವೃತ್ತದ ಬಳಕೆ ಕನ್ನಡದ ಕಾವ್ಯ ಮತ್ತು ಶಾಸನಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಕಂಡುಬಂದಿದ್ದು, ತನ್ನ ದೀರ್ಘತೆಯಿಂದಲೂ ಮಾತ್ರಾಗತಿಯ ವೈಖರಿಯಿಂದಲೂ ವಿಮರ್ಶಕರ ಗಮನವನ್ನು ಸೆಳೆದಿದೆ.*

---

* ಗಂಗಾತರಂಗ ಪ್ರತಿಷ್ಠಾನದ ಶ್ರೀಮತಿ ವಸಂತಾ ಎಸ್. ಅನಂತನಾರಾಯಣ ದತ್ತಿ ಉಪನ್ಯಾಸ, ಸರ್ಕಾರಿ ಕಾಲೇಜು, ಕಾಸರಗೋಡು (೩–೩–೧೯೯೦).

ಟಿ. ಸಿ. ಪೂರ್ಣಿಮಾ

ಆತ್ಮಕಥನ

ಒಮ್ಮೆ
ಒಂದು ಚೆಂದದ
ಬಣ್ಣದಂಗಿಯ ಕಂಡೆ.
ಅಂದವಾಗಿ ಅಳತೆಗೆ ತಕ್ಕಂತೆ
ಹೊಲಿದಿಟ್ಟ ಹೊಸ ಅಂಗಿ.
ತೊಟ್ಟೆ.
ಎಲ್ಲ ರೀತಿಯಲ್ಲೂ ಸರಿಯೆನಿಸಿತ್ತು.
ಕನ್ನಡಿಯ ಮುಂದೆ ನಿಂತು
ಒಮ್ಮೆ ನೋಡಿಕೊಂಡು ಹೊರಬಂದೆ.
ಎಲ್ಲರ ಬಯಕೆಗೆ ಪಾತ್ರವಾಗಿತ್ತು
ನನ್ನ ಅಂಗಿ, ನೋಡಿದವರು
ನನಗಿರಲಿ ಎನಗಿರಲಿ ಎಂದು ಬಯಸಿದರು.

ಕೈಯಿಂದ ಕೈಗೆ ಜಾರಿ
ಒಂದು ನೆಲೆಗೆ ಬಂದೆ.
ಈಗ ನನ್ನ ಬಣ್ಣದಂಗಿಗೆ
ಹೊಸ ಕಳೆ ಮೂಡಿತ್ತು.
ಆದರೆ ಅದರೊಂದಿಗೇ
ಹಳೆತನ ಬೆಳೆಯುತ್ತಿತ್ತು.

ಈಗ
ಹಿಂದೊಮ್ಮೆ ಆವರಿವರ
ಮನ ಸೆಳೆದ ನನ್ನ ಬಣ್ಣದ ಅಂಗಿ
ಮಾಸತೊಡಗಿತ್ತು.
ಅಲ್ಲಲ್ಲಿ ಸೀಳಿದ್ದ ಕಂಡು
ಕೂಡಲೇ ಹೊಲಿಗೆ ಇರಿಸಿದೆ.

ನನ್ನಂಗಿಗೆ ಮತ್ತೆ ರೂಪು ಬಂದಿತಾದರೂ
ಹೊಸತಾಗಲಿಲ್ಲ ಅದು.
ದಿನಗಳುರುಳಿದಂತೆ
ಮತ್ತೆ ಅಲ್ಲಲ್ಲಿ ಸೀಳು
ಹೊಲಿಗೆಯ ಮೇಲೆ ಹೊಲಿಗೆ
ಛಲ ಬಿಡದ ತ್ರಿವಿಕ್ರಮ ನಾನು.

ಕಡೆಗೊಮ್ಮೆ
ನನ್ನ ಬಣ್ಣದಂಗಿಯ
ಮೈಯೆಲ್ಲ ಗಾಯ
ಬೆನ್ನಲ್ಲಿ ಬಗಲಲ್ಲಿ
ಎಲ್ಲೆಂದರಲ್ಲಿ ಬಿರುಕುಗಳು
ಬಣ್ಣ ಕಳೆದುಕೊಂಡ
ಅಂದಗೆಟ್ಟ ನನ್ನ ಪುಟ್ಟ ಅಂಗಿ
ನೋವ ಸಹಿಸಲಿಲ್ಲ.

ನಗುವವರು ನಕ್ಕರು
ಕುಹಕವಾಡಿದರು, ಕೇಳಿ
ಕಿವುಡಾಗಿ ಕುಳಿತೆ,
ಸಾಕೆನಿಸಿತ್ತು ನನಗೆ
ಬಣ್ಣದಂಗಿಯ ಸಹವಾಸ,
ಬಿಚ್ಚಿ ಬಿಮ್ಮನೆ ಒಗೆದೆ
ಮೆಲ್ಲನೆ ಮುಂದಿದ್ದ ದಾರಿಗುಂಟ ನಡೆದೆ
ಬೆನ್ನ ಹಿಂದೆಯೆ ನನ್ನ ಬಣ್ಣದ ಅಂಗಿ
ಬಿದ್ದಿತ್ತು ಅನಾಥವಾಗಿ.

ಡಾ. ನೀ. ಕೃ. ರಾಮಶೇಷನ್

ಚಿಕ್ಕಗೌಜ—ಹಿರೇಗೌಜದ ಶಾಸನ ಶಿಲ್ಪ ಹಾಗೂ ಸುತ್ತಣ ಐತಿಹಾಸಿಕ ಅವಶೇಷಗಳು

ಕನ್ನಡ ನಾಡಿನ ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಇತಿಹಾಸವನ್ನು ಪುನಾರಚಿಸಲು ಇರುವ ಪ್ರಮುಖ ಸಾಧನೆಗಳಲ್ಲೊಂದು, ಇಲ್ಲಿ ದೊರೆತಿರುವ ಶಾಸನಸಂಪದ ಹತ್ತಾರು ಸಾವಿರ ಶಾಸನಗಳು, ಅವುಗಳಲ್ಲಿ ಕಾಣ ಬರುವ ಆಯಾಯ ಕಾಲದ ವೈಭವ, ಸಾಮಾಜಿಕ ಪರಿಸ್ಥಿತಿ–ವಿದ್ಯಾಭ್ಯಾಸ ಸಂಸ್ಕೃತಿಯ ವಿವಿಧ ಮುಖಗಳ ದರ್ಶನ ಇತ್ತೀಚೆಗೆ ವಿಜಯನಗರ–ಹಂಪೆ ಪ್ರದೇಶ ದಲ್ಲಿ ರಾಜ್ಯ ಸರಕಾರದ ಪುರಾತತ್ವ ಇಲಾಖೆ, ಕೇಂದ್ರ ಸರಕಾರದ ಪುರಾತತ್ವ ಇಲಾಖೆ—ಪ್ರಾಚ್ಯಶೋಧನಶಾಸ್ತ್ರತಜ್ಞರ ನೇತೃತ್ವದಲ್ಲಿ ನಡೆಸಿದ ಉತ್ಖನನದಿಂದಾಗಿ ಸಂಗಮ ರಾಜವಂಶದ ಅಮೂಲ್ಯ ದಾಖಲೆ ನೀಡುವ ಶಾಸನ ಪತ್ತೆಯಾಗಿದೆ ಎಂದು ವರದಿಯಾಗಿದೆ.[೧] ಹಾಗೂ ಒಂದು ಸುಂದರವಾದ ದೇವಾಲಯ (ವಿರೂಪಾಕ್ಷ ದೇವಾಲಯದ ಬಳಿ ನಗರೇಶ್ವರ ದೇವಾಲಯ) ಸಹ ಪತ್ತೆಯಾಗಿದೆ.[೨] ಇವೆಲ್ಲ ಇತಿಹಾಸದಲ್ಲಿ ಹುದುಗಿರುವ ಗತನೆನಪುಗಳ ಪ್ರತೀಕ ಆದ ಸ್ಮಾರಕ–ಪಳೆಯುಳಿಕೆಗಳ ಮೂಲಕ, ಅಂದಂದಿನ ಬದುಕು-ಅದರ ವಿವಿಧ ಪ್ರಕಾರ–ಮುಖ ಪರಿಚಯಿಸುವ ಸಾಂಸ್ಕೃತಿಕ ರಾಯಭಾರಿಗಳಾಗಿರುತ್ತವೆ. ಐತಿಹಾಸಿಕ ದಾಖಲೆ ಕೂಡ ಆಗುತ್ತವೆ. ಶಾಸನಗಳಲ್ಲಿ ಶಿಲಾಶಾಸನ, ತಾಮ್ರಲಿಪಿ, ಮುಂತಾದ ವಿಭಾಗವುಂಟೆಂಬುದು ಎಲ್ಲರೂ ತಿಳಿದ ವಿಚಾರವೆ.

ವೀರಗಲ್ಲುಗಳು, ಶಾಸನಗಳ ಒಂದು ವಿಶಿಷ್ಟ ಪ್ರಕಾರ. ಯುದ್ಧದಲ್ಲಿ ಹೋರಾಡಿ, ಮಡಿದವನ ಸ್ಮಾರಕವಾಗಿ ಆಗಿನ ಘಟನೆಯನ್ನು ಜೀವಂತವಾಗಿ ನೆನಪಿಸಲು ನಿಲ್ಲಿಸುವ

---

೧ ಒಂದೆರಡು ಫೋಟೋಗಳನ್ನು ತೆಗೆದು ಕ್ಷೇತ್ರಾಧ್ಯಯನದಲ್ಲಿ ಸಹಕರಿಸಿದ ಹಾಗೂ ಶಾಸನ ಓದುವ, ಪಡಿಯಚ್ಚು ತೆಗೆಯುವುದನ್ನು ಕಲಿಸಿರುವ ಡಾ॥ ಆರ್. ಶೇಷಶಾಸ್ತ್ರಿಗಳಿಗೆ ಮತ್ತು ಡಾ॥ ಎಂ. ಚಿದಾನಂದ ಮೂರ್ತಿಗಳಿಗೆ ನನ್ನ ಕೃತಜ್ಞತೆಯ ನಮನ ಸಲುತ್ತದೆ.

೨ ಡೆಕ್ಕನ್ ಹೆರಾಲ್ಡ್ ದಿನಾಂಕ ೩–೧೦–೮೫

ಸ್ಮಾರಕ ಕಲ್ಲುಗಳು—ವೀರಗಲ್ಲುಗಳು.[೧] ವೀರಗಲ್ಲುಗಳಲ್ಲಿ ಸಾಮಾನ್ಯವಾಗಿ—"ತುರು ಗೋಳ್", "ಪೆಣ್ಬುಯಲ್" ಎಂಬರೆ, ಗೋಗ್ರಹಣ, ಹೆಣ್ಣು ಅಪಹರಣ— ಈ ಕಾರಣ ಗಳಿಗಾಗಿ ಕದನ ನಡೆದು ಆ ಯುದ್ಧದಲ್ಲಿ ಹೋರಿ ಮಡಿದ ವೀರನ ನೆನಪಿಗಾಗಿ ನೆಡಿಸುವ ಶಾಸನ ಪ್ರಕಾರವೇ ಹೆಚ್ಚು.

ಇದಲ್ಲದೆ, 'ಮಹಾಸತಿ'ಯಾದ ಮಾಸ್ತಿಕಲ್ಲು, ಜೈನ ಸನ್ಯಾಸಿಗಳ "ನಿಸಿದಿಗೆ ಕಲ್ಲು" ಕೂಡ ವೀರಗಲ್ಲುಗಳ ಪ್ರಕಾರಕ್ಕೆ ಸೇರ್ಪಡೆಯಾಗುವಂಥವೆ ಆಗಿವೆ. ಮಾಸ್ತಿಕಲ್ಲಿನ ಕತೆಗೆ ಒಂದು ಜ್ವಲಂತ ಉದಾಹರಣೆ "ಕೆರೆಗೆ ಹಾರ" ಜನಪದಗೀತ. ಹೀಗೆಯೇ ಆಳಿದ ಪತಿಯ ಸಂಗಡ ತಾನು ಸ್ವರ್ಗಕ್ಕೆ ನಡೆಯಲು ಸಹಗಮನ ನಡೆಸಿದ ಬೆಳತೂರು ದೇಕಬ್ಬೆಯ ಶಾಸನ, ವಿದೇಶೀ ಪ್ರವಾಸಿಗಳಾದ ನಿಕೋಲೊ—ಎ—ಕೊಂತಿ, ಅಬ್ದುಲ್ ರಜಾಕ್, ಪಾಯಿಸ್ ಮುಂತಾದವರು ವಿಜಯನಗರದಲ್ಲಿ ತಾವು ಕಂಡ "ಮಾಸತಿ"ಯರ ಸಹಗಮನ ಚಿತ್ರಣ ನೀಡುವ ವರದಿಗಳು—ಇಂದು ನಾವು ಕಾಣ ಬಹುದಾದ ಮಾಸ್ತಿಕಲ್ಲುಗಳ ವೀರಗಾಥೆಗೆ ಸಾಕ್ಷ್ಯ ನುಡಿವಂತಿವೆ. ಈ ದಿಸೆಯಲ್ಲಿ ಕನ್ನಡದ ಮೊತ್ತಮೊದಲ ಶಾಸನ ಆದ "ಹಲ್ಮಿಡಿ ಶಾಸನ"ವನ್ನೂ "ವೀರಗಲ್ಲೆಂದೇ" ಕರೆಯಬಹುದಾಗಿದೆ. ಇನ್ನೊಂದು ವಿಶೇಷವೆಂದರೆ ವೀರಗಲ್ಲು ನೆಡಿಸುವುದು ಕೇವಲ ಮನುಷ್ಯರಿಗೆ ಮಾತ್ರ ಮೀಸಲಾಗಿರದೆ, ಪ್ರೀತಿಯ ಪ್ರಾಣಿಗಳು ಯಜಮಾನನಿಗಾಗಿ ಕಾದಿ ಪ್ರಾಣ ತೆತ್ತಾಗಲೂ ಅವುಗಳ ಜ್ಞಾಪಕಾರ್ಥವಾಗಿ ಕಲ್ಲು ನೆಟ್ಟು ಅದರ ಪೂಜೆ ಗಾಗಿ "ಗೊರವ"ನನ್ನು ನೇಮಿಸಿದ ದಾಖಲೆಯಿರುವ ವೀರಶಾಸನಗಳೂ ದೊರೆತಿವೆ. (ಮಂಡ್ಯ ಜಿಲ್ಲೆಯ ಆತಕೂರು ಶಾಸನ, ತನ್ನ ಮುದ್ದಿನ ನಾಯಿ "ಕಾಳಿ"ಗೋಸುಗ ನಿಲ್ಲಿಸಿರುವ ವೀರಗಲ್ಲು).

ನಾಡಿಗಾಗಿ, ನಾಡವರನ್ನು ರಕ್ಷಿಸಲಿಕ್ಕಾಗಿ ಅಥವಾ ಊರಿನ—ಗ್ರಾಮದ ದನಕರು ಗಳನ್ನೂ ರಕ್ಷಿಸಲು, ಅಮಾಯಕ ಹೆಣ್ಣುಗಳನ್ನು ಕಟ್ಟೊಯ್ಯುವುದರ ವಿರುದ್ಧ ಹೋರಿ, ಮಡಿದ ವೀರನ ಪರಾಕ್ರಮವನ್ನು ಕಂಡರಿಸುವುದೇ ವೀರಗಲ್ಲುಗಳ ಮುಖ್ಯ ಉದ್ದೇಶ. ರಾಜನಿಗಾಗಿ ಗರುಡರಾದ ಹೊಯ್ಸಳರ ಕುವರ ಲಕ್ಷ್ಮ—ಅವನ ಸಂಗಡಿಗರ ವೀರತನವನ್ನು ಹಾಡಿ ಹೊಗಳುವ ದೊಡ್ಡ ಶಾಸನವೇ ಇದೆ. (ಪಂಪನ ಕಾವ್ಯಗಳಲ್ಲಿ 'ಬೀರ', 'ಚಾಗ' ವಿಶೇಷ ಮೌಲ್ಯವುಳ್ಳದ್ದಾಗಿವೆ).

ಈ ಬಗೆಯ ವೀರಗಲ್ಲುಗಳು ಕರ್ನಾಟಕದಲ್ಲಿ ಅಪಾರ ಸಂಖ್ಯೆಯಲ್ಲಿ ದೊರೆತಿವೆ. ಇವುಗಳಲ್ಲಿ ಕೆಲವು ಬರಿಯ ವೀರಗಲ್ಲಿನ ಗಾಥೆಯನ್ನೂ ಕಲ್ಲಿನ ಶಿಲ್ಪದ ಮೂಲಕ ಮೂಕ ಗಾಥೆಯಾಗಿ ಪ್ರಕಟಿಸಿದರೆ ಇನ್ನೂ ಕೆಲವು ಶಾಸನ ಲಿಪಿಯನ್ನು ಹೊಂದಿವೆ. ಮತ್ತೆ ಕೆಲವು ವೀರಗಲ್ಲುಗಳಲ್ಲಿ ಕಂಡರಿಸಿರುವ ಶಿಲ್ಪ ಗಮನಾರ್ಹ. ಅಂದಂದಿನ "ಆತ್ಮಬಲಿ"ಯ

---

೧ "ಕರ್ನಾಟಕದ ವೀರಗಲ್ಲುಗಳು"—ಎಂಬುದಾಗಿ ವೀರಗಲ್ಲುಗಳನ್ನು ಕುರಿತ ಒಂದು ಸಾಂಸ್ಕೃತಿಕ ಅಧ್ಯಯನವನ್ನು ಡಾ|| ಆರ್. ಶೇಷಶಾಸ್ತ್ರಿಗಳು ನಡೆಸಿದ್ದಾರೆ. ಅವರ ಪಿಎಚ್.ಡಿ. ನಿಬಂಧದ ಶೀರ್ಷಿಕೆ-ವಿಷಯ ವೀರಗಲ್ಲುಗಳು ಕುರಿತದ್ದು. (ಬೆಂಗಳೂರು ವಿ.ವಿ. ನಿಲಯ).

ವಿವರಗಳನ್ನು ಒದಗಿಸುವ (ಕೀಟಿಗ್ಗಿಂಟೆ–ದೊಡ್ಡಹುಂಡಿಯ ಶಾಸನ, ಲೆಂಕರು, ಗರುಡ ಪದ್ಧತಿ) ಇವು ಸಾಂಸ್ಕೃತಿಕ ಅಧ್ಯಯನ ದೃಷ್ಟಿಯಿಂದ ಹೆಚ್ಚು ಬೆಲೆಯುಳ್ಳದ್ದಾಗಿವೆ.

ಈ ದಿಸೆಯಲ್ಲಿ, ಹಾಗೂ ಇನ್ನೂ ಕೆಲವು ವಿಚಾರ ಗಮನದಲ್ಲಿರಿಸಿಕೊಂಡು ಚಿಕ್ಕಗೌಜ–ಹಿರೇಗೌಜ ಗ್ರಾಮಗಳಲ್ಲಿರುವ ವೀರಗಲ್ಲು, ಅಪ್ರಕಟಿತ ಶಾಸನ ಶಿಲ್ಪ ಹಾಗೂ ಇತರ ಐತಿಹಾಸಿಕ ಅವಶೇಷಗಳನ್ನು ಕುರಿತು ಇಲ್ಲಿ ಬರೆಯಲಾಗಿದೆ.

ಕ್ಷೇತ್ರ, ಪರಿಸರ—ಇತಿಹಾಸದ ಎಳೆಗಳು

ಚಿಕ್ಕಗೌಜ, ಹತ್ತಿರದಲ್ಲೇ ಹರಿಯುವ ಗಂಗೆ ಹಳ್ಳ, ಹಳ್ಳದ ಒಂದು ಕಡೆಯ ಮೇಲೆ ಸ್ವಲ್ಪದೂರದಲ್ಲಿ ಸಾದರಹಳ್ಳಿ, ಇನ್ನೊಂದೆಡೆ ಲಕ್ಯ (ಹೋಬಳಿ ಕೇಂದ್ರ). ಚಿಕ್ಕಗೌಜಕ್ಕೂ-ಚಿಕ್ಕಮಗಳೂರಿನ ಮುಖ್ಯ ರಸ್ತೆಗೂ ಸಂಪರ್ಕಿಸುವ ಕಚ್ಚಾ ರಸ್ತೆಯಲ್ಲಿ ನಡುವೆ ಸಿಗುವ ಗ್ರಾಮ ದೇವರಹಳ್ಳಿ. ಚಿಕ್ಕಗೌಜದ ಸುತ್ತಣ ಪರಿಸರ, ಪ್ರಕೃತಿರಮ್ಯವಾದದ್ದು. ಹರಿವ ಗಂಗೆ ಹಳ್ಳದ ಜುಳುಜುಳು ನಿನಾದ, ಈಗ ನಿರ್ಮಿಸಿರುವ ದಾಸರಹಳ್ಳಿ ಕೆರೆಯಣೆಯಿಂದಾಗಿ ಕಡಿಮೆಯಾಗಿಬಿಟ್ಟಿದೆ. ಆದರೂ ಆ ಪರಿಸರ, ಮೌನ, ಧ್ಯಾನಕ್ಕೆ ಕುಳಿತ ತಪಸ್ವಿಯ ಹಾಗೆ ಇರುತ್ತದೆ. ಚಿಕ್ಕಗೌಜಕ್ಕೆ ಹತ್ತಿರದೂರು ಹಿರೇಗೌಜ ದೊಡ್ಡ ಗ್ರಾಮ. ಸಾವಿರ ಮನೆಗೂ ಹೆಚ್ಚು ಇರುವ ಊರು. ಚಿಕ್ಕಗೌಜದಿಂದ ಹಿರೇಗೌಜದ ಮೂಲಕ ಹಾದುಹೋಗುವ ರಸ್ತೆ ಚಿಕ್ಕಮಗಳೂರು ಮುಖ್ಯ ರಸ್ತೆಗೆ ಸಂಪರ್ಕ ಕಲ್ಪಿಸುತ್ತದೆ. ಅಲ್ಲೇ ಕಾಣುವ ಮುಳ್ಳಯ್ಯನ ಗಿರಿ ಸಾಲು. ಹಿರೇಗೌಜ, ಚಿಕ್ಕಮಗಳೂರಿಗೆ ೧೪ ಕಿ.ಮೀ. ದೂರದಲ್ಲಿದೆ. ಚಿಕ್ಕಗೌಜಕ್ಕೂ ಹಿರೇಗೌಜಕ್ಕೂ ಇರುವ ದೂರ ಸುಮಾರು ೩ ಕಿ.ಮೀ.

ಚಿಕ್ಕಗೌಜದ ಹತ್ತಿರ, ಗಂಗೆಹಳ್ಳದ ಹತ್ತಿರ ಇರುವ ಸಾದರಹಳ್ಳಿ, ಲಕ್ಯ, ದೂರದ ಬೀರನಹಳ್ಳಿ—ಮುಂತಾದೆಡೆಗಳಲ್ಲಿ ದೊರೆತ ಶಾಸನಗಳ ಪ್ರಕಾರ ಈ ಪ್ರದೇಶ ಹೊಯ್ಸಳರಾಳ್ವಿಕೆಗೊಳಪಟ್ಟಿತ್ತೆಂಬುದು ಸ್ಪಷ್ಟವಾಗುತ್ತದೆ. ಅದಲ್ಲದೆ ಚಿಕ್ಕಗೌಜ, ಹಿರೇಗೌಜ, ದೇವರಹಳ್ಳಿ ಕಡೆ ಕಾಪಾಲಿಕ ಶಾಕ್ತ ಪಂಥ–ಧರ್ಮದ ನೆಲೆಯಿದ್ದ ಕುರುಹೂ ದೊರೆತಿವೆ. ಸಾದರ ಹಳ್ಳಿ, ಲಕ್ಯ, ಬೀರನಹಳ್ಳಿ ಗ್ರಾಮಗಳ ಶಾಸನಗಳನ್ನೂ ರೈಸ್ ಸಾಹೇಬರು, "ಕಡೂರು ಡಿಸ್ಟ್ರಿಕ್ಟಿನ ಶಾಸನಗಳು" ಎಂಬ ಸಂಪುಟದಲ್ಲಿ ಪ್ರಕಟಿಸಿದ್ದಾರೆ. ಇದಲ್ಲದೆ ಸಾದರಹಳ್ಳಿ "ಐಗೂರು ದಳಪತಿಯಾದ ಕೃಷ್ಣಪ್ಪನಾಯಕ"ನಾಳ್ವಿಕೆಗೊಳಪಟ್ಟಿತ್ತು (ಚಿಕ್ಕಮಗಳೂರು ತಾ –೧೪೫– ಎಪಿ. ಕರ್ನಾಟಕ ೬–೧೯೦೧). ಕಡೂರಿನ ಹೊಯ್ಸಳ ಶಾಸನವೊಂದರ ಮೂಲಕವೆ ಅವರ ಮೂಲಸ್ಥಾನ "ಸೇಸೆಯೂರು", "ಅಂಗಡಿ"ಯೆಂದು ತಿಳಿದು ಬಂದದ್ದು ಹಾಗೂ ಹೊಯ್ಸಳ ಅರಸು ಉದಯಾದಿತ್ಯನ ತಂದೆ "ಕಾಮಹೊಯ್ಸಳ"ನೆಂಬಾತನ ಬಗ್ಗೆಯೂ ಶಾಸನ ವಿವರಿಸುತ್ತದೆ.

ಲಕ್ಯ ಹೋಬಳಿ-ಸಾದರಹಳ್ಳಿಯ ಶಂಖಚಕ್ರದ ಸಣ್ಣ ಗುಹೆಯಲ್ಲಿರುವ ಒಂದು ಶಾಸನದಲ್ಲಿನ ಪ್ರಮಾಣ ೧'×೨'×೬'' ಇಲ್ಲಿ "ಶ್ರೀ ಶಕುನಿರಾಯ"ನೆಂಬಾತನ ಪ್ರಸ್ತಾಪ ಬಂದಿದೆ. ಅದೇ ಗ್ರಾಮದ ಕೆರೆಯ ಕೆಳಗೆ ಒಂದು ಈಶ್ವರನ ದೇವಾಲಯವಿದೆ. ದೇವಾಲಯದ ಬಳಿ ನೆಟ್ಟ ವೀರಗಲ್ಲು "ಹೊಯ್ಸಳ ಶ್ರೀ ವೀರಬಲ್ಲಾಳ ದೇವರ" ಕಾಲದ್ದು. ಶಾಸನದ ತೇದಿ "ಶಾಲಿವಾಹನ ಶಕ ೧೧೪೮ನೆಯ ವ್ಯಯ ಸಂವತ್ಸರದ ಚೈತ್ರ ಸು ೧೦ ಸೋಮವಾರ...." ಎಂದಿದ್ದು "ಕೇಸರಿ ಸುಬಯ ಬೀಮಯ್ಯನು ಹಲವಾಳು ಕೊಂದು ಸುರಲೋಕ ಪಾತ್ರಕನಾದ" ಬಗೆಯನ್ನು ವಿವರಿಸುತ್ತದೆ. ಹೊಯ್ಸಳರ ಶಾಸನ-ವೀರಗಲ್ಲು-ಆದ್ದರಿಂದ ಆ ಕಲ್ಲಿನ ಕೆತ್ತನೆ, ಲಿಪಿ ಸೌಂದರ್ಯದ ಬಗ್ಗೆ ಚಕಾರವೆತ್ತುವಂತಿಲ್ಲ. ಪ್ರಕೃತಿ ವಿಕೋಪಕ್ಕೆ ಕಲ್ಲು ಈಡಾಗಿ ತನ್ನ ಸೌಂದರ್ಯ, ಲಿಪಿ ಕಳೆದುಕೊಳ್ಳುತ್ತಿದೆಯಷ್ಟೆ ಅದೇ ಈಶ್ವರ ದೇವಾಲಯದ ಸನಿಹದಲ್ಲೇ ಹೊಯ್ಸಳರ ಎರೆಯಂಗನೃಪನ ಶಾಸನವೊಂದಿದೆ (ಸು ೧೧೪೭). "ಉದಯಾದಿತ್ಯ ಹೊಯ್ಸಳನೆಂಬಾತನ" ಜಯ ವಿವರಗಳನ್ನು ನೀಡುತ್ತ "ಶನಿವಾರ ಸಿದ್ಧಿ, ದುರ್ಗಮಲ್ಲ, ಅಸಹಾಯಶೂರರಾದೇವೀಲಬ್ಧವರಪ್ರಸಾದ"ನೆಂದೆಲ್ಲ ಹೊಗಳಿ ಹಾಡಿದೆ. ಶೇಷಮಹಾಜನ "ಅಗ್ರಹಾರಂ ಲಕ್ಷ್ಮೀಪುರವಾದ ಶೇಷಮಹಾಜನಂಗಳ ರಾಮವಳ್ಳಿಯ ಸಾದರ ಹಳ್ಳಿಯ ಸತ್ತಿಯಣನು ಬಂವಿಸೆಟ್ಟಿ ವ್ಯಯದ ಗೌಂಡನು ಶಾ.ಶ. ೧೧೮೪ ದುಂದುಭಿ ವೈಶಾಖ ಶುದ್ಧ ೫ ಬೃಹವಾರ (ಗುರುವಾರ)'' ನೀಡಿದ ಹಾಗೂ "ಬ್ರಹ್ಮೇಶ್ವರ" ದೇವಾಲಯ ಪ್ರತಿಷ್ಠೆಯನ್ನು ಕುರಿತೂ ತಿಳಿಸುತ್ತದೆ. ಇವರಿಂದ ''ಲಕ್ಯ''ವೆಂದು ಕರೆಯುವ ಈಗಿನ ಊರನ್ನು ''ಲೋಕ್ಕಿಯ''-ಲಕ್ಷ್ಮೀಪುರ'' ಎಂದೆಲ್ಲ ಕರೆಯುತ್ತಿದ್ದುದೂ, ಆ ಊರು "ಅಗ್ರಹಾರ" ಆಗಿದ್ದು ವಿದ್ಯೆಯ ನೆಲೆವೀಡಾಗಿರುವ ಸಾಧ್ಯತೆಯನ್ನು ಅಭಿವ್ಯಕ್ತಗೊಳಿಸುತ್ತದೆ.

ಇದಿಷ್ಟು ಚಿಕ್ಕಗೌಜದ ಸುತ್ತಣ ಹಳ್ಳಿಗಳ ಶಾಸನ ಸಂಪದ. ಇನ್ನು ಹಿರೇಗೌಜ ಗ್ರಾಮದಲ್ಲಿ ದೊರೆತ ಶಾಸನಗಳ ಬಗ್ಗೆ ಒಂದು ಮಾತು ಹೇಳಿ ಅನಂತರ ನಮ್ಮ ಲೇಖನದ ವಿಚಾರದೆಡೆ ಗಮನವೀಯಬಹುದೆನಿಸುತ್ತದೆ. ಹಿರೇಗೌಜ, ಚಿಕ್ಕಗೌಜದಿಂದ ಒಂದು ಮೈಲು ದೂರದಲ್ಲಿದೆಯೆಂದು ಮೊದಲೆ ತಿಳಿಸಿದೆ. ಹಿರೇಗೌಜದಲ್ಲಿ ರೈಸ್ ಸಾಹೇಬರು ಕಂಡು ಪ್ರಕಟಿಸಿರುವುದು ಎರಡೆ ಶಾಸನಗಳು. ಆದರೆ ಇಲ್ಲಿ ಸುತ್ತಮುತ್ತಣ ಪರಿಸರದಲ್ಲಿ ಇನ್ನೂ ಕೆಲವಾರು ಶಾಸನಗಳು "ಬರಹದ ಕಲ್ಲು" (ಊರಿನವರು ಹೇಳುವ ಪರಿಭಾಷೆ)ಗಳಿವೆ. ಹಿರೇಗೌಜದ "ಉಪ್ಪಾರ ಲಕ್ಕಿಯ ಹೊಲದಲ್ಲಿ"ರುವ ಶಾಸನ ದತ್ತಿ "(ಶ್ರೀ ಹನುಮಂತ ದೇವರಿಗಿತ್ತ ದತ್ತಿ)"-ಒಂದೆರಡು ಸಾಲು ಅಷ್ಟೆ. ಮಠದ ಗುರ ಶಾಂತಯ್ಯನ ವಠಾರದಲ್ಲಿರುವ ವೀರಗಲ್ಲು, ಶಾಸನ, "ಮಲೆಪರೊಳ್ ಗಂಡ"ನೆಂಬ ಬಿರುದಿನ ವೀರನನ್ನು ಕುರಿತು ತಿಳಿಸಿದೆ. ಹೊಯ್ಸಳರ ಕಾಲದ್ದೆ ಈ ಶಾಸನವೆಂದು ಹೇಳಲು ಲಿಪಿ, ಶಾಸನದ ಕಲಾವಂತಿಕೆ ಆಧಾರ.

[೪] ದಾನ ದತ್ತಿ ವಿವರಗಳನ್ನು ವಿಶದಪಡಿಸುತ್ತದೆ.

ವೀರಗಲ್ಲು, ಲಿಪಿ ಅಪೂರ್ಣವಾಗಿದ್ದು ಮಠ ಕಟ್ಟಿಸಿದ ಬಗ್ಗೆಯೂ ಹೇಳಿದೆ ಹಿರೇಗೌಜ ಗ್ರಾಮ, ಅಲ್ಲಿಯ ಸಾಂಸ್ಕೃತಿಕ ವಿಶೇಷ, ವೈಶಿಷ್ಟ್ಯಗಳ ಕುರಿತು ಮುಂದೆ ಪ್ರಸ್ತಾಪಿಸ ಲಾಗಿದೆ.

ಇವಿಷ್ಟು ಚಿಕ್ಕಗೌಜ–ಹಿರೇಗೌಜ ಪರಿಸರದ ಪ್ರಕಟಿತ ಶಾಸನ ಸಂಪತ್ತಿ. ಇದರಿಂದ ಈ ಪ್ರದೇಶಗಳು ಹೊಯ್ಸಳರ, ಅದಕ್ಕೂ ಮೊದಲು ಆಳಿದ ಗಂಗರ ಆಳ್ವಿಕೆಗೂ ಒಳಪಟ್ಟ ಕುರುಹುಗಳಿವೆ. ಶಾಕ್ತ ಸಂಪ್ರದಾಯ ನೆಲೆಯಾಗಿದ್ದ ಬಗ್ಗೆ ಅಲ್ಲಲ್ಲಿ ದೊರೆತ ಬಲಿಪೀಠ, ಅಲ್ಲಿಯ ಕೆತ್ತನೆ ಉದಾಹರಣೆ. ಹೀಗೆಯೆ ಈ ಪರಿಸರದ ಅಪ್ರಕಟಿತ ಶಾಸನ, ದೊರಿವ ಇತಿಹಾಸ–ಸಂಸ್ಕೃತಿಯ ಪಳೆಯುಳಿಕೆಗಳ ಸಾಂಸ್ಕೃತಿಕ, ಸಾಮಾಜಿಕ ಅಧ್ಯಯನ ಇನ್ನೂ ನಡೆಯಬೇಕಾಗಿದೆ ಎನಿಸುತ್ತದೆ. ಈ ದಿಸೆಯಲ್ಲಿ ಚಿಕ್ಕಗೌಜ ಹಿರೇಗೌಜಗಳಲ್ಲಿ ದೊರೆತ ವೀರಗಲ್ಲು, ಅಪ್ರಕಟಿತ ಶಾಸನಗಳು ಹಾಗೂ ಇತರ ಐತಿಹಾಸಿಕ ಅವಶೇಷಗಳನ್ನು, ಶಿಲ್ಪಗಳನ್ನು ಕುರಿತು ಇಲ್ಲಿ ಬರೆಯಲಾಗಿದೆ.

ಚಿಕ್ಕಗೌಜ ಈಶ್ವರಾಲಯ

ಚಿಕ್ಕಗೌಜ, ಚಿಕ್ಕಮಗಳೂರು–ಕಡೂರಿಗೂ ನಡುವೆ ಚಿಕ್ಕಮಗಳೂರಿಂದ ಕೇವಲ ಹತ್ತು ಮೈಲು ದೂರದಲ್ಲಿ ಸಿಗುವ "ಹಿರೇಗೌಜ" ಗ್ರಾಮದ ಸನಿಹವೆ ಇರುವ ಒಂದು ಸಣ್ಣ ಗ್ರಾಮ. ಸುತ್ತಣ ಪರಿಸರ, ಹರಿಯುವ ಗಂಗೆ ಹಳ್ಳ, ಏರಿಳಿವ ಬೆಟ್ಟ ಸಾಲಿನ ರಮ್ಯ ದೃಶ್ಯ: ಸದ್ದಿಲ್ಲದ ಸನ್ನಿವೇಶ, ಗ್ರಾಮದ ಹೊರವಲಯದಲ್ಲಿರುವ "ಕಲ್‌ಹೊಲ''ದಲ್ಲಿ ಒಂದು ದೇವಾಲಯವಿದೆ. ಹೊಲ ಶ್ರೀ ಚಂದ್ರಶೇಖರ ಎನ್ನುವ ವರಿಗೆ ಸೇರಿದ್ದು. ಈಶ್ವರ ದೇವಾಲಯ ಸ್ಥಾಣುವಿನ ನೆಲೆ. ಜಮೀನು ಉಳುಮೆ ಮಾಡುವಾಗಲೋ, ಶುದ್ಧೀಕರಣ ಮಾಡುವಾಗಲೋ ಭೂಮಿಯಲ್ಲಿ ಹುದುಗಿದ್ದ ದೇವಾಲಯದ ಛಾವಣಿ ದೊರೆಯಿತು. ಹಾಗೂ ದೇವಾಲಯದ ಗೋಪುರ, ಸ್ಥಂಬ ಬೋದಿಗೆ, ಇವುಗಳ ಅವಶೇಷಗಳು ದೊರೆತವು. ಅವನ್ನು ಶೋಧಿಸಿ, ಸ್ವಲ್ಪ ಚೊಕ್ಕಟ ಮಾಡಿ ಹುದುಗಿದ್ದ ಈಶ್ವರ ದೇವಾಲಯವನ್ನು ಬೆಳಕಿಗೆ ತಂದಿದ್ದಾರೆ. ದೂರದಿಂದ ನೋಡಿದಾಗ ಭೂಮಿಯ ಸಮಕ್ಕೂ ದೇವಾಲಯದ ಛಾವಣಿ ಇರುವುದರಿಂದ ಇರವು ಕಾಣಬರುವುದಿಲ್ಲ. ಹೊಲಕ್ಕೆ ಸೇರಿಕೊಂಡಂತೆ ಬದುವಿನ ಮೋಡು ಕಂಡಂತೆನ್ನಿಸುತ್ತದೆ.

ದೇವಾಲಯದ ಮೆಟ್ಟಿಲುಗಳನ್ನಿಳಿದು, ಒಳನಡೆದರೆ ಕಾಣಬರುವುದು ಈಶ್ವರಲಿಂಗ. ಲಿಂಗದೆದುರು ನಂದೀಶ, ನಾಗಪ್ರತಿಮೆಗಳಿವೆ. ದೇವಾಲಯದ ವಾಸ್ತುಶಿಲ್ಪ ಅಂಥ ಮಹತ್ವದ್ದಲ್ಲ. ಆದರ ಕಂಬಗಳ ಹಾಗೂ ಅವುಗಳ ಬೋದಿಗೆ ಗಳನ್ನು ಗಮನಿಸಿದಾಗ ಕಲ್ಯಾಣದ ಚಾಳುಕ್ಯರ ಕಾಲದ ವಾಸ್ತುವಿನ ಕುರುಹುಗಳಿವೆ ಯೆನ್ನಿಸುತ್ತದೆ. ಅದೇ ಕಾಲದ ದೇವಸ್ಥಾನವಿದೆಂದು ತಿಳಿಯಬಹುದಾಗಿದೆ. ಛಾವಣಿ ಯಲ್ಲಿನ ಅಷ್ಟದಳ ಕಮಲ, ದೇವಾಲಯದ ದ್ವಾರದಲ್ಲಿ ಅಲ್ಲಲ್ಲಿ ಕಾಣುವ ಜಾಲಂದ್ರ ಗಳ ಚೂರು, ಗೋಡೆಗೆ ನಿಲ್ಲಿಸಿರುವ ವೀರಭದ್ರನ ವಿಗ್ರಹ, ಅಂಗಳದಲ್ಲಿ ಇರುವ

ಒಂದು ವೀರಗಲ್ಲು, ಹೊಲದ ಬದುವಿನಲ್ಲಿ ಮಲಗಿರುವ ಭಿನ್ನ ಆದ ಗಣಪತಿಯ ಮೂರ್ತಿ, ದೇವಾಲಯದ ಮುರಿದು ಬಿದ್ದ ಗೋಪುರಗಳು (ಅನೇಕ ಕಲ್ಲು–ಹಾಸು ಚಪ್ಪಡಿ ಈಗ ಮಾಯ ಆಗಿವೆ) ಒಂದು ಕಾಲದಲ್ಲಿ ಚೆನ್ನಾಗಿ ಬೆಳಗಿದ ದೇವಾಲಯದ ನೆನಪನ್ನು ತರುತ್ತವೆ. ಹೊಯ್ಸಳರ ಕಾಲದಲ್ಲಿ ನಡೆದಿರಬಹುದಾದ ದೇವಾಲಯದ ಜೀರ್ಣೋದ್ಧಾರದ ಕುರುಹುಗಳು ಕಾಣಿಸುತ್ತವೆ.

ದೇವಸ್ಥಾನದ ಹೊರಗಡೆ ಎಡಭಾಗದಲ್ಲಿ ಮೂರು ವೀರಗಲ್ಲುಗಳನ್ನು ನೆಟ್ಟಿದ್ದಾರೆ. ವೀರಗಲ್ಲುಗಳ ಶಿಲ್ಪ, ಹೊಯ್ಸಳರ ಕಾಲದ್ದು ಎಂದು ಹೇಳಲು ಅವುಗಳ ನಾಜೂಕೇ ಕಾರಣ ಆದಾತು. ಕಲೆಯ ಕುಸುರಿಗೆಲಸ ಸ್ಫುಟವಿದೆ. ಎರಡು ವೀರಗಲ್ಲುಗಳಲ್ಲಿನ ಶಾಸನ ಪಾಠಗಳು ಪ್ರಕೃತಿಯ ವಿಕೋಪಕ್ಕೋ, ದನಕಾಯುವ ಹುಡುಗರ ಕಲ್ಲಿನೇಟಿಗೋ ತುತ್ತಾಗಿ ತಮ್ಮ ಮೇಲಿನ ಲಿಪಿಯನ್ನು ಕಳೆದುಕೊಂಡಿವೆ. ಲಿಪಿಯಿದ್ದ ಗುರುತು ಮಾತ್ರ ಇವೆ. ವೀರಗಲ್ಲಿನ ಕೊನೆಯ ಹಂತ (ಸಾಮಾನ್ಯವಾಗಿ ವೀರಗಲ್ಲು ಮೂರು ಹಂತ ಪಡೆದಿರುತ್ತದೆ) ಮಾತ್ರ ನೆಲದಲ್ಲಿ ಹೂತುಹೋಗಿದೆ. ಸ್ಪಷ್ಟವಾಗಿರುವ ಹಂತಗಳು, ಮೊದಲ ಹಂತದಲ್ಲಿ ವೀರನ ಕೈಲಾಸವಾಸ, ಅದರ ಕೆಳಗೆ ಶಾಸನಪಾಠ, ಎರಡನೆ ಹಂತದಲ್ಲಿ ವೀರನನ್ನು ಪುಷ್ಪಕ ವಿಮಾನದಲ್ಲಿ ಕರೆದೊಯ್ಯುತ್ತಿರುವ ಅಪ್ಸರೆಯರು ಮತ್ತು ಅದರ ಕೆಳಭಾಗದಲ್ಲಿ ಶಾಸನ ಪಾಠವಿದೆ. ಮೂರನೆಯ ಹಂತದಲ್ಲಿ ಪಾಠ ಇನ್ನೂ ನರ–ಪ್ರಕೃತಿಗಳ ವಿಕೋಪಕ್ಕೆ ಈಡಾಗಿರಲಾರದು. ಎಚ್ಚರಿಕೆಯಿಂದ ತೆಗೆಸಿ ನೋಡಿದರೆ, ಸ್ಪಷ್ಟವಾದ ಪಾಠ ಸಿಗುವುದು ಖಂಡಿತ. ಆದರೆ ಸ್ಥಳೀಯ ಜನತೆಗೆ ಈಗಲೂ ಇರುವ ಕೆಲವು ರೀತಿಯ ಹೆದರಿಕೆಗಳಿಂದ ಅದನ್ನು ತೆಗೆಸಿ ಕಾಣಲಾಗಲಿಲ್ಲ.

ಶಾಸನ ಕನ್ನಡ ಭಾಷೆಯಲ್ಲಿದೆ[೫] (ಕ,ತ,ದ,ನ ಅಕ್ಷರಗಳ ಸಂಪೂರ್ಣ ಸ್ವರೂಪ ಸ್ಪಷ್ಟ) ಶಾಸನದ ಪಡಿಯಚ್ಚುಗಳು ಸ್ಪಷ್ಟವಾಗಿ ಬಾರದೆ, ಸಂಪೂರ್ಣ ಪಾಠವನ್ನು ಓದಲು ಸಾಧ್ಯ ಆಗಲಿಲ್ಲ. “........ಕಾದಿ...ಗೆಲ್ದು......ತುರು.......” ಎಂಬ ಎಲ್ಲೋ ಅಲ್ಲಲ್ಲಿನ ಕೆಲವು ಪದ—ಅಕ್ಷರಗಳು ಕಂಡವೆ ಹೊರತು ಶಾಸನದ ತೇದಿ, ಶಕ, ವಿಷಯವನ್ನು ತಿಳಿಯಲಾಗಲಿಲ್ಲ. ಈ ಶಾಸನ ಚಿಕ್ಕಮಗಳೂರು ಜಿಲ್ಲೆಗೆ ಸೇರಿದ (ಅಂದಿನ ಕಡೂರು ಡಿಸ್ಟ್ರಿಕ್ಟ್) ರೈಸ್ ಸಾಹೇಬರಿಂದ ಪ್ರಕಟಿತಗೊಂಡ ಎಪಿಗ್ರಾಫಿಯ ಕರ್ನಾಟಿಕ ಸಂಪುಟದಲ್ಲಿ ಪ್ರಕಟ ಆಗಿಲ್ಲ. ನೆಲದಲ್ಲಿ ಹೂತುಹೋಗಿರುವ ಶಾಸನದ ಕಲ್ಲನ್ನು ಎಚ್ಚರಿಕೆಯಿಂದ ತೆಗೆಸಿ, ಪರಿಶೀಲಿಸಿದರೆ, ಸಂಪೂರ್ಣ ಪಾಠ ತಿಳಿದು ಬರುವ ಸಾಧ್ಯತೆ ಇದೆ. ವೀರಗಲ್ಲಿನಲ್ಲಿ ಮೂಡಿಸಿರುವ ಅಪ್ಸರೆಯರು, ಹಾಗೂ ಅವರ ಆಭರಣಗಳನ್ನೂ ಚೆಲುವಿಂದ—ಕಾಣುವಂತೆ ಕಡೆದಿದಾನೆ ರೂವಾರಿ. ಇದರೊಂದಿಗೇ ದೊರೆತ

---

[೫] ಈ ಶಾಸನವನ್ನು ಸ್ಪಷ್ಟವಾಗಿ ಓದಲು ಸೌಕರ್ಯ ಒದಗಿಸುವಂತೆ, ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕಿಸಿದಾಗ ಕಾರಣಾಂತರಗಳಿಂದ ಅವರಿಗೆ ಅದು ಸಾಧ್ಯವಾಗಲಿಲ್ಲ. ಹಾಗಾಗಿ ಪ್ರಸಕ್ತ ಶಾಸನದ ಪಡಿಯಚ್ಚುಗಳ ಸ್ಪಷ್ಟ ಪ್ರತಿ ತೆಗೆಯಲು ಅನುಕೂಲವಾಗಲಿಲ್ಲ.

ಮತ್ತೊಂದು ಭೈರವನ ಬಲಿಪೀಠ. ಇದರಲ್ಲಿ ಬಲಿಕೊಟ್ಟ ವ್ಯಕ್ತಿಯ ಹಾಗೂ ಅವನ ರುಂಡವನ್ನು ಪೀಠದ ಕಲ್ಲಿನ ಎಡಭಾಗದಲ್ಲಿ ರೂವಾರಿಯು ಒಡಮೂಡಿಸಿರುವುದನ್ನು ಕಾಣಬಹುದು. ಸುತ್ತಮುತ್ತಣ ಗ್ರಾಮಗಳಾದ ಸಾದರಹಳ್ಳಿ, ಹಿರೇಗೌಜ, ದೇವರ ಹಳ್ಳಿ, ಗಾಣಧಾಳು, ಲಕ್ಯ (ಲೊಕ್ಕಿಯ—ಲಕ್ಷ್ಮೀಪುರ ಅಗ್ರಹಾರ—ಲಕ್ಷ್ಮಿ— ಲಕ್ಕಿಯಾಗಿ ಗ್ರಾಮ್ಯ ಭಾಷೆಯಲ್ಲಿ ಬಳಕೆಯಾಗುತ್ತದೆ), ಕ್ಯಾತನಬೀಡು, ಇಲ್ಲೆಲ್ಲ ಕಾಲಭೈರವನ ಉಪಾಸನೆ ಹಾಗೂ ಕಾಪಾಲಿಕ ಪಂಥದ ಅನುಯಾಯಿಗಳ (ಶಾಕ್ತಪಂಥದ ಮತ್ತು ಕಾಳಾಮುಖ ಪಂಥೀಯ ಶೈವರ) ಪ್ರಭಾವ ಆಗಿರುವ ಸಾಧ್ಯತೆ ಇದೆ.

ಚಿಕ್ಕಗೌಜದಿಂದ ಅನತಿ ದೂರದಲ್ಲಿ ಹಿರೇಗೌಜವಿರುವ ಬಗ್ಗೆ ತಿಳಿಸಿದೆ. ಹಿರೇಗೌಜ ಚಿಕ್ಕಗೌಜಕ್ಕಿಂತ ದೊಡ್ಡ ಗ್ರಾಮ. ಗ್ರಾಮದ ಹೊರಭಾಗದಲ್ಲಿ ಕೆರೆ, ಕೆರೆಯಂಗಳದಲ್ಲಿ ಏರಿಗೆ ಹೊಂದಿಕೊಂಡ ಹಾಗೆ ಒಂದು ಸಣ್ಣ ಈಶ್ವರ ದೇವಾಲಯ ಏರಿಯಲ್ಲಿ ಹುಗಿದಂತೆ ನಿರ್ಮಿಸಿದ್ದಾರೆ. ದೇವಾಲಯದ ಹೊರಗೆ ಇರುವ ಸೂರ್ಯ ನಾರಾಯಣನ ಪೂರ್ಣ ಪ್ರಮಾಣದ ವಿಗ್ರಹ, ಬ್ರಾಹ್ಮೀ ವಾರಾಹಿ, ವೈಷ್ಣವಿ ಮೊದಲಾದ ಸಪ್ತ ಮಾತೃಕೆಯರನ್ನು ಕೆತ್ತಿರುವ ಕಲ್ಲುಗಳು ಅಲ್ಲಲ್ಲಿ ಏರಿಗೆ ಹೊತ್ತು ಕೊಂಡಿರುವ ದೇವಾಲಯದ ಜೋದಿಗೆ. ಕೆರೆಯ ಸನಿಹದಲ್ಲಿ ಈಗಲೂ ಗ್ರಾಮಸ್ಥರು ನಡೆಸುವ ಅಲ್ಲಿನ ಗ್ರಾಮದೇವ "ಸಿಡಿಕಂಬ"ವಿದೆ. ರಸ್ತೆಯ ಎಡಭಾಗಕ್ಕೆ ಹೊಂದಿ ಕೊಂಡಂತೆ ಬಯಲಲ್ಲಿರುವ "ಅಮ್ಮನ ಹೊಂಡ" (ವೃತ್ತಾಕಾರದ ಸುಮಾರು ನಾಲ್ಕುವರೆ ಅಡಿ ಎತ್ತರದ ಕಲ್ಲು ಕಟ್ಟಡವಿದೆ.) ಹಿರೇಗೌಜದ ಸಾಂಸ್ಕೃತಿಕ ಜನಪದ ವೈಶಿಷ್ಟ್ಯವಿದೆಂದರೂ ಸರಿಯೆ. ಇಲ್ಲಿರುವ "ಬಳ್ಳಿಕವ್ವ" (ಬಾಲ ಕಾಳವ್ವ–ಜನಪದ ಭಾಷೆಯಲ್ಲಿ ಎಳೆವಯಸ್ಸಿನ ಹೆಣ್ಣು)–ಮಹಾಸತಿಯಾದ ಜನಪದಕಾವ್ಯವನ್ನು ಹಾಡುವ ವಾಡಿಕೆ ಹಿಂದೆ ಇದ್ದಿತು. ಈಗ ಹಾಡುವವರೂ ಕಡಿಮೆ ಆಗಿಬಿಟ್ಟಿದ್ದಾರೆ. ಬಹುಶಃ ದಾಕ್ಷಾಯಿಣಿ ಸತಿಯಾದ ಪ್ರಸಂಗವೋ ಅಥವಾ ಬಾಲಕಾಳವ್ವನ ಹೆಸರಲ್ಲಿ ಜರುಗಿರುವ "ಮಹಾಸತಿ" ಪ್ರಕರಣವೊ (ಲಾವಣಿಯ ಕಥಾವಸ್ತು) ದೇವತೆಯ ಹೆಸರಲ್ಲಿ ಗ್ರಾಮಸ್ಥರು ಒಟ್ಟಾಗಿ ನಡೆಸುವ ಹಬ್ಬ "ಅಮ್ಮನ ಹಬ್ಬ"ವೆಂದು ಪ್ರಸಿದ್ಧಿ. ಈ ಹಬ್ಬ ಸುತ್ತೆಲ್ಲ ಪ್ರಸಿದ್ಧ ಜಾನಪದ ಹಬ್ಬ. ಹಿರೇಗೌಜದಲ್ಲಿ ರೇವಣಸಿದ್ದೇಶ್ವರ ಮಹಾಲಕ್ಷ್ಮಿ, ಚಿಕ್ಕಮ್ಮ, ಬಾಲಕಾಳವ್ವ ಮೊದಲಾದ ದೇವತೆಗಳ ನೆಲೆಯಾಗಿದೆ. "ಬಳ್ಳಿಕವ್ವನ ಗುಡಿ" ಊರೊಳಗೇ ಇದೆ. "ಅಮ್ಮನ ಹಬ್ಬ"ವನ್ನು "ಹಗರಣದ ಹಬ್ಬ" (ಪಗರಣ–ಪಕರಣ–ಪ್ರಸಂಗ ಹಗರಣಗಳೆಂದು ಮಾರ್ಪಾಡುಗೊಂಡಿದೆ) ವೆಂದೂ ಪ್ರಸಿದ್ಧ. ಏಳು ವರುಷಗಳಿಗೊಮ್ಮೆ ಸುತ್ತಲ ಏಳು ಹಳ್ಳಿಯವರು ಒಟ್ಟಾಗಿ ಸೇರಿ ಏಳು ದಿನಗಳ ಪರ್ಯಂತ ನಡೆಯಿಸುವ ಹಬ್ಬ, ವಿಶೇಷ ಸಂಭ್ರಮದಿಂದ ಜರುಗುತ್ತವೆ. ಹಬ್ಬ ಆರಂಭ ಆಗುವ ಮುಂಚೆ ಊರಿನಲ್ಲಿ ಡಂಗೂರ ಸಾರಿದ ನಂತರ ಸ್ಥಳೀಯರು ಕೆಲವಾರು ಕಟ್ಟುಕಟ್ಟಳೆ ಪಾಲಿಸಬೇಕು. ಹೊರಗಿನಿಂದ ಬರುವವರೂ

ಅಷ್ಟೆ. ಚಪ್ಪಲಿ ಮೆಟ್ಟುವಂತಿಲ್ಲ, ಶುದ್ಧಿ ಇರಬೇಕು. ಅವಾಚ್ಯಶಬ್ದ ಮಾತಾಡ ಕೂಡದು ಹೀಗೆ. ಏಳು ವರುಷಗಳ ಹಿಂದೆ ಹೊಂಡದಂಗಳದಲ್ಲಿ ಹುದುಗಿರಿಸಿದ್ದ ಬೆಂಕಿಯಿಂದಲೇ ಮತ್ತೆ ಅಗ್ನಿಯನ್ನು ಹೊಂಡದಲ್ಲಿ ಪ್ರತಿಷ್ಠಾಪಿಸುತ್ತಾರೆ. ಸೌದೆಗಳನ್ನೊಟ್ಟಿ ನಿಗಿನಿಗಿ ಕೆಂಡಕಾಯಿಸುತ್ತಾರೆ. ಆ ಹೊಂಡದ ಕಲ್ಲುಗಳ ಮೇಲೆ ಏಳೂ ಗ್ರಾಮದ ಹಿರಿಯರು ತಂತಮ್ಮ ಸ್ಥಳದಲ್ಲಿ (ಇದೂ ಪೂರ್ವ ನಿಯೋಜಿತ) ಕುಳಿತು, ಅಗ್ನಿಯನ್ನು ಸಂರಕ್ಷಿಸುವ ಪದ್ಧತಿಯೂ ಉಂಟು. ಇದು ಜಾನಪದ ಪ್ರಕರಣವೆಂದು ಹಿಂದೆಯೇ ಹೆಸರಿಸಿದೆಯಷ್ಟೆ. ಹಬ್ಬದ ಸಮಯದಲ್ಲಿ ಗ್ರಾಮಸ್ಥರು ಸೇರಿ ವಿವಿಧ ಪಾತ್ರ ವೇಷಧಾರಿಗಳಾಗಿ; ಏಳು ದಿನದಲ್ಲೂ ಕೆಲವು "ಹಗರಣ" (ಪ್ರಕರಣ) ಗಳನ್ನು ಹಾಡುತ್ತಾ, ಅಭಿನಯಿಸುತ್ತಾರೆ. ಅಮ್ಮನ ಹೆಸರಿನಲ್ಲಿ ಜಾತ್ರೆಯು ನೆರೆಯುವುದಿದೆ. ಜನಪದ ಕಾವ್ಯದಲ್ಲಿ ಬಾಲಕಾಳವ್ವನ ಸಂಗತಿ ಹಬ್ಬ-ಜಾತ್ರೆಯ ವೈಶಿಷ್ಟ್ಯಗಳನ್ನು ಚಿತ್ರಿಸುತ್ತಾರೆ. ಒಟ್ಟಾರೆ ಈ ಹಬ್ಬಕ್ಕೆ ಒಂದು ಮಹೀಯವಾದ, ಅದಕ್ಕಿಂತ ಮಿಗಿಲಾದ ಸಾಂಸ್ಕೃತಿಕ ಹಿನ್ನೆಲೆಯಿದೆ. ಇದು ಜನಪದ ಸಾಹಿತ್ಯದ ಕ್ಷೇತ್ರ ಅಧ್ಯಯನ ನಡೆಸುವ ಸಂಶೋಧಕರಿಗೂ ಆಕರವಾಗುತ್ತದೆ.

ವೀರಗಲ್ಲುಗಳು, ಕಾಲಭೈರವನ ವಿಗ್ರಹ

ಹಿರೇಗೌಜದ ಕೆರೆಯ ಏರಿಗೊರಗಿಸಿ ದಂತೆ, ಹಾಗೂ ಸುತ್ತಮುತ್ತ ನೆಟ್ಟಿರುವ ನಾಲ್ಕು ವೀರಗಲ್ಲುಗಳಿವೆ ಅವುಗಳಲ್ಲಿ ಮೂರು "ತುರುಗೋಳ್" (ಗೋಗ್ರಹಣ)ಗೆ ಸಂಬಂಧಿಸಿದುವು. ಇನ್ನೊಂದು ಯಾವುದೋ ಯುದ್ಧ ಪ್ರಸಂಗದಲ್ಲಿ ಮಡಿದ ವೀರನ ನೆನಪಿನಲ್ಲಿ ನೆಟ್ಟದಾಗಿದೆ. ಕೆರೆಯಂಗಳದ ಏರಿಯ ಮೋಡಿಗೊರಗಿಸಿದಂತೆ ಒಂದು ಸುಂದರ ಕಪಾಲ (ಕಾಲ) ಭೈರವನ ವಿಗ್ರಹವಿದೆ. ವಿಗ್ರಹ ಸುಮಾರು ನಾಲ್ಕುವರೆ ಅಡಿ ಎತ್ತರವಿದೆ ಬಳಪದ ಕಲ್ಲಿನ ಜಾತಿಗೆ ಸೇರಿದಂಥ ನಾಜೋಕಾದ ಕಲ್ಲು ರೂವಾರಿಯೂ ಶ್ರಮವಹಿಸಿ, ಆಸ್ಥೆಯಿಂದ ಕಡೆದಿದ್ದಾನೆ, ಕಲ್ಲರಳಿ ಹೂವಾಗಿದೆ.

ಕಾಲಭೈರವನ ಉಪಾಸನೆ, ಪುರಾತನ ಕಾಲದಿಂದಲೂ ನಡೆದು ಬಂದಿದೆ. ಇದಕ್ಕೆ ಪುರಾಣಗಳ ಆಧಾರ, ಉಪಾಸನೆಯ ಇತಿಹಾಸ ಕೂಡ ಉಂಟು. ಕಾಲಭೈರವನ ಅವತಾರ, ಶಿವನ ಲೀಲೆಗಳಲ್ಲೊಂದು[೬] ಶಿವನ ಎಂಟು ರೂಪಗಳಲ್ಲಿ (ಕಾಳಿದಾಸ ತನ್ನ ಶಾಕುಂತಲ ನಾಟಕದಲ್ಲಿ ಬರೆದ ಮಂಗಳ ಪದ್ಯವನ್ನು ಕನ್ನಡಕ್ಕೆ ಅನುವಾದಿಸಿರುವ ಬಸಪ್ಪಶಾಸ್ತ್ರಿಗಳ ಅನುವಾದದಲ್ಲಿ "ಒಡನೆಂಟದಿಂದೆ ಮೆರೆವೀಶನೆಮಗೊಡರ್ಚುಗೆ ಮಂಗಳವಂ" ಎಂದಿದೆ) ರುದ್ರ ರೂಪವೂ ಒಂದೆಂದು ವಿಷ್ಣುಪುರಾಣ ಹೇಳಿದೆ. "ರುದ್ರ" ಎಂದು ಒಂದು ಜನವರ್ಗಕ್ಕೂ ಹೆಸರಿತ್ತಂತೆ. ವಿಷ್ಣುಪುರಾಣದಲ್ಲಿ ಅಜೈಕಪಾತ್, ಅಹಿಬುರ್ಧ್ನ್ಯ, ತ್ವಷ್ಟ್ರ, ರುದ್ರ, ಹರ, ಬಹುರೂಪ, ತ್ರ್ಯಂಬಕ,

[೬] ದೇವಗಂಗೆ : ಬಿ. ಶಿವಮೂರ್ತಿಶಾಸ್ತ್ರಿಗಳ ಅಭಿನಂದನ ಗ್ರಂಥ: ಪುಟ ೨೯. ವೇದಗಳಲ್ಲಿ ಶಿವನ ಸ್ಥಾನ : ಪ್ರೊ. ಬಿ. ಎಸ್. ಶ್ರೀಧರ.

ವೃಷಾಕಪಿ, ಶಂಭು, ಕಪರ್ದಿ, ರೈವತರು, ಏಕಾದಶರುದ್ರರು; ಮಹಾಭಾರತದ ಪ್ರಕಾರ ಮೃಗವ್ಯಾಧ, ಸರ್ಪ, ನಿಋತಿ, ಪಿನಾಕಿ, ದಹನ, ಈಶ್ವರ, ಕಪಾಲಿ, ಸ್ಥಾಣು: ಭ್ಯ–ಎಂಬಿವೇ ಆ ರುದ್ರ ನಾಮಗಳು. ಅವನು ಕಪಾಲ ಮಾಲಾಧರ, ಮಹಾತಪಸ್ವಿ, ರುದ್ರಾಕ್ಷಮಾಲಾಧರ, ಸಾವಿರದೆಂಟು ಹೆಸರುಗಳುಳ್ಳವನು.

ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದಿಂದ ಪ್ರಕಟಗೊಂಡಿರುವ "ಕನ್ನಡ ವಿಶ್ವಕೋಶ"ದ 'ಕ' ಸಂಪುಟದಲ್ಲಿ ಕಾಲಭೈರವನ ಬಗ್ಗೆ ಒಂದು ಲೇಖನವಿದೆ. ರುದ್ರನ ಸ್ವರೂಪಗಳಲ್ಲೊಂದಾದ ಭೈರವನ ಕಥಾನಕ ವೃತ್ತಾಂತ ಅಲ್ಲಿ ಉಲ್ಲೇಖಿತ ಆಗಿದೆ. ಅದರಂತೆ ಶಿವನ ಪಂಚವಿಂಶತಿ ಲೀಲೆಗಳಲ್ಲೊಂದು, ಕಾಲಭೈರವ ಲೀಲೆ. ಬ್ರಹ್ಮನ ಅಹಂಭಾವ ಮುರಿಯಲು ಶಿವನೇ ನಿತ್ಯಕರ್ತೃ, ಸರ್ವತಂತ್ರಸ್ವತಂತ್ರನೆಂದು ಸಾರಿದ ವೇದ ಮಹತ್ವ ಸ್ಥಾಪಿಸಲು ತಳೆದ ಭೈರವ ಸ್ವರೂಪ, ಈಶ್ವರನ ಲೀಲೆಗಳಲ್ಲೊಂದು. ಬ್ರಹ್ಮ ಪಂಚಮುಖನಾದ ಪರಮೇಶ್ವರನಿಗೆ ತಾನೇನು ಕಡಿಮೆ ಎಂಬಂತೆ ನಾಲ್ಕು ಮುಖಗಳ ಜೊತೆಗೆ ಮತ್ತೊಂದು ಮುಖವನ್ನು ಕಲ್ಪಿಸಿಕೊಂಡು ಶಿವನಿಗಿಂತ ಮಿಗಿಲೆಂಬಂತೆ ವಿಜೃಂಭಿಸುತ್ತಾನೆ. ಬ್ರಹ್ಮನ ಗರ್ವದ ನುಡಿಗಳನ್ನಾಲಿಸಿದ ಶಿವ, ಕಾಲಭೈರವನ ಆಕಾರ ತಳೆದು (ಕಪಾಲಮಾಲಿಯಾಗಿ) ಅಹಂಕರಿಸಿ ನುಡಿದ ಬ್ರಹ್ಮನ ಶಿರಸ್ಸನ್ನು ತನ್ನ ಉಗುರಿನ ಕೊನೆಯಿಂದಲೇ ಚಿವುಟಿ ಹಾಕುತ್ತಾನೆ. ಮುಂದೆ ಭೈರವಸ್ವರೂಪಿಯಾದ ಶಿವ ಅಜಕಪಾಲವನ್ನು ಹಿಡಿದು ಗರ್ವಿತರ ನೆತ್ತರಿನಿಂದ ಅದನ್ನು ತೃಪ್ತಿಪಡಿಸುವುದಾಗಿ ಪಣತೊಟ್ಟು ಭಿಕ್ಷೆಗೆ ಹೊರಡುತ್ತಾನೆ. ವಿಷ್ಣುವಿಗೂ ತೃಪ್ತಿಪಡಿಸಲಾಗುವುದಿಲ್ಲ. ಶಿವನ ಕೃಪಾಕಟಾಕ್ಷದಿಂದ ವಿಷ್ಣು ಎಚ್ಚೆತ್ತು, ಪರಶಿವನನ್ನು ಸ್ತುತಿಸುತ್ತಾನೆ. ಪರಮೇಶ್ವರ, ಇಂದ್ರಾದಿ ಎಲ್ಲ ಅಮರರಿಗೂ ತಕ್ಕ ಅರಿವು, ವಿವೇಕವನ್ನು ಕರುಣಿಸುತ್ತಾನೆ. ಇದು ಕಪಾಲಭೈರವ ಲೀಲೆಯ ಕಥಾನಕ. ಕಾಪಾಲಿಕ ಶೈವ ಮತ, ಕಾಲಭೈರವ ಲೀಲೆ, ಭಿಕ್ಷಾಟನೆ ಲೀಲೆಗಳ ಆಧಾರದ ಮೇಲೆಯೇ ಪ್ರವೃತ್ತ ಆಗಿದೆ. ಶಿವಾಗಮ ಮತ್ತು ಶಿವಪುರಾಣಗಳಲ್ಲಿ ಈ ಲೀಲೆಯ ವರ್ಣನೆಗಳಿವೆ.

"ಕರ್ಣಾಟಕ ಶೈವರ ಇತಿಹಾಸ"ವೆಂಬ ಗ್ರಂಥದಲ್ಲಿ ಕ. ಕೃಷ್ಣರಾಯರು ಹೀಗೆನ್ನುತ್ತಾರೆ.[೭] "....... ಸೂತ ಸಂಹಿತೆಯಲ್ಲಿ ಪಂಚರಾತ್ರ, ಕಪಾಲ, ಕಾಲಾಮುಖ ಶಾಕ್ತ, ಬೌದ್ಧ, ಆರ್ಹತ್, ಪಾಶುಪತ, ಶಾಂಭವ, ಈ ಎಂಟು ಮತಗಳಲ್ಲಿ ದೀಕ್ಷೆ ಹೊಂದಿದವನು ಬ್ರಾಹ್ಮಣಾಧಮನಾಗುವನೆಂದು ನಿಂದಿಸಲಾಗಿದೆ. ಪಾಶುಪತ, ಕಾಪಾಲ, ಕಾಲಾಮುಖ—ಈ ಮೂರೂ ಮಾಹೇಶ್ವರ ಮತಗಳು. "ವಾಮನ

---

೭ ಕಾಪಾಲಿಕ ಮತ ಲಾಕುಳ ಶೈವರ ಇತಿಹಾಸದ ಬಗ್ಗೆ ಅನೇಕ ಅಮೂಲ್ಯ ವಿಚಾರಗಳು ಡಾ. ಚಿದಾನಂದಮೂರ್ತಿಯವರ "ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ" ಸಂಶೋಧನ ಗ್ರಂಥದಲ್ಲಿ ದೊರೆಯುತ್ತದೆ.

ಪುರಾಣದಲ್ಲಿ ಶೈವರ ನಾಲ್ಕು ಮತ ವಿಭಾಗದ ಅಂದರೆ—ಶೈವ, ಪಾಶುಪತ, ಕಾಲದಮನ, ಕಾಪಾಲಿಕದ ಉಲ್ಲೇಖವಿದೆ.... '' ಕಾಪಾಲಿಕರ ವಿಷಯದಲ್ಲಿ ಎಲ್ಲರದೂ ಒಮ್ಮತ ಆಗಿದ್ದರೂ '' ಸುಪ್ರಭೇದಾಗಮದಲ್ಲಿ '' ಕಾಪಾಲಿಕರ ಬದಲಾಗಿ "ಸೋಮ" ಎನ್ನಲಾಗಿದೆ. "ಸರ್ವದರ್ಶನ ಸಂಗ್ರಹ''ದಲ್ಲಿ ಕಾಪಾಲಿಕ, ಕಾಲಮುಖರ ಬಗ್ಗೆ ಉಲ್ಲೇಖವಿಲ್ಲ ಹಾಗೂ ಆವರ ಕಾಲದಲ್ಲಿ ಇವರು ಗಣ್ಯರಾಗಿರಲಿಲ್ಲ. ಕಾಪಾಲಿಕರ ಬಗ್ಗೆ ಕೃಷ್ಣರಾಯರ ಮತ ಹೀಗೆ: ಕಾಪಾಲಿಕ ಮತ ಶೈವಧರ್ಮದ ಒಂದು ಶಾಖೆ. ವಾಮಾಚಾರಪದ್ಧತಿ ಉತ್ತರ ಭಾರತದಲ್ಲಿ ಇವರು ಪ್ರಬಲರಾಗಿದ್ದರೆಂದು ಕೆಲವು ಶಾಸನ, ಕಾವ್ಯ ನಾಟಕಗಳಿಂದ ತಿಳಿಯುಬರುತ್ತದೆ. ನಾಸಿಕ ಜಿಲ್ಲೆಯ ಕಾಪಾಲೇಶ್ವರ ದೇವಾಲಯದಲ್ಲಿ ಕಾಪಾಲಿಕರಿದ್ದರೆಂದು ೭ನೆ ಶತಮಾನದ ತಾಮ್ರ ಪಟದಿಂದ ತಿಳಿದು ಬಂದಿದೆ. ಕೃಷ್ಣಮಿಶ್ರನ "ಪ್ರಬೋಧ ಚಂದ್ರೋದಯ''ದ ಕಾಪಾಲಿಕ ಮಹಾಭೈರವನ ಆರಾಧಕನಾಗಿದ್ದು, '' ಆದೇ ತಾನೆ ಕಡಿದ ನರಮುಂಡದ ರಕ್ತದಿಂದ ಭೈರವನನ್ನು ತೃಪ್ತಿಪಡಿಸಬೇಕೆ''ನ್ನುತ್ತಾನೆ. ಆಚಾರ್ಯ ಆದಿಶಂಕರರು ತಾವು ಕರ್ನಾಟಕಕ್ಕೆ ಹೋಗುವುದಾಗಿ ತಿಳಿಸಿದಾಗ "ಅಲ್ಲಿ ಕಾಪಾಲಿಕರು ಹೆಚ್ಚು, ಆದ್ದರಿಂದ ಹೋಗಬೇಡಿ" ಎಂದು ವಿದರ್ಭ ದೇಶದ ರಾಜ ಸೂಚಿಸಿದಂತೆ ಮಾಧವ–ವಿದ್ಯಾರಣ್ಯರ (೧೪ನೇ ಶತಮಾನ) "ಶಂಕರ ದಿಗ್ವಿಜಯ" ತಿಳಿಸುತ್ತದೆ. ಕಾಪಾಲಿಕರಿಗೆ "ಮಹಾವ್ರತಿ'' ಎಂದು ಮತ್ತೊಂದು ಹೆಸರು ಅಷ್ಟೆ.

ಕಾಲಭೈರವನ ಶಿಲ್ಪ ಒಂದೊಂದೆಡೆ ಒಂದೊಂದು ವಿಧವಲ್ಲಿ ದೊರೆತಿದೆ. ಆದರೆ ಹಿರೇಗೌಜದಲ್ಲಿ ದೊರೆತಿರುವುದು ಸಂಪೂರ್ಣ ಸ್ವರೂಪವುಳ್ಳ ಅವತಾರವನ್ನು ಪೂರ್ಣರೂಪದಲ್ಲಿ ಕಡೆಯಲ್ಪಟ್ಟಿರುವ ಮೂರ್ತಿಶಿಲ್ಪ. ಕಾಲಭೈರವನ ವಾಹನ ನಾಯಿ. ಅದನ್ನು ಸಾಲಬ್ಯವಾಗಿ ಈ ಶಿಲ್ಪ ದೊರೆತಿರುವೆಡೆಗಳಲ್ಲೆಲ್ಲ ಗಮನಿಸಬಹುದು. ಹಳೇಬೀಡು, ಕಾಳಹಸ್ತಿ, ಮೂಗೂರು, ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಶೆಟ್ಟಿಕೆರೆ ಹಾಗೂ ಇತರೆಡೆಗಳಲ್ಲಿ ದೊರೆತಿರುವ ಕಾಲಭೈರವ ಶಿಲ್ಪ, ಹಿರೇಗೌಜದಲ್ಲಿ ದೊರೆತ ರೀತಿಯದಲ್ಲ.

ಕಾಲಭೈರವನ ಸಂಪೂರ್ಣ ಸ್ವರೂಪವನ್ನು ಬಣ್ಣಿಸುವ ಆಧಾರ: ಶ್ರೀ ಶಂಕರಾಚಾರ್ಯರ "ಕಾಲಭೈರವಾಷ್ಟಕ'' ಇದಿಲ್ಲಿ ಗಮನಾರ್ಹ. ಆಚಾರ್ಯ ಶಂಕರರು ರಚಿಸಿರುವ ಅನೇಕ ಭಕ್ತಿ ಸ್ತೋತ್ರಗಳಲ್ಲಿ ಇದೂ ಒಂದು. ಕಾಲ (ಅಥವಾ ಕಪಾಲ) ಭೈರವನ ಸ್ವರೂಪ, ಲೀಲೆ, ಇವುಗಳೆಲ್ಲ ಸುಂದರವಾಗಿ ಚಿತ್ರಿಸಿರುವ ಈ ಸ್ತೋತ್ರದ ಕೆಲವು ಸಾಲು, ವಿಗ್ರಹದ ಮೂರ್ತಿಶಿಲ್ಪ ಸ್ಪಷ್ಟೀಕರಿಸುವಿಕೆಯಲ್ಲೂ ನೆರವಾಗಿದೆ.

ದೇವರಾಜ ಸೇವ್ಯಮಾನ ಪಾವನಾಂಘ್ರಿ ಪಂಕಜಂ
ವ್ಯಾಲಯಜ್ಞ ಸೂತ್ರಬಿಂದುಶೇಖರಂ ಕೃಪಾಕರಂ
ನಾರದಾದಿ ಯೋಗಿ ಬೃಂದ ವಂದಿತಂ ದಿಗಂಬರಂ
ಕಾಶಿಕಾಪುರಾಧಿನಾಥ ಕಾಲಭೈರವಂ ಭಜೇ ॥೧॥

ಭಾನುಕೋಟಿ ಭಾಸ್ವರಂ ಭವಾಬ್ಧಿ ತಾರಕಂ ಪರಂ
ನೀಲಕಂಠಮೀಪ್ಸಿತಾರ್ಥದಾಯಕಂ ತ್ರಿಲೋಚನಂ
ಕಾಲಕಾಲಮಂಬುಜಾಕ್ಷಮಕ್ಷಶೂಲಮಕ್ಷರಂ
ಕಾಶಿಕಾಪುರಾಧಿನಾಥ ಕಾಲಭೈರವಂ ಭಜೇ ॥೨॥

ಶೂಲಟಂಕ ಪಾಶದಂಡ ಪಾಣಿಮಾದಿಕಾರಣಂ
ಶ್ಯಾಮಕಾಯಮಾದಿ ದೇವಮಕ್ಷರಂ ನಿರಾಮಯಂ
ಭೀಮವಿಕ್ರಮಂ ಪ್ರಭುಂ ವಿಚಿತ್ರ ತಾಂಡವ ಪ್ರಿಯಂ
ಕಾಶಿಕಾಪುರಾಧಿನಾಥ ಕಾಲಭೈರವಂ ಭಜೇ ॥೩॥

‘‘ದೇವೇಂದ್ರ ಸೇವ್ಯನಾದ, ಪಾವನ ಪದಕಮಲಗಳುಳ್ಳ, ಸರ್ಪವನ್ನೆ ಯಜ್ಞೋಪವೀತ ಆಗಿ ಧರಿಸಿರುವ, ಚಂದ್ರನೇ ಜಟಾಕಲಾಪವಾಗಿರುವ, ಕೃಪಾ ನಿಧಿಯಾದ, ನಾರದ ಮೊದಲಾದ ಋಷಿ ಸಮೂಹದಿಂದ ಸ್ತುತ್ಯನಾದ ದಿಕ್ಕನ್ನೇ ಅಂಬರ (ಬಟ್ಟೆ)ವಾಗಿ ಧರಿಸಿರುವ ಕಾಶೀ ಕ್ಷೇತ್ರಾಧಿಪನಾದ ಕಾಲಭೈರವ (ಕಪಾಲ ಭೈರವ)ನನ್ನು ಭಜಿಸುತ್ತೇನೆ.

“ತ್ರಿಶೂಲ, ಪರಶು, ಪಾಶ, ದಂಡಗಳನ್ನು ಕೈಲಿ ಹಿಡಿದ, ಜಗತ್ತಿಗೇ ಆದಿಕಾರಣ, ಆದಿದೇವ, ಅಕ್ಷರ (ನಾಶರಹಿತ) ನೆನಿಸಿರುವ, ವಿಚಿತ್ರವಾದ ತಾಂಡವ ನೃತ್ಯದಲ್ಲಿ ತಲ್ಲೀನನಾದ ಕಾಲಭೈರವನನ್ನು ನಾನು ಭಜಿಸುವೆ.

‘‘ತನ್ನ ವಿಕಟಾಟ್ಟಹಾಸದಿಂದ ಬ್ರಹ್ಮಾಂಡಕೋಶ ಸಮೂಹವನ್ನೇ ಭೇದಿಸಿದ, ಇಂದ್ರಿಯನಿಗ್ರಹಗೈದ, ರುಂಡಮಾಲೆಯನ್ನು ಕೊರಳಿನಲ್ಲಿ ಧರಿಸಿರುವ ಕಾಲಭೈರವ ಮೂರ್ತಿಯನ್ನು ನಾನು ಭಜಿಸುತ್ತೇನೆ’’ ವಿಗ್ರಹದ ಚಿತ್ರವನ್ನು ಗಮನಿಸಿದಾಗ, ಈ ಸ್ತೋತ್ರದ ಸಾಲಿನ ಸಮನ್ವಯತೆ ಸ್ಪಷ್ಟ ಆಗುತ್ತದೆ.

ಹಿರೇಗೌಜದ ‘‘ಕಾಲಭೈರವ’’ನಿಗೂ, ಅನತಿದೂರದ ಚಿಕ್ಕಗೌಜದಲ್ಲಿ ದೊರೆತ ‘‘ಭೈರವ ಬಲಿಪೀಠಕ್ಕೂ’’ ಸಂಬಂಧಿಸಿದ ಘಟನೆ ಜರುಗಿದ್ದಿರುವ ಸಾಧ್ಯತೆ ಇದೆ. ಹಾಗೂ ಭೈರವನ ಉಪಾಸನೆಯು ಈ ಪ್ರದೇಶದಲ್ಲಿ ನಡೆಯುತ್ತಿದ್ದುದಕ್ಕೂ ಇವು ಐತಿಹಾಸಿಕ ಆಧಾರವೆನಿಸುತ್ತವೆ.

ಕಪಾಲಭೈರವನ ಸ್ವರೂಪವನ್ನೂ ತನ್ನದೆ ಆದ ವಿಶಿಷ್ಟ ಶೈಲಿಯಲ್ಲಿ ವರ್ಣಿಸಿರುವ ಕವಿ, ಕುಮಾರವ್ಯಾಸ, ಅರ್ಜುನನು ಪಾಶುಪತಾಸ್ತ್ರವನ್ನು ಪಡೆಯುವ ಮುನ್ನ ನಡೆಯುವ ಶಿವ–ಪಾರ್ಥರ ಸಮರದಲ್ಲಿ ಪಾರ್ಥನ ಅರಿವಿಗೆ ಶಿವಸ್ವರೂಪ ಗೋಚರಿಸಿದ ನಂತರ ಶಿವನ ವಿಶ್ವರೂಪ ಪ್ರಕಟ ಆಗುತ್ತದೆ. ಕುಮಾರವ್ಯಾಸನ ಕವಿತ್ವ ಇಲ್ಲಿ ತಾನೇತಾನಾಗಿ ಹೊಮ್ಮುತ್ತದೆ.

ಕಾಳಮೇಘಸುವರ್ಣದುರು ದಂಪ್ಟ್ರಾಳಿ ಭೀಷಣದ
ಮಳ ಜಪಮಣಿ ಮಾಲಿಕೆಯು ಸ್ತುತಿಮುಖದ ಪಾಶಾಂ
ಕುಶದ ಡಮರುಗದ ಶೂಲ ಘನ ಖಟ್ವಾಂಗ ದ್ರುಹಿಣ ಕ
ಪಾಲ ಫಣಿವಲಯದ ಕರೋಟೀಮಾಲೆಯಿಂದ ಮಹೋಗ್ರ

ನೆಸೆದನಘೋರ ವಕ್ತ್ರದಲಿ'' ಪರಶು
ಪರಶು ಡಮರುಗ ಖಡ್ಗಖೇಟಕ ಶರಧನುಃಶೂಲದ ಕಪಾಲದ
ಕರದ ರಕ್ತಾಂಬರದ ಫಣಿಪನ ಭೋಗಭೂಷಣದ,
ಘೋರಪ ಭೇದದ ಭಯದ ಕರದ ಪರಶು ಮೃಗಂಗಳಲಿ ತ
ತ್ಪುರುಷಮುಖದಲಿ ಮೆರೆದನೆರಕದ ಮಿಂಚಿನಂದದಲಿ

ಇದು ಕುಮಾರವ್ಯಾಸ–ಜನಪದ ಕವಿಯಾಗಿ ಕಂಡ ಕಪಾಲಿಯ ದಿವ್ಯ ದರುಶನ.

ಹಿರೇಗೌಜದ ಬಸ್‌ನಿಲ್ದಾಣಕ್ಕೆ ಕೊಂಡೊಯ್ಯುವ ಕಚ್ಚಾರಸ್ತೆಯ ಬಲಬದಿಯ (ಅಂದರೆ ಮಳೆಗಾಲದಲ್ಲಿ ರಸ್ತೆಯ ಪಾಡು ನಡೆಯುವವರು ಬಲ್ಲರು) ಹೊಲದಲ್ಲಿ ಮತ್ತೊಂದು ಶಾಸನ ಕಲ್ಲಿದೆ. ಪಾಠ ಹಳಗನ್ನಡ. ಕನ್ನಡ ಸಾಹಿತ್ಯ ಪರಿಷತ್ತಿನವರನ್ನು ಬೇಡಿ ಎರವಲು ತಂದಿದ್ದ ಶಾಸನಪ್ರತಿ ತೆಗೆವ ಸಾಮಗ್ರಿ ಅತ್ಯಂತ ದುಃಸ್ಥಿತಿಯಲ್ಲಿದ್ದ ಕಾರಣ ಈ ಶಾಸನವನ್ನು ಓದಲಾಗದೆ ನಿರಾಸೆಯಿಂದ ಹಿಂತಿರುಗಿದೆವು. ನನ್ನ ಮಿತ್ರರಾದ ಚಂದ್ರ, ದ್ಯಾವೇಗೌಡ, ನಿಂಗಣ್ಣ, ಇತರರು ಹತ್ತಿರದ ರಾಮದೇವರ ವಜ್ರ, ಮುಳ್ಳಯ್ಯನ ಗಿರಿ ಪರಿಸರ, ಸಿದ್ದೇದೇವರ ಬೆಟ್ಟಗಳಲ್ಲೂ "ಬರಹವಿರುವ ಕಲ್ಲು'' ಗಳನ್ನು ಕಂಡಿರುವ ವಿಚಾರ ತಿಳಿಸಿದರು. ವಿದ್ವಾಂಸರ ಪರಿಶೀಲನೆ, ಸಂಶೋಧನೆ ಇಲ್ಲಿ ಅಗತ್ಯ ಎನ್ನಿಸಿತು.

ಚಿಕ್ಕಮಗಳೂರು ತಾಲ್ಲೂಕಿಗೆ ಸೇರಿದ ಗ್ರಾಮ, ಇಂದಾವರ. ಅಲ್ಲಿ ದೊರೆತ ವೀರಗಲ್ಲಿನ ಒಂದು ಹಂತದ ಚಿತ್ರವನ್ನೂ ಲಗತ್ತಿಸಿದೆ. ವೀರಗಲ್ಲು ಮುಳ್ಳುಕಲ್ಲು ಮೆಳೆ ನಡುವೆ ಸಿಲುಕಿದೆ. ಚಿತ್ರದಲ್ಲಿ ವೀರನ ಹಿಂದೆಯೆ ಬಾಣಬತ್ತಳಿಕೆ ಹಿಡಿದ ಸೈನಿಕನನ್ನೂ ಕಾಣಬಹುದು. ಇದು ಅಪೂರ್ವ. ಶಾಸನ ಕದನದಲ್ಲಿ ಸೈನಿಕನೇ ಬಾಣಗಳ ಸರಬರಾಜುಗಾರ. ಇಂದಾವರದ ಬೀರೇದೇವರ ಗುಡಿಯಲ್ಲಿ ''ಸಾರಂಗಧರವೀರನ" ವಿಗ್ರಹವಿದೆ. ಇಂಥ ವಿರಳ ಮೂರ್ತಿ ಶಿಲ್ಪ ಪರಿಚಯ ಆಗಲೆಂದು ಫೋಟೋ ತೆಗೆದು ಲಗತ್ತಿಸಿದೆ.

ಶಾಸನತಜ್ಞರು ಈ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸುವರೆಂಬುದೆ ಈ ಲೇಖನದ ಆಶಯ, ಧ್ಯೇಯ–ಇನ್ನೊಂದು ಮಾತು. ಹಿರೇಗೌಜದ ಕಪಾಲಭೈರವನ ವಿಗ್ರಹ ಸಂಗ್ರಹಯೋಗ್ಯ. ದಿನಗಳೆದಂತೆ ಶಿಲ್ಪದ ಸೌಂದರ್ಯ ಮಾಸುತ್ತ, ಪ್ರಕೃತಿ ವಿಕೋಪಕ್ಕೆ ತುತ್ತಾಗುತ್ತದೆಂಬುದು ಮರೆವ ಅಂಶವಲ್ಲ.

ಅನೇಕ ಅರಸೊತ್ತಿಗೆಗಳಾಳಿ ಬೆಳಗಿ, ಅಳಿದ, ಸ್ಮಾರಕಗಳಾದ ಕೋಟೆ, ಕೊತ್ತಳ, ಶಾಸನ, ದೇವಾಲಯ ಇವುಗಳ ಸಂರಕ್ಷಣೆಯ ಹೊಣೆ ಪುರಾತತ್ವ ಇಲಾಖೆ, ಹಾಗೂ ಸ್ಥಳೀಯರದೂ ಆಗಿರುತ್ತದೆ. ಪುರಾತತ್ವ ಇಲಾಖೆ, ಈ ವಿಚಾರದಲ್ಲಿ ಶೈಕ್ಷಣಿಕ ಅರಿವು ಮೂಡಿಸಬೇಕಾದ್ದೂ ಅತ್ಯಗತ್ಯ. ಸಂಸ್ಕೃತಿಯ ಅಧ್ಯಯನಕ್ಕೆ ಮುಂದಿನ ಪೀಳಿಗೆಗೆ ಇವ್ಯಾವುದೂ ದೊರೆಯಲಾರವೆಂಬುದಂತೂ ಈಗಣ ಪರಿಸ್ಥಿತಿ ಯಲ್ಲಿ ತಿಳಿಸಬಹುದಾದ ವಿಚಾರವೇ ಆಗಿದೆ.

ಸೀತಾರಾಮ ಜಾಗೀರ್‌ದಾರ್

ಶಾಸನಗಳಲ್ಲಿ ಮೂರು ಪದ್ಯಗಳು

ಶಾಸನ ಕವಿಗಳು ಶಾಸನಗಳ ಆರಂಭದಲ್ಲಿ ಸಾಮಾನ್ಯವಾಗಿ ದೇವತಾಸ್ತುತಿಯನ್ನು ಮಾಡಿ ಅನಂತರ ಹೇಳಬೇಕಾದ ವಸ್ತುವನ್ನು ಹೇಳುವರು. ರಾಜಶಾಸನವಾಗಿದ್ದರೆ, ಅಥವಾ ರಾಜ್ಯಾಡಳಿತ ನಡೆಸುವ ಅಧಿಕಾರಿಯಾಗಿದ್ದರೆ ತತ್ಕಾಲೀನ ರಾಜಕೀಯ ಸಂಗತಿಗಳನ್ನು—ಆಳುವರಸರ ಚರಿತ್ರೆಯನ್ನು ಹೇಳಿ ದತ್ತಿಯ ಸಂಗತಿಗಳನ್ನು ವಿವರಿಸಿ ಕೊನೆಯಲ್ಲಿ ಕೊಟ್ಟ ದತ್ತಿಯನ್ನು ರದ್ದುಮಾಡಿದರೆ ಆ ವ್ಯಕ್ತಿಗೆ ತಗಲುವ ಶಾಪ ಇತ್ಯಾದಿಗಳನ್ನು ಬರೆಸುವ ಪರಿಪಾಟ ಇಟ್ಟುಕೊಂಡಿದ್ದರು. ಶಾಸನದ ಆರಂಭದಲ್ಲಿ ಜಿನರು ಜೈನನನ್ನೂ ವೈದಿಕ ಧರ್ಮದವರಾದರೆ ಶಿವನನ್ನೋ ಇಲ್ಲವೆ ವಿಷ್ಣುವನ್ನೋ ಕೆಲವೊಮ್ಮೆ ಎರಡೂ ದೇವತೆಗಳನ್ನೂ ಸ್ತುತಿಸಿರುವುದು ಕಂಡುಬರುತ್ತದೆ. ಹೀಗೆ ಸ್ತುತಿಗಾಗಿ ಶಾಸನಗಳಲ್ಲಿ ಎತ್ತಿಕೊಂಡ ಒಂದು ಪದ್ಯ :

> ಹರೇರ್ಲೀಲಾ ವರಾಹಸ್ಯ ದಂಷ್ಟ್ರಾದಂಡಸ್ಸಪಾತು ವಃ
> ಹೇಮಾದ್ರಿ ಕಲಶಾಯತ್ರಧಾತ್ರೀ ಛತ್ರಶ್ರಿಯಂ ದಧೌ॥

[ಹರಿಯು ಲೀಲಾಪ್ರದರ್ಶನಕ್ಕಾಗಿ ವರಾಹ ಸ್ವರೂಪ ತಳೆದಾಗಿನ ವರಾಹದ ದಂತವು, ಯಾವುದು ದಂಡಾಕಾರದಲ್ಲಿದೆಯೊ, ಅದು ಭೂಮಿಯನ್ನು ಎತ್ತಿದಾಗ ಹೇಮಾದ್ರಿಯು ಸತ್ತಿಗೆ ಕಲಶದಂತೆ ತೋರಿತೊ, ಆ ದಂಷ್ಟ್ರಾದಂಡ ನಿಮ್ಮನ್ನು ರಕ್ಷಿಸಲಿ.]

ಈ ಪದ್ಯವು ವಿಜಯನಗರದರಸರ ತಾಮ್ರಶಾಸನಗಳಲ್ಲಿ ಪ್ರಾರ್ಥನಾಪದ್ಯಗಳಲ್ಲೊಂದಾಗಿ ವಿಶೇಷವಾಗಿ ಕಾಣಿಸಿಕೊಂಡಿದೆ. ಈ ಪದ್ಯದ ಆಕರಗ್ರಂಥವಾವುದೊ ಸದ್ಯ ತಿಳಿಯದು. ಇದುವರೆಗೆ ಯಾರೂ ಈ ಬಗ್ಗೆ ಬರೆದಿಲ್ಲ. ಇತ್ತೀಚೆಗೆ ನಮಗೆ ಈ ಪದ್ಯ ''ವಿಕ್ರಮಾಂಕನ ಸಾಹಸಗಳು/ವಿಕ್ರಮಾದಿತ್ಯ ಹಾಗೂ ಬೇತಾಳ/ಸಿಂಹಾಸನ ದ್ವಾತ್ರಿಂಶಕ'' ಎಂದು ಮುಂತಾಗಿ ಪ್ರಸಿದ್ಧವಾಗಿರುವ ಸಂಸ್ಕೃತ ಗ್ರಂಥದಲ್ಲಿ ಕಂಡುಬಂದಿತು. ಸಿಂಹಾಸನ ದ್ವಾತ್ರಿಂಶಕದ ಕೇವಲ ದಕ್ಷಿಣಭಾರತದ ಪ್ರತಿಗಳಲ್ಲಿ ಮಾತ್ರ ಕಂಡುಬರುವುದರಿಂದ ಇದರ ಆಕರ ಇನ್ನಾವುದಾದರೂ ಕೃತಿ ಆಗಿರಬಹುದು.

೨. ದುರ್ಗಸಿಂಹನ (ಕ್ರಿ.ಶ. ೧೦೩೧) 'ಪಂಚತಂತ್ರ' ಕೃತಿಯಲ್ಲಿ ಮೊದಲನೆಯದಾದ ಭೇದಪ್ರಕರಣದಲ್ಲಿ "ದುಷ್ಟಬುದ್ಧಿ ಹಾಗೂ ಧರ್ಮಬುದ್ಧಿ'' ಎಂಬ ವರ್ತಕರ

ವಂಚನೆಯ ಕಥೆಯ. ಅಂಗವಾಗಿ ನಿಸರ್ಗವೇ ಸಾಕ್ಷಿಯೆಂಬ ಒಂದು ದೃಷ್ಟಾಂತ ರೂಪದ ಕಥೆಯಲ್ಲಿ ಕೆಳಗಿನ ಪದ್ಯವನ್ನು ಉದ್ಧರಿಸಿಕೊಂಡಿದೆ:

ಆದಿತ್ಯ ಚಂದ್ರಾವನಿಲೋನಲಶ್ಚ
ದ್ಯೌರ್ಭೂಮಿರಾಪೋ ಹೃದಯಂ ಯಮಶ್ಚ
ಅಹಶ್ಚ ರಾತ್ರಿಶ್ಚ ಉಭೇಚ ಸಂಧ್ಯೇ
ಧರ್ಮಶ್ಚ ಜಾನಾತಿ ನರಸ್ಯ ವೃತ್ತಂ॥[2]

[ಸೂರ್ಯ, ಚಂದ್ರ, ವಾಯು, ಅಗ್ನಿ, ಆಕಾಶ, ಭೂಮಿ, ಉದಕ, ಹೃದಯ, ಯಮ, ಹಗಲು, ಇರುಳು, ಎರಡೂ ಸಂಧ್ಯಾಸಮಯಗಳು ಮತ್ತು ಧರ್ಮ ಎಂಬಿವು ಮನುಷ್ಯರ ನಡೆವಳಿಯನ್ನು ತಿಳಿದಿರುತ್ತವೆ.]

ವಾಸ್ತವದಲ್ಲಿ ಈ ಪದ್ಯ ವ್ಯಾಸರ 'ಮಹಾಭಾರತ' ಕೃತಿಯದು. ಆದಿಪರ್ವದಲ್ಲಿ ಶಕುಂತಲೋಪಾಖ್ಯಾನದಲ್ಲಿ ಶಕುಂತಲೆಯು ತಾನು ದುಷ್ಯಂತನ ಪತ್ನಿ, ತಮ್ಮಿಬ್ಬರದೂ ಗಾಂಧರ್ವವಿವಾಹ ಎಂದು ತಿಳಿಸುವದಲ್ಲದೆ 'ಮಹಾರಾಜ ನಮ್ಮಿಬ್ಬರ ಮದುವೆಗೆ ಯಾರೂ ಸಾಕ್ಷಿ ಇಲ್ಲವೆಂದು ತಿಳಿಯಬೇಡ, ಎಲ್ಲರ ಕಾರ್ಯಗಳನ್ನೂ ಸದಾ ಚತುರ್ದಶಸಾಕ್ಷಿಗಳು ನೋಡುತ್ತಿರುತ್ತವೆ. ಅವುಗಳೇ ಪ್ರಕೃತ ನಾವು ಮದುವೆ ಆಗಿದ್ದೇವೆ ಎನ್ನುವುದಕ್ಕೆ ಮತ್ತು ಈ ನನ್ನ ಮಗ ಸರ್ವದಮನನು (ಭರತ) ನಿನ್ನ ಔರಸ ಪುತ್ರ' ಎಂದು ಹೇಳಿದ ಸಂದರ್ಭದಲ್ಲಿ ಬಂದಿದೆ.[3] ಅನಂತರ ಇದನ್ನು ಪಂಚತಂತ್ರ ಬಳಸಿಕೊಂಡಿದೆ. ವಿಷ್ಣುಶರ್ಮನ ಪಂಚತಂತ್ರದಲ್ಲಿ ಎರಡು ಸಲ ಈ ಪದ್ಯವು ಉದ್ಧರಿಸಲ್ಪಟ್ಟಿದೆ.[4] ದುರ್ಗಸಿಂಹನ 'ಪಂಚತಂತ್ರ' ವಸುಭಾಗಭಟ್ಟನ ಕೃತಿಯ ಅನುವಾದ. ಅರ್ಥಾತ್ ವಿಷ್ಣುಶರ್ಮನ ಪಂಚತಂತ್ರದಿಂದ ಭಿನ್ನ. ನಮಗೆ ಕರ್ನಾಟಕದ ಶಾಸನಗಳಲ್ಲಿ ದುರ್ಗಸಿಂಹನ ಕಾಲಾನಂತರವೇ ಎತ್ತಿಕೊಂಡುದು ಕಂಡು ಬರುತ್ತದೆ. ಸಂಸ್ಕೃತದಲ್ಲಿ ಪ್ರಚಲಿತವಿರುವ ಇನ್ನೊಂದು ಪ್ರಸಿದ್ಧ ನೀತಿಕತೆಗಳ ಸಂಗ್ರಹ "ಹಿತೋಪದೇಶ". ಇದರಲ್ಲೂ ಈ ಪದ್ಯ ಕಾಣದೊರೆಯುತ್ತದೆ.[5] ನಮ್ಮ ಶಾಸನ ಕವಿಗಳಿಗೆ ಶಾಸನದಲ್ಲಿ ಉಕ್ತ ದತ್ತಿಯನ್ನು ಕೊಟ್ಟುದಕ್ಕೆ ಈ ಚತುರ್ದಶ ಸಾಕ್ಷಿಗಳು ಸಾಕ್ಷಿ ಎಂಬ ಭಾವವು ಬಲಿಯಿತು. ಕೊಟ್ಟ ದಾನ ಸ್ಥಿರವಾಗಿರಲಿ ಎಂಬುದಕ್ಕೆ ಶಾಪಾಶಯ ವಿಭಾಗದಲ್ಲಿ ಈ ಪದ್ಯಕ್ಕೆ ಒಂದು ಸ್ಥಾನ ದೊರೆಯಿತು. ದಾನವನ್ನು ಕೊಟ್ಟಿಲ್ಲ ಎಂಬ ಪ್ರಮೇಯ ಏಳಬಾರದೆಂಬುದು ಇದರ ಉದ್ಧರಣೆಯ ಆಶಯವಾಗಿ ಮೆರೆಯಿತು.

೩. ಕರ್ನಾಟಕದ ಅನೇಕ ವೀರಗಲ್ಲುಗಳಲ್ಲಿ ಈ ಕೆಳಗಿನ ಪದ್ಯ ಕಾಣ ದೊರೆಯುತ್ತದೆ:

ಜಿತೇನ ಲಭ್ಯತೇ ಲಕ್ಷ್ಮೀ ಮೃತೇನಾಪಿ ಸುರಾಂಗನಾಃ
ಕ್ಷಣವಿಧ್ವಂಸಿನಿ ಕಾಯೇ ಕಾ ಚಿಂತಾ ಮರಣೇರಣೇ ||

[ಕಾಳಿಗದಲ್ಲಿ ಕಾದಿ ಗೆದ್ದರೆ ಇಹದಲ್ಲಿ ಯಥೇಚ್ಛ ಸಂಪತ್ತು ದೊರೆಯುತ್ತದೆ ; ಸತ್ತ ಸಾದರೆ ದೇವಸ್ತ್ರೀಯರು ಕರೆದುಕೊಂಡು ಹೋಗುತ್ತಾರೆ, ಅವರ ಸಹವಾಸ ದೊರೆಯುತ್ತದೆ ; ಕಾರಣ ಕ್ಷಣಭಂಗುರವಾದ ಶರೀರಕ್ಕೆಂದು ಕಾಳಿಗವನ್ನಾಗಲಿ ರಣರಂಗದಲ್ಲಿ ಮರಣವನ್ನಾಗಲಿ ಚಿಂತಿಸಲಾಗದು.] ಈ ಪದ್ಯವೂ ದುರ್ಗಸಿಂಹನ ಪಂಚತಂತ್ರದಲ್ಲಿ ಇದೆ.[6] ಆದರೆ ನಮಗೆ ಇದು ಈ ಸಾಹಿತ್ಯಕೃತಿಗಿಂತ ಶಾಸನ ಸಾಹಿತ್ಯದಲ್ಲಿಯೆ ಮೊದಲು ಕಾಣದೊರೆಯುತ್ತದೆ. ರಾಷ್ಟ್ರಕೂಟ ಚಕ್ರವರ್ತಿ ಅಕಾಲ ವರ್ಷದೇವನ ಕಾಲದ ಅಣ್ಣಿಗೆರೆಯ ಶಾಸನದಲ್ಲಿ ಈ ಪದ್ಯವಿದೆ.[7] ಲಿಪಿಶಾಸ್ತ್ರದ ದೃಷ್ಟಿಯಿಂದ ಇದರ ಕಾಲ ಎರಡನೆಯ ಕೃಷ್ಣನ ಕಾಲವೆಂದು ವಿದ್ವಾಂಸರು ನಿರ್ಣಯಿಸಿದ್ದಾರೆ, ಅರ್ಥಾತ್ ಕ್ರಿ.ಶ. ೯ನೆಯ ಶತಮಾನವು ಈ ಶಾಸನದ ಕಾಲವೆಂದು ಸ್ವೀಕರಿಸಬಹುದು. 'ಹಿತೋಪದೇಶ' ಕೃತಿಕಾರನೂ ಈ ಪದ್ಯವನ್ನು ತನ್ನ ಕೃತಿಯಲ್ಲಿ ಎತ್ತಿಕೊಂಡಿದ್ದಾನೆ. ಅದರಲ್ಲಿ " ಜಯೇಚಲಭತೇ ಲಕ್ಷ್ಮೀ " ಎಂಬ ಪಾಠಾಂತರವಿದೆ.[8]

ಮೂರು ಪದ್ಯಗಳ ಆಕರವನ್ನು ಇದೇ ಮೊದಲ ಬಾರಿಗೆ ವಿವೇಚಿಸಿ ಸಾಧ್ಯವಾದಷ್ಟು ಮೂಲಚೂಲಗಳ ಖಚಿತ ವಿವರಗಳನ್ನು ಕೊಡುವ ಪ್ರಯತ್ನವೇ ಈ ಲೇಖನದ ಗುರಿ.

ಅಡಿ ಟಿಪ್ಪಣಿಗಳು

೧. F. Edgerton 'Vikrama's Adventures', pt. II, p. 179

೨. ದುರ್ಗಸಿಂಹನ 'ಪಂಚತಂತ್ರ' (ಸಂ. ಎನ್. ಅನಂತರಂಗಾಚಾರ್) ಪು. ೧೨೭

೩. ಮಹಾಭಾರತ (ಸಂ. ಡಾ. ವಿ. ಎಸ್. ಸುಕ್ತಣಕರ್) 'ಆದಿಪರ್ವ' ಭಾಗ ೧

೪. ಪಂಚತಂತ್ರ (ಸಂ. ಎಂ. ಆರ್. ಕಾಳೆ) ; ವಿಷ್ಣುಶರ್ಮನ ಈ ಕೃತಿಯಲ್ಲಿ ಈ ಪದ್ಯ ಎರಡು ಸಲ ಬಂದಿದೆ. ಪದ್ಯ ೧೮೩ ಮತ್ತು ೪೦೮, ಪು. ೩೪,೮೭ (ಮೋತಿಲಾಲ ಬನಾರಸಿದಾಸ್). ಈ ಉಲ್ಲೇಖದತ್ತ ನನ್ನ ಗಮನ ಸೆಳೆದವರು, ಆ ಪುಸ್ತಕವನ್ನು ಒದಗಿಸಿ ಸಹಾಯ ಮಾಡಿದವರು, ಶ್ರೀ ಶೇಷಗಿರಿರಾವ್, ಸಂಸ್ಕೃತ ಅಧ್ಯಾಪಕರು ಮಹಾಜನ ಕಾಲೇಜ್, ಮೈಸೂರು.

೫. ಹಿತೋಪದೇಶ (ಚೌಖಂಬಾ ಪ್ರಕಟಣೆ, ವಾರಣಾಸಿ) ಸಹೃದ್ಭೇದ, ಪದ್ಯ ೧೧೨, ಪು.೬೫

೬. ದುರ್ಗಸಿಂಹನ ಪಂಚತಂತ್ರ, ಪೂರ್ವೋಕ್ತ, ಪು. ೧೫೧

೭. SII. vol. xi (Reprint) ಶಾಸನ–೩೨, ಪು. ೧೯

೮. ಹಿತೋಪದೇಶ ಪೂರ್ವೋಕ್ತ, ಪು. ೧೦೧

ವಾಂಗ್ ಎರ್ಬ್ಯೆ (ಚೀನಿ ಕವಿ)
ಅನು : ಎನ್. ಎಸ್. ಶಾರದಾಪ್ರಸಾದ್

ಮರ

ಕತ್ತರಿಸಿ ನೆಲಕುರುಳಿದ ಮರ
ಅದರ ಉಳಿದ ಜೀವನವದು
ಒಂಟಿತನ, ನಿರಾಸೆಯದು
ಅರೆ ದುಃಖ ಅರೆ ಕೋಪ.

ಎಂದೋ ಮರೆತ ಮರ,
ವಸಂತದಲಿ
ರಕ್ತಸುರಿಯುತ್ತಿರುವ ಹೃದಯದಿ
ಶ್ರಮಿಸುತಲಿ
ಪರ್ಣರಾಶಿಯ ಬೆಳೆಸಿದೆ.

ಹಸಿರು ಎಲೆಗಳು, ಹಸಿದು ಕೊಂಬೆಗಳು
ನಗುತಿವೆ :
ಕಡಿದ ಕೊಡಲಿಯ ಕೂರಲಗ ನೋಡಿ
ನಗುತಿವೆ.

ಡಾ. ಹಿ. ಶಿ. ರಾಮಚಂದ್ರೇಗೌಡ

ಕನ್ನಡ ಜನಪದ ಕಥೆಗಳ ಅಧ್ಯಯನ ಪರಿವೀಕ್ಷಣೆ

ಕನ್ನಡ ಕಥೆಗಳ ಪ್ರದೇಶ

ಜಾನಪದ ಜನಪದದ ಸಾಂಸ್ಕೃತಿಕ ಉತ್ಪನ್ನವಾಗಿದೆ ಸಾಂಸ್ಕೃತಿಕತೆಗೆ ಭಾಷೆ, ಭೂಗೋಳ ಮತ್ತು ಜನಾಂಗಗಳಂಥ ವಿಷಯಗಳು ಕಾರಣವಾಗಿವೆ. ಜಾನಪದ ಅಧ್ಯಯನಕಾರರು ಈ ಹಿನ್ನೆಲೆಯಿಂದ ಪ್ರಾದೇಶಿಕ ಜಾನಪದ ಮಹತ್ವವನ್ನು ಅರಿಯಲು "ಸಾಂಸ್ಕೃತಿಕ ಪ್ರದೇಶ" (Cultural area), ಭಾಷಿಕ ಪ್ರದೇಶ (Linguistic area), ಭೌಗೋಳಿಕ ಪ್ರದೇಶ (Geographical area) ಎಂಬ ಘಟಕಗಳನ್ನು ಗುರುತಿಸಿಕೊಂಡಿದ್ದಾರೆ. ಇತ್ತೀಚೆಗೆ ಈ ಘಟಕ ಕಲ್ಪನೆ ಗ್ರಾಮೀಣ ಪ್ರದೇಶ (Rural area), ನಗರ ಪ್ರದೇಶ (Urban area)ಗಳ ಪ್ರತ್ಯೇಕ ಕಲ್ಪನೆಯ ವರೆಗೆ ಮುಂದುವರಿದಿದೆ. ಪರಿಸರವೊಂದೆ ಜಾನಪದ ಪ್ರೇರಕ ಅಲ್ಲ ; ಪರಿಸ್ಥಿತಿ ಕೂಡ ಎಂಬುದು ಇದರಿಂದ ವ್ಯಕ್ತವಾಗುತ್ತದೆ. ಈ ಪರಿಕಲ್ಪನೆಯೆ ಚಾರಿತ್ರಿಕ–ಭೌಗೋಳಿಕ ಅಧ್ಯಯನ ವಿಧಾನಕ್ಕೆ ಅವಕಾಶ ಮಾಡಿಕೊಟ್ಟದ್ದು.

ಇತ್ತೀಚಿನವರೆಗೆ ಜಾನಪದ ಹಳ್ಳಿಪ್ರದೇಶದ ಸಂಸ್ಕೃತಿ ಎಂದು ಇತ್ತು. ಜನಪದ ಕಥೆಗಳನ್ನು ಕೂಡ ಹಳ್ಳಿಗಾಡಿನ ಕಥೆಗಳು ಎಂದೆ ಕರೆಯುತ್ತಿದ್ದರು. ಆದ ಕಾರಣ ಪ್ರದೇಶ ಜನಪದ ಕಥೆಗಳ ಅಧ್ಯಯನದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಪ್ರಾಪಂಚಿಕ (Universal) ಸಾಂಕೇತಿಕ ಸಮಾನ ಅಂಶಗಳನ್ನು ಬಿಟ್ಟರೆ ಉಳಿದೆಲ್ಲ ಅಂಶಗಳು ಪ್ರಾದೇಶಿಕ ಸಂಸ್ಕೃತಿ, ಸಮಾಜ ಮತ್ತು ಪರಿಸ್ಥಿತಿಗಳಿಗೆ ಬದ್ಧವಾಗಿರುತ್ತವೆ ಕರ್ನಾಟಕದಲ್ಲಿ ಹತ್ತೊಂಬತ್ತು ಜಿಲ್ಲೆಗಳಿವೆ. ಪ್ರತಿ ಜಿಲ್ಲೆ ಅಥವ ಪ್ರತಿ ತಾಲ್ಲೂಕನ್ನು ಒಂದು "ಜನಪದ ಪ್ರದೇಶ" (Folk area) ಎಂದು ಗಣಿಸಲಾಗುವುದಿಲ್ಲ. ಭೂಮಿ, ಬೆಳೆ ವಾಯುಗುಣ ಮತ್ತು ಜೀವನ ಪದ್ಧತಿಯ ಮೇಲೆ ಜನಪದ ಪ್ರದೇಶಗಳನ್ನು ಗುರುತಿಸಬಹುದು. ಬಯಲುಸೀಮೆ, ಕರಾವಳಿ ಮತ್ತು ಮಲೆನಾಡು ಎಂದು ವಿಂಗಡಿಸುವುದು ಹೆಚ್ಚು ಸೂಕ್ತವಾಗುತ್ತದೆ. ಇದರಿಂದ ಪಕ್ಷಿ, ಪ್ರಾಣಿ, ಸಸ್ಯ ಮತ್ತು ಸಂಸ್ಕೃತಿ ಸಂಬಂಧಿ ಜಾನಪದ ಗುಣಗಳನ್ನು ಪರೀಕ್ಷಿಸಲು ಅನುಕೂಲವಾಗುತ್ತದೆ. ನನ್ನ ಬಯಲಾಟನೆ ಇದನ್ನು ನಿರೂಪಿಸಿಬಿಟ್ಟಿದೆ. ಕರಾವಳಿಯದು

ಯಕ್ಷಗಾನವಾದರೆ ಇತರೆ ಭಾಗದ್ದು ದೊಡ್ಡಾಟ. ಈ ದೊಡ್ಡಾಟದಲ್ಲಿ ಉತ್ತರ ಸಂಪ್ರದಾಯ ಮತ್ತು ದಕ್ಷಿಣ ಸಂಪ್ರದಾಯ ಎಂದು ಗುರುತಿಸಿಕೊಂಡಿಲ್ಲವೆ? ಹಾಗೇ ಬಯಲುಸೀಮೆಯನ್ನು ಉತ್ತರ ಕರ್ನಾಟಕ ಜನಪದ ಪ್ರದೇಶ ಮತ್ತು ದಕ್ಷಿಣ ಕರ್ನಾಟಕ ಜನಪದ ಪ್ರದೇಶ ಎಂದು ಗುರುತಿಸಿಕೊಳ್ಳಬಹುದು.

ಜಾನಪದ ಅಂಶಗಳ ಅಸ್ತಿತ್ವ ಈ ಪ್ರಾದೇಶಿಕ ಸ್ವಭಾವವನ್ನು ಸಮರ್ಥವಾಗಿ ಹೇಳುತ್ತಿದೆ. ಹಳೆಯ ಜಾನಪದ ಅಂಶಗಳು ನಶಿಸುತ್ತಿರುವ ಹಿನ್ನೆಲೆಯಿಂದಲೂ ಜನಪದ ಪ್ರದೇಶಗಳನ್ನು ಗುರುತಿಸಬಹುದು. ದಕ್ಷಿಣಕರ್ನಾಟಕದ ಬೆಂಗಳೂರು, ಮೈಸೂರಿನಂಥ ಆಧುನಿಕತೆಯನ್ನು ಒಳಗೊಳ್ಳುತ್ತಿರುವ ಪ್ರದೇಶಗಳು ಹಳೆಯ ಕಲೆಗಳನ್ನು ಕಳಚುತ್ತಿರುವ, ಹೊಸಕಲೆಗಳಿಗೆ ಪ್ರೇರಣೆಯಾಗುತ್ತಿರುವ ಸೂಚನೆಗಳನ್ನು ನೀಡುತ್ತವೆ. ದೊಡ್ಡಬಯಲಾಟಗಳು ಕಡಿಮೆಯಾಗಿ ಬೀದಿನಾಟಕಗಳು, ಅದ್ದೂರಿ ಮದುವೆಗಳು ಹೋಗಿ ಸರಳ ಮದುವೆಗಳು, ಜಾತಿಕೂಟಗಳು (Get together) ಹೋಗಿ ಸರಸಕೂಟಗಳು ಮತ್ತು ವಿಚಾರ ಒಕ್ಕೂಟಗಳು ಬರುತ್ತಿರುವುದು ಇದಕ್ಕೆ ಸಾಕ್ಷಿ. ಕರಾವಳಿಯ ಬ್ಯಾಂಕಿಂಗ್ ವ್ಯವಹಾರ, ಸಮುದ್ರದಾಚೆಯ ವ್ಯಾಪಾರ ಸಂಬಂಧ ಅಲ್ಲಿಯ ಕಲೆಗಳಲ್ಲೂ ಕಾಣಿಸಿಕೊಂಡಿದೆ. ಹರಕೆಯ ಮೇಳಗಳು, ಸಾಂಸ್ಕೃತಿಕ ನಿರ್ವಹಣೆಯ ಪ್ರದರ್ಶನಗಳು ಟಿಕೆಟ್ ಪ್ರದರ್ಶನಗಳಾಗುತ್ತಿರುವುದರ ಕಾರಣ ಬೇರೇನೂ ಅಲ್ಲ. ಸಿದ್ಧಿಯರಂಥ ಮಿಶ್ರ ಕುಲಗಳು, ಕೇರಳದ ಕ್ರಿಶ್ಚಿಯನ್ ಮತ್ತು ಮುಸ್ಲಿಂ ಸಂಸ್ಕೃತಿಯ ವಿಶೇಷ ಪ್ರಭಾವ ಕೂಡ ಕರಾವಳಿಯನ್ನು ಪ್ರತ್ಯೇಕ ಸ್ವಭಾವದಲ್ಲಿ ನಿರೂಪಿಸಲು ಸಹಾಯಕವಾಗುತ್ತವೆ.

ಜನಾಂಗ, ಭಾಷೆ ಮತ್ತು ಧರ್ಮಗಳು ಕೂಡ ಜನಪದ ಪ್ರದೇಶ ಅಥವ "ಕಥಾಪ್ರದೇಶ"ದ ಮೇಲೆ ಹತೋಟಿಯನ್ನು ಇಟ್ಟುಕೊಂಡಿವೆ. ಆದಿವಾಸಿಗಳು, ಅರೆ ಉದ್ಯೋಗಿಗಳು, ಅಲೆಮಾರಿಗಳು ಇದ್ದಕಡೆ ಸಂಸ್ಕೃತಿ ವಿಶಿಷ್ಟ ಆಯಾಮವನ್ನು ಪಡೆಯುತ್ತದೆ. ಮಧ್ಯಪ್ರದೇಶದ ವಿವಿಧ ಜಿಲ್ಲೆಗಳ ಸಂಬಂಧವನ್ನು ವಿಮರ್ಶಿಸಿದರೆ ಇದು ಸ್ಪಷ್ಟವಾಗುತ್ತದೆ. ಹೆಚ್ಚು ಹಿಂದುಳಿದ ಮತ್ತು ಆದಿವಾಸಿ ಸ್ವಭಾವ ಇರುವ ಕರಾವಳಿ ಪ್ರದೇಶವನ್ನೇ ನಾವು ಗಮನಿಸಬಹುದು. ತುಳು ಸಂಸ್ಕೃತಿ ಮತ್ತು ಜನ ತಮ್ಮ ಸಾಂಸ್ಕೃತಿಕ ಮೂಲ ಸ್ವಭಾವಗಳನ್ನು ಉಳಿಸಿಕೊಳ್ಳಲು ಎಷ್ಟು ಹೋರಾಡುತ್ತಾರೆ ಎಂಬುದು ನಮಗೆ ತಿಳಿದಿದೆ. ಬಹುಶಃ ಕರಾವಳಿ ಜನರಿಗಿರುವ ಪ್ರಾದೇಶಿಕ ಸಾಮೀಪ್ಯ ಕರ್ನಾಟಕದ ಬೇರೆ ಭಾಗದವರಿಗೆ ಇಲ್ಲವೆಂದು ತೋರುತ್ತದೆ. ಭಾಷೆ ಕೂಡ "ಜನಪದ ಕಥಾ ಪ್ರದೇಶ" ಪರಿಶೀಲನೆಯಲ್ಲಿ ಪ್ರಮುಖ ಅಂಶ. ನಾವು ಈಗಾಗಲೆ ಮೈಸೂರು ಕನ್ನಡ, ಧಾರವಾಡ ಕನ್ನಡ ಮತ್ತು ಮಂಗಳೂರು ಕನ್ನಡ ಎನ್ನುವ ಭಾಷಾಪ್ರದೇಶಗಳನ್ನು ಸ್ಥೂಲವಾಗಿಯಾದರೂ ಗುರುತಿಸಿಕೊಂಡಿದ್ದೇವೆ. ಇನ್ನು ಮೇಲೆ ಬೆಂಗಳೂರು ಕನ್ನಡವೊಂದು ತಲೆದೋರಬಹುದು.

ಭಾಷಿಕ ಪ್ರದೇಶಗಳ ಪರಿಶೀಲನೆಯ ವಿಷಯ ಬಂದಾಗ ಗಡಿಪ್ರದೇಶಗಳು

ಒಂದೊಂದು ಭಾಷಿಕ ಪ್ರದೇಶಗಳಾಗುತ್ತವೆ. ಕಾಸರಗೋಡು, ಬೆಳಗಾಂ, ಬಳ್ಳಾರಿಯ ಅಂಚು, ಪಾವಗಡಪ್ರದೇಶ ಇವೆಲ್ಲ ಗಮನಿಸುವಂಥವು. "ಜನಪದ ಪ್ರದೇಶ"ಗಳ ಅಧ್ಯಯನ ಮಾಡುವಾಗ ವಿವಿಧ ಕಲೆ, ನಡವಳಿಕೆಗಳು ಇಲ್ಲಿಯ ವಿಶೇಷಗಳಾಗಿ ಕಾಣಿಸಿಕೊಳ್ಳುತ್ತವೆ. ಗಾದೆ, ಒಗಟು ಮತ್ತು ನುಡಿಗಟ್ಟುಗಳಲ್ಲಿ ಇಂಥ ಪ್ರಾದೇಶಿಕ ಛಾಯೆಗಳನ್ನೂ, ಕೆಲವೊಮ್ಮೆ ವಿಶಿಷ್ಟ ಆಕರಗಳನ್ನೂ ಕಾಣಬಹುದು. ಭಾಷಿಕ ಪ್ರದೇಶವೆಂದರೆ ಒಂದು ಪ್ರದೇಶದಲ್ಲಿ ಇರುವಂಥ ಇತರ ಭಾಷೆಗಳ ಜನ ಕೂಡ ಸೇರುತ್ತಾರೆ. ಆದರೆ ಅವರ ಮಾತೃಭಾಷೆಯೊಂದೆ ಪ್ರದೇಶಭಾಷೆ ಆಗುವುದಿಲ್ಲ. ಮೈಸೂರು ಮಧ್ಯೆ ಉರ್ದು ಇವೆ, ತೆಲುಗು ಇವೆ ಎಂದರೆ ಅವು ಉರ್ದು ಅಥವ ತೆಲುಗು ಪ್ರದೇಶಗಳಾಗುವುದಿಲ್ಲ. ಜನಪದ ಪ್ರದೇಶಗಳೆಂದರೆ ಸಾಂಸ್ಕೃತಿಕ ಮತ್ತು ಚಾರಿತ್ರಿಕವಾಗಿ ಭಿನ್ನತೆಯನ್ನು ತಮ್ಮ ಗುರುತಾಗಿ ಉಳಿಸಿಕೊಂಡು ಬಂದಂಥವು. ಈ ಭಾಷಾ ಪ್ರದೇಶಗಳು ಕನ್ನಡ ಜನಪದ ಕಥೆಗಳ ಪ್ರಾದೇಶಿಕ ಗುರುತನ್ನು ತೋರಿಸುವಲ್ಲಿ ಯಶಸ್ವಿಯಾಗಿವೆ.

ಕನ್ನಡ ಕಥೆಗಳ ಚರಿತ್ರೆ

ಚರಿತ್ರೆ ಎಂಬುದು ಘಟ್ಟಗಳ, ಘಟನೆಗಳ ಪರಿಣಾಮವನ್ನು ಕುರಿತದ್ದು. ಮೂಲತಃ ಜನಪದ ಕಥೆಗಳ ಚರಿತ್ರೆ ಎಂದರೆ ಸಾರ್ವಕಾಲಿಕತೆ ಮೂಲವಸ್ತು ಮತ್ತು ತಂತ್ರದಲ್ಲಿ ಪ್ರಪಂಚದಾದ್ಯಂತ ಜನಪದ ಕಥೆಗಳೆಲ್ಲ ಒಂದೆ. ಚರಿತ್ರೆ ಬದಲಾದಂತೆ ಜನಪದಕಥಾ ಘಟನೆಗಳೇನೂ ಬದಲಾಗುವುದಿಲ್ಲ. ಜನಪದ ಕಥೆಯಿಂದ ಆ ಕಾಲದ ಸಾಹಿತ್ಯ, ಸಂಸ್ಕೃತಿ ಬೆಲೆ ಪಡೆಯುತ್ತವೆ, ಜನಪದ ಕಥೆಗಳು ಭಾಷೆ, ಧರ್ಮ ಮತ್ತು ಆಡಳಿತಾತ್ಮಕ ಪರಿಕಲ್ಪನೆಗಳನ್ನು ತಮ್ಮ ವಿವರದೊಳಗೆ ಸೇರಿಸಿಕೊಳ್ಳುತ್ತವೆ. ಕನ್ನಡ ಜನಪದ ಕಥೆಗಳ ಚರಿತ್ರೆ ಹಲವು ಬಗೆಯ ಚಾರಿತ್ರಿಕ ಘಟನೆಗಳಿಂದ ಪ್ರಭಾವಿತವಾಗಿರುವುದು ಉಂಟು. ಎದ್ದು ಕಾಣುವುದು ಮುಸ್ಲಿಂ ಸಂಸ್ಕೃತಿಯ ಸೇರ್ಪಡೆ, ಉಳಿದುವೆಲ್ಲ ಮೂಲಸಾಮಗ್ರಿಯಲ್ಲಿ ಕರಗಿಹೋಗಿವೆ.

ಕನ್ನಡ ಕಥೆಗಳ ವಕ್ತೃಗಳು

ಕರ್ನಾಟಕದಲ್ಲಿ ಅನೇಕ ಜಾತಿ, ಪಂಗಡ, ಬುಡಕಟ್ಟುಗಳ ಜನರಿದ್ದಾರೆ. ಇವರೆಲ್ಲರೂ ಕಥೆಗಳನ್ನು ಬಲ್ಲವರಾಗಿದ್ದಾರೆ. ಕರ್ನಾಟಕದಲ್ಲಿ ಒಂದೇ ಕಥೆಯನ್ನು ಕನ್ನಡದಲ್ಲೂ ಇತರ ಭಾರತೀಯ ಭಾಷೆಗಳಲ್ಲೂ ಹೇಳುವವರಿದ್ದಾರೆ. ಇದುವರೆಗೆ ಕನ್ನಡದ ಮೂಲಕ ಹೇಳುವ ಕಥೆಗಳನ್ನು ಸಂಗ್ರಹಿಸಲಾಗಿದೆ. ತುಳು ಕೊಡವ ಮುಂತಾದ ಉಪಭಾಷೆಗಳಲ್ಲೂ ಕಥೆಗಳನ್ನು ಸಂಗ್ರಹಿಸಿರುವುದುಂಟು. ತುಳು ಜನರಿಂದ ಕನ್ನಡದಲ್ಲಿ ಸಂಗ್ರಹಿಸಿದ ಕಥೆಗಳು ಸಿಗುತ್ತವೆ. ಇಲ್ಲಿಯವರೆಗೆ ಕರ್ನಾಟಕದ ಸಂಗ್ರಹಕಾರರು ಸಂದರ್ಶಿಸಿರುವ ವಕ್ತೃಗಳೆಂದರೆ ಜೈನರು, ಬ್ರಾಹ್ಮಣರು, ಲಿಂಗಾಯಿತರು.

ಒಕ್ಕಲಿಗರು, ಕುರುಬರು, ಮುಸ್ಲಿಮರು, ವಾಲ್ಮೀಕಿಗಳು, ನಾಮಧಾರಿಗಳು, ನಾಡವರು, ಹಾಲೊಕ್ಕಲು, ಹರಿಜನರು, ಸಿದ್ಧಿಯರು, ಜೋಗಿಗಳು, ಕಮ್ಮಾರರು, ಕುಂಬಾರರು, ನಾಯಕರು, ಗೊಂಡರು, ಮುಕರಿ ಹರಿಜನರು, ಹವ್ಯಕ ಬ್ರಾಹ್ಮಣರು, ಹಾಲಕ್ಕಿ ಒಕ್ಕಲಿಗರು, ಮಾಲೇರು, ಗೊಲ್ಲರು, ಉಪ್ಪಾರರು, ಹಾಲು ಮತದವರು, ರೆಡ್ಡಿಗಳು, ಭಂಡಾರಿಗಳು, ವೇಷಗಾರರು, ಅಕ್ಕಸಾಲಿಗಳು, ದೇವಾಂಗ ದವರು, ಕುಂಚಟಿಗರು, ಕೊಂಕಣಿಗಳು, ಮೊಗವೀರರು, ಆದಿಕರ್ನಾಟಕರು, ಗೊಂದಲಿಗರು, ಬೋವಿಗಳು, ನಮನಕ್ಷತ್ರಿಯರು, ಕ್ರೈಸ್ತರು, ಮೊದಲಿಯಾರ್ ಗಳು ಮತ್ತು ಮೇದರು. ಪ್ರತಿನಿಧಿಸಬೇಕಾದ ಇನ್ನೂ ಹಲವಾರು ವರ್ಗಗಳಿವೆ. ಕಥೆಗಳನ್ನು ಪ್ರದೇಶದಿಂದ ಪ್ರದೇಶಕ್ಕೆ ಒಯ್ಯುವ ಅಲೆಮಾರಿಗಳು, ವ್ಯಾಪಾರಿಗಳು, ಧರ್ಮಪ್ರಚಾರಕರಂಥ ಜನವರ್ಗವನ್ನು ನಾವು ಮುಟ್ಟಿಯೇ ಇಲ್ಲ. ಉತ್ತರ ಕರ್ನಾಟಕ ದಲ್ಲಿ ವೇಷಗಾರರು ಮತ್ತು ಡೊಳ್ಳಿನವರಿಂದ ಮಾತ್ರ ಕೆಲವು ಕಥೆಗಳನ್ನು ಸಂಗ್ರಹಿಸ ಲಾಗಿದೆ. ಬಹುತೇಕ ಸಂಗ್ರಹಕಾರರು ತಮ್ಮ ಜಾತಿ, ಪ್ರದೇಶಗಳಿಗೆ ಸೀಮಿತ ಗೊಂಡಿದ್ದಾರೆ. ಬಹುಶಃ ತಮ್ಮ ಹತ್ತಿರದಲ್ಲೆ ಸಂಗ್ರಹಿಸಬೇಕಾದ ಕಥೆಗಳು ಸಾಮಗ್ರಿಗಳು ಇರುವುದರಿಂದ ಸಂಗ್ರಹಕಾರರು ಹಾಗೆ ಮಾಡಿರಬೇಕು. ಮಾನವ ಶಾಸ್ತ್ರಜ್ಞರಂತೆ ಬುಡಕಟ್ಟು ಮತ್ತು ಸಾಂಸ್ಕೃತಿಕವಾಗಿ ಪುರಾತನ ಎನ್ನಬಹುದಾದ ಜನವರ್ಗದಿಂದ ಕಥೆಗಳನ್ನಾಗಲಿ ಇತರ ಜಾನಪದ ಅಂಶಗಳನ್ನಾಗಲಿ ಸಂಗ್ರಹಿಸುವ ಪ್ರಯತ್ನ ನಮ್ಮ ವಿದ್ವಾಂಸರಿಂದ ಆಗಿಲ್ಲ. ಆಗಿರಬಹುದಾದ ಬಗ್ಗೆ ದಾಖಲೆ ಸಿಗುತ್ತಿಲ್ಲ. ನಾನು ೧೯೮೩ರಲ್ಲಿ ಮತ್ತು ೧೯೮೭ರಲ್ಲಿ ನೀಲಗಿರಿಯ ಭಾಗದಿಂದ ಕೆಲವು ಜನಪದ ಕಥೆಗಳನ್ನು ಸಂಗ್ರಹಿಸಿದ್ದೇನೆ.

ಕಥನಕಲೆ

ಜನಪದ ಕಥೆಯೊಂದು ಕಲೆಯೊ ಹೇಗೆ ಎಂಬ ಪ್ರಶ್ನೆ ಕೂಡ ಇದೆ. ಜಾನಪದ ವರ್ಗೀಕರಣದಲ್ಲಿ ಕಥೆಗಳನ್ನು ಸಾಹಿತ್ಯಿಕ ವಿಭಾಗಕ್ಕೆ ಸೇರಿಸಲಾಗಿದೆ. ಭಾಷಿಕ ಕಣಜವಾಗಿ ಕೂಡ ಕಥೆಗಳನ್ನು ನೋಡಲಾಗಿದೆ. ಭಾಷಾವಿಜ್ಞಾನಿಗಳು ಒಗಟು, ನುಡಿಗಟ್ಟುಗಳನ್ನು ಭಾಷಿಕವಾಗಿ ನೋಡುವಂತೆ ಜನಪದ ಭಾಷೆಯ ಆಕರಗಳಲ್ಲಿ ಒಂದಾಗಿ ಜನಪದ ಕಥೆಯನ್ನು ನೋಡಿದ್ದಾರೆ. ಜನಪದ ಕಥೆಗಳ ಮೊದಲ ಶಾಸ್ತ್ರೀಯ ಸಂಗ್ರಹಕಾರರೆಂದು ಹೇಳಲ್ಪಡುತ್ತಿರುವ ಗ್ರಿಮ್ ಸಹೋದರರು ಭಾಷಾ ಶಾಸ್ತ್ರಜ್ಞರು (Philologists). ಇವರು ಜನಪದ ಕಥೆಗಳನ್ನು ಜನಪದ ಸಂಸ್ಕೃತಿಯ ಮೂಲ ಸಾಮಗ್ರಿಗಳೆಂಬುದಾಗಿ ಪರಿಗಣಿಸಿದ್ದಾರೆ. ಪುರಾತನ ಜನರ ಪ್ರತಿಧ್ವನಿಗಳನ್ನೂ, ದೇಶೀಯತೆಯ ಸೆಳವುಗಳನ್ನೂ ಗುರುತಿಸಿರುವುದುಂಟು. ಜನಪದ ಕಥೆ ಶಿಕ್ಷಣ ಮಾಧ್ಯಮವಾಗಿ ಒಂದು ಪ್ರಬಲ ಅಸ್ತ್ರ ಎನ್ನುವುದನ್ನು ಅಲ್ಲಗಳೆಯುವಂತಿಲ್ಲ. ಅನ್ವೇಷಣಾಶೀಲ ಸಮಾಜದ ದಾಖಲೆಗಳಾಗಿ, ಮುಂದಿನ

ಪೀಳಿಗೆಗಳಿಗೆ ಶಿಕ್ಷಣಗಳಾಗಿವೆ ಎಂಬುದು ಕಥೆಯ ಹಂದರದ ಆರ್ಥಿಕ-ಸಾಮಾಜಿಕ ವೀಕ್ಷಣೆಯಿಂದ ತಿಳಿದುಬರುತ್ತದೆ.

ನಮ್ಮ ಆಧುನಿಕ ವಿಘಟನ ಸಮಾಜದಂತೆ ಜಾನಪದ ಸಾಮಗ್ರಿಗಳು ಒಂದೊಂದು ಪ್ರತ್ಯೇಕ ಉದ್ದೇಶಕ್ಕಾಗಿ ಹುಟ್ಟಿದವುಗಳಲ್ಲ. ಜನಸಂಸ್ಕೃತಿಯ ಸರ್ವಸಾಮಾನ್ಯ ಬಯಕೆಗಳನ್ನು ಒಳಗೊಂಡು ಹುಟ್ಟಿದವು. ಸಾಹಿತ್ಯ ಜೀವನ ಸಂಸ್ಕೃತಿಯ ಸಾಮಾನ್ಯ ಉತ್ಪತ್ತಿಯೂ ಆಗಿರುವುದರಿಂದ ಜನಪದಕಥೆಗಳು ಸಾಹಿತ್ಯಿಕ ಆಕರಗಳು ಕೂಡ ಎಂಬುದರಲ್ಲಿ ಅನುಮಾನವಿಲ್ಲ. The Science of Folktale ಎಂಬ ಕೃತಿಯನ್ನು ಬರೆದ ಹತ್ತೊಂಬತ್ತನೆಯ ಶತಮಾನದ ಬ್ರಿಟನ್ನಿನ ವಿದ್ವಾಂಸ ಎಡ್ವಿನ್ ಸಿಡ್ನಿ ಹಾರ್ಟ್‌ಲ್ಯಾಂಡ್ ಪ್ರಪಂಚದಾದ್ಯಂತ ಕಂಡುಬರುವ ಜನಪದ ಕಥೆಗಳ ಕಥನಕಲೆಯನ್ನು ಕುರಿತು ವೈಜ್ಞಾನಿಕವೆನ್ನುವಷ್ಟರಮಟ್ಟಿನ ವಿಶ್ಲೇಷಣೆ ಮಾಡಿದ್ದಾನೆ. ಇಂಗ್ಲೆಂಡಿನ ಫೋಕ್‌ಲೋರ್ ಸೊಸೈಟಿಯಿಂದ ಹೊರ ಬರುತ್ತಿದ್ದ ಪತ್ರಿಕೆಯಲ್ಲಿನ ಭಾರತೀಯ ಸಂಗ್ರಹಿತ ಕಥೆಗಳನ್ನು ಗಮನಿಸಿ ಭಾರತದ ಜನಪದ ಕಥನ ಶೈಲಿಯ ಬಗ್ಗೆ ಬರೆದಿದ್ದಾನೆ. ಭಾರತೀಯ ಕಥಾ ವಕ್ತೃಗಳು ಕುಶಲ ಕಲೆಗಾರರು–ಸಾಹಿತಿಗಳು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾನೆ.

The Folktale (1946) ಎಂಬ ತಮ್ಮ ಪ್ರಾತಿನಿಧಿಕ ಕೃತಿಯಲ್ಲಿ ಸ್ಟಿಥ್ ಥಾಮ್ಸನ್ ಅವರು ಜನಪದ ಕಥೆಗಳ ಕಲಾತ್ಮಕ ಮೌಲ್ಯದ ಬಗ್ಗೆ ಒಂದು ಕಿರು ಅಧ್ಯಾಯವನ್ನು ಕೊಟ್ಟಿದ್ದಾರೆ. ಇಲ್ಲಿ ಜನಪದ ಕಥೆಗಳ ಕಲಾತ್ಮಕ ಮೌಲ್ಯದ ಬಗ್ಗೆ ವಿಶೇಷ ವಿಶ್ಲೇಷಣೆ ನಡೆಸಿದ್ದಾರೆ. ಅವರ ಯಾಂತ್ರಿಕ ಆಶಯ–ವರ್ಗಗಳ ಕಂಡುಹಿಡಿಯುವಿಕೆಯ ಮಧ್ಯೆ ಕಥೆಗಳ ಕಥನಕಲೆಗೆ ಗಮನಕೊಟ್ಟಿರುವುದೆ ಒಂದು ವಿಶೇಷ. ಜನಪದ ಕಥೆಗಳನ್ನು ರಚನಾತ್ಮಕ ಅಧ್ಯಯನಕ್ಕೆ ಒಳಪಡಿಸಿ ಅವುಗಳ ಸೂತ್ರರೂಪದ ರಚನೆ ಮತ್ತು ಅರ್ಥವನ್ನು ಹುಡುಕುವ ಪ್ರಯತ್ನ ನಡೆದಿದೆ. ಇವರು ತಮ್ಮ ಅಧ್ಯಯನದಲ್ಲಿ ಜನಪದ ಕಥೆಗಳ ಕಲಾತ್ಮಕ ಅಂಶಗಳಿಗೆ ತಿಲಾಂಜಲಿಕೊಟ್ಟು ಕೇವಲ ಕಥೆಗಳನ್ನು ಯಾಂತ್ರಿಕ ಉತ್ಪತ್ತಿಗಳಂತೆ ಕಂಡಿರುವುದು ಸರಿಯಲ್ಲ ಎಂದು ನಂತರದ ವಿದ್ವಾಂಸರು ಟೀಕಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ಜಾನಪದ ಅಧ್ಯಯನದ ಪ್ರಬಲ ಅಸ್ತ್ರವಾಗಿರುವ ಸಾಂದರ್ಭಿಕ ಸಿದ್ಧಾಂತ (Contextual theory) ಜನಪದ ಕಥೆಗಳ ಕಥನಕಲೆಗೆ ವಿಶೇಷ ಮಹತ್ವ ನೀಡಿದೆ. ಸಂದರ್ಭದಂತೆ ಪಠ್ಯ ಎಂಬ ಅವರ ಪ್ರತಿಪಾದನೆ ಸಹಜವಾಗಿಯೆ ವಕ್ತೃವಿನ ಸಾಮರ್ಥ್ಯ, ಲವಲವಿಕೆ, ತೊಡಗಿಸಿ ಕೊಳ್ಳುವಿಕೆ ಮತ್ತು ಸೃಜನಾತ್ಮಕ ನಾವೀನ್ಯತೆಗೆ ಪ್ರಾಶಸ್ತ್ಯ ನೀಡಿದೆ.

ಕನ್ನಡ ಜನಪದ ಕಥೆಗಳ ಕಥನಕಲೆಯ ಬಗ್ಗೆ ಸಮರ್ಥವಾಗಿಯೆ ಬರೆದ ಲೇಖಕರಿದ್ದಾರೆ. ಶ್ರೀ ಜೀ.ಶಂ. ಪರಮಶಿವಯ್ಯ ಮತ್ತು ಶ್ರೀ ರಾಗೌ ಅವರನ್ನು ಇಲ್ಲಿ ನೆನೆಯಬಹುದು. ನಂತರ ಶ್ರೀಗಳಾದ ಎಚ್.ಜೆ. ಲಕ್ಕಪ್ಪಗೌಡ, ಧವಳಶ್ರೀ, ವೀರಣ್ಣ ಮತ್ತು ಅನೇಕರು ಈ ನಿಟ್ಟಿನಲ್ಲಿ ಬರೆದಿದ್ದಾರೆ. ಆದರೆ ಜನಪದ ಕಥೆಗಳ ಸಾಹಿತ್ಯಿಕ

ಮೌಲ್ಯದ ಬಗ್ಗೆ ಪ್ರಸ್ತಾವನೆ ಬರೆದಿರುವ ಮೊದಲ ಸಂಗ್ರಹ 'ಹಾಸನ ಜಿಲ್ಲೆಯ ಜನಪದ ಕಥೆಗಳು' ಸಂಗ್ರಹ. ಜನಪದ ಕಥೆಗಳು ಸಾಹಿತ್ಯ ಕೃತಿಗೆ ಹೇಗೆ ಸಮಾನವಾಗಿ ನಿಲ್ಲಬಲ್ಲವು ಎಂಬುದನ್ನು ಸಂಗ್ರಹಕಾರರಾದ ಶ್ರೀ ಹಿ. ಶಿ ರಾಮಚಂದ್ರಗೌಡ ವಿಶ್ಲೇಷಿಸಿ ತೋರಿಸಿದ್ದಾರೆ ಸಾಹಿತ್ಯಕ್ಷೇತ್ರದಿಂದ ಬಂದು ಜನಪದ ಕಥೆಗಳನ್ನು ಸಂಗ್ರಹಿಸಿದ ಅನೇಕರು ಜನಪದ ಕಥೆಗಳ ಸಾಹಿತ್ಯಿಕ ಮೌಲ್ಯದ ಬಗ್ಗೆ ಹೇಳಲು ಮರೆತಿಲ್ಲ. ಬಹಳ ಜನ ಜನಪದ ಕಥಾ ಸಾಹಿತ್ಯದ ಉದ್ದೇಶ-ಗುಣ ಮತ್ತು ಅದರ ಬಂತಸ್ತಿನ ಬಗ್ಗೆ ಕುರಿತು ಯೋಚಿಸಿಲ್ಲ ಎಂಬುದು ನಿಜ.

ಕನ್ನಡದಲ್ಲಿ ಉತ್ತಮ ಕಥನ ಕಲೆಯುಳ್ಳ ವಕ್ತೃಗಳಿದ್ದಾರೆ. ಶ್ರೀ ಎಚ್. ಜೆ. ಲಕ್ಕಪ್ಪಗೌಡರ "ಜನಪದ ಕಥಾವಳಿ", ಶ್ರೀ ತೀ.ನಂ. ಶಂಕರನಾರಾಯಣ ಅವರ 'ಸಂಕೀರ್ಣಜನಪದ ಕಥೆಗಳು', ಹಿ ಶಿ ರಾಮಚಂದ್ರೇಗೌಡ ಅವರ 'ಹಾಸನ ಜಿಲ್ಲೆಯ ಜನಪದ ಕಥೆಗಳು', ಕ್ಯಾತನಹಳ್ಳಿ ರಾಮಣ್ಣ ಅವರ 'ಗೊಂದಲಿಗರ ಕಥೆಗಳು', ದೊ.ನ ರಾಮೇಗೌಡರ 'ನಮ್ಮೂರಿನ ಜನಪದ ಕಥೆಗಳು', ಜೀಶಂಪ ಅವರ 'ಕನ್ನಡ ಜನಪದ ಕಥೆಗಳು', ರಾಗೌ ಅವರ 'ಕರ್ನಾಟಕ ಜನಪದ ಕಥೆಗಳು', ಕೃಷ್ಣಮೂರ್ತಿ ಹನೂರು ಅವರ 'ಲೀಲಾವತಿ ಪದ್ಮಾವತಿ' ಕಥೆಗಳ ಸಂಗ್ರಹಗಳು ಉತ್ತಮ ಉದಾಹರಣೆಗಳು. ಅನೇಕ ಸಂಗ್ರಹಗಳ ಒಳಗೆ ಉತ್ತಮ ಕಥನಕಲೆ ಇರುವ ವಕ್ತೃಗಳು ಇದ್ದಾರೆ. ಇವತ್ತಿಗೂ ಇಡೀ ರಾತ್ರಿ ಒಂದೇ ಕಥೆಯನ್ನು ವರ್ಣನಾತ್ಮಕವಾಗಿ ಹೇಳುವವರಿದ್ದಾರೆ. ಒಂದೊಂದು ಸಂಕೀರ್ಣ ಕಥೆಯೂ ಅವರಿಗೆ ಒಂದು ಪುರಾಣ ಇದ್ದಂತೆ. ಅದ್ಭುತ-ರಮ್ಯ ಕಥೆಗಳನ್ನು ಹೇಳುವಾಗ ವಕ್ತೃಗಳ ಭಾವಾಭಿನಯವನ್ನು ತಡೆಯುವುದೆ ಕಷ್ಟ. ಪಾತ್ರ-ಸಂದರ್ಭಗಳನ್ನು ತಾನೇ ಅಭಿನಯಿಸುತ್ತಿರುವಂತೆ ಕಥೆಯನ್ನು ನಿರ್ವಹಿಸುತ್ತಾರೆ. ಹಾಸ್ಯಕಥೆಗಳ ಕಥನ ಆರಂಭವಾದರೆ ನಾಟಕೀಯತೆ, ಸಮೃದ್ಧ ಭಾಷಾ ಬಳಕೆ ತುಂಬಿ ಹರಿಯುತ್ತದೆ. ದೊ.ನ. ರಾಮೇಗೌಡರ "ನಮ್ಮೂರಿನ ಜನಪದ ಕಥೆಗಳು" ಹಿ.ಶಿ. ರಾಮಚಂದ್ರೇಗೌಡರ "ಹಾಸನ ಜಿಲ್ಲೆಯ ಜನಪದ ಕಥೆಗಳು" ಇಲ್ಲಿಯ ಹಾಸ್ಯ ಕಥೆಗಳನ್ನು ಇಲ್ಲಿ ಉದಾಹರಿಸಬಹುದು. ಜನಪದ ಸಮಾಜದ ಅಂತರಂಗ-ಬಹಿರಂಗ ವ್ಯಕ್ತರೆದು ನಿಂತುಕೊಳ್ಳುವುದು ಇಲ್ಲಿ.

ಕಥೆ ಹೇಳುವ ಸಂದರ್ಭ ಸಾಮಾನ್ಯವಾಗಿ ರಾತ್ರಿ ಊಟವಾದ ಮೇಲೆ. ಬೇಸಿಗೆ, ಜಾಗರಣೆಗಳು, ಕಣಗಾಲ, ನಾಟಿ, ಹಬ್ಬ ಹರಿದಿನಗಳ ರಾತ್ರಿ ಬಿಡುವಿನಲ್ಲಿ ಕಥೆ ಹೇಳುತ್ತಾರೆ. ಕಥೆ ಹೇಳುವವರಲ್ಲಿ ವಯಸ್ಸಾದ ಹೆಂಗಸರು ಮತ್ತು ಗಂಡಸರು ಮುಖ್ಯರು. ಮನೆಯಲ್ಲಿ ಚಿಕ್ಕಮಕ್ಕಳನ್ನು ಕೂರಿಸಿಕೊಂಡು ಕಥಾ ಪ್ರವಾಹವನ್ನು ಹರಿಸುವ ಪ್ರಧಾನ ವ್ಯಕ್ತಿ ಅಜ್ಜಿ. ಕಥನಕಲೆ ಮತ್ತು ಕಥಾ ಸಂಪತ್ತಿನ ಸಂಗ್ರಹದಲ್ಲಿ ಅಜ್ಜಿಯದೆ ಪ್ರಥಮಸ್ಥಾನ. ಅದಕೆಂದೆ ಜನಪದ ಕಥೆಗಳನ್ನು 'ಅಜ್ಜಿಯ ಕಥೆಗಳು' ಎಂದು ಕರೆಯುಲಾಗಿದೆ. ಮಧ್ಯ ವಯಸ್ಸಿನ ಹೆಂಗಸರು, ಗಂಡಸರು ಮತ್ತು ಮಕ್ಕಳು

ಕೂಡ ಕಥೆ ಹೇಳುತ್ತಾರೆ. ಆದರೆ ಇವರು ಅದನ್ನು ಒಂದು ಅದಮ್ಯ ಕರ್ತವ್ಯ ಎಂದು ಭಾವಿಸಿದಂತೆ ಇಲ್ಲ. ಸಾಮಾಜಿಕ ಜವಾಬ್ದಾರಿಯ ಹಿರಿಯ ಸ್ಥಾನದಲ್ಲಿ ಕಥೆ ಹೇಳುವುದಿಲ್ಲ. ವಯಸ್ಸಾದವರಲ್ಲಿ ಇರುವ ಕಥನ ವೈಭವ, ಕಥಾ ಸಂಪತ್ತು ಇವರಲ್ಲಿ ಇಲ್ಲ. ಮಕ್ಕಳು ಏನಿದ್ದರೂ ಪ್ರಾಣಿ ಮತ್ತು ಹಾಸ್ಯಕಥೆಗಳನ್ನು ಹೇಳುತ್ತಾರೆ. ಯಾಕೆಂದರೆ ಅವು ಅವರಿಗೆ ಬಹಳ ಇಷ್ಟ. ವಯಸ್ಸಾದವರು ಸಂಕೀರ್ಣ ಕಥೆಗಳನ್ನು ಹೇಳಲು ಇಷ್ಟ ಪಡುತ್ತಾರಾದರೂ ಮಕ್ಕಳ ಕುತೂಹಲ ಮತ್ತು ಮನರಂಜನೆಗಾಗಿ ಪ್ರಾಣಿ ಮತ್ತು ಹಾಸ್ಯಕಥೆಗಳನ್ನು ಹೇಳುವರು. ಕಥೆಯ ನಾಯಕ ಸಾಂಕೇತಿಕ, ಹೆಸರು ಯಾವುದು ಬೇಕಾದರೂ ಆಗಬಹುದಾದ್ದರಿಂದ ಎದುರಿಗೆ ಕುಳಿತ ಚುರುಕು ಹುಡುಗ/ಹುಡುಗಿ ಅಥವ ಹೇಳುತ್ತಿರುವ ಸ್ಥಳದ ಗಣ್ಯವ್ಯಕ್ತಿ ಅಥವ ಅವನ ಮಗನನ್ನು ನಾಯಕನ ಹೆಸರಿನಲ್ಲಿ ತೆಗೆದುಕೊಳ್ಳುವುದುಂಟು. ಕಥೆ ಹಂತ–ಹಂತಗಳಲ್ಲಿ ಮುನ್ನಡೆಯುತ್ತದೆ. ದೊಡ್ಡ ಕಥೆಯಾದರೆ ಮಧ್ಯೆ ನಿಲ್ಲಿಸಿ ಹೊರಗೆ ಹೋಗಿ ಉಚ್ಚೆ ಮಾಡಿ, ತಾಂಬೂಲ ಉಗಿದು, ಬಾಯಿ ಮುಕ್ಕಳಿಸಿ, ಮತ್ತೆ ಹೊಸದಾಗಿ ಎಲೆ ಅಡಿಕೆ ಹಾಕಿಕೊಂಡು ಜಗಿಯುತ್ತಾ ಕಥೆ ಆರಂಭಿಸುವುದುಂಟು. ಕೇಳುಗ ಮಧ್ಯೆ ಬಾಯಿ ಹಾಕಿದಾಗ, ಆಶ್ಚರ್ಯ ವ್ಯಕ್ತಪಡಿಸಿದಾಗ, ದುಃಖ ತೋಡಿಕೊಂಡಾಗ ವಕ್ತೃ ಅದಕ್ಕೆ ತಕ್ಕುದಾಗಿ ಉತ್ತರಕೊಟ್ಟು ಮುಂದೆ ಹೋಗುತ್ತಾನೆ. ಅವನ ಕಥನ ಕಲೆಗೆ ಮೆಚ್ಚಿದರೆ, ಪ್ರೋತ್ಸಾಹದಾಯಕ ಪ್ರತಿಕ್ರಿಯೆ ಕೇಳುಗರಿಂದ ಬಂದರೆ ಆತ ಕಥೆಗಾರಿಕೆಯಲ್ಲಿ ಸಮೃದ್ಧತೆ ಪಡೆಯುತ್ತಾನೆ. ನಾಯಕನಿಗೆ ಪ್ರತಿಯಾಗಿ ಬರುವ ಮೋಸಗಾರನ ಪಾತ್ರ ಬಂದಾಗ ಕೇಳುಗರು ಹೆಚ್ಚು ಎಚ್ಚರವಾಗುತ್ತಾರೆ. ನಾಯಕನ ಕಡೆಗೆ ನಿಂತು ಮೋಸಗಾರನ ವಿರುದ್ಧ ಚಿಕ್ಕ ಪುಟ್ಟ ಶಬ್ದಗಳಲ್ಲಿ ತಮ್ಮ ವಿರೋಧ ವ್ಯಕ್ತಪಡಿಸುತ್ತಾರೆ. ಸಹಾಯಕ ಪಾತ್ರ, ಮೋಸಗಾರನ ಪಾತ್ರ, ರಾಕ್ಷಸನ ಪಾತ್ರ ಬಂದಾಗ ವಕ್ತೃ ಬಹಳ ಉತ್ಸಾಹ, ಸಮೃದ್ಧ ಭಾಷೆ, ಸಂಭಾಷಣೆ, ಏರಿಳಿತಗಳಿಂದ ಕಥೆ ಹೇಳುವನು. ವಂಚಕನ ಪಾತ್ರದ ವರ್ಣನೆ–ವಿವರವಂತೂ ಮೇರು ಮುಟ್ಟುವ ಸನ್ನಿವೇಶ; ಜೀವಂತ ಸನ್ನಿವೇಶ. ವಂಚಕ ವ್ಯಕ್ತಿ ಪ್ರತಿನಾಯಕನಂತೆ ಅಲ್ಲ. ಒಂದು ಸಮಯದಲ್ಲಿ ಒಂದು ಮುಗಿದು ಹೋಗುವವನು. ಈತ ಸಾಮಾನ್ಯವಾಗಿ ಕೆಳವರ್ಗದವನಾಗಿರುತ್ತಾನೆ. ಈ ಆಶಯ ಭಾರತೀಯ ಸಮಾಜದ ಸಾಮಾಜಿಕ ಪರಿಸ್ಥಿತಿಯ ಮೇಲೆ ಬೆಳಕು ಚೆಲ್ಲುತ್ತದೆಂದು ಹೇಳಲಾಗಿದೆ. ಈ ಬಗ್ಗೆ ಪಾಶ್ಚಾತ್ಯ ವಿದ್ವಾಂಸರು ಆಸಕ್ತಿ ವಹಿಸಿ ಅಧ್ಯಯನ ನಡೆಸಿದ್ದಾರೆ. ಭಾರತೀಯ ಪ್ರಾದೇಶಿಕ ಕಥೆಗಳ (Oicotypes) ಬಗ್ಗೆ ಬರೆದಿರುವ ಶ್ರೀಮತಿ ಬ್ರೆಂಡಾ ಬೆಕ್ ಎನ್ನುವವರ ಶ್ರಮ ಈ ನಿಟ್ಟಿನಲ್ಲಿ ನೆನೆಯುವಂಥದು.

ಕಥೆ ಕೇಳುವವರು ಇಂಥವರೆ ಆಗಿರಬೇಕೆಂದೇನೂ ಇಲ್ಲ. ವಯಸ್ಸಾದವರು ಮತ್ತು ಮಕ್ಕಳೆ ಹೆಚ್ಚು. ಗಂಡಸರು ಬಹಳವಾಗಿ ಭಾಗವಹಿಸುವುದು ಕಡಿಮೆ. ಗಂಡಸರಿಗೆ ಕ್ರಿಯಾತ್ಮಕ ಜಾನಪದದ ಅಂಶಗಳಲ್ಲಿ ಹೆಚ್ಚು ಆಸಕ್ತಿ. ಇತ್ತೀಚೆಗೆ ಕಥೆ

ಹೇಳುವವರಂತೆ ಕೇಳುವವರೂ ಕಡಿಮೆಯಾಗುತ್ತಿದ್ದಾರೆ. ಹಿಂದೆ ಒಂದು ಊರಿನಲ್ಲಿ ಹತ್ತಿಪ್ಪತ್ತು ಕಥೆಗಾರರಾದರೂ ಸಿಗುತ್ತಿದ್ದರು—ಅಂದರೆ ಸಾಕಷ್ಟು ಕಥೆಗಳನ್ನು ಬಲ್ಲವರು. ಒಂದು ಹಳ್ಳಿಯಲ್ಲಿ ಹೆಚ್ಚಿನ ಜನರಿಗೆ ಒಂದೋ ಎರಡೋ ಕಥೆಗಳು ಗೊತ್ತಿರುತ್ತವೆ. ಆದರೆ ಕಥೆ ಗೊತ್ತಿರುವವರೆಲ್ಲ ಕಥೆ ಹೇಳುವವರಲ್ಲ. ಈಗ ಕೂಡ ಒಂದು ಹಳ್ಳಿಯಲ್ಲಿ ಕೊನೆಯ ಪಕ್ಷ ನಾಲ್ಕೈದು ಕಥಾವಕ್ತೃಗಳು ಸಿಗುತ್ತಾರೆ. ನಾಗರಿಕತೆ ಸೋಂಕದ ಪ್ರದೇಶಗಳಲ್ಲಿ ಈಗಲೂ ಜನಪದ ಕಥೆ ಮಕ್ಕಳ ಶಿಕ್ಷಣ ಮಾಧ್ಯಮ. ಸಾಹಸ ಮತ್ತು ಕಲ್ಪನೆಗಳನ್ನು ಅದು ಯಶಸ್ವಿಯಾಗಿ ಕಲಿಸಿಕೊಡುತ್ತದೆ. ಇರುವ ಕಥೆಗಾರರಲ್ಲಿ ಹೆಸರಾಂತ ಕಥೆಗಾರರು ಇರುತ್ತಾರೆ. ಹರಿಕಥೆ ದಾಸರಂತೆ ಇವರು ಊರಿಂದ ಊರಿಗೆ ಹೋಗಿ ಯಜಮಾನರ ಪಡಸಾಲೆಯಲ್ಲಿ ಕುಳಿತು ಕಥೆ ಹೇಳಿ ಉಡುಗೊರೆ ಪಡೆದು ಬರುವರು. ಇವರು ತಾವಾಗಿಯೇ ಹೋಗದೆ ಬೇರೆ ಊರಿನವರು ಕರೆಸಿಕೊಂಡಾಗ ಹೋಗುವರು. ಹಾಗೆ ಕರೆದಲ್ಲಿ ಹೋಗಿ ಹೇಳದಿದ್ದರೆ ಕಥೆಗಳು ಕಥೆಗಾರನ ಹೊಟ್ಟೆ ಒಳಗೆ ಮುಳ್ಳಾಗಿ ಚುಚ್ಚುತ್ತವೆ ಎಂಬ ನಂಬಿಕೆ ಉಂಟು. ಶಿಷ್ಟರಂತೆ ಇರುವ ಸಂಪತ್ತನ್ನು ತಾವೊಬ್ಬರೆ ಕೇಂದ್ರೀಕರಿಸಿಕೊಳ್ಳದೆ ಎಲ್ಲರಿಗೂ ಇರುವ ಜ್ಞಾನವನ್ನು ಹಂಚುವುದು ಜನಪದ ಮನೋಧರ್ಮವಾಗಿದೆ.

ಕಥೆ ಕೇಳುವವರು ಕಡಿಮೆಯಾದಂತೆ ಹೇಳುವವರು ಕೂಡ ಕಡಿಮೆಯಾಗುತ್ತಿದ್ದಾರೆ. ವಿದ್ಯಾವಂತ ಜನ ಕಥೆ ಹೇಳಲು ಕೇಳಿದರೆ ನಮ್ಮವು ಕಗ್ಗದ ಕಥೆಗಳು ಎಂದು ಹಿಂಜರಿಯುತ್ತಾರೆ. ನಾಗರಿಕವಾದುದು ಶ್ರೇಷ್ಠ ಜನಪದ ಸಾಮಾನ್ಯ ಎಂಬ ಧೋರಣೆ ಸಾರ್ವತ್ರಿಕವಾಗಿ ಹರಡಿರುವುದೆ ಇದಕ್ಕೆ ಕಾರಣ. ಹೀಗೆ ಸಂಗ್ರಹಕ್ಕಾಗಿ ಬಂದವರಿಗೆ ಹೇಳುವಾಗ ಇವರು ಕೇಳಲು, ಭಾಗವಹಿಸಲು ಬಂದವರಲ್ಲ, ಕೇವಲ ಬರೆದುಕೊಳ್ಳಲು ಬಂದವರು ಎಂಬ ಮನೋಭಾವ ಅವರಲ್ಲಿದೆ. ಕೇಳುಗರು ಕಡಿಮೆಯಾಗುತ್ತಿರುವುದೆ ಕಥಾ ಸಂಪ್ರದಾಯ-ಕಲೆ ಕ್ಷೀಣಿಸುತ್ತಿರುವುದಕ್ಕೆ ಕಾರಣ. ಜಾನಪದ ಅಭಿವೃದ್ಧಿಗೆ ಜನಪದ ಭಾಗವಹಿಸುವಿಕೆಯೊಂದೆ ಸಿದ್ಧ ಔಷಧ ಎಂಬುದು ಇದರಿಂದ ಸ್ಪಷ್ಟವಾಗುತ್ತಿದೆ. ವಕ್ತೃಗಳ ಮಕ್ಕಳು ಕೂಡ ಕಥಾ ಪರಂಪರೆಯನ್ನು ಮುಂದುವರಿಸುವ ಸ್ಥಿತಿಯಲ್ಲಿ ಇಲ್ಲದಿರುವುದು ವಕ್ತೃಗಳಿಗೆ ಮತ್ತು ಜನಪದ ಕಥಾ ಪರಂಪರೆಯ ಮುಂದುವರಿಕೆಗೆ ಮಾರಕವಾಗಿದೆ.

ಇವತ್ತಿಗೂ ವಕ್ತೃಗಳು ತಮ್ಮ ಕಥೆಗಳು ಸಾಮಾಜಿಕ ಮೌಲ್ಯವನ್ನು ಒಳಗೊಂಡವು ಎಂದು ಭಾವಿಸುತ್ತಾರೆ. ಸಾಹಸ ಮಾಡುವವನು ಬದುಕುತ್ತಾನೆ; ಸೋಮಾರಿ ಹಿಂದೆ ಬೀಳುತ್ತಾನೆ. ಜನರ ಬೆಂಬಲವಿದ್ದವನು ಗೆಲ್ಲುತ್ತಾನೆ; ವಿರೋಧಿ ಅವಸಾನ ಹೊಂದುತ್ತಾನೆ ಎಂಬ ಮಾತನ್ನು ಜನಪದ ಕಥೆಯ ಸಂದರ್ಭಕ್ಕೆ ಆಡುತ್ತಾರೆ. ಕೇಳುವ ಮಕ್ಕಳನ್ನು ಸಾಹಸಕ್ಕೆ ಪ್ರಚೋದಿಸುವುದೂ ಉಂಟು. ಈ ಸಾಹಸವೆಲ್ಲ ಸಾಮಾಜಿಕ ನಿರ್ಮಾಣವನ್ನು ಗುರಿಯಾಗಿಟ್ಟುಕೊಂಡದ್ದಾಗಿರುತ್ತದೆ. ಕಥೆ ಹೇಳುವ ಮುಖ್ಯ ಆಶಯದಲ್ಲಿ ಪ್ರತಿಯೊಬ್ಬ ಕಥೆಗಾರನೂ ಬಡವ ಬಲ್ಲಿದನಾಗಿ

ಬೆಳೆಯುವ ಪರಿಯನ್ನು ಮನಮುಟ್ಟುವಂತೆ ಹೇಳುತ್ತಾನೆ. ಈ ಮೂಲಕ ತಮ್ಮ ಕಥೆಗಳು ಧನಾತ್ಮಕ ಸಾಮಾಜಿಕ ಬೆಳವಣಿಗೆಗೆ ಪ್ರೇರಣೆ ಎಂದು ಭಾವಿಸುತ್ತಾನೆ. ಕನ್ನಡ ಜನಪದ ಕಥೆಗಳ ವಕ್ತೃಗಳನ್ನು ಸನಿಹದಿಂದ ಸಂದರ್ಶಿಸಿದಾಗ ಇಂಥ ಅಂಶಗಳು ಬೆಳಕಿಗೆ ಬರುತ್ತವೆ.

ಕಥೆಗಳ ಹೆಸರು

"ಜನಪದ ಕಥೆ" (Folktale) ವಿದ್ವಾಂಸರು ಬಳಸುವ ಹೆಸರು. ಹಳ್ಳಿಗಳಲ್ಲಿ ಇಂಥ ಕಥಾನಕಗಳಿಗೆ "ಅಜ್ಜಿ ಕತೆ", "ಪರಸಂಗ" ಎಂದು ಕರೆಯುವರು. "ಹಳ್ಳಿ ಕತೆ", "ನಾಟಿಕಥೆ" ಮತ್ತು "ಪಾಮರ ಕತೆ" ಎಂಬುವು ನಾಗರಿಕರ ಕತೆಗಳ ಹೋಲಿಕೆಯಿಂದ ಬಂದುವು. 'ಅಜ್ಜಿಕತೆ' ಎಂಬ ಪದವೊಂದೆ ನೈಜ ಹೆಸರು. ಹಳ್ಳಿಕತೆ × ನಗರಕತೆ; ನಾಟಿಕತೆ × ಶಿಷ್ಟಕತೆ—ಇವು ಆರೋಪಿತ ಹೆಸರುಗಳು. "ಪರಸಂಗ" ಪ್ರಸಂಗ ಎಂಬ ಶಿಷ್ಟ ಪರಿಕಲ್ಪನೆಯಿಂದ ಬಂದದ್ದು. ಬಯಲಾಟ ಪ್ರಸಂಗಗಳ ಪ್ರಭಾವವೂ ಇದ್ದಿರಬೇಕು. ಜಾನಪದ ವಿದ್ವಾಂಸರು ಶಿಷ್ಟ ಸಾಹಿತ್ಯ ಪ್ರಕಾರದಲ್ಲಿ ಇರುವ ಸಣ್ಣ ಕತೆ ಪ್ರಕಾರದಿಂದ ಜನಪದ ಕಥೆಯನ್ನು ಬೇರೆ ಮಾಡಲು "ಜನಪದ" ಎಂಬ ಗುಣವಾಚಕವನ್ನು ಕಥೆಯ ಹಿಂದೆ ಸೇರಿಸುವುದ ಜೊತೆಗೆ "ತೆ" ಅಕ್ಷರಕ್ಕೆ ಬದಲಾಗಿ ಮಹಾಪ್ರಾಣ "ಥೆ" ಅಕ್ಷರವನ್ನು ಬಳಸುತ್ತಿದ್ದಾರೆ.

ಸಂಗ್ರಹಕಾರರ ಸ್ಥಿತಿ-ಗತಿ

ಕನ್ನಡ ಜ.ಕ. ಸಂಗ್ರಹಕಾರರಲ್ಲಿ ಎರಡು ವರ್ಗದವರಿದ್ದಾರೆ:

(i) ವಿವಿಧ ಉದ್ದೇಶಗಳನ್ನು ಇಟ್ಟುಕೊಂಡವರು.

(ii) ಶಾಸ್ತ್ರೀಯ ಹಿನ್ನೆಲೆಯುಳ್ಳವರು.

ಮೊದಲವರ್ಗದ ಸಂಗ್ರಹಕಾರರ ಉದ್ದೇಶಕ್ಕೆ ಯಾವ ತಾತ್ವಿಕ ಹಿನ್ನೆಲೆಯೂ ಇಲ್ಲ. ಸಂಸ್ಕೃತಿ, ಧರ್ಮ, ಪುರಾತನತೆ ಮತ್ತು ಸ್ವದೇಶೀಯತೆಗಳಂಥ ಭಾವನಾತ್ಮಕ ಅಂಶಗಳನ್ನು ಕಥೆಗಳಲ್ಲಿ ಹುಡುಕುವುದು, ಪರಂಪರೆಯ ಬಗೆಗಿನ ವ್ಯಾಮೋಹ ಹೀಗೆ. ಇವರಲ್ಲಿಯೇ ಸ್ವಲ್ಪ ಗಟ್ಟಿ ನೆಲೆಯಲ್ಲಿ ನಿಂತ ಸಂಗ್ರಹಕಾರರಿದ್ದಾರೆ. ಸಾಹಿತ್ಯಿಕ, ಭಾಷಿಕ, ನೀತಿ-ನಿಯಮಗಳನ್ನು ಇಂಥ ಪುರಾತನ ಮಾದರಿಗಳಿಂದ ಆದರ್ಶವಾಗಿ ತೆಗೆದು ತೋರಿಸುವ ಶಿಷ್ಟ ಸಾಹಿತ್ಯ ಪೋಷಕರ ಪ್ರಯತ್ನ ಕೂಡ ಇಲ್ಲಿದೆ. ಸ್ಥಳೀಯ ಅಭಿಮಾನ ಮತ್ತು ಜನಾನುರಾಗದ ಪರಿಕಲ್ಪನೆಗಳು ಕೂಡ ಇಲ್ಲಿ ಕೆಲಸ ಮಾಡಿವೆ. ಇವರಿಂದ ಜಾನಪದ ಅಧ್ಯಯನ ಶಾಸ್ತ್ರೀಯವಾಗಿ ಅಧ್ಯಯನಗೊಳ್ಳಲು ತಡೆ ಆಗಿದೆ ಯಾದರೂ, ಜಾನಪದ ಜನಪ್ರಿಯಗೊಳ್ಳುವಲ್ಲಿ ಅನುಕೂಲವಾಗಿದೆ.

ಜಾನಪದ ಸಂಗ್ರಹಕಾರರು ಎನ್ನುವವರು ಇತ್ತೀಚಿನ ಜನ. ಇಂಥವರಲ್ಲಿ ಕೂಡ ಎರಡು ವರ್ಗದವರಿದ್ದಾರೆ. ಮೊದಲ ವರ್ಗದವರಲ್ಲಿ ಜಾನಾಂಗಿಕ ದೃಷ್ಟಿ ಮತ್ತು

ಸಾಹಿತ್ಯದ ಒಲವುಗಳು ಪ್ರಮುಖವಾಗಿವೆ. ಒಂದು ಜಾತಿ, ಜನಾಂಗಗಳನ್ನು ಆಧರಿಸಿ ಸಂಗ್ರಹ ಮಾಡಿದವರುಂಟು. ಸಾಹಿತ್ಯಿಕ ಆಸಕ್ತಿಯ ಮೇಲೆ ನಿರ್ದಿಷ್ಟ ಸ್ಥಳ, ಸಂಸ್ಕೃತಿ ಎನ್ನದೆ ದೊರೆಯುವ ಸಾಹಿತ್ಯಿಕ ಸಾಮಗ್ರಿಗಳನ್ನು ಸಂಗ್ರಹಿಸಿದವರು ಹೆಚ್ಚು ಜನ. ಇತ್ತೀಚೆಗೆ ಜಾನಪದ ವಿದ್ವಾಂಸರೆಂದು ಕರೆಸಿಕೊಳ್ಳುತ್ತಿರುವ ಹಿರಿಯ ತಲೆಮಾರಿನ ಜನ ಕೂಡ ಮೊದಲಿಗೆ ಇದೇ ಪ್ರವೃತ್ತಿಯಿಂದ ಜಾನಪದ-ಕಥೆ ಸಂಗ್ರಹಕ್ಕೆ ತೊಡಗಿದವರು. ಯಾವುದೇ ಒಂದು ಜಾತಿ, ವರ್ಗ ಅಥವ ಬುಡಕಟ್ಟನ್ನು ಒಂದು "ಜನಪದ"ವಾಗಿ ಪರಿಗಣಿಸಿ ಅಲ್ಲಿಯ ಜ್ಞಾನವನ್ನು ಸಂಗ್ರಹಿಸಿದವರು, ಅಧ್ಯಯನ ಮಾಡಿದವರು ಎರಡನೆಯ ವರ್ಗದ ಜನ. ಇದರ ಸಂಖ್ಯೆ ತೀರಾ ಕಡಿಮೆ. ಜನಪದ ಕಥೆಗಳ ಕುರಿತು ಹೇಳುವಾಗ ಧವಳಶ್ರೀ ಮೊದಲು ಬರುತ್ತಾರಾದರೂ ಅವರಿಗೆ ಯಾವುದು ಯಾವ ಜಾನಪದೀಯ ಧೋರಣೆಯೂ ಇದ್ದಂತೆ ತೋರುವುದಿಲ್ಲ. ಜಾನಪದೀಯ ತಾತ್ವಿಕ ಹಿನ್ನೆಲೆಯ ಮೇಲೆ ಸಂಗ್ರಹಿಸಿದ ಮೊದಲ ಸಂಗ್ರಹಗಳೆಂದರೆ ಡಾ. ಜೀಶಂಪ ಅವರ "ಕನ್ನಡ ಜನಪದ ಕಥೆಗಳು" ಮತ್ತು ಶ್ರೀ ರಾ.ಗೌ. ಅವರ "ಕರ್ನಾಟಕ ಜನಪದ ಕಥೆಗಳು". ಉದ್ಧರಿತ ಸಂದರ್ಭಗಳನ್ನು ಬಿಟ್ಟರೆ "ಕನ್ನಡ ಜನಪದ ಕಥೆಗಳು" ಇಲ್ಲಿನ ಭಾಷೆ ಸಂಗ್ರಹಕಾರನ ಭಾಷೆಯಾಗಿದೆ. ಆ ಮಟ್ಟಿಗೆ ಇದು ಈ ಕೃತಿಯ ಕೊರತೆ. ರಾ.ಗೌ ಸಂಗ್ರಹ ನೇರವಾದ ವಕ್ತೃವಿನ ಭಾಷೆಯಲ್ಲಿದೆ.

ಸಂಗ್ರಾಹಕ-ಸಂಪಾದಕ: ಪರಿಸ್ಥಿತಿ

ಸಂಗ್ರಾಹಕ-ಸಂಪಾದಕ-ಪ್ರಕಟಣಕಾರ ಬೇರೆ ಬೇರೆಯೇ ಆಗಿರುತ್ತಿದ್ದ ಮತ್ತು ಮೂವರೂ ಒಂದೇ ಆಗಿರುತ್ತಿದ್ದ ಉದಾಹರಣೆಗಳಿವೆ. ಎಲ್ಲಿ ವ್ಯಾಪಾರಿ ದೃಷ್ಟಿ ಪ್ರಧಾನವಾಗಿತ್ತೋ ಅಲ್ಲಿ ವಕ್ತೃ, ಸಂಗ್ರಾಹಕ ಮತ್ತು ಪ್ರಕಾಶಕನ ಮಧ್ಯೆ ಯಾವುದೇ ಸಂಬಂಧ ಕಂಡುಬರುವುದಿಲ್ಲ. ವಕ್ತೃ ಕೇವಲ ತನ್ನಲ್ಲಿ ಇದ್ದುದನ್ನು ಹೇಳಿದುದಷ್ಟೆ ಸಂತೋಷ. ಸಂಗ್ರಹಕಾರರಲ್ಲಿ ಸಂಪಾದನೆ ಮಾಡುವ ಸಂಗ್ರಾಹಕ, ಕೇವಲ ಸಂಗ್ರಹಿಸಿ ಸಂಪಾದಕನೊಬ್ಬನ ಕೈಗೆ ಕೊಟ್ಟು ತೆಪ್ಪಗಾಗುವವರೂ ಇದ್ದರು. ಸಂಗ್ರಹದಲ್ಲಿಯೆ ಸಂಕುಚಿತತ್ವ ಇದ್ದ ಸಂದರ್ಭಗಳುಂಟು. ತಮಗೆ ಅಗತ್ಯ ಬೇಕಾದ ಭಾಗವನ್ನು ಸಂಗ್ರಹಿಸಿಕೊಂಡು ಬೇಡವಾದುದನ್ನು ಬಿಡುತ್ತಿದ್ದರು. ಸಂಗ್ರಹಕಾರನಿಗೆ ಅಗತ್ಯಬೇಕಾದುದನ್ನಷ್ಟೇ ವಕ್ತೃ ಹೇಳಬೇಕಾಗಿತ್ತು. ಸಂಗ್ರಹಿಸುತ್ತಿರುವ ಭಾಗಗಳಲ್ಲಿ ಕೂಡ ಬೇಡವಾದುದನ್ನು ಬಿಡುವ ತನ್ನದೆ ಮಾತು, ಧಾಟಿ, ರೀತಿಯಲ್ಲಿ ಬರೆದುಕೊಂಡಿರುವ ಸಂದರ್ಭಗಳೂ ಉಂಟು. ಸಂಪಾದಕರು ಮಾತ್ರ ಭಯಂಕರ ವ್ಯಕ್ತಿಗಳಾಗಿ ಕಾಣುತ್ತಾರೆ. ತಮ್ಮ ಸಾಂಪ್ರದಾಯಿಕ ಮನಸ್ಸಿಗೆ ಯಾವುದು ಹಿಡಿಸುವುದಿಲ್ಲವೊ ಅದನ್ನು ನಿರ್ದಾಕ್ಷಿಣ್ಯವಾಗಿ ಕೈಬಿಟ್ಟು, ತಮಗೆ ಬೇಕಾದುದನ್ನು ತಿದ್ದಿ, ಬರೆದು, ಸೇರಿಸಿರುವ ಸನ್ನಿವೇಶಗಳೂ ಇವೆ. ಇದು ಪ್ರಕಾಶಕನ ಉದ್ದೇಶ ಕೂಡ ಆದಂತಿದೆ. ಕೆಲ ಸಂದರ್ಭಗಳಲ್ಲಿ ಪ್ರಕಾಶಕನೆ ಈ ಎಲ್ಲ ಕೆಲಸಗಳನ್ನು ಮಾಡಿಸು

ತ್ತಿದ್ದುದೂ ಉಂಟು. ಸಾಮಾನ್ಯ ಜನರಿಗೆ ರಂಜನೆಯಾಗುವ ಆದರೆ ಅವನ ದೃಷ್ಟಿಯಲ್ಲಿ ಅಶ್ಲೀಲವಲ್ಲದ ಕಥೆಗಳನ್ನು ಪ್ರಕಟಿಸಿ ಹಣ ಮಾಡುತ್ತಿದ್ದನು. ಇಂಥ ಸಂಗ್ರಹಗಳು ನೇರವಾಗಿ ಬೀದಿ ಮಾರಾಟ ಸ್ಥಳ, ಸಂತೆಪೇಟೆಗಳಿಗೆ ಹೋಗುತ್ತಿದ್ದವು. ಇಂಥ ಸಂದರ್ಭದಲ್ಲಿ ವಕ್ತೃವಿಗೆ ಏನೂ ಪ್ರಯೋಜನವಿರುತ್ತಿರಲಿಲ್ಲ; ಅವನ ಹೆಸರು ಕೂಡ ನಮೂದಾಗುತ್ತಿರಲಿಲ್ಲ. ಜನಪದ ಕಥೆಗಳು ತಮ್ಮ ವಿರೂಪದಲ್ಲಿ ಓದುಗರಿಗೆ ತಲುಪುತ್ತಿದ್ದವು.

ಅರವತ್ತರ ದಶಕದಿಂದ ಪರಿಸ್ಥಿತಿ ಬದಲಾಗಿದೆ. ಸಂಗ್ರಹಕಾರರು ಸಂಪಾದಕರು ತಾತ್ವಿಕವಾಗಿ ತಯಾರಾಗಿದ್ದಾರೆ. ಜಾನಪದದ ಬಗ್ಗೆ ಪೂರ್ಣ ತಿಳುವಳಿಕೆ ಇಲ್ಲವಾದರೂ ಸಾಮಗ್ರಿಯನ್ನು ನೇರವಾಗಿ ವಕ್ತೃವಿನಿಂದ ಸಂಗ್ರಹಿಸಬೇಕೆನ್ನುವ, ಅವನ ಭಾಷೆಯಲ್ಲಿ, ಅವನ ನಡವಳಿಕೆಯಲ್ಲಿ ಆದನ್ನು ಪಡೆಯಬೇಕೆಂಬ, ಸಂಪಾದಿಸುವಾಗ ಶಿಷ್ಟ ಸಂಪಾದಕನ ತತ್ವಗಳನ್ನು ಬಳಸಬಾರದೆಂಬ ಮಟ್ಟಕ್ಕಂತೂ ಬಂದಿದ್ದಾರೆ. ಯಾರಿಂದಲೊ ಸಂಗ್ರಹಿಸಿ ತಮ್ಮದೆಂದು ಘೋಷಿಸಿಕೊಳ್ಳುವ ನಡವಳಿಕೆ ಕಡಿಮೆಯಾಗಿದೆ.

ಅಧ್ಯಯನದ ರೀತಿ ನೀತಿ

ಜಾನಪದದಲ್ಲಿ ಮೊದಲಿಗೆ ಆಳವಾದ ಅಧ್ಯಯನಕ್ಕೆ ಒಳಪಟ್ಟದ್ದು ಜನಪದ ಕಥೆ. ಇದರ ಕಾರಣಕರ್ತರು ಗ್ರಿಮ್ ಸಹೋದರರು. ಇವರನ್ನು ಜಾನಪದ ಅಧ್ಯಯನದ ಪಿತೃಗಳು ಎಂದು ಕರೆಯಲಾಗಿದೆ. ಇವರ ಅಧ್ಯಯನ ವಿಧಾನ ಬಹಳ ಕಾಲ, ಬಹಳ ವಿದ್ವಾಂಸರಿಗೆ, ದೇಶಗಳಿಗೆ ಮಾರ್ಗದರ್ಶಕವಾಯಿತು. ಚರಿತ್ರೆಯ ಪುನರ್ರಚನೆಯೆ ಇವರ ಅಧ್ಯಯನದ ಉದ್ದೇಶ. ಚಾರಿತ್ರಿಕ ಭೌಗೋಳಿಕ ವಿಧಾನ ಪರಿಸರದ ಪ್ರಬಲ ಮಾರ್ಗದರ್ಶನವಾಯಿತು. ಫಿನ್ಲೆಂಡಿನ ವಿದ್ವಾಂಸರಿಂದ ನಿರೂಪಿತಗೊಂಡ ಈ ಪದ್ಧತಿ ಜನಪದ ಕಥೆಗಳ ಆಶ್ರಯ (Motif) ಮತ್ತು ವರ್ಗ (Type) ಗಳನ್ನು ಶೋಧಿಸುವಲ್ಲಿ ಸಫಲವಾಯಿತು. ಆಂಟಿ ಆರ್ನೆಯ ಈ ಪ್ರಯತ್ನ ಸ್ಟಿಥ್ ಥಾಮ್ಸನ್ ಅವರಲ್ಲಿ ಪೂರ್ಣಗೊಂಡಿತು. ಪ್ರಪಂಚದ ಬಹುತೇಕ ರಾಷ್ಟ್ರಗಳ ವಿದ್ವಾಂಸರು ಜಾನಪದ ಕಥೆ, ಗಾದೆ ಮುಂತಾದ ಅಂಶಗಳಲ್ಲಿ ಆಶ್ರಯಗಳ ಶೋಧನೆಗೆ ತೊಡಗಿದರು. ೧೯೩೦ರ ಹೊತ್ತಿಗೆ ಈ ಪದ್ಧತಿ ಟೀಕೆಗೆ ಒಳಗಾಗಿ ಹೊಸ ಅಧ್ಯಯನ ವಿಧಾನಗಳು ಕಾಲಿಟ್ಟವು. ಅವುಗಳಲ್ಲಿ ಸ್ಪಷ್ಟ ರೂಪದ ಅಧ್ಯಯನ ವಿಧಾನವೆಂದರೆ ರಚನಾತ್ಮಕ ವಿಧಾನ. ಇದರ ಮೂಲಕರ್ತೃ ರಷ್ಯದ ವ್ಲಾಡ್‌ಮಿರ್ ಜೆ ಪ್ರಾಪ್. ಜನಪದ ಕಥೆಯ ಇರುವಿಕೆ, ಅರ್ಥಕ್ಕೆ ಉತ್ತರ ನೀಡುವುದು, ಅದರ ರಚನೆ ಎಂಬುದನ್ನು ಆತ ತೋರಿಸಿದ. ಜನಪದ ಕಥೆಯ ಕಾರ್ಯಗಳ (Functions) ಮೂಲಕ ಕಥೆಗಳಲ್ಲಿ ಕಂಡುಬರುವ ಕ್ರಮಾಗತಿಯ ರಚನೆ (Sequential structure) ಯನ್ನು ಹೆಕ್ಕಿ ತೆಗೆದ. ಈತನ ಪದ್ಧತಿಯನ್ನು ಇನ್ನೂ ಹೆಚ್ಚು ವೈಜ್ಞಾನಿಕವಾಗಿ, ಅರ್ಥಪೂರ್ಣವಾಗಿ ವಿಸ್ತರಿಸಿದವರೆಂದರೆ ಅಮೇರಿಕೆಯ ಅಲೆನ್ ಡಂಡಸ್.

ಭಾರತದಲ್ಲಿಯ ಜಾನಪದ ಅಧ್ಯಯನಕಾರರಿಗೆ ಈ ಮೂರು ಸಿದ್ಧಾಂತಗಳ ಪರಿಚಯವಿದೆ. ತಮ್ಮ ಒಲವಿಗೆ ತಕ್ಕಂತೆ ಈ ಸಿದ್ಧಾಂತಗಳಲ್ಲಿ ಒಂದನ್ನು ಇರಿಸಿಕೊಂಡು ಕಥೆಗಳನ್ನು ಸಂಗ್ರಹಿಸುವುದು ಮತ್ತು ವಿಶ್ಲೇಷಣೆಮಾಡುವ ಕೆಲಸಮಾಡಿದ್ದಾರೆ. ಭಾರತೀಯ ಜಾನಪದ ವಿದ್ವಾಂಸರು ಇನ್ನೂವರೆಗೆ ಚಾರಿತ್ರಿಕ–ಭೌಗೋಳಿಕ ಸಿದ್ಧಾಂತವೆ ಹೊಚ್ಚ ಹೊಸದು ಎನ್ನುವಂತೆ ಬಳಸುತ್ತಿದ್ದಾರೆ. ಜಾನಪದ ವಿದ್ವಾಂಸರೆನಿಸಿಕೊಂಡು ಜನಪದ ಕಥೆಗಳನ್ನು ಸಂಗ್ರಹಿಸಿ ತಮ್ಮ ಸಂಪಾದಕತ್ವದಲ್ಲಿ ಪ್ರಕಟಿಸಿರುವ ಕೃತಿಗಳನ್ನು ನೋಡಿ. ಅವರ ಪ್ರಸ್ತಾವನೆಯಲ್ಲಿ ಈ ಪದ್ಧತಿಯ ಕುರಿತ ವಿವರ ಮತ್ತು ಅದರ ಫಲಿತವಾದ ಆಶ್ರಯ ಮತ್ತು ವರ್ಗಗಳ ಕುರಿತ ಪ್ರಸ್ತಾಪ, ವಿವರಣೆ ಇರುತ್ತದೆ. ವಿಶ್ವವಿದ್ಯಾಲಯ, ಕಾಲೇಜುಗಳ ಹೊರಗೆ ಪ್ರಕಟಿಸಿರುವ ಕಥಾಸಂಗ್ರಹಗಳಲ್ಲಿ ಮಾತ್ರ ಇದು ಅಷ್ಟಾಗಿ ಕಂಡುಬರದು.

ಜನಪದ ಕಥೆಗಳ ಸಂಗ್ರಹವೆಂದೇ ಕನ್ನಡ ಜನಪದ ಕಥೆಗಳು ಸಂಗ್ರಹಿತವಾಗಿರುವುದು ೧೮೬೮ರಲ್ಲಿ. ಅದು ಮೇರಿ ಫ್ರೇರೆ (Mary Frere)ಯ 'Old Deccan Days'. ಇಲ್ಲಿ ೨೪ ಜನಪದ ಕಥೆಗಳಿವೆ. ಇವುಗಳ ವಕ್ತೃ ಕ್ರಿಶ್ಚಿಯನ್ ಮತಕ್ಕೆ ಮತಾಂತರಗೊಂಡ ಉತ್ತರ ಕರ್ನಾಟಕದ ಶೈವ ಕುಟುಂಬದ ಹೆಣ್ಣೆಂದು ತಿಳಿಯಲಾಗಿದೆ. ಆಕೆ ತನ್ನ ವಿವರವನ್ನು ಕೊಡುವಾಗ ತನ್ನ ಅಜ್ಜಿಯಿಂದಾಗಿ ಕಥೆಗಳನ್ನು ಕಲಿತದ್ದಾಗಿ ಹೇಳುತ್ತಾಳೆ. ಫ್ರೇರೆ ತಾನು ಸಂಗ್ರಹಿಸಿದ ವಿಧಾನದ ಬಗ್ಗೆ ಹೇಳುತ್ತಾ "... as she told me a story I made notes of what she said, and then wrote it down and read it to her, to be certain that I had correctly given every detail. In this manner all the stories that she could recollect were one by one recorded." ಎಂದಿರುವಳು. ಈ ಸಂಗ್ರಹ ಇಂಗ್ಲೆಂಡಿನ ಜಾನಪದ ಸಂಸ್ಥೆ(೧೮೭೮) ಆರಂಭವಾಗುವುದಕ್ಕೆ ಮೊದಲೇ ಪ್ರಕಟಗೊಂಡದ್ದು. ಹಾಗಾಗಿ ಹೆಚ್ಚಿನ ಶಾಸ್ತ್ರೀಯತೆಯಿಲ್ಲ. ಸಂಗ್ರಹಕಾರ್ತಿಯ ತಂದೆ ಈ ಕೃತಿಗೆ ವಿಮರ್ಶಾತ್ಮಕ ಮುನ್ನುಡಿ ಬರೆದಿರುವನಾದರೂ ಪ್ರಸ್ತುತಕ್ಕೆ ಅದು ಹೆಚ್ಚಿನದೇನನ್ನೂ ಕೊಡುವುದಿಲ್ಲ.

ಫ್ರೇರೆಯ ನಂತರ ಕನ್ನಡ ಕಥೆಗಳು ಎನ್ನುವ ಹೆಸರಿನಲ್ಲಿ ಕೆಲವು ಸಂಗ್ರಹಗಳು ಬಂದಿವೆ. ಇವೆಲ್ಲ ಚಿಕ್ಕ ಚಿಕ್ಕ ಪುಸ್ತಕಗಳಲ್ಲಿ ಸರಳವಾದ ಶಿಷ್ಟ ಭಾಷೆಗಳಲ್ಲಿ ಮನರಂಜನೆಗಾಗಿ ಬರೆದುವು. ವಕ್ತೃವಿನಿಂದ ನೇರವಾಗಿ ಸಂಗ್ರಹಿಸಿದ ಕೆಲಮಟ್ಟಿನ ಶಾಸ್ತ್ರೀಯತೆಯನ್ನೊಳಗೊಂಡ ಕನ್ನಡ ಜನಪದ ಕಥೆಗಳು ಹೊರಬಂದುದು ಧವಳಶ್ರೀ ಅವರಿಂದ. ಜಾನಪದ ಕಥಾಮೃತ ೧ ಮತ್ತು ೨ (೧೯೬೭–೬೮) ಮೂವತ್ತಾರು ಕಥೆಗಳನ್ನು ಒಳಗೊಂಡಿದೆ. ಪ್ರಸ್ತಾವನೆ ರೂಪದ ಬರಹದಲ್ಲಿ ಸಂಗ್ರಹಿತ ಕಥೆಗಳ ಬಗ್ಗೆ, ಕಥನಕಲೆಗಳ ಬಗ್ಗೆ ಶಿಷ್ಟ ಕತೆಗಳ ಮತ್ತು ಜನಪದ ಕತೆಗಳ ಬಗ್ಗೆ ಇರುವ ಸಂಬಂಧದ ಬಗ್ಗೆ ತಮ್ಮ ಅಭಿಪ್ರಾಯವನ್ನು ಬರೆದಿದ್ದಾರೆ. ೧೯೬೯ರ ರಾಗೌ ಅವರ

'ಕರ್ನಾಟಕ ಜಾನಪದ ಕಥೆಗಳು' ಸಂಗ್ರಹ ಮೌಲಿಕವಾದ ಸಂಪಾದನೆ. ಜನಪದ ಕಥೆಗಳನ್ನು ಕುರಿತ ಸಾಮಾನ್ಯ ಮತ್ತು ವಿಶಿಷ್ಟ ತಿಳುವಳಿಕೆ ಇಲ್ಲಿ ಲಭ್ಯವಾಗುತ್ತದೆ. ಇಲ್ಲಿ ಅರವತ್ತಕ್ಕೂ ಹೆಚ್ಚು ಕಥೆಗಳಿವೆ. ಕಥೆಗಳ ಮೂಲಭಾಷೆಯನ್ನು ನಮ್ರವಾಗಿ ಉಳಿಸಿಕೊಳ್ಳಲಾಗಿದೆ. ಒಂದು ಶಾಸ್ತ್ರೀಯ ಸಂಕಲನ ಏನೆಲ್ಲವನ್ನೂ ಒಳಗೊಳ್ಳಬೇಕೋ ಅವಕ್ಕೆ ಈ ಕೃತಿ ಆದರ್ಶಪ್ರಾಯವಾಗಿದೆ.

ಜಾನಪದ ಪ್ರಾಧ್ಯಾಪಕರಾದ ಶ್ರೀ ಜೀ. ಶಂ. ಪರಮಶಿವಯ್ಯನವರು ೧೯೭೦ ರಲ್ಲಿ 'ಕನ್ನಡ ಜನಪದ ಕಥೆಗಳು' ಸಂಗ್ರಹವನ್ನು ಹೊರತಂದಿದ್ದಾರೆ. ೬೮ ಕಥೆಗಳಿರುವ ಈ ಸಂಗ್ರಹ ಕನ್ನಡದ ಪ್ರಾತಿನಿಧಿಕ ಕಥೆಗಳಿಗೆ ಅವಕಾಶ ಮಾಡಿಕೊಟ್ಟಿದೆ. ಪ್ರಸ್ತಾವನೆಯಲ್ಲಿ ಪಾಶ್ಚಾತ್ಯ ದೇಶದಲ್ಲಿ ಜನಪದ ಕಥೆಗಳ ಅಧ್ಯಯನ ನಡೆದುಬಂದ ದಾರಿಯನ್ನು ಗುರುತಿಸಲಾಗಿದೆ. ಕಥೆಗಳನ್ನು ವರ್ಗೀಕರಿಸುವಲ್ಲಿ ಅವರು ಸ್ಟಿಥ್ ಥಾಮ್ಸನ್ ಅವರನ್ನು ಅನುಸರಿಸಿದ್ದಾರೆ. ಶಬ್ದಕೋಶ, ವಕ್ತೃ ವಿವರಗಳಲ್ಲದೆ ಬಹು ಮುಖ್ಯವಾದ ಕಥೆಗಳ ವರ್ಗಸೂಚಿ ಮತ್ತು ಆಶಯಸೂಚಿಯನ್ನು ಒದಗಿಸಿದ್ದಾರೆ. ಈ ಬಗೆಯ ಕೆಲಸ ಕನ್ನಡದಲ್ಲಿ ಮೊದಲನೆಯದು. ತುಮಕೂರು, ಚಿತ್ರದುರ್ಗ, ಬೆಂಗಳೂರು, ಮಂಡ್ಯ ಮತ್ತು ಹಾಸನ ಜಿಲ್ಲೆಯ ಕೆಲವು ತಾಲ್ಲೂಕುಗಳ ಕಥೆಗಳು ಇಲ್ಲಿವೆ.

ಎಂಟು ಸಂಕೀರ್ಣ ಜನಪದ ಕಥೆಗಳನ್ನೊಳಗೊಂಡ ತೀ.ನಂ. ಶಂಕರನಾರಾಯಣ ಅವರ 'ಸಂಕೀರ್ಣ ಜನಪದ ಕಥೆಗಳು' (೧೯೭೪) ಸಂಗ್ರಹ ಶಾಸ್ತ್ರೀಯತೆಗೆ ಒಂದು ಉದಾಹರಣೆ, ಇಲ್ಲಿ ಕೂಡ ವರ್ಗ, ಆಶಯಗಳ ಬಗ್ಗೆ ನಿಖರವಾಗಿ ಹೇಳುವ ಪ್ರಯತ್ನ ನಡೆದಿದೆ. 'ಶಿವಮೊಗ್ಗ ಜಿಲ್ಲೆಯ ಜನಪದ ಕಥೆಗಳು' (೧೯೭೯) ಶಾಸ್ತ್ರೀಯ ಸಂಗ್ರಹಕ್ಕೆ ಮತ್ತೊಂದು ಉದಾಹರಣೆ. ಈ ಸಂಕಲನದ ಪ್ರಸ್ತಾವನೆ ಈ ಮೊದಲು ಪ್ರೊ. ಜೀಶಂಪ, ರಾಗೌ, ಮತ್ತು ತೀ.ನಂ. ಶಂಕರನಾರಾಯಣರು ಬರೆದ ಪ್ರಸ್ತಾವನೆಯನ್ನು ಅನುಸರಿಸಿದೆ. ಈ ಸಂಗ್ರಹದ ಕಥೆಗಳ ಪಾಠಗಳೊಡನೆ ಇತರ ಸಂಗ್ರಹಕಾರರ ಪಾಠಗಳನ್ನು ಹೋಲಿಸಿರುವುದು ಇದರ ವಿಶೇಷ. ಹೆಸರಿಗೆ ಈ ಸಂಕಲನ ಶಿವಮೊಗ್ಗ ಜಿಲ್ಲೆಯನ್ನು ಪ್ರತಿನಿಧಿಸುತ್ತಿದ್ದರೂ, ಬಹುಪಾಲು ಕಥೆಗಳು ತೀರ್ಥಹಳ್ಳಿ ತಾಲ್ಲೂಕಿನಿಂದ ಮತ್ತು ಮೇಲ್ಜಾತಿಯ ವಕ್ತೃಗಳಿಂದ ಸಂಗ್ರಹಿಸಿದುವು. ಈ ಸಂಗ್ರಹ ಎ. ಹಿರಿಯಣ್ಣ ಅವರದು.

'ಹಾಸನ ಜಿಲ್ಲೆಯ ಜನಪದ ಕಥೆಗಳು' ೧೯೮೦ರಲ್ಲಿ ಪ್ರಕಟಗೊಂಡಿದೆ. ೧೦೫ ಕಥೆಗಳನ್ನೊಳಗೊಂಡ ಈ ಸಂಗ್ರಹದಲ್ಲಿ ವಕ್ತೃಗಳ ಭಾಷೆಯನ್ನು ಯಥಾವತ್ತಾಗಿ ಉಳಿಸಿಕೊಳ್ಳಲಾಗಿದೆ. ಸಂಕೀರ್ಣ ಕಥೆಗಳಿಗೆ ಸಮವಾಗಿ ಸರಳ ಕಥೆಗಳಿದ್ದು ಪ್ರಸ್ತಾವನೆ ಕಥೆಗಳ ಸಾಹಿತ್ಯಿಕ ಮಹತ್ವವನ್ನು ಕುರಿತದ್ದಾಗಿದೆ. ಜನಪದ ಕಥೆಗಳ ಸಾಹಿತ್ಯ ಸ್ವಭಾವವನ್ನು ಪ್ರತ್ಯೇಕವಾಗಿ ವಿಶ್ಲೇಷಣೆ ಮಾಡಿರುವ ಸಂಕಲನ ಇದೊಂದು. ಈ ಕೃತಿ ಹಿ.ಶಿ. ರಾಮಚಂದ್ರೇಗೌಡ ಅವರದು.

ಕನ್ನಡ ಜನಪದ ಕಥೆಗಳ ಕ್ಷೇತ್ರಕ್ಕೆ ಎಲ್.ಆರ್. ಹೆಗಡೆ ಅವರ ಕೊಡುಗೆ ಮನನೀಯವಾದುದು. ಕರಾವಳಿಯ ವಿವಿಧ ವರ್ಗಗಳ ಕಥೆಗಳನ್ನು ಅವರು 'ಉತ್ತರ ಕನ್ನಡ ಜನಪದ ಕಥೆಗಳು' (೧೯೬೪) 'ನಮ್ಮ ಜನಪದ ಕಥೆಗಳು' (೧೯೬೬) 'ಸಿದ್ಧಿಯರ ಜನಪದ ಕಥೆಗಳು' (೧೯೭೮) ಮತ್ತು 'ಮಲೆನಾಡ ಸೆರಗಿನ ಜನಪದ ಕಥೆಗಳು' ಈ ಮೂಲಕ ಕನ್ನಡಕ್ಕೆ ಕೊಟ್ಟಿದ್ದಾರೆ. ಪ್ರತಿ ಸಂಕಲನದಲ್ಲಿಯೂ ಅವರ ಪ್ರಸ್ತಾವನೆ ಸುದೀರ್ಘವಾಗಿದೆ. ತಮ್ಮ ಸಂಗ್ರಹಿತ ಕಥೆಗಳ ಸ್ವಾರಸ್ಯ, ಈ ಕಥೆಗಳ ಜೊತೆಗಿನ ಇತರ ಕನ್ನಡ ಜನಪದ ಕಥೆಗಳ ತುಲನೆ, ಭಾರತೀಯ ಜನಪದ ಕಥೆಗಳು ಮತ್ತು ಶಿಷ್ಟ ಕಥೆಗಳೊಡನೆ ತುಲನೆ ಹಾಗೂ ಪ್ರಪಂಚದ ಜನಪದ ಕಥೆಗಳ ವರ್ಗ ಮತ್ತು ಆಶಯಗಳೊಡನೆ ತುಲನೆ ನಡೆಸಿದ್ದಾರೆ.

ಡಿ. ಲಿಂಗಯ್ಯನವರ 'ಮಣ್ಣಿನ ಮಿಡಿತ,' 'ಜನಪದ ಕಥಾಸಂಗಮ,' 'ಪಡಿ ಸೆರಳು' ಗುರುತಿಸುವಂಥವು. ಭಾಷೆ, ವಿವರ, ವಿಚಾರಗಳ ದೃಷ್ಟಿಯಿಂದ ಇವು ದೇಶೀಯ ಮನೋಧರ್ಮಕ್ಕೆ ಮಹತ್ವಕೊಟ್ಟಿವೆ. ಶ್ರೀ ಪೀರಣ್ಣನವರ 'ಒಬ್ಬನೇ ಹೇಳಿದ ಇಪ್ಪತ್ತೆರಡು ಜನಪದ ಕಥೆಗಳು' ಸಂಗ್ರಹ ವಕ್ತೃ ಒಬ್ಬನ ಕಥನಕಲೆ ಮತ್ತು ಜಾನಪದ ಪರಂಪರೆಯಲ್ಲಿ ಅವನ ಸ್ಥಾನವನ್ನು ಗುರುತಿಸುವುದಾಗಿದೆ. ಎಚ್. ಜೆ. ಲಕ್ಕಪ್ಪಗೌಡರ 'ಜನಪದ ಕಥಾವಳಿ' ಸಾಹಿತ್ಯಿಕವೆನ್ನಬಹುದಾದಷ್ಟು ಸಮೃದ್ಧ ವರ್ಣನೆಯನ್ನೊಳಗೊಂಡ ಸಂಕೀರ್ಣ ಕಥೆಗಳ ಸಂಗ್ರಹ. ಶ್ರೀ ಕ್ಯಾತನಹಳ್ಳಿ ರಾಮಣ್ಣ ಮತ್ತು ಶ್ರೀ ಟಿ.ಎಸ್. ರಾಜಪ್ಪ ಕನ್ನಡ ಅಧ್ಯಯನ ಸಂಸ್ಥೆಯ ವತಿಯಿಂದ ಹೊರತಂದಿರುವ ಸಂಗ್ರಹಗಳು ಗಮನಿಸುವಂಥವು. ಪ್ರಸ್ತಾವನೆ ಸಂಕ್ಷಿಪ್ತವಾಗಿದ್ದರೂ, ಸಂಗ್ರಹಿತ ಕಥೆಗಳು ಶಾಸ್ತ್ರೀಯವಾಗಿವೆ. ಕೆಲಸಂಗ್ರಹಗಳು ಪ್ರಾದೇಶಿಕ ಮತ್ತು ಜಾನಾಂಗಿಕ ಇತಿಹಾಸವನ್ನು ಕೂಡ ಒದಗಿಸುತ್ತವೆ. ಜಯಚಂದ್ರ ಅವರ 'ಸನ್ಯಾಸಿ ಹೆಚ್ಚೋ, ಸಂಸಾರ ಹೆಚ್ಚೋ' ನೂರಕ್ಕೂ ಹೆಚ್ಚಿನ ಕಿರುಕಥೆಗಳ ಒಂದು ಉತ್ತಮ ಸಂಗ್ರಹ. ಬಿಳಿದರೆ ಬೋರೇಗೌಡ ಅವರ 'ಗ್ರಾಮಾಂತರ ಜನಪದ ಕಥೆಗಳು', ದೊ. ನ. ರಾಮೇಗೌಡರ 'ನಮ್ಮೂರಿನ ಜನಪದ ಕಥೆಗಳು', ಸಂಪಿಲಿಂಗಣ್ಣನವರ 'ಉತ್ತರ ಕರ್ನಾಟಕದ ಜನಪದ ಕಥೆಗಳು' ಜೀಶಂಪ ಸಂಪಾದಿತ 'ದಕ್ಷಿಣ ಕರ್ನಾಟಕ ಜನಪದ ಕಥೆಗಳು' ಮತ್ತು 'ಆಯ್ದ ಜನಪದ ಕಥೆಗಳು' ಅಂಥ ಅನೇಕ ಸಂಗ್ರಹಗಳು ಉತ್ತಮ ಕೊಡುಗೆಗಳಾಗಿವೆ. ಐವತ್ತಕ್ಕೂ ಹೆಚ್ಚು ಕನ್ನಡ ಜನಪದ ಕಥಾಸಂಗ್ರಹಗಳು ಪ್ರಕಟಗೊಂಡಿದ್ದು, ಕನ್ನಡ ಜನಪದ ಕಥೆಗಳ ಅಧ್ಯಯನಕ್ಕೆ ಆಕರಗಳಾಗಿವೆ.

ಕನ್ನಡ ಜನಪದ ಕಥೆಗಳ ಅಧ್ಯಯನ ಕೂಡ ಸಮರ್ಥ ರೀತಿಯಲ್ಲಿ ನಡೆದಿದೆ. ಕೆ. ಆರ್. ಸಂಧ್ಯಾರೆಡ್ಡಿ ಅವರ 'ಕನ್ನಡ ಜನಪದ ಕಥೆಗಳು' ಎನ್ನುವ ಮಹಾಪ್ರಬಂಧ ಜನಪದ ಕಥೆಗಳ ಸಾಮಾನ್ಯ ಸ್ವಭಾವಗಳು, ಸಿದ್ಧಾಂತಗಳನ್ನು ಕುರಿತು ಹೇಳಿದೆ. ತನ್ನ ಗಮನಕ್ಕೆ ಬಂದ ಕಥೆಗಳ ವರ್ಗಗಳನ್ನು ಗುರುತಿಸುವ ಪ್ರಾಥಮಿಕ

ಕೆಲಸ ಇಲ್ಲಿ ನಡೆದಿದೆ. ಬಹಳ ಮುಖ್ಯವಾಗಿ ಈ ಕೃತಿಯಲ್ಲಿ ಗಮನಿಸಬೇಕಾದ ಅಂಶವೆಂದರೆ ಜನಪದ ಕಥೆಗಳ ಸಾಂಸ್ಕೃತಿಕ ಹಿನ್ನೆಲೆಯನ್ನು ಕುರಿತು ವಿವರಿಸಿರುವುದು. ಒಬ್ಬ ಶಿಷ್ಟ ವಿದ್ವಾಂಸನ ರೀತಿಯಲ್ಲಿ ತಮಗೆ ದೊರೆತ ಕನ್ನಡ ಜನಪದ ಕಥೆಗಳ ಪಾಠಾಂತರಗಳನ್ನು ಕುರಿತ ಚರ್ಚೆ ಗಮನಿಸುವಂಥದು.

'ಕನ್ನಡ ಜನಪದ ಕಥಾವರ್ಗಗಳು' ಎನ್ನುವ ಪಿಎಚ್.ಡಿ. ಪ್ರಬಂಧವನ್ನು ಹಿ. ಶಿ. ರಾಮಚಂದ್ರೇಗೌಡ ಅವರು ಮಂಡಿಸಿದ್ದಾರೆ. ಜಾನಪದ ಅಧ್ಯಾಪಕರಾದ ಇವರು ಕನ್ನಡ ಜನಪದ ಕಥೆಗಳ ಸ್ವಭಾವ-ಗುಣ-ಲಕ್ಷಣ, ಪ್ರಪಂಚದ ಜನಪದ ಕಥೆಗಳ ಜೊತೆಗಿನ ಇವುಗಳ ಸಂಬಂಧ ಕುರಿತು ವಿವರಿಸಿದ್ದಾರೆ. ಜನಪದ ಕಥೆಗಳನ್ನು ಕುರಿತ ಸಿದ್ಧಾಂತಗಳು ಇಲ್ಲಿ ಸುದೀರ್ಘವಾಗಿ ಚರ್ಚಿತವಾಗಿವೆ. ಆಶಯ ಮತ್ತು ವರ್ಗಗಳ ಬಗ್ಗೆ ಸುದೀರ್ಘವೂ, ವಿಶ್ಲೇಷಣಾತ್ಮಕವೂ ಆದ ಚಿಂತನೆಯಿದೆ. ವರ್ಗ ಕಲ್ಪನೆಯ ಮಹತ್ವ, ಪರಿಮಿತಿ ಬದಲಾದ ಅಧ್ಯಯನ ಪರಿಸ್ಥಿತಿಗಳ ಬಗ್ಗೆ ಸಮೃದ್ಧ ಹಿನ್ನೆಲೆ ಮತ್ತು ಚಿಂತನೆ ಇದೆ. ಜನಪದ ಕಥೆಗಳ ಅಧ್ಯಯನ ಮಾನ (Unit) ಕುರಿತು ಬರೆಯುವಾಗ ಸಮಾಜವಿಜ್ಞಾನ ಮತ್ತು ನಿಸರ್ಗವಿಜ್ಞಾನಗಳಲ್ಲಿ ಬಳಕೆಯಲ್ಲಿರುವ ಅಧ್ಯಯನ ಮಾನಗಳ ಜೊತೆಗೆ ವಿಶ್ಲೇಷಣೆ ಮಾಡಿ ವಿವರಿಸಲಾಗಿದೆ. ವಿಶೇಷವಾಗಿ ಪ್ರಾದೇಶಿಕ ಕಥಾವರ್ಗಗಳ (Oicotype) ಸ್ವರೂಪ-ನಿರೂಪಣೆಯ ಆವಶ್ಯಕತೆ ಮತ್ತು ಕನ್ನಡದಲ್ಲಿ ದೊರೆಯುವ ಪ್ರಾದೇಶಿಕ ಕಥಾವರ್ಗಗಳ ಬಗ್ಗೆ ನೊಟ್ಟವನೊದಲಾಗಿ ಇಲ್ಲಿ ವಿಶ್ಲೇಷಿಸಲಾಗಿದೆ. ಕೊನೆಯಲ್ಲಿ ೧೯೮೦ರವರೆಗೆ ದೊರೆಯುವ ಕನ್ನಡ ಜನಪದ ಕಥೆಗಳಿಗೆ ವರ್ಗಗಳನ್ನು ಸೂಚಿಸಲಾಗಿದೆ. ಸ್ಟಿಥ್ ಥಾಂಸನ್ ವರ್ಗದಲ್ಲಿ ಕಂಡುಬರದ ಕಥೆಗಳಿಗೆ ಇಲ್ಲಿ ವರ್ಗ ಸಂಖ್ಯೆಯನ್ನು ಕೊಟ್ಟು ವಿಶ್ಲೇಷಿಸಲಾಗಿದೆ. ಇದೊಂದು ಉತ್ತಮ ಪ್ರಬಂಧವೆಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ.

ಶ್ರೀ ವೀರಣ್ಣದಂಡೆ ಕಲ್ಬುರ್ಗಿ ಜಿಲ್ಲೆಯ ಕಥೆಗಳನ್ನು ಆಧಾರವಾಗಿಟ್ಟುಕೊಂಡು ವರ್ಗ ಮತ್ತು ಆಶಯ ಸೂಚಿಯನ್ನು ತಯಾರಿಸಿದ್ದಾರೆ. ಇವರ ಸೂಕ್ಷ್ಮ ಗ್ರಹಿಕೆ, ವಿವೇಚನೆ ಮನಸೆಳೆಯುವಾಗಿವೆ. ಆಶಯ ಮತ್ತು ವರ್ಗಗಳ ಬಗ್ಗೆ ವಿವರಿಸಿ, ಗುಲ್ಬರ್ಗ ಜಿಲ್ಲೆಯ ಜನಪದ ಕಥೆಗಳಿಗೆ ವರ್ಗಸಂಖ್ಯೆ ಮತ್ತು ಹೆಸರನ್ನು ಯೋಜಿಸಿದ್ದಾರೆ. ಈ ಪಿಎಚ್.ಡಿ ಮಹಾಪ್ರಬಂಧ ಒಂದು ಉತ್ತಮ ಮಾರ್ಗದರ್ಶಿ ಕೃತಿ.

ಈಗ ದೊರೆಯುತ್ತಿರುವ ಕಥೆಗಳನ್ನು ಆಧರಿಸಿ ಕನ್ನಡ ಜನಪದ ಕಥೆಗಳ ಗುಣಗಳನ್ನು ಕೆಳಗಿನಂತೆ ಸಮೀಕರಿಸಬಹುದು

೧. ಸಂಕೀರ್ಣ ಜನಪದ ಕಥೆಗಳು ಹ್ರಸ್ವಗೊಳ್ಳುತ್ತಿವೆ.

೨. ಧಾರ್ಮಿಕವರ್ಗದ ಕಥೆಗಳು ಸ್ಟಿಥ್‌ಥಾಮ್ಸನ್ ವರ್ಗಸೂಚಿಯಲ್ಲಿಯ ಕಥೆಗಳಿಗಿಂತ ಹೆಚ್ಚಿವೆ.

೩. ಸರಳ ಕಥೆಗಳಲ್ಲಿ ಅತ್ತೆ-ಸೊಸೆಯರಿಗೆ ಸಂಬಂಧಪಟ್ಟ ಕಥೆಗಳು ವಿಶಿಷ್ಟವೂ ಅಧಿಕವೂ ಆಗಿವೆ.

೪. ಪೂಜಾರಿ, ಗುರು ಮೊದಲಾದ ಧಾರ್ಮಿಕ ಸ್ವಭಾವದ ವ್ಯಕ್ತಿಗಳ ಲೇವಡಿಗೆ ಸಂಬಂಧಿಸಿದ ಕಥೆಗಳು ಕಡಿಮೆ ಇವೆ.

೫. ಸರಪಳಿ ಕಥೆಗಳ ಸಂಖ್ಯೆ ಕೂಡ ಕಡಿಮೆ.

೬. ಥಾಮ್ಸನ್ ವರ್ಗಸೂಚಿಯಲ್ಲಿ ಕಂಡುಬರುವ ಲೈಂಗಿಕ ಸ್ವಭಾವದ ಕಥೆಗಳಿಗಿಂತ ಕನ್ನಡದ ಕಥೆಗಳು ಅಧಿಕವಿವೆ.

೭. ಆಶ್ರಯಗಳು ಪರಸ್ಪರ ಕಥೆಗಳಲ್ಲಿ ಬೆರಕೆಯಾಗಿವೆ.

೮. ಪಾರಂಪರಿಕ ಕಥಾವರ್ಗದ ಆಶಯಗಳೆ ಹೊರಬಂದು ಪ್ರತ್ಯೇಕವೆನ್ನ ಬಹುದಾದ ಕಥಾವರ್ಗಗಳನ್ನು ಸೃಷ್ಟಿಸಿವೆ.

೯. ಭೂತ ಮತ್ತು ಮನುಷ್ಯನ ಜೊತೆಗಿನ ಕಥೆಗಳ ಸಂಖ್ಯೆ ಕಡಿಮೆ.

೧೦. ಜೀವದ ಗೆಳೆಯರು (T೫೧೬) ಇಂಥ ಕಥೆಗಳ ಬಗ್ಗೆ ಕಥೆಗಳಿರುವ ಕಥೆಗಳ ಸಂಖ್ಯೆ ಥಾಮ್ಸನ್ ವರ್ಗಸೂಚಿಯಲ್ಲಿರುವುದಕ್ಕಿಂತ ಹೆಚ್ಚಿವೆ.

೧೧. ಸಿಂಡ್ರೆಲ್ಲಾ ವರ್ಗದ ಕಥೆಗಳು ದೊರೆಯುತ್ತಿದ್ದರೂ ಸರಳವಾಗಿ ಹೇಳಿ ಮುಗಿಸಿದಂತಿವೆ.

೧೨. ನೀತಿ ಮಾತುಗಳಿಗೆ (೯೧೦) ಸಂಬಂಧಿಸಿದ ಕಥೆಗಳು ಹೆಚ್ಚು ದೊರೆತಿವೆ.

೧೩. ಮೂಲವರ್ಗದ, ಮೂಲಪಾತ್ರದ ನಂಬಿಕೆಯಲ್ಲಿ ಗಮನಾರ್ಹ ಬದಲಾವಣೆ ಕಂಡುಬಂದಿದೆ.

೧೪. ಒಂದು ವರ್ಗದ ಕಥೆ ಏಕಕಾಲದಲ್ಲಿ ಹತ್ತಕ್ಕೂ ಹೆಚ್ಚು ಕಥಾವರ್ಗಗಳನ್ನು ಹೋಲುವಂತಿರುತ್ತದೆ.

೧೫. ಜಾಣಮನುಷ್ಯ (T೧೫೨೫)ಸಿಗೆ ಸಂಬಂಧಪಟ್ಟ ಕಥೆಗಳು ಬಹಳ ವೈವಿಧ್ಯ ಪೂರ್ಣವಾಗಿವೆ.

೧೬. ಹಾಸ್ಯವರ್ಗದ ಮೂರ್ಖಮನುಷ್ಯನಿಗೆ ಸಂಬಂಧಿಸಿದ ಕಥೆಗಳು ಒಂದರಲ್ಲಿ ಅನೇಕ ಸೇರಿಕೊಂಡಂತಿವೆ.

ಕನ್ನಡ ಜನಪದ ಕಥೆಗಳ ಸಂಗ್ರಾಹಕರು ಮತ್ತು ಸಂಪಾದಕರ ಬಗೆಗಿನ ಸ್ವಭಾವಗಳು

೧. ಮಧ್ಯವರ್ತಿಗಳಿಂದ ಜನಪದ ಕಥೆಗಳನ್ನು ಸಂಗ್ರಹಿಸುವವರ ಬಗ್ಗೆ ಟೀಕಿಸುವುದು.

೨. ಪಾಶ್ಚಾತ್ಯ ಅಧ್ಯಯನ ವಿಧಾನವನ್ನು ಅನುಸರಿಸುವುದರ ಬಗ್ಗೆ ಅಸಮಾಧಾನ ವ್ಯಕ್ತಪಡಿಸುವುದು.

೩. ಹವ್ಯಾಸಿ ಜಾನಪದರು ತಮಗೆ ಕಂಡಂತೆ ಕಥೆಗಳನ್ನು ಸಂಗ್ರಹಿಸಿರುವುದು.

೪. ತಮ್ಮ ತಾಯಿ, ಸಂಬಂಧಿ, ತಮ್ಮ ಜಾತಿ ಅಥವ ಪ್ರದೇಶಕ್ಕೆ ಸಂಬಂಧಿಸಿದ ಕಥೆಗಳನ್ನು ಮಾತ್ರ ಸಂಗ್ರಹಿಸಿರುವುದು.

೫. ಇಡೀ ಜಿಲ್ಲೆಯನ್ನು ಪ್ರತಿನಿಧಿಸದಿದ್ದರೂ, ಜಿಲ್ಲೆಯ ಹೆಸರಿನಲ್ಲಿ ತಮ್ಮ ಸಂಗ್ರಹಿತ ಕಥೆಗಳನ್ನು ಪ್ರಕಟಿಸುವುದು.

೬. ದೈನಿಕ ಪತ್ರಿಕೆಗಳಿಗಾಗಿ ಸಂಗ್ರಹಿಸಿ ಬರೆದ ಕಥೆಗಳನ್ನು ಸಂಗ್ರಹವಾಗಿ ತಂದಿರುವುದು.

೭. ಎಡಪಂಥೀಯ ದೃಷ್ಟಿಯಿಂದ ಜನಪದ ಕಥೆಗಳ ವಸ್ತು ಮತ್ತು ತಂತ್ರವನ್ನು ನೋಡಿರುವುದು.

೮. ತಮ್ಮ ಸಂಗ್ರಹಕ್ಕೆ ಬೇರೆಯವರಿಂದ ಪ್ರಸ್ತಾವನೆ ಬರೆಸಿರುವುದು.

೯. ಜನಪದ ಕಥೆಯ ವಿವಿಧ ಬಗೆಯ ಉಪಯುಕ್ತತೆ ಬಗ್ಗೆ ಹೇಳಿರುವುದು.

೧೦. ಒಬ್ಬನೆ ಹೇಳಿದ ಕಥೆಗಳು ಮತ್ತು ಅವುಗಳ ಪಾಠಾಂತರಗಳನ್ನು ಗುರುತಿಸಿರುವುದು.

೧೧. ತಮ್ಮ ಸಂಗ್ರಹಗಳಿಗೆ ಆಧುನಿಕ ಸಾಹಿತ್ಯ ಕೃತಿಗಳ ಹೆಸರುಗಳ ರೀತಿಯ ಆಕರ್ಷಕ ಹೆಸರುಗಳನ್ನು ಇಟ್ಟಿರುವುದು.

೧೨. ಸಾಹಿತ್ಯದಲ್ಲಿಯ ಕಥಾ ಮಾಧ್ಯಮದ ರೀತಿ ಜನಪದ ಕಥೆಗಳನ್ನು ಅಳವಡಿಸಿ ಬರೆದಿರುವುದು.

೧೩. ಹಳೆಯ ಸಂಸ್ಕೃತಿಯ ಪುನರುತ್ಥಾನಕ್ಕಾಗಿ ಕಥೆಗಳನ್ನು ಸಂಗ್ರಹಿಸಿದ್ದಾಗಿ ಹೇಳಿರುವುದು.

೧೪. ಕಥೆಗಳನ್ನು ತಮ್ಮ ಭಾಷೆಯಲ್ಲಿ ಬರೆದು ಪ್ರಕಟಿಸಿರುವುದು.

೧೫. ಮಕ್ಕಳಿಗಾಗಿ ಜನಪದ ಕಥೆಗಳನ್ನು ಸರಳಭಾಷೆಯಲ್ಲಿ ಬರೆದಿರುವುದು.

೧೬. ಪಾಶ್ಚಾತ್ಯ ಅಧ್ಯಯನಕ್ಕೆ ನೇರವಾಗಿ ಕಥೆಗಳ ವರ್ಗೀಕರಣ ಮತ್ತು ಅಧ್ಯಯನ ನಡೆಸಿರುವುದು.

೧೭. ಪಾಶ್ಚಾತ್ಯ ಕಥೆಗಳ ಬಗ್ಗೆಯಾದ ಅಧ್ಯಯನವನ್ನು ಕನ್ನಡದಲ್ಲಿ ಬರೆದಿರುವುದು.

೧೮. ನಾಡಭಾಷೆ, ನಾಡಪ್ರೇಮಕ್ಕಾಗಿ ಕಥೆಗಳನ್ನು ಸಂಗ್ರಹಿಸಿರುವುದು.

೧೯. ಕಥೆಗಳ ಸಾರವನ್ನೇ ತಮ್ಮ ಭಾಷೆಯಲ್ಲಿ ವಿವರಿಸಿ ಪ್ರಸ್ತಾವನೆ ಬರೆದಿರುವುದು.

೨೦. ಕಥೆಗಳ ಹೊರತು ಬೇರೇನೂ ವಿವರ ಕೊಡದಿರುವುದು.

೨೧. ವಕ್ತೃಗಳ ಹೆಸರು, ಸ್ಥಳ ಇತ್ಯಾದಿ ವಿವರಗಳನ್ನು ಒದಗಿಸದೆ ಇರುವುದು.

೨೨ ಒಬ್ಬ ಅಥವ ಇಬ್ಬರು ವ್ಯಕ್ತಿಗಳ ಕಥೆಗಳನ್ನೆ ಒಂದು ಗ್ರಾಮದ ಹೆಸರಿನಲ್ಲಿ ಪ್ರಕಟಿಸಿರುವುದು.

೨೩. ತಮ್ಮ ಕ್ಷೇತ್ರಕಾರ್ಯದ ವಿವರವೇನನ್ನೂ ಕೊಡದಿರುವುದು.

೨೪. ಕಥೆಗಳ ಭೌಗೋಳಿಕ—ಜಾನಾಂಗಿಕ ಹಿನ್ನೆಲೆಯನ್ನು ಒದಗಿಸದೆ ಇರುವುದು.

೨೫. ಯಾವುದೇ ಸಿದ್ಧಾಂತವನ್ನೂ ಸಮರ್ಪಕವಾಗಿ ಕಥೆಗಳ ಅಧ್ಯಯನಕ್ಕೆ ಬಳಸದೆ ಇರುವುದು, ಇತ್ಯಾದಿ.

ಡಾ. ಮ. ಸು. ಕೃಷ್ಣಮೂರ್ತಿ

ಸುಳ್ಳೆ ನಮ್ಮ ಮನೆದೇವರು*

'ಸಾವಿರ ಸುಳ್ಳುಹೇಳಿ ಒಂದು ಕನ್ಯಾದಾನ ಮಾಡು' ಎಂದು ಒಂದು ಗಾದೆಯಿದೆ. ಆದರೆ ಇಷ್ಟಾದರೂ ನಮ್ಮಲ್ಲಿ ಮದುವೆಯಾಗದ ಸಹಸ್ರಾರು ಮಂದಿ ಕನ್ಯೆಯರಿದ್ದಾರಲ್ಲ ಇದಕ್ಕೆ ಕಾರಣವೇನು? ಎಂದು ಕೇಳಬಹುದು. ಕಾರಣ ಇಷ್ಟೆ, ಸಾವಿರ ಸುಳ್ಳು ಹೇಳುವುದು ನಿಜಕ್ಕೂ ಕಷ್ಟ. ಅದೂ ಅಲ್ಲದೆ ನಾವೆಲ್ಲ ಸತ್ಯಹರಿಶ್ಚಂದ್ರನ ಸಂತತಿಯಲ್ಲವೆ? ನಾವು ಸತ್ಯವಂತರು ಎನ್ನುವುದಕ್ಕೆ ನಮ್ಮಲ್ಲಿ ಬೆಳೆದು ನಿಂತಿರುವ ಸಹಸ್ರಾರು ಮಂದಿ ಕನ್ಯೆಯರೇ ಸಾಕ್ಷಿ. ಹೀಗಿರುವಾಗ ಸುಳ್ಳು ನಮ್ಮ ಬಾಯಲ್ಲಿ ಸುಲಭವಾಗಿ ಬಂದೀತೆ? ನಿಜ ಹೇಳುವುದಾದರೆ ಸುಳ್ಳು ಹೇಳುವುದನ್ನು ನಾವು ಕಲಿಯಬೇಕು. ಕಲಿತದ್ದೆಲ್ಲ ಕಲೆ. ಇದ್ದುದನ್ನು ಇದ್ದಹಾಗೇ ಹೇಳಿದರೆ ಸಿದ್ದಪ್ಪನಿಗೆ ಸಿಡಿಲು ಬಡಿಯಬಹುದಷ್ಟೇ ಹೊರತು, ಬೇರೇನೂ ಆಗದು.

ಮೇಲೆ ಹೇಳಿದ ಗಾದೆಯಿಂದ ಮತ್ತೊಂದು ಸಿದ್ಧವಾಗುವ ಅಂಶವೆಂದರೆ ಸುಳ್ಳಿಗೆ ಸಾಮಾಜಿಕ ಮೌಲ್ಯವಿದೆ ಎಂಬುದು. ಆದರೂ ಜನ ಸಾವಿರ ಸುಳ್ಳು ಏಕೆ ಹೇಳಲೊಲ್ಲರೋ ಅಥವಾ ಹೇಳಲಾರರೋ ಕಾಣೆ. ಕಾರಣ ಸುಳ್ಳು ಹೇಳುವ ಕಲೆ ಎಲ್ಲರಿಗೂ ಸಿದ್ಧಿಸದು. ಅದಕ್ಕೆ ಜನ್ಮಜಾತವಾದ ಪ್ರತಿಭೆ ಬೇಕು, ಇಲ್ಲವೆ ನಿರಂತರ ಸಾಧನೆ ಬೇಕು. ಸುಳ್ಳಿಗೆ ಪ್ರೇರಣೆ ನೀಡುವ ಅನೇಕ ಪ್ರಸಂಗಗಳು ಮನುಷ್ಯನ ಬದುಕಿನಲ್ಲಿ ಬರುತ್ತವೆ. ಆದರೆ ಸುಳ್ಳು ಎಷ್ಟೆಷ್ಟು ಕಲಾತ್ಮಕವಾಗಿದ್ದರೆ ಅಷ್ಟಷ್ಟು ಯಶಸ್ಸು, ಒಮ್ಮೆ ಒಬ್ಬ ಕನ್ಯಾಪಿತೃ ತನ್ನಮಗಳು ತುಂಬ ಸುಂದರಿ ಎಂದು ಹೇಳಿದನಂತೆ. ಗಂಡಿನವರು ಹೆಣ್ಣನ್ನು ನೋಡಲು ಬಂದಾಗ ಆಕೆ ಬರಿಯ ಕಪ್ಪಲ್ಲ, ಇಜ್ಜಲುಗಪ್ಪು ಎಂದು ಗೊತ್ತಾಯಿತು. ಅವರು ಕೆರಳಿ ನುಡಿದರಂತೆ, "ಏನ್ರೀ, ಇಂಥ ಸುಳ್ಳೂ ಹೇಳುವುದುಂಟೆ?" ಅದಕ್ಕೆ ಆತ ಹೇಳಿದನಂತೆ "ದೇವಸ್ಥಾನದ ಅಮ್ಮನವರಿಗಿಂತ ನನ್ನ ಮಗಳು ಬೆಳ್ಳಗಿಲ್ಲವೆ?" ಇಲ್ಲಿ ಆ ಕನ್ಯಾಪಿತೃವಿನ ಪ್ರಸಂಗಾವಧಾನ ಬೆಳಕಿಗೆ ಬರುತ್ತದೆ. ಅವನು ನಿಜವಾದ ಕಲೆಗಾರ.

---

* ಆಕಾಶವಾಣಿಯ ಕೃಪೆಯಿಂದ

'ಪ್ರಜ್ಞಾನವನವೋನ್ಮೇಷಶಾಲಿನೀ ಪ್ರತಿಭಾ ಮತಾ' ಎಂದರೆ ನವನವ ಉನ್ಮೇಷ ಉಂಟುಮಾಡುವ ಪ್ರಜ್ಞೆಯೇ ಪ್ರತಿಭೆ. ಇದನ್ನು ಒಪ್ಪುವುದಾದರೆ ಸುಳ್ಳಿಗಿಂತ ಮಿಗಿಲಾದ ಪ್ರತಿಭೆ ಬೇರೊಂದಿಲ್ಲ. ಪ್ರತಿಭೆ ಜನ್ಮಜಾತವಾದುದು, ಕಟ್ಟಿಕೊಂಡುದಲ್ಲ, ಹುಟ್ಟಿನಿಂದ ಬಂದದ್ದು ಎಂದು ಹೇಳುತ್ತಾರೆ. ಒಮ್ಮೆ ಒಂದು ಊರಗೌಡ ತಮ್ಮ ಊರಿನ ಪ್ರಸಿದ್ಧ ಕಳ್ಳನ ಮನೆಗೆ ಹೋದನಂತೆ. ಆತ ಮನೆಯಲ್ಲಿರಲಿಲ್ಲ. ಆತನ ಹೆಂಡತಿಯೂ ಇರಲಿಲ್ಲ. ಇನ್ನೂ ಸಣ್ಣವನಾದ ಮಗನಿದ್ದ. ಅವನನ್ನು ಕೇಳಿದ "ನಿಮ್ಮಪ್ಪ ಎಲ್ಲೋ ?"

"ನಿನ್ನೆ ಆಕಾಶ ತೂತು ಬಿದ್ದಿತ್ತಲ್ಲ, ಅದನ್ನು ಸರಿ ಮಾಡೋಕೇ ಅಂತ ಏಣಿ ತೊಗೊಂಡು ಹೋಗವ್ನೆ".

"ಅವ್ವ ಎಲ್ಲೊ?"

"ಸೊಳ್ಳೆಪರದೆಯಲ್ಲಿ ಕೂತ್ಕೊಂಡು ಮೀನ ಹಿಡಿಯೋಕೇ ಅಂತ ಹೊಳೆಗೆ ಹೋಗವ್ಳೆ"

ಕಳ್ಳನ ಮಗನೇ ಹೀಗಾದರೆ ಇನ್ನು ಅವನ ಅಪ್ಪ, ಅಮ್ಮ ಹೇಗಿದ್ದಾರು—ಎಂದು ಗೌಡ ಚಕಿತನಾದ. ನಿಜ. ಇದೀಗ ಜನ್ಮಜಾತ ಪ್ರತಿಭೆ, ಸಹಜಸ್ಫೂರ್ತಿ!

(ಚಿಕ್ಕಂದಿನಲ್ಲಿ ಚಿಕ್ಕಮಕ್ಕಳನ್ನು ರೇಗಿಸಲೆಂದು ನಿನ್ನ ಹೆಸರೇನು- ಎಂದು ಕೇಳುತ್ತಿದ್ದರು. ಆಗ ಹುಡುಗರು ಹೇಳುತ್ತಿದ್ದರು 'ಬೆಂದರೆ ಬೇಳೇಕಾಳು, ಇಲ್ಲದಿದ್ದರೆ ಹೆಸರುಕಾಳು').

ಮಕ್ಕಳನ್ನು ಕೆಣಕಿದಾಗ ಅವರ ಪ್ರತಿಭೆ ಬೆಳಕಿಗೆ ಬರುತ್ತದೆಂದು ಹಿಂದೆ ನಮ್ಮ ಜಾನಪದರು ಇಂಥ ವಿನೋದ ಮಾಡುತ್ತಿದ್ದರು. ಆದರೆ ಇಂಥ ವಿನೋದಕ್ಕೆ ಕೈಹಾಕಿ ಒಮ್ಮೆ ನಾನು ಪೆಚ್ಚಾದುದುಂಟು. ಒಮ್ಮೆ ಯಾವುದೋ, ಹಳ್ಳಿಯ ಹುಡುಗನನ್ನು ಕೇಳಿದೆ, 'ನಿನ್ನ ಹೆಸರೇನು?' ಅವನು ಹೇಳಿದ, 'ನಮ್ಮ ತಾಯಿಯನ್ನು ಕೇಳಿಕೊಂಡು ಬರುತ್ತೇನೆ, ತಾಳಿ.'

ತನ್ನ ಹೆಸರೂ ನೆನಪಿಲ್ಲದ ವಿಲಕ್ಷಣ ಹುಡುಗ ಎಂದು ನಾನು ಚಕಿತನಾದೆ. ಆದರೆ ಆ ಹುಡುಗ ಅರ್ಧದಾರಿಗೆ ಮರಳಿಬಂದು ನನ್ನನ್ನು ಕೇಳಿದ, 'ನೀವು ಏನು ಕೇಳಿದಿರಿ?' ಆಗ ನನ್ನ ಸೋಜಿಗ ಭಯದಲ್ಲಿ ಪರಿಣಮಿಸಿತು. ಈ ಹುಡುಗನಿಗೆ ಮಾನಸಿಕ ರೋಗವಿರಬೇಕೆನಿಸಿತು. ಆದರೆ ಆಮೇಲೆ ತಿಳಿಯಿತು ಆತ ತುಂಬ ತುಂಟ ಎಂದು. ಅಂತೂ ಅವನು ನಮ್ಮ ತಾಳ್ಮೆಯನ್ನೇ ಪರೀಕ್ಷಿಸಿದ.

ಪ್ರತಿಭೆಯನ್ನು ಗುರುತಿಸುವುದಕ್ಕೂ ಪ್ರತಿಭೆ ಬೇಕು. ಒಮ್ಮೆ ಒಬ್ಬ ಪಾದರಿ ಹಾದಿಯಲ್ಲಿ ಹೋಗುತ್ತಿದ್ದಾಗ ಕೆಲವು ಮಕ್ಕಳು ಒಂದು ನಾಯಿಮರಿಯೊಂದಿಗೆ ಆಟವಾಡುತ್ತಿದ್ದವಂತೆ. ಕುತೂಹಲಗೊಂಡು ಆತ ಆ ಮಕ್ಕಳನ್ನು ಕೇಳಿದನಂತೆ, 'ಮಕ್ಕಳೇ, ನೀವು ಇಲ್ಲಿ ಯಾವ ಆಟವಾಡುತ್ತಿದ್ದೀರಿ?'

ಅವು ಹೇಳಿದವು, 'ನಾವು ಸುಳ್ಳು ಆಟವಾಡುತ್ತಿದ್ದೇವೆ, ನಮ್ಮಲ್ಲಿ ಯಾರು ಅತಿದೊಡ್ಡ ಸುಳ್ಳುಹೇಳುವರೋ ಅವರಿಗೆ ಈ ನಾಯಿಮರಿ ಬಹುಮಾನ?'

ಮಕ್ಕಳೂ ಈ ದುರ್ಗತಿಗೆ ಬಂದವಲ್ಲ! ಎಂಥ ಕಾಲ ಬಂತು! ಎಂದು ಅವನು ತುಂಬ ನೊಂದುಕೊಂಡು ಹೇಳಿದ, 'ಮಕ್ಕಳೇ, ಸುಳ್ಳುಹೇಳುವುದು ಕೆಟ್ಟದ್ದು, ನಾನು ನನ್ನ ಜೀವಮಾನದಲ್ಲಿ ಎಂದೂ ಸುಳ್ಳು ಹೇಳಿದವನಲ್ಲ.'

ಆಗ ಆ ಮಕ್ಕಳೆಲ್ಲ ಒತ್ತಟ್ಟಿಗೆ ಹೇಳಿದವಂತೆ, 'ನಾಯಿಮರಿಯನ್ನು ನೀವು ತೆಗೆದು ಕೊಂಡು ಹೋಗಿ.'

ಈ ಮಾತನ್ನು ಕೇಳಿ ಆ ಪಾದರಿಯ ಮೈಯೆಲ್ಲಾ ಉರಿದಿರಬೇಕು, ಅವನ ಮುಖದ ಮೇಲೆ ಭತ್ತ ಎರಚಿದ್ದರೆ ಅರಳಾಗುತ್ತಿತ್ತೋ ಏನೋ. ಅಂತೂ ಆ ಮಕ್ಕಳು ಆತನ ಪ್ರತಿಭೆಯನ್ನು ಗುರುತಿಸಿ ತಮ್ಮ ಪ್ರತಿಭೆಯನ್ನು ಮೆರೆದಿರಬೇಕು.

'ಸಮಯಕ್ಕೊಂದು ಸುಳ್ಳು' ಎಂದು ಕೆಲವರು ಪರಿಸ್ಥಿತಿಯಿಂದ ಪಾರಾಗಲು ಏನೋ ಸುಳ್ಳುಹೇಳಿ ಅದನ್ನು ದಕ್ಕಿಸಿಕೊಳ್ಳಲಾರದೆ ಪರದಾಡಿದುದುಂಟು. ಯಾವನೋ ಭಕ್ತ ಪೂಜಾರಿ ವೇಶ್ಯಾಲೋಲನಾಗಿದ್ದನಂತೆ. ಅವನು ತನ್ನ ಪ್ರೇಯಸಿಗೆ ಹೂಮುಡಿಸಿ ಅನಂತರ ಅದನ್ನು ದೇವರಿಗೆ ಅರ್ಪಿಸುತ್ತಿದ್ದನಂತೆ; ಅದೂ ರಾಜನ ಮನೆದೇವರಿಗೆ. ಒಮ್ಮೆ ರಾಜನಿಗೆ ಪ್ರಸಾದ ಕೊಡುವಾಗ ಹೂವಿನಲ್ಲಿ ಕೂದಲಿದ್ದುದನ್ನು ಕಂಡು ಅವನ ಹುಬ್ಬುಗಂಟಿಕ್ಕಿತು. ಇದೇನು ದೇವರಿಗೆ ಅದೂ ಶಿವಲಿಂಗಕ್ಕೆ ಜುಟ್ಟಿದೆಯೇ ಎಂದು ಕೇಳಿದನಂತೆ. ಭಕ್ತ 'ಹ್ಞೂ' ಎಂದನಂತೆ. ಮಾರನೆಯ ದಿನ ತಾನೇ ಖುದ್ದಾಗಿ ಬಂದು ಪರೀಕ್ಷಿಸುವುದಾಗಿ ರಾಜ ಹೇಳಿಹೋದ.

ಇತ್ತ ಭಕ್ತ ತಾನು ಹೇಳಿದ ಸುಳ್ಳನ್ನು ನಿಜಮಾಡು ಇಲ್ಲವಾದರೆ ನನ್ನ ತಲೆ ಕಡಿದುಕೊಳ್ಳುತ್ತೇನೆ ಎಂದು ದೇವರಿಗೆ ದುಂಬಾಲುಬಿದ್ದ. ಎಷ್ಟಾದರೂ ದೇವರು ಭಕ್ತಬಾಂಧವನಲ್ಲವೆ? ತನ್ನ ಭಕ್ತನ ತಲೆಕಾಯಲು ದೇವರು ಲಿಂಗದಲ್ಲಿ ಜಟೆ ತೋರಿದನಂತೆ. ಅಂತೂ ಭಕ್ತನ ಭಕ್ತಿ, ಸುಳ್ಳನ್ನು ಸತ್ಯವನ್ನಾಗಿ ಮಾಡಿತು. ಎಂದರೆ ತನ್ನ ಭಕ್ತರು ಸುಳ್ಳುಹೇಳುವುದು ದೇವರಿಗೂ ಪ್ರಿಯ ಎಂದಾಯಿತು. ಆದರೆ ಕಲಾತ್ಮಕವಾಗಿ ಹೇಳದೆ ದಡ್ಡತನದಿಂದ ಹೇಳಿದ ಸುಳ್ಳಿನಿಂದಾಗಿ ದೇವರು ಪಡಬಾರದ ಪಾಡುಪಡಬೇಕಾಗುತ್ತದೆ.

ಸುಳ್ಳು ಸತ್ಯವನ್ನು ಅರ್ಥಮಾಡಿಕೊಳ್ಳದ ಮಕ್ಕಳ ನಡುವೆ ಕೆಲವೊಮ್ಮೆ ಸುಳ್ಳು ಹೇಳುವ ಜನ ಪೇಚಿಗೆ ಸಿಕ್ಕಿಕೊಳ್ಳುವುದುಂಟು. ಒಮ್ಮೆ ಒಂದು ಗೋಷ್ಠಿ ಯಲ್ಲಿ ಹೆಂಗಸರೆಲ್ಲ ತಮ್ಮ ತಮ್ಮ ವಯಸ್ಸನ್ನು ಹೇಳಿಕೊಳ್ಳುತ್ತಿದ್ದರಂತೆ. ಅವರ ಮಾತೆಲ್ಲ ಮುಗಿದ ಮೇಲೆ ಒಂದು ಪುಟ್ಟ ಹುಡುಗಿ ಹೇಳಿತಂತೆ "Considering your age I must say that I am not at all born".

ಸುಳ್ಳು ಜನರಲ್ಲಿ ಎಲ್ಲಿಲ್ಲದ ಧೈರ್ಯವನ್ನು, ಉತ್ಸಾಹವನ್ನು ತುಂಬುತ್ತದೆ. ನಿಜವಾಗಿ ನೋಡಿದರೆ ಸುಳ್ಳು ಹೇಳಬೇಕಾದರೆ ಎಂಟೆದೆ ಬೇಕು. ಅದು ವೀರರ ಅಸ್ತ್ರವೇ

ಹೊರತು ಹಂದೆಗಳ ದಂಥೆಯಲ್ಲ. ಹಿಂದಿನ ಕಾಲದಲ್ಲಿ ನಮ್ಮ ಜನ ಇಂದಿನಂತಲ್ಲ, ವೀರರಾಗಿದ್ದರು, ಆದ್ದರಿಂದ ಹೇರಳವಾಗಿ ಸುಳ್ಳು ಹೇಳುತ್ತಿದ್ದರು. ಆದ್ದರಿಂದಲೇ ನಮ್ಮ ಧರ್ಮಧುರೀಣರು 'ಸತ್ಯಂವದ' (ನಿಜ ಹೇಳು), 'ಧರ್ಮಂಚರ' ಎಂದು ಮತ್ತೆ ಮತ್ತೆ ಒತ್ತಿಹೇಳುತ್ತಿದ್ದರು. ಸತ್ಯಸಂಧರಾದವರಿಗೆ 'ಸತ್ಯಹೇಳಿ' ಎಂದು ಹೇಳುವುದರಲ್ಲಿ ಯಾವ ಅರ್ಥವೂ ಇಲ್ಲ. 'ಸತ್ಯಂವದ' ಎಂಬ ಮಾತೇ ಸಾಕು, ನಮ್ಮ ಜನ ಮಿಥ್ಯಾವಾದಿಗಳಾಗಿದ್ದರೆನ್ನಲು. ಆದರೆ ಆ ಜನ ಸುಳ್ಳು ಹೇಳುತ್ತಿದ್ದರೇ ಹೊರತು, ಅದನ್ನು ಕಲಾತ್ಮಕವಾಗಿ ಹೇಳುತ್ತಿರಲಿಲ್ಲವೆಂದು ಕಾಣುತ್ತದೆ.

ಸುಳ್ಳು ಹೇಳುವುದು ಅರವತ್ತುನಾಲ್ಕು ಕಲೆಗಳಲ್ಲಿ ಒಂದು ಹೌದೋ ಅಲ್ಲವೋ ಕಾಣೆ. ಹಾಗಿದ್ದರೆ ಜನ ಅದನ್ನು ಕಲಿಯುತ್ತಿದ್ದರು. ಕಲಾತ್ಮಕವಲ್ಲದ ಸುಳ್ಳು ಹೇಳಿ ಜನ ಈ ರೀತಿಯ ಉಪದೇಶ ಕೇಳಬೇಕಾಗುತ್ತಿರಲಿಲ್ಲ. ಅಂಥ ಅಕಲಾತ್ಮಕ ಸುಳ್ಳೊಂದನ್ನು ಕೇಳಿ. ಯಾರೋ ಹಿರಿಯ ಅಧಿಕಾರಿ ತಮ್ಮ ಬಳಿ ಕೆಲಸ ಬೇಡಲು ಬಂದ ಒಬ್ಬ ತರುಣನನ್ನು ಸಂದರ್ಶನದಲ್ಲಿ ಕೇಳಿದರಂತೆ.

"ಬೀಡಿ, ಸಿಗರೇಟಿನ ಚಟವಿದೆಯೆ?"

"ಇಲ್ಲ"

"ಕುಡಿಯುವ ಚಟವಿದೆಯೇ?"

"ಇಲ್ಲ"

"ತಿನ್ನುವುದು?"

"ಇಲ್ಲ"

"ಜೂಜಾಟ?"

"ಇಲ್ಲ"

"ಕ್ಲಬ್ಬು, ಕ್ಯಾಬರೆ?"

"ಇಲ್ಲ"

"ಲಂಚದ ಅಭ್ಯಾಸವಿದೆಯೆ?"

"ಇಲ್ಲ!"

ಅವನ ಉತ್ತರದಿಂದ ಸುಪ್ರೀತರಾದ ಅವರು ಇನ್ನೇನು ಅವನನ್ನು ಕೆಲಸಕ್ಕೆ ಆಯ್ಕೆ ಮಾಡಿಬಿಡಬೇಕೆಂದು ಕೊನೆಯ ಪ್ರಶ್ನೆ ಕೇಳಿದರಂತೆ.

"ಸುಳ್ಳು ಹೇಳುವ ಅಭ್ಯಾಸವಿದೆಯೆ?"

ಆಗ ಇದ್ದಕ್ಕಿದ್ದ ಹಾಗೆ ಆ ತರುಣನ ಸತ್ಯನಿಷ್ಠೆ ಜಾಗೃತವಾಯಿತು. ಅವನು ಹೇಳಿದ, "ಆಗೊಮ್ಮೆ ಈಗೊಮ್ಮೆ ಕೊಂಚ ಉಂಟು."

ಇಂಥ ಎಡವಟ್ಟಿನಿಂದಾಗಿ ಅವನಿಗೆ ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ.

ಇದರಿಂದ ಒಂದು ಮಾತಂತೂ ನಿಜ ಸುಳ್ಳು ಹೇಳುವುದು ಒಂದು ಕಲೆ. ಅದನ್ನು ಯಾವಾಗ ಹೇಳಬೇಕು, ಎಷ್ಟು ಹೇಳಬೇಕು, ಹೇಗೆ ಹೇಳಬೇಕು ಎಂಬುದರ

ಪರಿಜ್ಞಾನವಿಲ್ಲದಿದ್ದರೆ ಇಂಥ ಆಭಾಸವಾದೀತು. ಇದು ಆಭಾಸವಲ್ಲ, ಬಾಲಿಶ, ತಿಳಿಗೇಡಿತನ. ಮಕ್ಕಳು ಹೀಗೆ ಹೇಳಿದರೆ ಅವರ ಮುಗ್ಧತೆಯಿಂದಾಗಿ, ಅಬೋಧತೆ ಯಿಂದಾಗಿ. ಅದರಲ್ಲೇ ಒಂದು ಚೆಲುವು ತಲೆದೋರುತ್ತದೆ. ಒಮ್ಮೆ ಒಬ್ಬ ಶಾಲಾ ಬಾಲಕ ತಮ್ಮ ಶಾಲೆಯ ಹೆಡ್‌ಮಾಸ್ಟರಿಗೆ ಫೋನ್ ಮಾಡಿದನಂತೆ, "ಸರ್, ನಮ್ಮ ಹುಡುಗ ರಮೇಶನಿಗೆ ಜ್ವರ. ಅವನು ಹಾಸಿಗೆ ಹಿಡಿದಿದ್ದಾನೆ. ಅವನಿಗೆ ಎರಡು ದಿನ ರಜಾ ಕೊಡಿ."

ಮಾತಿನ ದನಿ ಕೇಳಿ ಆ ಹೆಡ್‌ಮಾಸ್ಟರಿಗೆ ಯಾಕೋ ಅನುಮಾನ ಬಂತು. 'ಯಾರು ಮಾತನಾಡುತ್ತಿರುವುದು ?' ಅವರು ಕೇಳಿದರು.

ಅವನು ಹೇಳಿದ 'ನಮ್ಮ ತಂದೆ !'

ಹೆಡ್‌ಮಾಸ್ಟರ ಕೊಠಡಿಯಲ್ಲಿದ್ದ ಇಡೀ ಅಧ್ಯಾಪಕವೃಂದ ಅದನ್ನು ಕೇಳಿ ಬಿದ್ದು ಬಿದ್ದು ನಕ್ಕಿತು. ಸುಳ್ಳನ್ನು ಕಲೆಯಾಗಿ ಅಭ್ಯಾಸಮಾಡದಿದ್ದುದರಿಂದ ಇಂಥ ಆಭಾಸ ಗಳಾಗುತ್ತವೆ. ಹಾಗಾದರೆ ಆ ಕಳ್ಳನ ಮಗ ಇಂಥ ಅಭ್ಯಾಸಮಾಡಿದ್ದನೆ—ಎಂದು ಕೇಳಬಹುದು. ಅದು ಜನ್ಮಜಾತ ಪ್ರತಿಭೆ. ಅದಿಲ್ಲದವರು ಮಾತ್ರ ಅಭ್ಯಾಸ ಮಾಡಬೇಕು.

ಯುಧಿಷ್ಠಿರ ಅಂಥ ಪ್ರತಿಭಾವಂತನಲ್ಲ. ಆದರೆ ಅವನ ಬಾಯಿಂದ ಸುಳ್ಳು ಹೇಳಿಸಬೇಕಾಯಿತು. ಕೊನೆಗೆ ಕೃಷ್ಣನೇ ಅವನಿಗೆ ಈ ಕಲೆಯ ತರಬೇತಿ ನೀಡ ಬೇಕಾಯಿತು. ಆಗಲೂ ಅವನು 'ಅಶ್ವತ್ಥಾಮೋ ಹತಃಕುಂಜರಃ' ಎಂದು ತೊದಲಿದ. ಸದ್ಯ ಅವನು ನಮ್ಮ ಈ ಸಂದರ್ಶನದ ತರುಣನಂತೆ, ಇಲ್ಲವೆ ಶಾಲಾ ಬಾಲಕನಂತೆ ಎಡವಟ್ಟು ಮಾಡಿಕೊಳ್ಳಲಿಲ್ಲವಲ್ಲ ! ಹಾಗೆ ಆಭಾಸವಾಗದಿರಲೆಂದೇ ಕೃಷ್ಣ ಅವನಿಗೆ ಟ್ರೈನಿಂಗ್ ಕೊಟ್ಟದ್ದು. ಅಂತೂ ಧರ್ಮರಾಯ ನಪಾಸ್ ಆಗಲಿಲ್ಲ.

ಧರ್ಮರಾಯ ಸುಳ್ಳು ಹೇಳಲಿಲ್ಲ, ಆದರೆ ವಸ್ತುಸ್ಥಿತಿಯನ್ನು ಮರೆಮಾಚಿದ ಅಷ್ಟೆ ಎನ್ನಬಹುದು. ವಸ್ತುಸ್ಥಿತಿಯನ್ನು ಮರೆಮಾಚುವುದು ಮತ್ತು ಸುಳ್ಳು ಹೇಳು ವುದು ಎರಡಕ್ಕೂ ಹೆಚ್ಚು ಅಂತರವಿಲ್ಲ, ಅಳಿಯ ಅಲ್ಲ ಮಗಳ ಗಂಡ ಎನ್ನುವಂತೆ.

ಸುಳ್ಳುಹೇಳುವ ಈ ಕಲೆಯನ್ನು ಕೆಲವರು ಎಷ್ಟರಮಟ್ಟಿಗೆ ಮೈಗೂಡಿಸಿ ಕೊಂಡಿರುತ್ತಾರೆಂದರೆ ಅದು ಅವರ ರಾಷ್ಟ್ರೀಯ ಗುಣವೋ ಎನ್ನುವಂತೆ ವಿಜೃಂಭಿಸು ತ್ತದೆ. ಒಮ್ಮೆ ಬ್ರಿಟನ್ನಿನ ಪ್ರಧಾನ ಮಂತ್ರಿ ಬಾಲ್ಡ್‌ವಿನ್ ಅಮೆರಿಕಾದ ಚಿಕಾಗೊ ನಗರದ ಒಬ್ಬ ಕೋಟ್ಯಾಧೀಶನ ಗೌರವಾರ್ಥವಾಗಿ ಒಂದು ಔತಣಕೂಟವನ್ನು ನೀಡಿದ ನಂತೆ. ಊಟದಲ್ಲಿ ವಿನೋದವಾಗಿ ಮಾತನಾಡುತ್ತ ಬಾಲ್ಡ್‌ವಿನ್ ಹೇಳಿದನಂತೆ, "ಇಂದು ಯಾರೇ ಆಗಲಿ ಒಂದು ಹೊಸ ವಿಷಯವನ್ನು ನನಗೆ ತಿಳಿಸಿದರೆ ಅವರಿಗೆ ಹತ್ತುಸಾವಿರ ಪೌಂಡ್ ಬಹುಮಾನ ನೀಡುತ್ತೇನೆ."

ಅದನ್ನು ಕೇಳಿ ಆ ಕೋಟ್ಯಾಧೀಶ ವ್ಯಾಪಾರಿ ಹೇಳಿದನಂತೆ, "ಒಮ್ಮೆ ಚಿಕಾಗೋ ನಗರದ ಒಬ್ಬ ಸುಸಭ್ಯ ಅಮೆರಿಕೀಯ...." ಅವನು ಮಾತು ಮುಂದುವರಿಸುವುದರಲ್ಲೇ

ಅವನನ್ನು ತಡೆಯುತ್ತ 'ಹತ್ತು ಸಾವಿರ ಪೌಂಡ್'ನ ಚೆಕ್ಕನ್ನು ಬರೆದುಕೊಟ್ಟು ಬಾಲ್ಡ್ವಿನ್ ಹೇಳಿದನಂತೆ, "ಸಾಕು, ಸಾಕು, ಇನ್ನೇನೂ ಹೇಳಬೇಕಿಲ್ಲ, ಇಗೋ ಕೊಳ್ಳಿ!"

ಕೋಟ್ಯಾಧೀಶ ಹೇಳಿದ, "ನನ್ನ ಮಾತನ್ನು ಪೂರ್ತಿ ಕೇಳಿ."

ಬಾಲ್ಡ್ವಿನ್ ಹೇಳಿದ, "ಇನ್ನು ಕೇಳಲು ಏನು ತಾನೆ ಉಳಿದಿದೆ? ಇದಕ್ಕಿಂತಲೂ ಸುಳ್ಳು ಬೇರೆ ಇದ್ದೀತು? ಅದರಲ್ಲೂ ಒಬ್ಬ ಅಮೆರಿಕೀಯ, ವಿಗಿಲಾಗಿ ಚಿಕಾಗೋ ನಿವಾಸಿ, ಅದು ಸಾಲದೆಂಬಂತೆ ಅವನು ಸುಸಭ್ಯ!"

'ಒಳ್ಳೆಯ ಮಾತಿಗೆ ಸುಳ್ಳೇ ಪ್ರಧಾನ' ಎಂಬ ಗಾದೆಯಿದೆ. ಆದ್ದರಿಂದಲೋ ಏನೋ ನಮ್ಮಲ್ಲಿ 'ನ ಭ್ರೂಯಾತ್ ಸತ್ಯಮಪ್ರಿಯಮ್' ಎಂದು ಹೇಳಿದೆ. ಹೀಗಾಗಿ ನಮ್ಮ ವೈದ್ಯರು, ವಕೀಲರು ತಮ್ಮ ವರಮಾನಕ್ಕೆ ಮೋಸಬೀಳುವುದೆಂದಲ್ಲ, ತಮ್ಮ ಗ್ರಾಹಕರಿಗೆ ಅಪ್ರಿಯವಾದೀತೋ ಎಂದು ಹೆದರಿ ಸುಳ್ಳು ಹೇಳುವುದಿಲ್ಲ, ಅಪ್ರಿಯ ಸತ್ಯವನ್ನು ಮರೆಮಾಚುತ್ತಾರೆ. ಇನ್ನೂ ನಮ್ಮ ಬಟ್ಟೆಯನ್ನೇ ಕತ್ತರಿಸದ ದರ್ಜಿ ಕಾಜಾ ಹಾಕುತ್ತಿದ್ದಾರೆ ಎಂದು ಹೇಳುವಾಗ, ನಿಮ್ಮ ಬಟ್ಟೆಯನ್ನು ಉಬ್ಬೆಗೆ ಹಾಕದೆ ಯಾರಿಗೋ ಬಾಡಿಗೆಗೆ ಕೊಟ್ಟಿರುವ ಅಗಸ ಇನ್ನೇನು ಬಿಸಿಲಿನಲ್ಲಿ ಒಣಗುತ್ತಿದೆ ಎಂದು ಹೇಳುವಾಗ ಅವರು ಹೇಳುವುದು ಸುಳ್ಳಲ್ಲ, ಅಪ್ರಿಯ ಸತ್ಯದಿಂದ ನಮಗಾಗುವ ಹೃದಯಾಘಾತವನ್ನು ತಪ್ಪಿಸುವ ಮಹಾಮಂತ್ರ.

ಇದೇ ರೀತಿ ಹೆಂಡತಿ ಕೇಳಿದ ಸೀರೆಯನ್ನು ಕೊಂಡುಕೊಡಲು ನಮ್ಮಲ್ಲಿ ಹಣ ಇರುವುದಿಲ್ಲ. ಆದರೆ ಅದನ್ನು ಒಪ್ಪಿಕೊಳ್ಳದೆ ಬಿಗುಮಾನದಿಂದ ಸುಳ್ಳು ಹೇಳಬೇಕಾಗುತ್ತದೆ. ವ್ಯಾಪಾರಮಾಡಲು ನನಗೆ ಬರುವುದಿಲ್ಲವೆಂದು ನನ್ನ ಹೆಂಡತಿಯ ತೀರ್ಮಾನ. ಒಮ್ಮೆ ಬನಾರಸಿನಿಂದ ಒಳ್ಳೆಯ ಸೀರೆ ತಂದುಕೊಟ್ಟೆ. ಅದರ ಬೆಲೆ ಕೇಳಿ ಆಕೆ ಹೇಳಿದಳು, 'ಇದೇ ಸೀರೆ ಬೆಂಗಳೂರಿನಲ್ಲಿ ಇನ್ನೂ ನೂರು ರೂಪಾಯಿ ಕಡಿಮೆ ಬೆಲೆಗೆ ಸಿಗುತ್ತಿತ್ತು'. ಕಾಶಿಯಲ್ಲಿ ಮೋಸಹೋದಿರಲ್ಲ ಎಂಬ ಸಹಾನುಭೂತಿಯ ಒಗ್ಗರಣೆ ಬೇರೆ. ಇದರ ಫಲವಾಗಿ ನಾನು ಹೆಚ್ಚು ಬೆಲೆಕೊಟ್ಟು ತಂದ ಪದಾರ್ಥಗಳ ಬೆಲೆತಗ್ಗಿಸಿ ಹೇಳಿ ಆಕೆಯಿಂದ ಶಹಬಾಸಗಿರಿ ಪಡೆಯಲು ಯತ್ನಿಸಿದ್ದೇನೆ. ನಾನು ತಂದ ಪದಾರ್ಥದ ಬೆಲೆ ಹೀಗಾದರೆ ತಾನು ತಂದ ಪದಾರ್ಥಕ್ಕೆ ತಾನು ತುಂಬ ಕಡಿಮೆ ಹಣಕೊಟ್ಟಿರುವುದಾಗಿಯೂ ಆದ್ದರಿಂದ 300 ಕೊಟ್ಟ ಸೀರೆಗೆ 500 ಕೊಟ್ಟೆವು ಎಂದು ಹೇಳಿ ಎಂದು ಎಲ್ಲರಿಗೂ ಗಿಳಿಪಾಠ ಬೇರೆ. ಆದೇ ರೀತಿ ಪಕ್ಕದ ಮನೆಯಾಕೆ ತಂದ ಸೀರೆಗೆ ಆಕೆ ಏನೇ ಹೇಳಲಿ ಆಕೆ ಹೇಳಿದ ಬೆಲೆಯನ್ನು ಈಕೆ ಒಪ್ಪಿಕೊಳ್ಳಲು ಸಿದ್ಧವಿಲ್ಲ. ಕಳ್ಳನ ಹೆಜ್ಜೆ ಕಳ್ಳನೇ ಬಲ್ಲನಲ್ಲವೆ?

ಹೆಂಡತಿಯ ಹಣೆಯ ಬರಹ ಹೀಗಾದರೆ ತಾಯಿಯ ಕಥೆಯೋ ಬೇರೆ. ಒಮ್ಮೆ ಒಂದು ಶರ್ಟ್ ಹೊಲಿಸಲು ನಾನು ಹದಿನೆಂಟು ರೂಪಾಯಿ ಕೂಲಿಕೊಟ್ಟೆ. ಅದನ್ನು ಕೇಳಿ ನಮ್ಮ ತಾಯಿ, ಹೀಗೂ ಉಂಟೆ ಇದೆಂಥ ದುಂದುವೆಚ್ಚವಪ್ಪ! ಎಂದು ಹಲುಬಿದರೆ

ನನ್ನ ಹೆಂಡತಿ ' ಗಟ್ಟಿಯಾಗಿ ಮಾತನಾಡಬೇಡಿ ಪಕ್ಕದ ಮನೆಯವರ ಕಿವಿಗೆ ಬಿದ್ದರೆ ಇದೆಂಥ ಸಸ್ತ್ರಮಂದಿ ಎಂದುಕೊಂಡಾರು, ಯಾರಾದರೂ ಕೇಳಿದರೆ ಇಪ್ಪತ್ತೈದು ಕೊಟ್ಟೆ ಎನ್ನಿ' ಎಂದು ಹೇಳಿಕೊಟ್ಟಳು. ಗಂಡಹೆಂಡಿರ ಜಗಳದಲ್ಲಿ ಮಗು ಬಡವಾದರೆ ಅತ್ತೆ ಸೊಸೆಯರ ಜಗಳದಲ್ಲಿ ಮಗ ಬಡವಾದ!

ಮನೆಯಲ್ಲಿ ಸಿನಿಮಾಕ್ಕೆ ಕರೆದುಕೊಂಡು ಹೋಗುತ್ತೇನೆ, ತಯಾರಾಗಿರು ಎಂದು ಹೇಳಿ ಹೋಗಿದ್ದರೆ ಅಲ್ಲಿ ನನ್ನ ಬಾಲ್ಯಮಿತ್ರ ಅಪರೂಪಕ್ಕೆ ಬಂದ. ಅವನೊಡನೆ ಕಂಟೋನ್ಮೆಂಟ್ ತಿರುಗಿ ರಾತ್ರಿ ಹತ್ತಕ್ಕೆ ಮನೆಗೆ ಮರಳಿದಾಗ ಮಡದಿ ದುರ್ಗಾವತಾರ ತಾಳಿದ್ದಳು. ಆಗ ಸತ್ಯ ಹೇಳಿದ್ದರೆ ಉಳಿಯಲು ಸಾಧ್ಯವಾಗುತ್ತಿತ್ತೆ?

ಸುಳ್ಳು ಹೇಳುವ ಶಕ್ತಿಯಿಲ್ಲದಿದ್ದರೆ ಎಂಥೆಂಥ ವಾಗ್ಮಿಗಳೂ ನೀರಸರಾಗುತ್ತಾರೆ, ಮಂಕಾಗುತ್ತಾರೆ. ನಮ್ಮ ಕಾಲೇಜಿಗೆ ಒಮ್ಮೆ ಒಬ್ಬ ಸಾಹಿತಿಗಳನ್ನು ಭಾಷಣಕ್ಕೆ ಕರೆಸಿದ್ದೆವು, ಅವರು ಜೂಲಿಯನ್ ಹಕ್ಸ್ಲಿಯ ಮಾತನ್ನು ಉದ್ಧರಿಸುತ್ತ ಅತ್ಯಂತ ಪ್ರಭಾವಿಯಾಗಿ ಮಾತನಾಡಿದರು. ಮತ್ತೆ ಅದೇ ಸಾಹಿತಿ ಮೂರು ವರ್ಷದ ತರುವಾಯ ಬಂದರು. ಅದೇ ಟೇಪು!

ಇದೇನು ಇವರ ಬಳಿ ಬೇರೇನೂ ಸರಕಿಲ್ಲವೆ? ಎಂದು ನಾವು ಗೆಳೆಯರು ನಮ್ಮ ನಮ್ಮಲ್ಲಿ ಕೇಳಿಕೊಂಡೆವು. ಆಗ ನಮ್ಮ ಗೆಳೆಯರೊಬ್ಬರು ಹೇಳಿದರು, "ಅವರು ಹೇಳುತ್ತಿರುವುದು ಸತ್ಯ; ಮತ್ತು ಸತ್ಯ ತ್ರಿಕಾಲಾಬಾಧಿತವಾದುದು. ಮೂರು ವರ್ಷಗಳ ಹಿಂದಣ ಸತ್ಯ ಈಗೇಕೆ ಬದಲಾಗುತ್ತದೆ? ಇನ್ನೂ ಮೂರು ವರ್ಷವಾದ ಮೇಲೂ ಅವರಿಂದ ಇದೇ ಮಾತು ಬಂದರೆ ಅಚ್ಚರಿಪಡಬೇಡಿ. ಅದೂ ಅಲ್ಲದೆ ಪ್ರತಿ ವರ್ಷವೂ ವಿದ್ಯಾರ್ಥಿಗಳು ಬದಲಾಗುತ್ತಾರೆ. ಟೇಪು ಒಂದೇ ಆದರೂ ವಿದ್ಯಾರ್ಥಿಗಳು ಹೊಸಬರು, ಅಧ್ಯಾಪಕರಾದ ನೀವು ಹಳಬರು! ನಿಮ್ಮನ್ನು ಭಾಷಣಕ್ಕೆ ಬನ್ನಿ ಎಂದು ಯಾರು ಕರೆದರು?"

ಅಂತೂ ಅಂದಿನಿಂದ ನಾನು ಯಾರದಾದರೂ ಭಾಷಣಕ್ಕೆ ಹೋಗಲು ಹಿಂದೆ ಮುಂದೆ ನೋಡತೊಡಗಿದೆ; ಅದರಲ್ಲೂ ಇಂಥ ಸತ್ಯವಾದಿಗಳ ಭಾಷಣಕ್ಕೆ! ಹಾಗಾದರೆ ನಿತ್ಯನೂತನವಾಗಿರಬೇಕಾದರೆ ಸುಳ್ಳು ಹೇಳಬೇಕು ಎಂದಂತಾಯಿತು. ನಿತ್ಯನೂತನವೇ ಅಲ್ಲ ನಿತ್ಯ ಬಾಳಬೇಕಾದರೆ, ನಮ್ಮ ನಿತ್ಯಯಾತ್ರೆ ಸಾಗಬೇಕಾದರೆ ಸುಳ್ಳು ಬೇಕೇ ಬೇಕು. ನಾವು ಮನೆಯಲ್ಲಿರುವಾಗ ನಮಗೆ ಸಾಲಕೊಟ್ಟಾತ ಬರುತ್ತಾನೆ. ಆಗ ನಾವು ಮನೆಯಲ್ಲಿ ಇದ್ದೂ 'ಇಲ್ಲ'ವಾಗದಿದ್ದರೆ ನಮ್ಮ ಉಳಿವಿಗೇ ಸಂಚಕಾರ. ನಿಮ್ಮ ಆಫೀಸಿನಲ್ಲಿ ನಿಮ್ಮ ಪಿ.ಎ. ಸುರಸುಂದರಿ, ಆ ಬಗೆಗೆ ನಿಮ್ಮ ಪತ್ನಿ ಕೇಳಿದಾಗ ನೀವೇನು ಹೇಳಬೇಕು? ಆಕೆ ಶೂರ್ಪನಖಿಯ ಅಕ್ಕ, ತಾಟಕಿಯ ತಂಗಿ ಎಂದು ಹೇಳದೆ ವಿಧಿಯಿಲ್ಲ.

ಏನಾದರೂ ಆಗಲಿ ಸುಳ್ಳು ಹೇಳುವುದು ಒಂದು ಕಲೆ ಎನ್ನುವುದು ನಿರ್ವಿವಾದ. ಈ ಕಲೆಯಲ್ಲಿ ಸಿದ್ಧಿಪಡೆಯಲು ಉಳಿದ ಕಲೆಗಳಲ್ಲಿ ಸಿದ್ಧಿಗೆ ಮಾಡಬೇಕಾದ ಕೃಷಿಯನ್ನು, ಗಳಿಸಬೇಕಾದ ಶಕ್ತಿಯನ್ನು ಇದಕ್ಕೂ ಗಳಿಸಿಕೊಳ್ಳಬೇಕಾಗುತ್ತದೆ. ಈಗ ಈ ಶಕ್ತಿ

ಗಳಾವುವು ಎನ್ನುವುದನ್ನು ನೋಡೋಣ. ಕಲ್ಪನಾಶಕ್ತಿ, ಸ್ಮರಣಶಕ್ತಿ ಮತ್ತು ಅಭಿವ್ಯಂಜನಾಶಕ್ತಿ. ಈ ಮೂರೂ ಮುಪ್ಪುರಿಗೊಂಡಾಗ ಸುಳ್ಳಿನ ರಥ ರಾರಾಜಿಸುತ್ತದೆ.

ಕಲ್ಪನಾಶಕ್ತಿ ಕವಿಗಳ ಸಂಪತ್ತಿ. ಕವಿಗಳೆಲ್ಲ ಸುಳ್ಳರು, ಬಹುದೊಡ್ಡ ಸುಳ್ಳರು ಎಂಬುದನ್ನು ನೇಮಿಚಂದ್ರ ಹೀಗೆ ಹೇಳುತ್ತಾನೆ :

" ಕಟ್ಟುಗೆ ಕಟ್ಟದಿರ್ಕೆ ಕಡಲಂ ಕಪಿಸಂತತಿ ವಾಮನಕ್ರಮಂ
ಮುಟ್ಟುಗೆ ಮುಟ್ಟದಿರ್ಕೆ ಮುಗಿಲಂ ಹರಸಂ ನರನೊತ್ತಿ ಗಂಟಲಂ ।
ಮೆಟ್ಟುಗೆ ಮೆಟ್ಟದಿರ್ಕೆ ಕವಿಗಳ್ ಕೃತಿಬಂಧದೊಳಲ್ಲಿ ಕಟ್ಟಿದರ್
ಮುಟ್ಟಿದರೊತ್ತಿ ಮೆಟ್ಟಿದರದೇನಗ್ಗಳಮೋ ಕವೀಂದ್ರರಾ ॥
ಮರನೀಗುಂ ಮಣಿಯೀಗುಮೆಂದು ಪಶುವೀಗುಂ ಕೇಳಿಮೆಂದೋಳಿಯೊಳ್ ।
ಪುರಮಂ ಪುಟ್ಟಿಸಿ ಕಾಪ್ಪುಮಂ ಕೊನರಿಪರ್ ಕಲ್ಲಲ್ಲಿ ನಾರೆತ್ತುವರ್
ಮರುಳಂ ಪೋಪುರುಳಾಗಿಪರ್ ಕವಿಗಳೊಳ್ ಪೀಯೂಷಮಂ ಪಿಂಡಲು
ರ್ವರೆಯೊಳ್ ಸಂದ ಕವಿಪ್ರವರೇಕರೆವಲಂ ಬಲ್ಲರ್ ಪೆಜರ್ ಬಲ್ಲರೇ ? "

ಮರುಳನ್ನು ಪುರುಳಾಗಿ ಮಾಡುವ ಕವಿಗಳು ಸುಳ್ಳರಲ್ಲದೆ ಬೇರಾರು ಸುಳ್ಳರು ? ಕವಿಸಮಯವೊಂದು ಸುಳ್ಳಿನಬೊಂತೆ. ಸುಂದರಿಯರ ಚರಣತಾಡನದಿಂದ ಅಶೋಕವೃಕ್ಷ ಚಿಗುರುವುದು, ಹೂ ಬಿಡುವುದು, ಚಂದ್ರಿಕೆಯನ್ನು ಪಾನಮಾಡುವ ಚಕೋರ, ಹಾಲು ನೀರನ್ನು ಬೇರ್ಪಡಿಸುವ ಹಂಸ ಇವೆಲ್ಲ ಸುಳ್ಳಿನ ಬಳ್ಳಿಗಳೇ ಸರಿ, ಚಮತ್ಕಾರವೇ ತಾನೆ! ಇವು ಅವಿಚಾರಿತ ರಮಣೀಯ, ಇವುಗಳಲ್ಲಿ ಚಾರುತ್ವವಿದೆ ಎನ್ನುವುದನ್ನು ಒಪ್ಪುವುದಾದರೆ ಸುಳ್ಳಿನಲ್ಲೂ ಚಾರುತ್ವವಿದೆ ಎಂದು ಒಪ್ಪಿಕೊಳ್ಳಲೇಬೇಕು. ಸಾಹಿತ್ಯವೇ ಅಲ್ಲ ಇತಿಹಾಸ, ಪುರಾಣಗಳೂ ಸುಳ್ಳಿನ ಸರಮಾಲೆ ಎಂದು ಒಬ್ಬ ಆಂಗ್ಲ ಸಾಹಿತಿ ಹೇಳಿದ್ದಾನೆ. " In history nothing is true excepting the names & dates. In literature everything is true excepting names & dates." ನೇಮಿಚಂದ್ರನ ಮಾತನ್ನು ದಾಸವರೇಣ್ಯರಾದ ಪುರಂದರದಾಸರು ಸಮರ್ಥಿಸುತ್ತಾರೆ. ಅವರೊಬ್ಬ ದೊಡ್ಡ ಸುಳ್ಳುಗಾರರು. ಅವರು ಹೇಳುವ ಸುಳ್ಳನ್ನು ಕೇಳಿ :

ಸುಳ್ಳು ನಮ್ಮಲ್ಲಿಲ್ಲವಯ್ಯ । ಸುಳ್ಳು ನಮ್ಮಲ್ಲಿಲ್ಲ ॥
ಇಲಿಯು ಒಲೆಯ ಚಾಚ್ಚದ ಕಂಡೆ । ಬೆಕ್ಕು ಭಕ್ತಿಮಾಡ್ವುದ ಕಂಡೆ ॥

ಇವೆಲ್ಲ ಮಹಾಚೇತನಗಳು ಹೇಳುವ ಮಹಾಸುಳ್ಳುಗಳು. ಅದನ್ನು ಹೇಳಿಕೊಡುವ ಶಕ್ತಿ ನನಗಿಲ್ಲ. ಏನಿದ್ದರೂ ಸಣ್ಣ ಸುಳ್ಳಿನ ಬಗೆಗೆ ಹೇಳಬಲ್ಲ ಶ್ರೀಸಾಮಾನ್ಯ ನಾನು.

" ಯೋಗಃ ಕರ್ಮಸು ಕೌಶಲಮ್ " ಎಂದು ಗೀತೆಯಲ್ಲಿ ಹೇಳಿದೆ. ಆದ್ದರಿಂದ ಯೋಗಿ ಇಲ್ಲವೆ ಪ್ರತಿಭಾಸಂಪನ್ನ ವ್ಯಕ್ತಿ ಮಾತ್ರ ಸುಳ್ಳು ಹೇಳುವ ಸಾಹಸಕ್ಕೆ ಕೈಹಾಕಬಲ್ಲ. ಅವನಲ್ಲಿ ಕಲ್ಪನಾಶಕ್ತಿ ಇಲ್ಲದಿದ್ದರೆ ಅವನು ಕಥೆ ಕಟ್ಟಲಾರ, ಅಭಿವ್ಯಂಜನಾಶಕ್ತಿ ಇಲ್ಲದಿದ್ದರೆ ನಿಜದ ತಲೆಯ ಮೇಲೆ ಹೊಡೆದಂತೆ ನುಡಿಯಲಾರ; ಸ್ಮರಣಶಕ್ತಿ ಊನವಾದರೆ ಅವನು ಸಿಕ್ಕಿಬೀಳುವನು. ಅದಕ್ಕಾಗಿಯೇ ಗಾಂಧೀಜಿ

ಹೇಳಿದ್ದು—ಸತ್ಯ ಹೇಳಲು ಸ್ಮರಣಶಕ್ತಿ ಬೇಕಿಲ್ಲ ಎಂದು. ಅದೇ ಸುಳ್ಳುಗಾರ ತನ್ನ ಸ್ಮರಣಶಕ್ತಿಯನ್ನು ಸಾಣೆಹಿಡಿದು ಇಟ್ಟುಕೊಂಡಿರಬೇಕಾಗುತ್ತದೆ. ಸುಳ್ಳು ಹೇಳುವುದೊಂದು ಅಸಿಧಾರಾವ್ರತ. ನೆನಪು ಕೊಂಚ ಅತ್ತ ಇತ್ತ ಆದರೆ ಅವನು ರಸಾತಳದ ತಳಕ್ಕೆ ಇಳಿದಾನು !

ಈ ಕಲೆಗೆ ವಸ್ತುವಿನ ಬರವಿಲ್ಲ, ಶೈಲಿಯ ಮಿತಿಯಿಲ್ಲ. 'ಶೀಲವೇ ಶೈಲಿ' ಎನ್ನುವುದನ್ನು ನೋಡಬೇಕಾದರೆ ಸುಳ್ಳು ಹೇಳುವವನ ಶೈಲಿಯನ್ನು ನೋಡಬೇಕು ಪ್ರತಿಯೊಂದು ಸುಳ್ಳಿನಲ್ಲೂ ಆತನ ವ್ಯಕ್ತಿತ್ವ ಇಣಕಿ ಮಿಣುಕುತ್ತಿರುತ್ತದೆ.

ಈ ಕಲೆಯ ವಸ್ತು ಅಪರಿಮಿತವೆಂದರೂ ಅಧ್ಯಯನದ ದೃಷ್ಟಿಯಿಂದ ಸುಳ್ಳನ್ನು ಮೂರು ವಿಧವಾಗಿ ವಿಂಗಡಿಸಬಹುದು, ಶುದ್ಧಸುಳ್ಳು ಇಲ್ಲವೆ ಬಿಳಿಯ ಸುಳ್ಳು, ಅಶುದ್ಧ ಸುಳ್ಳು ಇಲ್ಲವೆ ಕಪ್ಪುಸುಳ್ಳು ಮತ್ತು ಮಿಶ್ರಿತಸುಳ್ಳು ಇಲ್ಲವೆ ಸಂಜೆಸುಳ್ಳು. ಶುದ್ಧಸುಳ್ಳಿನಲ್ಲಿ ಕಲ್ಪನೆಯ ಪ್ರಮಾಣ ಹೆಚ್ಚಿರುತ್ತದೆ. ಏಳುಮಲ್ಲಿಗೆ ಹೂವಿನ ತೂಕದ ರಾಜಕುಮಾರಿಯಂಥ ಕಥೆಗಳು ಇದಕ್ಕೆ ನಿದರ್ಶನ. ಅಶುದ್ಧ ಸುಳ್ಳಿಗೆ ಸ್ಮರಣಶಕ್ತಿ ಚೆನ್ನಾಗಿದ್ದರೆ ಸಾಕು. ಮಿಶ್ರಿತ ಸುಳ್ಳು ಇಲ್ಲವೆ ಸಂಜೆ ಸುಳ್ಳಿನಲ್ಲಿ ಮೂರೂ ಶಕ್ತಿಗಳು ಮುಪ್ಪುರಿ ಗೊಂಡಿರುತ್ತವೆ. ಮಹಾ ಕವಿಗಳ ಕಾವ್ಯಗಳು ಸಂಜೆಸುಳ್ಳಿನ ಉಜ್ವಲ ನಿದರ್ಶನಗಳು.

"ಕಾವ್ಯಂ ಯಶಸೇ, ಅರ್ಥಕೃತೇ, ವ್ಯವಹಾರವಿದೇ" ಎನ್ನುವಂತೆ ಯಶಸ್ಸಿಗಾಗಿ, ಹಣಕ್ಕಾಗಿ ಸುಳ್ಳು ಹೇಳುವುದೂ ಉಂಟು. "ನಮ್ಮ ಅಳಿಯ ಅಮೆರಿಕಾದಲ್ಲಿ ದೊಡ್ಡ ಕೆಲಸದಲ್ಲಿದ್ದಾನೆ, ಕೈತುಂಬ ಸಂಬಳ ತರುತ್ತಾನೆ" ಎಂದು ಒಬ್ಬರು ಉಬ್ಬುಬ್ಬಿ ಹೇಳಿಕೊಳ್ಳುತ್ತಿದ್ದರು. ನಮ್ಮ ಗೆಳೆಯರೊಬ್ಬರು ಅಲ್ಲಿಗೆ ಹೋದಾಗ ಬಣ್ಣ ಬಯಲಾಯಿತು. ಆತ ಅಮೆರಿಕಾದಲ್ಲಿ ತಟ್ಟೆ ತೊಳೆಯುತ್ತಿದ್ದ. ಆನಂದಕ್ಕಾಗಿ ಸುಳ್ಳು ಹೇಳುವುದರಲ್ಲೂ ಹಲವು ವಿಧ. ಮಹಿಳೆಯರಿಗೆ ತಮ್ಮ ವಯಸ್ಸಿನಲ್ಲಿ ಕಳೆದು ಇತರರ ವಯಸ್ಸಿಗೆ ಅದನ್ನು ಸೇರಿಸುವುದರಲ್ಲಿ ವಿಶೇಷ ಆನಂದ. ಇನ್ನೊಬ್ಬರನ್ನು ಸಂತೋಷಪಡಿಸಲು ಹೇಳುವ ಸುಳ್ಳು ಅಷ್ಟು ಅಪಾಯಕಾರಿಯಲ್ಲ. ಒಮ್ಮೆ ಇಂಜನಿಯರಿಂಗ್ ಕಾಲೇಜಿನ ಅಧ್ಯಾಪಕರೊಬ್ಬರು ಸರ್ವೆಮಾಡಲು ತಮ್ಮ ವಿದ್ಯಾರ್ಥಿಗಳೊಂದಿಗೆ ಯಾವುದೋ ಹಳ್ಳಿಗೆ ಹೋಗಿದ್ದರು. ಹಾಗೇ ಅಲ್ಲಿಯ ದೇವಾಲಯಕ್ಕೆ ಹೋದರು. ಅಲ್ಲಿ ಪೂಜಾರಿ ಮಂತ್ರ ಹೇಳಿದ 'ಸರ್ವೇಜನಾಃ ಸುಖಿನೋಭವಂತು' ಎಂದು. ಅಧ್ಯಾಪಕರು ಹೇಳಿದರು, "ನೋಡ್ರಿ ಈ ಪೂಜಾರಿಗೆ ಎಷ್ಟು ಬುದ್ಧಿ, ಎಷ್ಟು ಒಳ್ಳೆಯವ ! ಸರ್ವೇಜನಾಃ ಎಂದರೆ ಸರ್ವೇಮಾಡಲು ಬಂದ ಜನ ಸುಖವಾಗಿರಲಿ ಎಂದು ಮಂತ್ರ ಹೇಳಿದ"

ಹಣಕ್ಕಾಗಿ ಸುಳ್ಳು ಹೇಳುವುದಂತೂ ಸರ್ವೇಸಾಧಾರಣ. ಸುಳ್ಳಿನ ಅಗತ್ಯ ಇಂದು ಎಂದಿಗಿಂತ ಹೆಚ್ಚಾಗಿದೆ. ಚುನಾವಣೆಗೆ ನಿಲ್ಲುವ ಜನನಾಯಕರು, ಮಂತ್ರಿಗಳು ಆಡಿದ್ದನ್ನೆಲ್ಲ ಮಾಡಹೋದರೆ ಈ ದೇಶ ಉಳಿದೀತೆ? ಆದರೆ ಅವರು ಚುನಾವಣೆ

ಗೆಲ್ಲಬೇಕು, ಮಂತ್ರಿಗಳಾಗಬೇಕು. ವಿರೋಧಪಕ್ಷದ ನಾಯಕರ ಬಾಯಿಮುಚ್ಚಿಸಲು ಮಂತ್ರಿಗಳು ನೀಡುವ ಅಂಕಿ ಅಂಶಗಳು ಸುಳ್ಳಿನ ಅಕ್ಷಯ ತೂಣೀರ.

ನಮ್ಮ ಪರಿಚಿತ ವಿದ್ಯಾರ್ಥಿಯೊಬ್ಬ ಶ್ರೀಮಂತ ಪುತ್ರ, ತಂದೆ ದೊಡ್ಡ ಅಧಿಕಾರಿ. ಆದರೆ ಆ ಅಧಿಕಾರಿ ತಾವು ಬದುಕಿದ್ದೂ ಸತ್ತವರೆನಿಸಿಕೊಂಡು ತಮ್ಮ ಮಗನಿಗೆ ಯಾವಳೋ ಹಿಂದುಳಿದ ಜಾತಿಯ ನರ್ಸ್ ತಾಯಿಯೆಂದು ಹೇಳಿಕೆಕೊಟ್ಟು ಅವನನ್ನು ಅನಾಥನನ್ನಾಗಿಮಾಡಿ ಮೆಡಿಕಲ್ ಕಾಲೇಜಿನಲ್ಲಿ ಸೀಟ್ ಗಿಟ್ಟಿಸಿಕೊಂಡರು. ಅವರ ಮೇಧಾವಿತನವನ್ನು ನೋಡಿದಾಗ ನಮ್ಮ ದೇಶಕ್ಕೆ ಉಜ್ವಲ ಭವಿಷ್ಯವಿದೆಯೆಂದು ಕೊಂಡೆ.

ಇತ್ತೀಚೆಗೆ ಹಳ್ಳಿಯ ಜನಕ್ಕೂ ಸುಳ್ಳಿನ ಮಹತ್ವದ ಅರಿವಾಗಿದೆ. ಒಂದು ಆಶ್ರಮದಲ್ಲಿ ಬಿಟ್ಟಿದ್ದ ತಮ್ಮ ಮಗನನ್ನು ನೋಡಲು ಬಂದ ಒಬ್ಬ ಹಳ್ಳಿಯ ಸಾಹುಕಾರರು ಅಲ್ಲಿಯ ಸ್ವಾಮಿಗಳನ್ನು ತರಾಟೆಗೆ ತೆಗೆದುಕೊಂಡರಂತೆ, "ಸುಳ್ಳು ಹೇಳಬೇಡ, ಮೋಸಮಾಡಬೇಡ, ಕದಿಯಬೇಡ—ಎಂದೆಲ್ಲ ಹೇಳಿ ನೀವು ನಮ್ಮ ಮಕ್ಕಳನ್ನು ನಿರ್ವೀರ್ಯರನ್ನಾಗಿ, ಅಪ್ರಯೋಜಕರನ್ನಾಗಿ ಮಾಡುತ್ತಿದ್ದೀರಿ. ನಾಳೆ ಅವರು ಬದುಕಬೇಕೋ ಬೇಡವೋ?"

ಅಂತೂ ನಮ್ಮ ರಾಷ್ಟ್ರ ವಿಶ್ವದ ಅಗ್ರಮಾನ್ಯ ರಾಷ್ಟ್ರವಾಗಬೇಕಾದರೆ ನಮ್ಮ ಜನರಲ್ಲಿ ಸುಳ್ಳು ಹೇಳುವ ಶಕ್ತಿ ಹೆಚ್ಚಾಗಬೇಕು. ಶಾಲಾ ಕಾಲೇಜುಗಳಲ್ಲಿ ಸುಳ್ಳು ಹೇಳುವ ಸ್ಪರ್ಧೆಯೇರ್ಪಡಬೇಕು. ಜನತೆಯಲ್ಲಿ ಅತಿದೊಡ್ಡ ಸುಳ್ಳುಹೇಳುವ ವ್ಯಕ್ತಿಗೆ 'ಮಿಥ್ಯಭೂಷಣ' ಮೊದಲಾದ ಪ್ರಶಸ್ತಿ ನೀಡಿ ಗೌರವಿಸಬೇಕು. ಧಾರ್ಮಿಕರೂ ಈ ಸುಳ್ಳಿಗೆ ಹೆಚ್ಚು ಮಹತ್ವನೀಡಿ ಅದರ ಪ್ರಚಾರಕ್ಕೆ ಒಂದು ಆಂದೋಳನವನ್ನೇ ಹೂಡಬೇಕು. 'ಸತ್ಯನಾರಾಯಣನ ಕಥೆ'ಯಂತೆ 'ಮಿಥ್ಯನಾರಾಯಣ'ನ ಕಥೆ ಬರಬೇಕು. ಸತ್ಯ ಹರಿಶ್ಚಂದ್ರ ಸತ್ಯ ಹೇಳಿ ಪಟ್ಟಪಾಡು ಯಾರಿಗೆ ಬೇಕು? ಅದಕ್ಕೆ ಬದಲಾಗಿ ಸುಳ್ಳು ಹೇಳಿ, ಕಾಪಿಹೊಡೆದು ಪರೀಕ್ಷೆಯಲ್ಲಿ ಪಾಸಾದ, ಕೆಲಸ ಗಿಟ್ಟಿಸಿಕೊಂಡ, ಶಿಕ್ಷೆಯಿಂದ ಪಾರಾದ, ಸೀಟು ಗಿಟ್ಟಿಸಿಕೊಂಡ ಮಿಥ್ಯನಾರಾಯಣರ ಕಥೆ ನಮ್ಮ ಮಕ್ಕಳಿಗೆ ನಿತ್ಯಪಾರಾಯಣದ ವಸ್ತುವಾಗಬೇಕು. ಆಗ ನಮ್ಮ ನಾಡಿನಲ್ಲಿ ಹೊನ್ನಿನ ಹೊಳೆ ಹರಿದೀತು, ಜೇನಿನ ಮಳೆ ಕರೆದೀತು!

ನಾನಂತೂ ಸುಳ್ಳು ಹೇಳುವುದಿಲ್ಲ, ಹೇಳಿಲ್ಲ. ಆದರೆ ಸುಳ್ಳೆ ನಮ್ಮ ಮನೆ ದೇವರು.

ಡಾ. ಕೆ. ಕೆಂಪೇಗೌಡ

ಭಾಷಾ ಬೋಧನೆ

ಮಾನವ ಮಾನವರ ನಡುವಿನ ಸಂಪರ್ಕಕ್ಕೆ ಭಾಷೆ ಒಂದು ಮಹತ್ವಪೂರ್ಣವಾದ ಸಾಧನ. ಇದು ಮಾನವಕುಲಕ್ಕೆ ಮಾತ್ರ ಸೀಮಿತವಾದದ್ದು, ಪ್ರಾಣಿಲೋಕಕ್ಕಲ್ಲ. ಮಾನವ ಅಂತರ್‌ಗ್ರಹಗಳ ಕಡೆ ಪ್ರಯಾಣಮಾಡುತ್ತಿರುವ ಇಂದಿನ ಕಾಲದಲ್ಲಿ ತನ್ನ ಪ್ರಗತಿಗೋಸ್ಕರ ಸಾಮಾಜಿಕ ಸಂಪರ್ಕ ಅತ್ಯಾವಶ್ಯಕವಾಗಿದೆ. ಈ ಕಾರಣ ದಿಂದಾಗಿ ಮಾನವ ಹಲವು ಭಾಷೆಗಳನ್ನು ಕಲಿಯುವುದು ಅನಿವಾರ್ಯವಾಗಿದೆ. ಭಾಷೆ ಮಾನವನಿಗೆ ಆನುವಂಶಿಕವಾಗಿ ಲಭಿಸುವ ಬದಲು ಅದು ಅವನಿಗೆ ಸಂಸ್ಕೃತಿಯ ಅಭಿವ್ಯಕ್ತಿಯಾಗಿ ಲಭ್ಯವಾಗುತ್ತಿದೆ. ಇಂತಹ ಭಾಷೆಯನ್ನು ಸಂದರ್ಭ ಹಾಗೂ ಸನ್ನಿವೇಶಗಳಿಗೆ ತಕ್ಕಂತೆ ಮಾತೃಭಾಷೆ (mother tongue), ಸ್ವಭಾಷೆ (native language) ಮತ್ತು ಪರಭಾಷೆ (other tongue) ಇತ್ಯಾದಿಯಾಗಿ ಹೆಸರಿಸಿಕೊಳ್ಳ ಲಾಗುತ್ತಿದೆ.

ಒಬ್ಬ ವ್ಯಕ್ತಿ ಯಾವ ಸಮಾಜದ ಸದಸ್ಯನಾಗಿರುತ್ತಾನೆಯೋ ಆ ಸಮಾಜ ತನ್ನದೇ ಆದ ಒಂದು ಭಾಷೆಯನ್ನು ರೂಪಿಸಿಕೊಂಡಿರುತ್ತದೆ. ಆ ಭಾಷೆ ಅವನಿಗೆ ಮಾತೃಭಾಷೆಯಾಗಬಹುದು, ಅದು ಅವನ ಸ್ವಭಾಷೆಯೂ ಆಗಬಹುದು, ಅದೇ ಅವನ ಪ್ರಥಮ ಭಾಷೆ ಎನಿಸಬಹುದು. ಒಬ್ಬ ವ್ಯಕ್ತಿಯ ಸ್ವಭಾಷೆ ಅವನಿಗ ಅದು ಯಾವಾಗಲೂ ಅವನಿಗೆ ಮಾತೃಭಾಷೆಯೇ ಆಗಿರಬೇಕೆಂಬ ನಿಯಮವೇನೂ ಇಲ್ಲ. ಹೆತ್ತವರಿಂದ, ಸುತ್ತಮುತ್ತಲಿನವರಿಂದ ಶೈಶವಾವಸ್ಥೆಯಿಂದಲೇ ಗಳಿಸಿಕೊಂಡ ಭಾಷೆ ಆ ವ್ಯಕ್ತಿಗೆ ಅದು ಮಾತೃಭಾಷೆಯಾಗುತ್ತದೆ. ಈ ಮಾತೃಭಾಷೆಯ ಜೊತೆಗೆ ತನ್ನ ಪರಿಸರದಲ್ಲಿ ಬಳಕೆಯಲ್ಲಿರುವ ಇತರ ಭಾಷೆಗಳನ್ನು ಅವನು ಕಲಿತು ಬಳಸುವ ಸಾಮರ್ಥ್ಯ ಹೊಂದಿದ್ದರೆ ಅದು ಆ ವ್ಯಕ್ತಿಯ ಸ್ವಭಾಷೆಯಾಗುತ್ತದೆ. ಉದಾಹರಣೆಗೆ ಕೊಂಕಣಿ ಅಥವಾ ಉರ್ದು ಭಾಷೆಯನ್ನು ತಮ್ಮ ಮಾತೃಭಾಷೆಯನ್ನಾಗಿ ಆಡುವವರು ತಮ್ಮ ಪರಿಸರದಲ್ಲಿ ಬಳಕೆಯಲ್ಲಿರುವ ತುಳು ಕನ್ನಡ ಮುಂತಾದ ಭಾಷೆಗಳನ್ನು ತಮ್ಮ ಸ್ವಭಾಷೆಗಳನ್ನಾಗಿ ಮಾಡಿಕೊಂಡಿರುವ ಸಂದರ್ಭಗಳು ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಣದೊರೆಯುತ್ತವೆ.

ಮಾತೃಭಾಷೆಯುಲ್ಲದ್ದು ಸ್ವಭಾಷೆ, ಸ್ವಭಾಷೆಯುಲ್ಲದ್ದು ಅನ್ಯಭಾಷೆ ಅಥವಾ ಪರಭಾಷೆ. ವ್ಯಕ್ತಿ ಅನ್ಯಭಾಷೆಯುನ್ನು ತನ್ನ ಮಾತೃಭಾಷೆ ಅಥವಾ ಸ್ವಭಾಷೆಯುಷ್ಟು ವ್ಯಾಪಕವಾಗಿ ಬಳಸಲಾರ, ಬೇರೊಂದು ಸಮಾಜದ ಸಂಪರ್ಕ ಪಡೆಯಲು, ಅನ್ಯ ಜನರ ಸಂಸ್ಕೃತಿಯುನ್ನು ತಿಳಿಯಲು, ಪರಭಾಷೆಯ ಸಾಹಿತ್ಯ ಹಾಗೂ ವಿಜ್ಞಾನವನ್ನು ಅರಿಯಲು, ಅನ್ಯಭಾಷೆಯ ಜ್ಞಾನ ಅತ್ಯಗತ್ಯವಾಗಿ ಬೇಕಾಗುತ್ತದೆ. ಅನ್ಯಭಾಷಾ ಕಲಿಕೆ ಅಥವಾ ಬೋಧನೆ ಅಷ್ಟು ಸುಲಭವಾದ ಕೆಲಸವೇನಲ್ಲ. ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ಒಂದು ನಿರ್ದಿಷ್ಟ ಅವಧಿಯೊಳಗೆ ಬೇರೆ ಭಾಷೆಯನ್ನು ಕಲಿಯಲು ಅನುಕೂಲವಾದ ಪದ್ಧತಿಗಳು, ತತ್ವಗಳು, ನೆರವಾಗುತ್ತವೆ. ಬೋಧನಾ ತಂತ್ರಗಳನ್ನು ಅಳವಡಿಸಿಕೊಂಡೇ ಸುವ್ಯವಸ್ಥಿತ ರೀತಿಯಲ್ಲಿ ಅನ್ಯಭಾಷೆಯನ್ನು ಕಲಿಯಬೇಕಾಗುತ್ತದೆ. ಅನ್ಯಭಾಷೆಯನ್ನು ಮಾತೃಭಾಷೆಯನ್ನು ಕಲಿಯುವ ರೀತಿಯಲ್ಲಿ ಕಲಿಯಲು ಬರುವುದಿಲ್ಲ. ಒಂದು ವೇಳೆ ಅದು ಸಾಧ್ಯವಾದರೂ ಅದರಿಂದ ಹೆಚ್ಚಿನ ಪ್ರಯೋಜನವೇನೂ ಆಗಲಾರದು. ಮಾತೃಭಾಷೆಯ ಕಲಿಕೆ ಮತ್ತು ಅದರ ಬೋಧನೆಯ ವಿಧಾನ ಅನ್ಯಭಾಷಾ ಕಲಿಕೆ ಮತ್ತು ಅದರ ಬೋಧನ ವಿಧಾನ ಪರಸ್ಪರ ಭಿನ್ನವಾಗಿ ತೋರಿಬರುವ ಕಾರಣದಿಂದಾಗಿಯೇ ಮಾತೃಭಾಷಾ ಕಲಿಕೆ ಅನ್ಯಭಾಷಾ ಕಲಿಕೆಯ ವಿಧಾನಕ್ಕಿಂತ ಬೇರೆಯಾಗಿ ಕಾಣಿಸಿಕೊಳ್ಳಲು ಸಾಧ್ಯವಾಗಿದೆ.

ಮಾತೃಭಾಷೆಯನ್ನು ವ್ಯಕ್ತಿ ಸಹಜವಾಗಿ ತನಗೆ ಅರಿವಿಲ್ಲದೆಯೇ ಅನುಕರಣೆಯಿಂದ ಕಲಿಯುತ್ತಾನೆ. ಅನ್ಯಭಾಷಾ ಕಲಿಕೆಯಂತೆ ಇದನ್ನು ಯಾರೂ ಕಲಿಸುವುದಿಲ್ಲ. ತನ್ನ ತಂದೆತಾಯಿಗಳಿಂದ, ಸಹೋದರ ಸಹೋದರಿಯರಿಂದ, ಬಂಧು ಗೆಳೆಯರಿಂದ ತಾಯಿಯ ಮಡಲಿನಿಂದಲೇ ಮಗು ಭಾಷೆಯನ್ನು ಕಲಿಯುವುದರಿಂದ ನಾನು ಭಾಷೆಯನ್ನು ಕಲಿಯುತ್ತಿದ್ದೇನೆ ಎಂಬುದರ ಅರಿವೇ ಇಲ್ಲದೆ ಮಗು ತನ್ನ ಭಾಷೆಯನ್ನು ಹಿರಿಯರನ್ನು ಅನುಕರಿಸುವುದರ ಮೂಲಕವೇ ವೃದ್ಧಿಪಡಿಸಿಕೊಳ್ಳುತ್ತದೆ ತನ್ನ ಭಾಷಾಜ್ಞಾನವನ್ನು ಸಂಪಾದಿಸಿಕೊಳ್ಳುತ್ತದೆ. ಮಗು ಸಾಮಾನ್ಯವಾಗಿ ತನ್ನ ತಾಯಿಯೊಡನೆ ಹೆಚ್ಚು ಸಮಯ ಕಳೆಯುವುದರಿಂದ ತಾಯಿಯ ನುಡಿ ಮಗುವಿನ ನುಡಿಯಾಗಿ ಪರಿವರ್ತನೆಯಾಗುತ್ತದೆ. ಮನೆಯಲ್ಲಿ ತಾಯಿ ಮತ್ತು ಮಗುವಿನ ನುಡಿ ಒಂದೇ ಆಗುವುದರಿಂದ ಆ ಒಂದೇ ಭಾಷೆ ಆ ಮಗುವಿನ ಮಾತೃಭಾಷೆಯಾಗಿ ಬಿಡುತ್ತದೆ. ಕೆಲವುವೇಳೆ ಮನೆಯ ಪರಿಸರದಲ್ಲಿ ಒಂದಕ್ಕಿಂತ ಹೆಚ್ಚು ಭಾಷೆಗಳು ಬಳಕೆಯಲ್ಲಿದ್ದಾಗ ಅವುಗಳಲ್ಲಿ ಒಂದು ಅವರ ಮಾತೃಭಾಷೆಯಾಗುತ್ತದೆ. ಉಳಿದವು ಅವರ ಸ್ವಭಾಷೆಗಳಾಗುತ್ತವೆ. ಆದರೆ ಇಂತಹ ಪ್ರಸಂಗಗಳು ಬಹಳ ಕಡಿಮೆ. ವ್ಯಕ್ತಿ ಮಾತೃಭಾಷೆಯನ್ನು ಕಲಿಯುವುದರಿಂದ ತನ್ನ ವ್ಯಕ್ತಿತ್ವ ವಿಕಾಸವಾಗುತ್ತದೆ. ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಮಾನಸಿಕ, ಬೌದ್ಧಿಕ, ಸಂವೇದನಾತ್ಮಕ ಸಂಪರ್ಕದಿಂದ ಸೃಜನಾತ್ಮಕ ಪ್ರತಿಭೆಯು ವ್ಯಕ್ತಿಯಲ್ಲಿ ಬೆಳೆಯುತ್ತದೆ. ಆದ್ದರಿಂದ

ಅವನ ಜೀವನ ನಿರ್ವಹಣೆಯ ವಿಧಾನ, ಸಾಂಸ್ಕೃತಿಕ ಹಾಗೂ ನೈತಿಕ ಭಾವನೆಗಳು ಮೊಳೆಯುತ್ತವೆ.

ಒಂದು ಭಾಷೆ ಒಬ್ಬ ವ್ಯಕ್ತಿಗೆ ಸ್ವಭಾಷೆಯಾಗಬೇಕಾದರೆ ಅದು ಅವನ ಸುತ್ತ ಮುತ್ತಲಿನ ಜನರು ಮಾತನಾಡುವ ಪರಿಸರದ ಭಾಷೆಯಾಗಿರಬೇಕಾದುದು ಅತ್ಯಗತ್ಯ. ಇದನ್ನು ಇವನು ತನ್ನ ಪರಿಸರದ ಸಹಾಯದಿಂದ ಸಹಜವಾಗಿ ತನಗೆ ಅರಿವಿಲ್ಲದೆಯೇ ಕಲಿಯುತ್ತಾನೆ. ಹಾಗೆಯೇ ಬಳಸುತ್ತಾನೆ. ಒಂದು ನಿರ್ದಿಷ್ಟ ಗುರಿಯನ್ನಿಟ್ಟು ಕೊಂಡು ಯಾರೂ ಸ್ವಭಾಷೆಯನ್ನು ಕಲಿಯುವುದಿಲ್ಲ. ಅವನ ಪರಿಸರವೇ ಅವನು ಆ ಭಾಷೆಯನ್ನು ಅನಿವಾರ್ಯವಾಗಿ ಕಲಿಯುವಂತೆ ಮಾಡುತ್ತದೆ. ಒಬ್ಬ ವ್ಯಕ್ತಿಗೆ ಒಂದೇ ಸ್ವಭಾಷೆ ಇರಬೇಕೆಂಬ ನಿಯಮವೇನೂ ಇಲ್ಲ. ಅದು ಅವನ ಸಾಮಾಜಿಕ ಸಂಪರ್ಕದ ಆವಶ್ಯಕತೆಯನ್ನು ಅವಲಂಬಿಸಿದೆ. ಪರಿಸರಕ್ಕೆ ತಕ್ಕಂತೆ ಒಬ್ಬ ವ್ಯಕ್ತಿ ಒಂದಕ್ಕಿಂತ ಹೆಚ್ಚು ಭಾಷೆಗಳನ್ನು ಸ್ವಭಾಷೆಗಳನ್ನಾಗಿ ಪಡೆದುಕೊಳ್ಳಬಹುದು. ಉದಾಹರಣೆಗೆ ಕೊಂಕಣಿ ಭಾಷೆಯನ್ನು ಮಾತೃಭಾಷೆಯನ್ನಾಗಿ ಆಡುವವನು ಕೊಂಕಣಿ ಮಾತ್ರವಲ್ಲದೆ ಅವನ ಪರಿಸರದಲ್ಲಿ ಹೆಚ್ಚು ಪ್ರಚಲಿತವಾಗಿರುವ ಇನ್ನಿತರ ಭಾಷೆಗಳನ್ನು ಸ್ವಭಾಷೆಗಳನ್ನಾಗಿ ಮಾಡಿಕೊಳ್ಳಬಹುದಾದ ಅವಕಾಶಗಳು ಇಲ್ಲದೇ ಇಲ್ಲ. ಕೊಂಕಣಿಯ ಜೊತೆಗೆ ತನ್ನ ದೈನಂದಿನ ವ್ಯವಹಾರಕ್ಕಾಗಿ ಅನಿವಾರ್ಯ ಕಾರಣಗಳಿಂದ ಬೇರೆ ಬೇರೆ ಭಾಷೆಗಳನ್ನು ಅವನು ಬಳಸಬೇಕಾಗಬಹುದು. ಆಗ ಅವು ಅವನ ಸ್ವಭಾಷೆಗಳಾಗಿ ಗೋಚರಿಸುತ್ತವೆ. ಒಬ್ಬ ವ್ಯಕ್ತಿ ಒಂದು ಭಾಷೆಯನ್ನು ಮಾತೃಭಾಷೆಯಂತೆ ಒಂದುಸಾರಿ ತನ್ನ ಸ್ವಭಾಷೆಯನ್ನಾಗಿ ಸ್ವೀಕರಿಸಿದರೆ ಅದು ಆತನ ಜೀವನಪರ್ಯಂತ ಬಳಕೆಯಲ್ಲಿರುತ್ತದೆ. ಆದರೆ ಈ ಸ್ವಭಾಷೆಯೇ ಅವನ ಮುಂದಿನ ಪೀಳಿಗೆಗೂ ಸ್ವಭಾಷೆಯಾಗಿಯೇ ಮುಂದುವರಿಯಬೇಕೆಂಬ ನಿಯಮ ವೇನೂ ಇಲ್ಲ. ಅದು ಆ ಕುಟುಂಬದ ಪರಿಸರ ಇತ್ಯಾದಿಗಳಿಗೆ ಅನುಗುಣವಾಗಿ ಮುಂದುವರಿಯುತ್ತದೆ. ಉದಾಹರಣೆಗೆ ಕನ್ನಡ ಅಥವಾ ತುಳು ಭಾಷೆಯನ್ನು ಸ್ವಭಾಷೆ ಯನ್ನಾಗಿ ಹೊಂದಿರುವ ಕುಟುಂಬವೊಂದು ಕಾರಣಾಂತರದಿಂದ ಮಧ್ಯಪ್ರದೇಶ ಇಲ್ಲವೇ ಉತ್ತರ ಪ್ರದೇಶದಲ್ಲಿ ಹೋಗಿ ನೆಲಸಿದರೆ ಅದು ಅನಿವಾರ್ಯವಾಗಿ ಅಲ್ಲಿನ ಪರಿಸರದ ಹಿಂದಿ ಭಾಷೆಯನ್ನು ಕಲಿತು ಅದನ್ನು ಜನಸಂಪರ್ಕಕ್ಕಾಗಿ ಉಪಯೋಗಿಸ ಬೇಕಾಗಬಹುದು. ಆಗ ಅದರ ಹಿಂದಿನ ಸ್ವಭಾಷೆಯಾದ ಕನ್ನಡ ಅಥವಾ ತುಳುವಿನ ಬಳಕೆ ಕಡಿಮೆಯಾಗುತ್ತಾ ಬಂದು ಅಲ್ಲಿನ ಬಹು ಜನರ ಭಾಷೆಯಾದ ಹಿಂದಿ ಭಾಷೆ ಅವರ ಸ್ವಭಾಷೆಯಾಗಿ ಅವರ ವ್ಯಾವಹಾರಿಕ ಭಾಷೆಯಾಗುತ್ತದೆ.

ಮಾತೃಭಾಷೆಗೂ ಸ್ವಭಾಷೆಗೂ ಸಾಕಷ್ಟು ವ್ಯತ್ಯಾಸವುಂಟು. ಒಬ್ಬ ವ್ಯಕ್ತಿ ಯಾವುದಾದರೊಂದು ಸ್ಥಳದಲ್ಲಿ ಹುಟ್ಟಿನಿಂದಲೂ ಅಲ್ಲಿಯೇ ಬೆಳೆದು ಒಂದು ಭಾಷೆಯನ್ನು ತನ್ನ ಸಂಪರ್ಕಭಾಷೆಯನ್ನಾಗಿಯೇ ಬಳಸಿಕೊಂಡು ಬಂದಿದ್ದಲ್ಲಿ ಅದು ಅವನ ಮಾತೃಭಾಷೆಯಾಗುತ್ತದೆ. ಹುಟ್ಟಿನಿಂದಲೂ ತನ್ನ ಮಾತೃಭಾಷೆಯಲ್ಲದೆ

ಮತ್ತಾವ ಭಾಷೆಯನ್ನು ಅರಿಯದ, ಕಲಿಯದ, ಆಡದ ಪರಿಸ್ಥಿತಿಯಲ್ಲಿ ಆ ವ್ಯಕ್ತಿಯ ಮಾತೃಭಾಷೆಯೇ ಅವನ ಸ್ವಭಾಷೆಯಾಗಿ ಪರಿವರ್ತನೆಯಾಗುತ್ತದೆ. ಆಗ ಅದು ಅವನ ಮಾತೃಭಾಷೆಯೂ ಹೌದು, ಸ್ವಭಾಷೆಯೂ ಹೌದು. ವ್ಯಕ್ತಿ ಕಾರಣಾಂತರದಿಂದ ಆಂಧ್ರ ಪ್ರದೇಶದ ಯಾವುದಾದರೊಂದು ಸ್ಥಳಕ್ಕೆ ಹೋಗಿ ನೆಲಸಿದರೆ ಅವನು ಅಲ್ಲಿನ ಪರಿಸರದ ತೆಲುಗು ಭಾಷೆಯನ್ನು ತನ್ನ ದೈನಂದಿನ ವ್ಯವಹಾರಕ್ಕಾಗಿ ಕಲಿಯಬೇಕಾಗುತ್ತದೆ. ಆಗ ಅದು ಅವನ ಸ್ವಭಾಷೆಯಾಗುತ್ತದೆಯೇ ವಿನಾ ಅದು ಅವನ ಮಾತೃಭಾಷೆಯಾಗಲಾರದು. ಒಬ್ಬ ವ್ಯಕ್ತಿ ಕಲಿತ ಒಂದು ಭಾಷೆ ಸ್ವಭಾಷೆ ಎನಿಸಿಕೊಳ್ಳಬೇಕಾದರೆ ಅವನು ಆ ಭಾಷೆಯನ್ನು ತನ್ನ ಮಾತೃಭಾಷೆಯಷ್ಟೇ ಸಮರ್ಥವಾಗಿ ಹಾಗೂ ನಿರರ್ಗಳವಾಗಿ ಮಾತನಾಡಬಲ್ಲ ಸಾಮರ್ಥ್ಯ ಹೊಂದಿದವನಾಗಿರಬೇಕಾದುದು ಅತ್ಯಾವಶ್ಯಕ. ತನ್ನ ಅನಿಸಿಕೆಗಳನ್ನು, ತನ್ನ ಅಗತ್ಯಗಳನ್ನು, ಸುಖದುಃಖಗಳನ್ನು ಆ ಭಾಷೆಯಲ್ಲಿ ವ್ಯಕ್ತಪಡಿಸುವ ಸಾಮರ್ಥ್ಯ ಪಡೆದಿದ್ದರೆ ಮಾತ್ರ ಅದು ಅವನ ಸ್ವಭಾಷೆ ಎನಿಸಿಕೊಳ್ಳುತ್ತದೆ. ಇದೇ ರೀತಿ ಒಬ್ಬ ವ್ಯಕ್ತಿ ತನ್ನ ಪರಿಸರಕ್ಕೆ ತಕ್ಕಂತೆ ಅನೇಕ ಭಾಷೆಗಳನ್ನು ಕಲಿತು ತನ್ನ ಅಭಿಪ್ರಾಯಗಳನ್ನು ಪೂರ್ಣವಾಗಿ ಅಭಿವ್ಯಕ್ತಿಗೊಳಿಸಲು ಸಮರ್ಥನಾಗಿದ್ದರೆ ಅಂತಹ ಭಾಷೆಗಳು ಆ ವ್ಯಕ್ತಿಯ ಸ್ವಭಾಷೆಗಳಾಗಬಲ್ಲವು. ಒಂದು ಭಾಷೆ ಅಥವಾ ಅನೇಕ ಭಾಷೆಗಳು ವ್ಯಕ್ತಿಯ ಸ್ವಭಾಷೆಗಳಾಗಬೇಕಾದರೆ ಆ ಭಾಷೆಯನ್ನು ಆಡುವವರ ಜೊತೆಯಲ್ಲಿ ಸಹಜವಾಗಿ ತನ್ನ ಮಾತೃಭಾಷೆಯಷ್ಟೇ ಸಮರ್ಥವಾಗಿ ಆಡುವಂತಿದ್ದರೆ ಸಾಕು. ಆಗ ಅವು ಅವನ ಸ್ವಭಾಷೆಗಳಾಗುತ್ತವೆ. ಮಾತೃಭಾಷೆ ಎಲ್ಲಾ ವೇಳೆಯಲ್ಲಿಯೂ ಸ್ವಭಾಷೆಯೂ ಆಗಬೇಕಾಗಿಲ್ಲ. ಕೆಲವುವೇಳೆ ಸ್ವಭಾಷೆಯೇ ಬೇರೆ, ಮಾತೃಭಾಷೆಯೇ ಬೇರೆಯಾಗಿ ಕಾಣಿಸಿಕೊಳ್ಳುತ್ತವೆ. ಉದಾಹರಣೆಗೆ ಒಬ್ಬ ವ್ಯಕ್ತಿ ತಮಿಳುನಾಡಿನಿಂದ ಬಂದು ಕರ್ನಾಟಕದಲ್ಲಿ ನೆಲಸಿದರೆ ಅವನು ತನ್ನ ವ್ಯವಹಾರಕ್ಕಾಗಿ ಕನ್ನಡವನ್ನು ಕಲಿತು ಬಳಸತೊಡಗಿದರೆ ಆಗ ಕನ್ನಡ ಅವನ ಸ್ವಭಾಷೆಯಾಗುತ್ತದೆಯೇ ವಿನಾ ಅದು ಅವನ ಮಾತೃಭಾಷೆಯಾಗಲಾರದು. ಅವನ ತಮಿಳು ಭಾಷೆ ಅವನಿಗೆ ಹುಟ್ಟಿದಂದಿನಿಂದಲೇ ಬಂದಿದ್ದು. ಕನ್ನಡ ಅವನ ಮಾತೃಭಾಷೆಯ ಸ್ಥಾನವನ್ನು ಪಡೆದುಕೊಳ್ಳಲಾರದು. ಕನ್ನಡ ದೈನಂದಿನ ವ್ಯವಹಾರಕ್ಕಾಗಿ ಅನಿವಾರ್ಯವಾಗಿ ಕಲಿತ ಭಾಷೆ. ಅದೇ ಅವನ ಸ್ವಭಾಷೆ. ಈ ಸ್ವಭಾಷೆ ಅವನ ಆ ಮಾತೃಭಾಷೆಯ ಸ್ಥಾನವನ್ನು ಆಕ್ರಮಿಸಲಾರದು. ವ್ಯಕ್ತಿಗೆ ತನ್ನ ಮಾತೃಭಾಷೆ ಮತ್ತು ಸ್ವಭಾಷೆಗಳನ್ನು ಬಿಟ್ಟರೆ ಉಳಿದೆಲ್ಲ ಭಾಷೆಗಳು ಅವನಿಗೆ ಪರಭಾಷೆಗಳು ಅಥವಾ ಅನ್ಯಭಾಷೆಗಳೇ ಆಗುತ್ತವೆ. ಅನ್ಯಭಾಷೆಯನ್ನು ಒಬ್ಬ ವ್ಯಕ್ತಿ ಶಾಲಾ ಕಾಲೇಜುಗಳ ಮೂಲಕ ಸಂಘಸಂಸ್ಥೆಗಳ ಮೂಲಕ, ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ಒಂದು ನಿರ್ದಿಷ್ಟ ವೇಳೆಯಲ್ಲಿ ಕಲಿಯುತ್ತಾನೆ. ಮಾತೃಭಾಷೆಯನ್ನು ಅವನು ತನ್ನ ಬಾಲ್ಯಾವಸ್ಥೆಯಿಂದಲೇ ಪಡೆದುಕೊಂಡಿದ್ದರೆ ಅವನು ಅನ್ಯಭಾಷೆಯನ್ನು ವಯಸ್ಕನಾದ ನಂತರ ಶ್ರಮವಹಿಸಿ ಕಲಿಯುತ್ತಾನೆ. ಸ್ವಭಾಷೆ ಹಾಗೂ ಮಾತೃಭಾಷೆ

ಗಳು ಸಹಜವಾಗಿ ಅವನು ಪಡೆದಂತಹ ಭಾಷೆಗಳು. ಪರಭಾಷೆ ಅವನ ಪರಿಶ್ರಮದಿಂದ ಪಡೆದದ್ದು. ಮಗುವೊಂದು ತನ್ನ ಮಾತೃಭಾಷೆಯನ್ನು ಕಲಿಯುವಾಗ ತಾನು ಕಲಿಯುತ್ತಿದ್ದೇನೆ ಎಂಬ ಅರಿವಿಲ್ಲದೆಯೇ ಸುಲಭವಾಗಿ ಅನುಕರಣೆಯಿಂದ ಬೇಗನೆ ಕಲಿಯುತ್ತದೆಯೋ ಹಾಗೆ ಅನ್ಯಭಾಷೆಯನ್ನು ವ್ಯಕ್ತಿ ಹೆಚ್ಚು ಶ್ರಮವಿಲ್ಲದೆ ಕಲಿಯಲಾರ. ಆತನಿಗೆ ಈಗಾಗಲೇ ಒಂದು ಮಾತೃಭಾಷೆ ಇರುವುದರಿಂದ ಅವನು ಅದರ ಮೂಲಕ ತನ್ನ ಆವಶ್ಯಕತೆಗಳನ್ನೆಲ್ಲಾ ಪೂರೈಸಿಕೊಳ್ಳುತ್ತಾನೆ. ಅನ್ಯಭಾಷಾ ಕಲಿಕೆ ಅವನಿಗೆ ಅಷ್ಟು ಅನಿವಾರ್ಯವೇನಲ್ಲ. ತಾನು ಆಗಲೇ ಕಲಿತಿರುವ ಮಾತೃಭಾಷೆಯೊಡನೆ ಅನ್ಯಭಾಷೆಯನ್ನು ಹೋಲಿಸಿ ಕಲಿಯುವುದರಿಂದಾಗಿಯೇ ಅವನ ಅನ್ಯಭಾಷಾ ಕಲಿಕೆ ಅವನಿಗೆ ಕ್ಲಿಷ್ಟವಾಗಿ ತೋರಿಬರುತ್ತದೆ.

ಅನ್ಯಭಾಷಾ ಕಲಿಕೆ ಮತ್ತು ಅದರ ಬೋಧನಾತಂತ್ರ ಇಂದು ಎಂದೂ ಇಲ್ಲದ ಮಹತ್ವವನ್ನು ಪಡೆಯುತ್ತಿದೆ. ಅದರ ಬೋಧನಾ ವಿಧಾನಗಳಲ್ಲಿಯೂ ಸಾಕಷ್ಟು ಬದಲಾವಣೆಗಳಾಗುತ್ತಿವೆ. ಹಿಂದೆ ಕೆಲವೇ ಕೆಲವರು ಸಾಹಿತ್ಯ ಅಭ್ಯಾಸದ ದೃಷ್ಟಿಯಿಂದ ಕೆಲವೇ ಕೆಲವು ಪ್ರತಿಷ್ಠಿತ ಭಾಷೆಗಳನ್ನು ಮಾತ್ರ ಕಲಿಯುತ್ತಿದ್ದರು. ಈಗ ಜನರು ಬೇರೆ ಬೇರೆ ಉದ್ದೇಶಗಳಿಗಾಗಿ ಬೇರೆ ಬೇರೆ ಭಾಷೆಗಳನ್ನು ಕಲಿಯುತ್ತಿದ್ದಾರೆ. ಅವುಗಳನ್ನು ಕಲಿಸುವ ಬೇರೆ ಬೇರೆ ವಿಧಾನಗಳು ಹೊರಬಂದಿವೆ. ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಆರ್ಥಿಕ, ವಾಣಿಜ್ಯ ಸಂಪರ್ಕ ಹೊಂದಲು ಬೇರೆ ಬೇರೆ ಭಾಷೆಗಳ ಸಾಹಿತ್ಯ ಗ್ರಂಥಗಳನ್ನು ಅಭ್ಯಸಿಸಿ ಜ್ಞಾನ ಸಂಪಾದನೆಮಾಡುವ ದೃಷ್ಟಿಯಿಂದ, ಅವುಗಳನ್ನು ತಮ್ಮ ತಮ್ಮ ಭಾಷೆಗಳಿಗೆ ಅನುವಾದಿಸಿಕೊಳ್ಳುವ ದೃಷ್ಟಿಯಿಂದ, ಆ ಭಾಷೆಯನ್ನು ಆಡುವ ಜನರ ಸಮಾಜ, ಸಂಸ್ಕೃತಿ, ಧರ್ಮ, ಆಚಾರ, ಜನಜೀವನ ಮುಂತಾದುವುಗಳನ್ನು ಅರಿಯುವ ದೃಷ್ಟಿಯಿಂದ ವ್ಯಕ್ತಿ ಅನ್ಯಭಾಷೆಯನ್ನು ಕಲಿಯುತ್ತಾನೆ. ಇನ್ನೂ ಕೆಲವರು ಧರ್ಮ ಪ್ರಚಾರ, ಸಾಮಾಜಿಕ ಕಾರ್ಯ, ಆರ್ಥಿಕ ವ್ಯವಹಾರ ಮುಂತಾದುವುಗಳ ದೃಷ್ಟಿಯಿಂದಲೂ ಅನ್ಯಭಾಷೆಗಳನ್ನು ಕಲಿಯುತ್ತಾರೆ. ಇಂದಿನ ಕಾಲದಲ್ಲಿ ಮನುಷ್ಯನಿಗೆ ಅನೇಕ ಭಾಷಾಜನರ ಸಂಪರ್ಕ ಅತ್ಯಗತ್ಯವಾಗಿದೆ. ಇಂದಿನ ದಿನಗಳಲ್ಲಿ ಬೇರೆ ಬೇರೆ ಭಾಷೆಗಳನ್ನು ಕಲಿಯುವ ಆಸಕ್ತಿ ಜನರಲ್ಲಿ ಹೆಚ್ಚಾಗುತ್ತಿದೆ. ಬೇರೆ ಬೇರೆ ಉದ್ದೇಶಗಳಿಗಾಗಿ ಜನರು ಅನಿವಾರ್ಯವಾಗಿ ಹೆಚ್ಚು ಹೆಚ್ಚು ಭಾಷೆಗಳನ್ನು ಕಲಿಯಲು ಪ್ರಯತ್ನಿಸುತ್ತಿದ್ದಾರೆ. ಜಗತ್ತಿನಾದ್ಯಂತ ಅನ್ಯಭಾಷೆಗಳನ್ನು ಹೆಚ್ಚು ವೈಜ್ಞಾನಿಕವಾಗಿ ಕಡಿಮೆ ಅವಧಿಯಲ್ಲಿ ಹೆಚ್ಚು ವ್ಯವಸ್ಥಿತವಾಗಿ ಕಲಿಸುವ ಅಥವಾ ಬೋಧಿಸುವ ಅನೇಕ ಸಂಘಸಂಸ್ಥೆಗಳು ಹುಟ್ಟಿಕೊಂಡಿವೆ. ಭಾಷಾವಿಜ್ಞಾನದ ಪ್ರಗತಿ, ಭಾಷೆಯ ಬೋಧನೆಯ ವಿವಿಧ ತಂತ್ರಗಳು ಭಾಷಾ ಪ್ರಯೋಗಶಾಲೆ, ಶ್ರವ್ಯ ಹಾಗೂ ದೃಶ್ಯ ಬೋಧನಾ ಉಪಕರಣಗಳು, ಅವುಗಳ ಉಪಯೋಗ ಅನ್ಯಭಾಷೆಯನ್ನು ಕಲಿಯಲು ಜನರು ತೋರುತ್ತಿರುವ ಆಸಕ್ತಿ ಮುಂತಾದುವು ಪರಭಾಷಾ ಕಲಿಕೆಯ ಕ್ರಮ ಹೆಚ್ಚು

ಪ್ರಚಾರಕ್ಕೆ ಬರಲು ಕಾರಣವಾಗಿದೆ. ಭಾಷಾವಿಜ್ಞಾನದ ಬೆಳವಣಿಗೆಯನ್ನು ಅನುಸರಿಸಿ ಭಾಷಾ ಬೋಧನಾಕ್ರಮವೂ ಬದಲಾಗುತ್ತಿದೆ. ತಾಂತ್ರಿಕ ಉಪಕರಣಗಳ ಬಳಕೆ ಭಾಷಾ ಬೋಧನೆಯ ಮೇಲೆ ಇಂದು ಸಾಕಷ್ಟು ಪರಿಣಾಮವನ್ನು ಉಂಟುಮಾಡಿದೆ. ಈ ಎಲ್ಲಾ ಕಾರಣಗಳಿಂದಾಗಿ ಮಾತೃಭಾಷಾ ಕಲಿಕೆ ಮತ್ತು ಅದರ ಬೋಧನಾಕ್ರಮ ಅನ್ಯಭಾಷಾ ಕಲಿಕೆ ಮತ್ತು ಅದರ ಬೋಧನಾಕ್ರಮಗಳ ನಡುವೆ ಸಾಕಷ್ಟು ಅಂತರ ಕಾಣಿಸಿಕೊಳ್ಳಲು ಸಾಧ್ಯವಾಗಿದೆ.

ಭಾಷೆ ಕಲಿಯುವುದು ಎಂದರೆ ಆ ಭಾಷೆಯನ್ನು ಗ್ರಹಿಸುವುದು (listening) ಮಾತಾಡುವುದು (speaking) ಓದುವುದು (reading) ಬರೆಯುವುದು (writing)ನ್ನು ರೂಢಿಸಿಕೊಳ್ಳುವುದು ಎಂದರ್ಥ. ಇವುಗಳಲ್ಲಿ ಓದುವುದು ಮತ್ತು ಬರೆಯುವುದು ಬಂದಮಾತ್ರಕ್ಕೆ ವ್ಯಕ್ತಿಗೆ ಆ ಭಾಷೆ ಬಂದಂತಾಗುವುದಿಲ್ಲ. ಆ ಭಾಷೆಯನ್ನು ಮಾತನಾಡಲು ಮಾತನಾಡಿದ್ದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾದರೆ ಮಾತ್ರ ಆ ಭಾಷೆ ಅವನಿಗೆ ಕರಗತವಾಗಿದೆ ಎಂದು ಭಾವಿಸಬೇಕಾಗುತ್ತದೆ. ಭಾಷೆ ಕಲಿಯದೆ ಬರುವಂತಹದ್ದಲ್ಲ. ಅದು ಅನುಕರಣೆಯಿಂದ ಲಭಿಸುವಂತಹದ್ದು. ಒಂದು ಭಾಷೆಯನ್ನು ಕಲಿಯಬೇಕಾದರೆ ಆ ಭಾಷೆಯನ್ನು ಗ್ರಹಿಸುವುದು (ಶ್ರವಣ) ಮತ್ತು ಮಾತನಾಡುವುದು (ಮೌಖಿಕ) ಓದುವುದು (ವಾಚನ) ಮತ್ತು ಬರೆಯುವುದು (ಲೇಖನ) ಬಂದರೆ ಮಾತ್ರ ಆಗ ಅವನ ಭಾಷಾಕಲಿಕೆ ಪೂರ್ಣವೆನಿಸಿಕೊಳ್ಳುತ್ತದೆ. ಈ ನಾಲ್ಕು ಬಗೆಯ ಭಾಷಾಕಲಿಕೆಯ ಕೌಶಲಗಳನ್ನು ಕೆಲವರು ಪಟ್ಟಿಮಾಡಿ ತೋರಿಸಿದ್ದಾರೆ. ಈ ನಾಲ್ಕು ಕೌಶಲಗಳನ್ನು ಪ್ರಧಾನ ಕೌಶಲಗಳು (ಗ್ರಹಿಸುವುದು ಮತ್ತು ಮಾತನಾಡುವುದು) ಮತ್ತು ಅಪ್ರಧಾನ ಕೌಶಲಗಳು (ಓದುವುದು ಮತ್ತು ಬರೆಯುವುದು) ಎಂದು ಎರಡು ವರ್ಗಗಳಲ್ಲಿ ವರ್ಗೀಕರಿಸಿಕೊಳ್ಳಬಹುದು. ಇವುಗಳಲ್ಲಿ ಯಾವ ಒಂದು ಕೌಶಲವನ್ನು ಕಡೆಗಣಿಸಿದರೂ ಅಂಥ ಭಾಷಾಕಲಿಕೆ ಪೂರ್ಣವೆನಿಸಿಕೊಳ್ಳದೆ ಹೋಗುತ್ತದೆ.

ಒಂದು ಭಾಷೆಯನ್ನು ಕಲಿಯುವಾಗ ಅದರ ಧ್ವನಿಗಳನ್ನು ಸೂಕ್ಷ್ಮಾತಿಸೂಕ್ಷ್ಮವಾಗಿ ಗ್ರಹಿಸುತ್ತಾ ಅವುಗಳನ್ನು ಮತ್ತೆ ಮತ್ತೆ ಉಚ್ಚರಿಸುತ್ತಾ ಹೋಗುತ್ತಿರಬೇಕಾಗುತ್ತದೆ. ಮಗುವು ಭಾಷೆಯ ಧ್ವನಿಗಳನ್ನು ಮೊದಮೊದಲು ಹೀಗೆಯೇ ಗ್ರಹಿಸುತ್ತದೆ. ಅನಂತರ ಅವನ್ನು ಉಚ್ಚರಿಸಲು ಪ್ರಯತ್ನಿಸುತ್ತದೆ. ಆಗ ಆ ಮಗುವಿಗೆ ಆ ಭಾಷೆಯ ಎಲ್ಲಾ ಧ್ವನಿಗಳನ್ನು ಅವುಗಳ ವ್ಯತ್ಯಾಸವನ್ನು ಗುರುತಿಸುವ ಸಾಮರ್ಥ್ಯ ಬಂದಿರುವುದಿಲ್ಲ. ಯಾವಾಗ ಆ ಮಗು ಆ ಭಾಷೆಯ ಧ್ವನಿಗಳನ್ನು ಗ್ರಹಿಸುವ ಅವುಗಳನ್ನು ಉಚ್ಚರಿಸುವ ಅವುಗಳ ಅಂತರವನ್ನು ಗುರುತಿಸಿಕೊಳ್ಳುವ ಸಾಮರ್ಥ್ಯ ಹೊಂದುತ್ತದೆಯೋ ಆಗ ಅದು ಆ ಭಾಷೆಯನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುತ್ತಿದೆ ಎಂದು ಭಾವಿಸಬೇಕಾಗುವುದು. ಮಗುವಿಗೆ ಆ ಭಾಷೆಯ ಎಲ್ಲಾ ಧ್ವನಿಗಳನ್ನು ಅರ್ಥಮಾಡಿಕೊಳ್ಳದಿದ್ದರೂ ಕ್ರಮೇಣ ಅದು ಅರ್ಥವಾಗುತ್ತಾ ಹೋಗು

ತ್ತಿರುತ್ತದೆ. ಭಾಷೆಯನ್ನು ಗ್ರಹಿಸಲು ಮತ್ತು ಅರ್ಥಮಾಡಿಕೊಳ್ಳಲು ಪ್ರಾರಂಭಿಸಿದರೆ ಆ ಮಗು ಅದನ್ನೇ ಮಾತಿನ ಮೂಲಕ ವ್ಯಕ್ತಗೊಳಿಸಲು ಪ್ರಯತ್ನಿಸುತ್ತದೆ. ಮಗು ಮೊದಮೊದಲು ಅನೇಕ ತಪ್ಪುಗಳನ್ನು ಮಾಡುತ್ತದೆ ನಿಜ ಅನಂತರ ಅದು ತಿದ್ದಿಕೊಳ್ಳಲು ಪ್ರಯತ್ನಿಸುತ್ತದೆ. ಈ ಮಗುವಿನ ತಪ್ಪು ಮತ್ತು ಒಪ್ಪುಗಳ ಕ್ರಿಯೆಯನ್ನೇ ಕೆಲವರು (Trial and error method) ಎಂತಲೂ ಕರೆಯುವರು. ಮಗು ತಪ್ಪು ಮಾಡಿದ್ದನ್ನು ಅದರ ತಂದೆತಾಯಿಯರು ತಿದ್ದುತ್ತಾರೆ. ಹಿರಿಯರ ಅನುಕರಣೆ ಆ ಮಗು ಭಾಷೆಯನ್ನು ಕಲಿಯಲು ಅವಕಾಶ ಮಾಡಿಕೊಡುತ್ತದೆ. ಒಟ್ಟಿನಲ್ಲಿ ಭಾಷಾಕಲಿಕೆಯಲ್ಲಿ ಗ್ರಹಿಸುವುದು ಮತ್ತು ಮಾತನಾಡುವುದನ್ನು ರೂಢಿಸಿಕೊಂಡರೆ ಸಾಕು. ಇವು ಭಾಷಾಕಲಿಕೆಗೆ ಬಹಳ ಮುಖ್ಯ.

ಭಾಷಾ ಕಲಿಕೆಯಲ್ಲಿ ಓದುವುದು ಮತ್ತು ಬರೆಯುವುದನ್ನು ರೂಢಿಸಿಕೊಳ್ಳಬೇಕಾದರೆ ಮೊದಲು ಆ ಭಾಷೆಯ ಅಕ್ಷರಗಳನ್ನು ಗುರುತಿಸಿಕೊಳ್ಳುವುದು ಬಹಳ ಮುಖ್ಯ. ಎಲ್ಲಾ ಸಂದರ್ಭಗಳಲ್ಲಿಯೂ ಧ್ವನಿ ಮತ್ತು ಅಕ್ಷರಗಳು ಒಂದೇ ಆಗಿರುವುದಿಲ್ಲ. ಒಂದು ಅಕ್ಷರ ಒಂದಕ್ಕಿಂತ ಹೆಚ್ಚು ಧ್ವನಿಗಳನ್ನೊಳಗೊಂಡಿರುವ ಸಾಧ್ಯತೆಗಳೂ ಇವೆ. ಅಕ್ಷರಗಳನ್ನು ಗುರುತಿಸಿಕೊಳ್ಳಲು ಸಾಧ್ಯವಾಗದಿದ್ದರೆ ಧ್ವನಿಗೂ ಅಕ್ಷರಕ್ಕೂ ಇರುವ ಅಂತರವನ್ನು ನಿರ್ಧರಿಸಿಕೊಳ್ಳಲು ಕಷ್ಟವಾಗುತ್ತದೆ. ಅಮೂರ್ತರೂಪದ ಭಾಷೆಗೆ ದೃಶ್ಯ ಸಂಕೇತಗಳನ್ನು ಕೊಟ್ಟು ಅದನ್ನು ಮೂರ್ತರೂಪಕ್ಕೆ ಇಳಿಸುವ ವಿಧಾನವು ಬರಹವೆನಿಸಿಕೊಳ್ಳುವುದು. ಬರಹ ಓದುವುದು ಮತ್ತು ಬರೆಯುವುದು ಎರಡನ್ನು ಒಳಗೊಂಡಿದೆ. ಇವು ಜೊತೆ ಜೊತೆಯಲ್ಲಿಯೇ ಕರಗತವಾಗುವ ಪ್ರಕ್ರಿಯೆಗಳು. ಗುರುತಿಸಿಕೊಂಡ ಅಕ್ಷರಗಳನ್ನು ಹೊಂದಿಸಿ ಓದುವುದು ಭಾಷಾ ಕಲಿಕೆಯಲ್ಲಿ ಬಹಳ ಮುಖ್ಯ. ಒಂದು ಭಾಷೆಯ ಧ್ವನಿಸಮೂಹವನ್ನು ಸಂಕೇತಗಳ ಮೂಲಕ ಬರಹಕ್ಕೆ ಇಳಿಸುವುದು ಅಷ್ಟೇ ಮುಖ್ಯ. ಭಾಷೆಯ ಧ್ವನಿಸಮೂಹವನ್ನು ಬರಹದ ಮೂಲಕ ಪ್ರತಿನಿಧಿಸಿದ ಮಾತ್ರಕ್ಕೆ ಭಾಷೆ ಬಂದಿರುವುದಿಲ್ಲ. ಭಾಷೆಯನ್ನು ಮಾತನಾಡಲು ಆಡಿದ್ದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾದಾಗ ಮಾತ್ರ ಆ ಭಾಷೆ ಆ ವ್ಯಕ್ತಿಗೆ ಬಂದಂತಾಗುತ್ತದೆ. ಇದನ್ನು ನಿರಂತರ ಪರಿಶ್ರಮದ ಮೂಲಕ ಮಾತ್ರ ಸಾಧಿಸಲು ಸಾಧ್ಯವಿದೆ. ಇದನ್ನೇ ಭಾಷಾಕಲಿಕೆ ಎನ್ನುವುದು. ಪರಭಾಷಾ ಕಲಿಕೆಯಲ್ಲಿ ಭಾಷೆಯನ್ನು ಬೋಧಿಸುವ ವಿಧಾನ ಬಹಳ ಮುಖ್ಯವಾದದ್ದು. ಹಿಂದೆ ಭಾಷಾ ಬೋಧನೆಗೆ ಅನೇಕ ಪದ್ಧತಿಗಳು ಬಳಕೆಯಲ್ಲಿದ್ದವು. ಅವುಗಳಲ್ಲಿ ವ್ಯಾಕರಣ ಭಾಷಾಂತರ ಪದ್ಧತಿ, ನೇರಪದ್ಧತಿ, ಸಂರಚನಾತ್ಮಕ ಪದ್ಧತಿ ಬಹಳ ಮುಖ್ಯವಾಗಿವೆ. ಇವುಗಳಲ್ಲಿ ವ್ಯಾಕರಣ ಭಾಷಾಂತರ ಪದ್ಧತಿ ಹೆಚ್ಚು ಪ್ರಾಚೀನವಾದದ್ದು. ಇದರಲ್ಲಿ ಆ ಭಾಷೆಯ ವ್ಯಾಕರಣ ಮತ್ತು ಭಾಷಾಂತರಕ್ಕೆ ಹೆಚ್ಚಿನ ಮಹತ್ವ ನೀಡಲಾಗುತ್ತದೆ. ಈ ಪದ್ಧತಿ ಗ್ರಾಂಥಿಕ ಭಾಷೆಗಳ ಕಲಿಕೆ ಮತ್ತು ಬೋಧನೆಗೆ ಮಾತ್ರ ಸೀಮಿತವಾದದ್ದು. ವಿದ್ಯಾರ್ಥಿಗಳನ್ನು ವ್ಯಾಕರಣದ ಮೂಲಕ ಪಳಗಿಸುವುದು ಭಾಷಾಂತರದ

ಮೂಲಕ ಅರ್ಥೈಸುವುದು ಇವರ ಮುಖ್ಯ ಉದ್ದೇಶ. ಇದರಲ್ಲಿ ವಿದ್ಯಾರ್ಥಿಗಳು ದ್ವಿಭಾಷೆಯ ನಿಘಂಟುಗಳ ಸಹಾಯವನ್ನು ಪಡೆಯಬೇಕಾಗುತ್ತದೆ. ಅದನ್ನು ಕಂಠ ಪಾಠ ಮಾಡಬೇಕಾಗುತ್ತದೆ.

ಭಾಷಾಬೋಧನೆಯ ಕ್ಷೇತ್ರದಲ್ಲಿ ಸುಮಾರು ಹತ್ತೊಂಬತ್ತನೇ ಶತಮಾನದ ಕೊನೆಯವರೆಗೂ ವ್ಯಾಕರಣ ಭಾಷಾಂತರ ಪದ್ಧತಿಯೇ ಹೆಚ್ಚು ಬಳಕೆಯಲ್ಲಿದ್ದಿತು. ಇದರಲ್ಲಿ ವ್ಯಾಕರಣ ಸೂತ್ರಗಳನ್ನು ಬಳಸುವುದು ಭಾಷಾಬೋಧನೆಯ ರಾಜಮಾರ್ಗ ವಾಗಿದ್ದಿತು. ಇದನ್ನೇ ಮಾತೃಭಾಷೆ ಮತ್ತು ಅನ್ಯಭಾಷಾಬೋಧನೆ ಎರಡಕ್ಕೂ ಬಳಸಿಕೊಳ್ಳಲಾಗುತ್ತಿದ್ದಿತು. ವಿದ್ಯಾರ್ಥಿಗಳು ಭಾಷೆಯ ಕಲಿಕೆಗಾಗಿ ವ್ಯಾಕರಣ ನಿಯಮಗಳನ್ನು ಕಂಠಪಾಠ ಮಾಡುತ್ತಿದ್ದರು. ದ್ವಿಭಾಷೆಯ ನಿಘಂಟುಗಳ ಸಹಾಯ ದಿಂದ ಅನ್ಯಭಾಷೆಯಿಂದ ಮಾತೃಭಾಷೆಗೂ, ಮಾತೃಭಾಷೆಯಿಂದ ಅನ್ಯಭಾಷೆಗೂ ಭಾಷಾಂತರಿಸಿಕೊಳ್ಳಲಾಗುತ್ತಿದ್ದಿತು. ಇದರಿಂದಾಗಿ ಮಾತೃಭಾಷಾಕಲಿಕೆಗೂ ಅನ್ಯ ಭಾಷಾಕಲಿಕೆಗೂ ಅಂತಹ ಹೆಚ್ಚಿನ ವ್ಯತ್ಯಾಸವೇನೂ ಕಾಣಿಸಿಕೊಳ್ಳುತ್ತಿರಲಿಲ್ಲ.

ವ್ಯಾಕರಣ ಭಾಷಾಂತರ ವಿಧಾನ (grammar translation method) ಭಾಷೆಯನ್ನು ಕಲಿಸುವ ಹಾಗೂ ಬೋಧಿಸುವಲ್ಲಿ ಅಸಮರ್ಪಕ ವಿಧಾನವಾಗಿ ತೋರಿ ಬಂದ ಕಾರಣ ಜನರ ಆಸಕ್ತಿ ನೇರಪದ್ಧತಿಯ ಕಡೆ ಹರಿಯಿತು. ಇದರಿಂದ ಅನೇಕ ವರ್ಷಗಳಕಾಲ ಅನ್ಯಭಾಷೆಯನ್ನು ಕಲಿತರೂ ಅನೇಕರು ಆ ಭಾಷೆಯನ್ನು ಆಡಲು ಅಸಮರ್ಥರಾಗಿ ಕಾಣಿಸಿಕೊಂಡರು. ಇದರಿಂದಾಗಿ ನಾವು ಅನ್ಯಭಾಷೆಯನ್ನು ಕಲಿಯ ಲಾರೆವು, ಅದು ತಮ್ಮಿಂದ ಸಾಧ್ಯವಾಗುವುದಿಲ್ಲ ಎಂಬ ಭಾವನೆ ವಿದ್ಯಾರ್ಥಿಗಳಲ್ಲಿ ಮೂಡಿತು. ಈ ಲೋಪದೋಷಗಳಿಗೆ ಕಾರಣವೇನು ಎಂಬುದರ ಕಡೆ ವಿದ್ವಾಂಸರ ಗಮನ ಹರಿಯಿತು. ಭಾಷಾಂತರ ಮಾಡುವುದರಿಂದ ಅನ್ಯಭಾಷೆಯನ್ನು ಅರ್ಥಮಾಡಿ ಕೊಳ್ಳುವ ಮಾತನಾಡುವ ಓದುವ ಮತ್ತು ಬರೆಯುವ ನೈಪುಣ್ಯ ಗಳಿಸಿಕೊಳ ಬಹುದೆಂಬ ಭಾವನೆಯನ್ನು ಅವರು ತಪ್ಪಾಗಿ ಗ್ರಹಿಸಿದ್ದರು. ಭಾಷೆಯನ್ನು ಅರ್ಥ ಮಾಡಿಕೊಳ್ಳುವುದು, ಮಾತನಾಡುವುದು, ಓದುವುದು, ಬರೆಯುವುದು ಇವು ಪ್ರತ್ಯೇಕ ಪ್ರತ್ಯೇಕವಾದ ಕಲೆಗಳು. ಇವುಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿಯೇ ಕಲಿಯಬೇಕು. ಭಾಷೆಯ ವ್ಯಾಕರಣ ನಿಯಮವನ್ನು ಹೇಳಬಲ್ಲವನು ಅದನ್ನು ಆಡಲು ಅಸಮರ್ಥನಾಗಿರುತ್ತಾನೆ. ವ್ಯಾಕರಣ ಭಾಷಾಂತರ ಬಲ್ಲವನು ಆ ಭಾಷೆಯ ವ್ಯಾಕರಣ ನಿಯಮಗಳನ್ನು ಹೇಳಲು ಅಸಮರ್ಥನಾಗುತ್ತಾನೆ. ಭಾಷಾಂತರಕ್ಕೂ ತನ್ನದೇ ಆದ ಪ್ರಾಮುಖ್ಯವಿದೆ. ಭಾಷಾಬೋಧನೆಯೇ ಬೇರೆ, ಭಾಷಾಂತರವೇ ಬೇರೆ. ಇವು ಒಂದರ ಸ್ಥಾನವನ್ನು ಇನ್ನೊಂದು ಆಕ್ರಮಿಸಿಕೊಳ್ಳಲಾರವು. ಒಂದು ಭಾಷೆಯ ನಿಯಮಗಳನ್ನು ತಿಳಿದುಕೊಳ್ಳುವುದು ಭಾಷಾವಿಜ್ಞಾನಿಗೂ ಭಾಷಾ ವಿದ್ಯಾರ್ಥಿಗೂ ಅತ್ಯಗತ್ಯ. ಇವನ್ನು ತಿಳಿದುಕೊಂಡಾಕ್ಷಣಕ್ಕೆ ಅವನು ಆ ಭಾಷೆ ಯನ್ನು ಆಡಲು ಸಮರ್ಥನಾಗಿದ್ದಾನೆ ಎಂದರ್ಥವಲ್ಲ.

ವ್ಯಾಕರಣ ಭಾಷಾಂತರ ಪದ್ಧತಿಯ ಲೋಪದೋಷಗಳನ್ನು ಆಳವಾಗಿ ಪರಿಶೀಲಿಸಲು ಹೊರಟ ಒಟ್ಟೊ ಎಸ್ಪರ್ಸನ್, ಪಾಮರ್ ಮುಂತಾದ ಯುರೋಪಿನ ಬೇರೆ ಬೇರೆ ವಿದ್ವಾಂಸರು ಭಾಷೆಯನ್ನು ಹೆಚ್ಚು ಸಮರ್ಪಕವಾಗಿ ಕಲಿಯಲು ನೇರ ಸಂಪರ್ಕ ಮಾಧ್ಯಮದಿಂದ ಮಾತ್ರ ಸಾಧ್ಯ ಎಂಬುದನ್ನು ಅವರು ಹೆಚ್ಚು ಪ್ರಚಾರಕ್ಕೆ ತರಲು ಪ್ರಯತ್ನಿಸಿದರು. ಇದರಿಂದ ವ್ಯಾಕರಣ ಭಾಷಾಂತರ ಪದ್ಧತಿಗೆ ಭಿನ್ನವಾದ ಪದ್ಧತಿಯೊಂದು ಹುಟ್ಟಿಕೊಳ್ಳಲು ಸಾಧ್ಯವಾಯಿತು. ಇದರ ಫಲವಾಗಿ ನವೀನಪದ್ಧತಿ, (modern method) ನೇರ ಪದ್ಧತಿ (direct method) ಸುಧಾರಣಾ ಪದ್ಧತಿ (modified method) ಮೌಖಿಕ ಪದ್ಧತಿ (oral method) ಇತ್ಯಾದಿ ಬೋಧನಾ ಪದ್ಧತಿಗಳು ಹಾಗೂ ಇನ್ನೂ ಅನೇಕ ವೈಯಕ್ತಿಕ ಪದ್ಧತಿಗಳು ಹೊರಬಂದವು. ನೇರ
ಪದ್ಧತಿ ಅ… …ದೆ ಮಾತ್ರವಲ್ಲದೆ
ಇದು ವ… …ಂಟುಮಾಡುತ್ತದೆ.
ಓದು… …ವಾಗಿ ಭಾಷೆಯನ್ನು
ಕಲಿ… …ಪಿಯನ್ನು ಬಳಕೆಗೆ
ತರ… …ಮೆರಿಕ ಮುಂತಾದ
ದೇ… …ಮಾನ್ಯತೆಯೇನು
ದೊ… …ತಿಯನ್ನು ಕುರಿತು
ಆಲ… …ಇದು ವ್ಯಾಕರಣ
ಭಾ… …ನ್ನು ನಿವಾರಿಸಲು
ದಾ… …ು ಭಾಷಾಸಂಸರ್ಗ
ವನ… …ಗಿ ತರಲು ಅವಕಾಶ
ವ… …ಮೂಲಕ ಪದ ಮತ್ತು
ವಾ… …ಈ ನೇರ ಪದ್ಧತಿಯ
ಮು… …ಗಳಿಗೆ ಬೇರೆ ಬೇರೆ
ವಿ… …ಮಾರ್ಪಾಟುಗಳು
ಆ… …ನೇರ ಪದ್ಧತಿಯನ್ನು
ಭಾ… …ಾದವು. ವ್ಯಾಕರಣ
ಭಾ… …ದ್ಯಾರ್ಥಿಗಳು ಮಾತ್ರ
ಯ… …ಗತಿ ಯಶಸ್ವಿಯಾಗ
ತ… …ಬರಲಾರಂಭಿಸಿತು.
ಅ… …ದರೆ ಇದು ಕೆಲವರಿಗೆ
ಕೇ… …ಯಿತೆ ವಿನಾ ಅದು
ಭಾಷೆಯನ್ನು ಕಲಿಸುವ ಪೂರ್ಣ ವಿಧಾನವಾಗಲಿಲ್ಲ. ಈ ಎಲ್ಲಾ ಕಾರಣಗಳಿಂದಾಗಿಯೇ

ಇದು ನಿರೀಕ್ಷಿದಷ್ಟು ಫಲವನ್ನು ಕಡೆಗೂ ಕೊಡಲಾರದೆ ಹೋಯಿತು. ಈ ಕಾರಣದಿಂದಾಗಿಯೇ ಅನೇಕರು ಇದನ್ನು ವಿರೋಧಿಸಿದರು.

ಪರಭಾಷೆಯ ಧ್ವನ್ಯಾತ್ಮಕ ಮತ್ತು ವ್ಯಾಕರಣಾತ್ಮಕ ವೈಶಿಷ್ಟ್ಯಗಳು ಅನೇಕ ಸಮಸ್ಯೆಗಳನ್ನು ಕೆಲವು ವೇಳೆ ತಂದೊಡ್ಡುತ್ತವೆ. ಈ ಸಮಸ್ಯೆಗಳನ್ನು ಹೋಗಲಾಡಿಸುವ ದೃಷ್ಟಿಯಿಂದಲೇ ಈ ನೇರಪದ್ಧತಿಯನ್ನು ರೂಪಿಸಿಕೊಳ್ಳಲಾಯಿತು. ಸಾಮಾಜಿಕ ನೇರಸಂಪರ್ಕದ ತಳಹದಿಯ ಮೇಲೆ ಸಂದರ್ಭ ಹಾಗೂ ಸನ್ನಿವೇಶಗಳ ಹಿನ್ನೆಲೆಯಲ್ಲಿ ಪರಭಾಷೆಯನ್ನು ಪೂರ್ಣವಾಗಿ ಕಲಿಸುವುದು ಅಸಾಧ್ಯ ಎಂಬುದು ಹೊರಬಂದಿತು. ಇದರಿಂದ ವಿದ್ಯಾರ್ಥಿಗಳಿಗೆ ಆಡುನುಡಿ ಶೀಘ್ರವಾಗಿ ತಿಳಿದು ಆ ಭಾಷೆಯ ನಿಜ ಸ್ವರೂಪ ಕರಗತವಾಗುತ್ತದೆ ಎಂಬ ವಾದ ಹುಸಿಯಾಯಿತು. ನೇರ ಪದ್ಧತಿಯಲ್ಲಿ ಅನ್ಯಭಾಷಾ ರಚನೆಯನ್ನು ಸ್ವಭಾಷಾ ರಚನೆಯೊಡನೆ ಹೋಲಿಸಿ ಅಭ್ಯಾಸ ಮಾಡುವುದರಿಂದ ವಿದ್ಯಾರ್ಥಿಗೆ ಎಷ್ಟೋ ಭಾಷಾ ತೊಡಕುಗಳು ಕಾಣಿಸಿಕೊಳ್ಳಲು ಸಾಧ್ಯವಾಯಿತು. ಇಲ್ಲಿ ಅಂತಹ ಭಾಷಾ ತೊಡಕುಗಳಿಗೆ ಪರಿಹಾರ ದೊರೆಯುವುದಿಲ್ಲ. ಭಾಷೆಯ ಕ್ಲಿಷ್ಟರಚನೆಗಳ ಬಗೆಗೆ ಸಂಪೂರ್ಣ ಜ್ಞಾನ ನೀಡುವುದು ಈ ಪದ್ಧತಿಯಿಂದ ಸಾಧ್ಯವಿಲ್ಲ. ಭಾಷೆಯನ್ನು ವಿವಿಧ ಶೈಲಿಯಲ್ಲಿ ಬಳಸುವಲ್ಲಿ, ಸಾಹಿತ್ಯ ರಚನೆ ಮಾಡುವಲ್ಲಿ, ಭಾಷೆಯನ್ನು ಸಂದರ್ಭಾನುಸಾರ ಅಳವಡಿಸುವಲ್ಲಿ ನೇರಪದ್ಧತಿ ವಿಫಲವಾಗಿದೆ.

ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಪರಭಾಷೆಗಳನ್ನು ಆದಷ್ಟು ಕಡಿಮೆ ಅವಧಿಯಲ್ಲಿ ಕಲಿಸುವ ಆವಶ್ಯಕತೆ ಹೆಚ್ಚಾಗಿ ಕಂಡುಬಂದಿತು. ಅತಿ ಶೀಘ್ರವಾಗಿ ಭಾಷೆಯನ್ನು ಕಲಿಸುವ ಬೇರೆ ಬೇರೆ ವಿಧಾನಗಳು ಹೊರಬಂದವು. ಅಂತಹ ವಿಧಾನಗಳಲ್ಲಿ ನೇರ ಪದ್ಧತಿಯೂ ಒಂದು. ಓದುವುದು ಮತ್ತು ಬರೆಯುವುದನ್ನು ಕಲಿಸುವ ವಿಧಾನಗಳು ಹೆಚ್ಚು ಅಸಮರ್ಪಕವಾಗಿದ್ದ ಕಾರಣ ಕೇವಲ ಓದುವುದನ್ನು ಕಲಿತ ವಿದ್ಯಾರ್ಥಿಗಳು ದೋಷಪೂರಿತ ಉಚ್ಚಾರಣೆ ಮಾಡುವುದು ಅನಿವಾರ್ಯವಾಗಿತ್ತು. ಅವರ ಬರವಣಿಗೆಯು ಅಸಮರ್ಪಕ ಅಭಿವ್ಯಕ್ತಿ ಎಂಬ ತಪ್ಪುಕಲ್ಪನೆಯಿಂದ ಅವರು ಮುಕ್ತರಾಗಲು ಸಾಧ್ಯವಾಗಲಿಲ್ಲ. ನೇರಪದ್ಧತಿಯ ಭಾಷಾ ಬೋಧನೆಯಲ್ಲಿ ಒಂದು ಬಹು ಮುಖ್ಯ ದೋಷವಿದೆ. ಅದೇ ಪರಭಾಷೆಯನ್ನು ಮಾತೃಭಾಷೆಯನ್ನು ಕಲಿಸುವುದು ಎರಡು ಒಂದೇ ಎಂಬ ಭಾವನೆ ಅವರಲ್ಲಿದ್ದ ಬಹು ದೊಡ್ಡ ದೋಷ. ವಿದ್ಯಾರ್ಥಿಯನ್ನು ನೇರವಾಗಿ ಪರಭಾಷೆಯ ಸಂಪರ್ಕಕ್ಕೆ ಒಡ್ಡುವುದರಿಂದ ಅವನ ಮನಸ್ಸಿನ ಮೇಲೆ ಸಾಕಷ್ಟು ಪ್ರಭಾವ ಉಂಟಾಗುತ್ತದೆ. ಪರಭಾಷೆ ಕಲಿಯುವವನ ಮನಃಸ್ಥಿತಿ, ಮಾತೃಭಾಷೆ ಕಲಿಯುವವನ ಮನಸ್ಸಿಗಿಂತ ಭಿನ್ನವಾಗಿರುತ್ತದೆ. ತನ್ನ ಆಸೆ ಆಕಾಂಕ್ಷೆಗಳನ್ನು ಅಭಿವ್ಯಕ್ತಿಗೊಳಿಸಲು ಬೇರೆ ಪರಿಣಾಮಕಾರಿಯಾದ ಯಾವ ಮಾರ್ಗವೂ ಇರದ ಕಾರಣ ಅವನು ತನ್ನ ಮಾತೃಭಾಷೆಯನ್ನು ಅನಿವಾರ್ಯವಾಗಿ ಕಲಿಯಲೇ ಬೇಕು. ಪರಭಾಷೆ ಕಲಿಯುವಾಗ ಇಂತಹ ಕಡ್ಡಾಯವೇನೂ ಇರುವುದಿಲ್ಲ. ಅನಿವಾರ್ಯ ಹಾಗೂ ಅಗತ್ಯವಾದ ಸಂದರ್ಭಗಳಲ್ಲಿ ತನ್ನ ಮಾತೃಭಾಷೆಯ ಮೂಲಕ

ವ್ಯವಹರಿಸಲು ಸಾಧ್ಯವಿದೆ. ಮಾತೃಭಾಷೆ ಕಲಿಯುವಾಗ ಮಗುವಿನ ಮನಸ್ಸು ಶಿಳಿಯಾಗಿರುತ್ತದೆ. ಭಾಷೆಯ ಮಾದರಿಗಳು ಆ ಮಗುವಿನ ಮನಸ್ಸಿನಲ್ಲಿ ಸುಲಭವಾಗಿ ಮುದ್ರಿತವಾಗುತ್ತವೆ. ಅನ್ಯಭಾಷೆಯನ್ನು ಕಲಿಯುವಾಗ ಮಾತೃಭಾಷೆಯ ಮಾದರಿ ಆಗಲೆ ಅಲ್ಲಿ ಬೇರುಬಿಟ್ಟಿರುವುದರಿಂದ ಅನ್ಯಭಾಷೆಯನ್ನು ಮಾತೃಭಾಷೆಯ ಮಾದರಿಯಲ್ಲಿಯೆ ಗ್ರಹಿಸಲಾಗುತ್ತದೆ. ಈ ಎರಡರ ಅಂತರವನ್ನು ದಾಟದ ಹೊರತು ವಿದ್ಯಾರ್ಥಿ ಪರಭಾಷೆಯನ್ನು ಸಮರ್ಪಕವಾಗಿ ಕಲಿಯಲಾರ.

ಎರಡನೇ ಮಹಾಯುದ್ಧದ ಕಾಲದಲ್ಲಿ ಪೂರ್ಣಸಂಪರ್ಕ ಸಾಧನೆಗಾಗಿ ಪರಭಾಷಾ ಬೋಧನೆಯ ಸಮಸ್ಯೆ ಅದರಲ್ಲಿಯೂ ಇಂಗ್ಲಿಷ್ ಭಾಷೆಯನ್ನು ಅನ್ಯಭಾಷೆಯನ್ನಾಗಿ ಬೋಧಿಸುವ ಆವಶ್ಯಕತೆ ಉದ್ಭವಿಸಿತು. ಈ ದಿಕ್ಕಿನಲ್ಲಿ ಆಲೋಚಿಸಲು ಹೊರಟ ಭಾಷಾವಿಜ್ಞಾನಿಗಳು ಜನರು ಆಡುವ ರೀತಿಯಲ್ಲಿ ಸಾಮಾನ್ಯ ಸಂಭಾಷಣೆಯ ವಾಕ್ಯಗಳನ್ನು ಪುನರುಚ್ಚಾರ ಮಾಡುವುದು ಅವನ್ನು ನೆನಪಿನಲ್ಲಿಟ್ಟುಕೊಳ್ಳುವುದು ಅವಶ್ಯವೆಂದು ಅವರು ಭಾವಿಸಿದರು. ಭಾಷಾರಚನೆಯ ಒಳಭಾಗಗಳಾದ ರಾಗ, ಉಚ್ಚಾರ, ಪದಬಂಧ ಮತ್ತು ವಾಕ್ಯಗಳ ವಿಭಿನ್ನ ಅಂಶಗಳನ್ನು ಕುರಿತ ವಿವರಣೆಗಳನ್ನು ಅವರು ತಿಳಿಯಪಡಿಸಿದರು. ಅವರ ಆ ವಿವರಣೆಗಳ ಸಹಾಯದಿಂದ ಮೂಲ ವಾಕ್ಯಗಳು ಮತ್ತು ಅವುಗಳ ರೂಪಾಂತರಗಳನ್ನು ಅಭ್ಯಾಸ ಮಾಡುವಂತೆ ಕ್ರಮಕ್ರಮವಾಗಿ ಭಾಷಾರಚನೆಯನ್ನು ಗ್ರಹಿಸಲು ಸಾಧ್ಯವಾಯಿತು. ಇದಕ್ಕಾಗಿ ಹೆಚ್ಚು ಪರಿಣಾಮಕಾರಿಯಾದ ವಿವಿಧ ಮಾದರಿ ಪಾಠಗಳು (Pattern Practice) ಹೊರಬಂದವು. ಇದು ವಾಕ್ಯಗಳನ್ನಷ್ಟೇ ಅಲ್ಲದೆ ವಿವಿಧ ಮಾದರಿಗಳನ್ನು ಮೈಗೂಡಿಸಿಕೊಳ್ಳಲು ಸಿದ್ಧಪಡಿಸಿದ ಒಂದು ವಿಧಾನವಾಗಿ ಕಾಣಿಸಿಕೊಂಡಿತು.

ಭಾಷೆಯ ರಚನಾತ್ಮಕ ಅಂಶಗಳ ಮೇಲೆ ಸಂಶೋಧನೆ ನಡೆಸುತ್ತಿದ್ದ ಲಂಡನ್ ವಿಶ್ವವಿದ್ಯಾನಿಲಯದ ಲಂಡನ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್ ಹಾಗೂ ಬ್ರಿಟಿಷ್ ಕೌನ್ಸಿಲ್ ಸಂಸ್ಥೆಗಳಲ್ಲಿದ್ದ ಭಾಷಾ ಪರಿಣತರು ಈ ದಿಸೆಯಲ್ಲಿ ಸಂರಚನಾತ್ಮಕ ಪದ್ಧತಿಯನ್ನು (Structural method) ರೂಪಿಸಲು ಪ್ರಯತ್ನಿಸಿದರು. ಪಾಠಗಳನ್ನು ಶ್ರೇಣಿಯ ರೂಪದಲ್ಲಿ ಯೋಜಿಸಿಕೊಂಡು ಆ ಭಾಷೆಯ ಒಳರಚನಾತ್ಮಕ ಅಂಶಗಳನ್ನು ವಿವರಣೆಗಳೊಂದಿಗೆ ಹಂತ ಹಂತವಾಗಿ ಕಲಿಸತೊಡಗಿದುದರಿಂದ ಭಾಷಾಸಂರಚನಾತ್ಮಕ ಪದ್ಧತಿ ನೇರ ಪದ್ಧತಿಗಿಂತ ಹೆಚ್ಚು ಪರಿಣಾಮಕಾರಿಯಾಗಿ ಗೋಚರಿಸಿತು. ನೇರ ಪದ್ಧತಿಯ ವಿಫಲತೆಯಿಂದಾಗಿ ಅನೇಕ ವೈಜ್ಞಾನಿಕ ಪದ್ಧತಿಗಳು ರೂಪುಗೊಂಡವು. ಅವುಗಳಲ್ಲಿ ಶ್ರವಣಮೌಖಿಕ ಪದ್ಧತಿ, ಸಂರಚನಾತ್ಮಕ ಪದ್ಧತಿ ಮುಖ್ಯವಾಗಿವೆ. ಇವುಗಳಿಂದ ಶ್ರವಣ, ಮೌಖಿಕ ಗ್ರಹಣ, ಪಠನ ಓದುಬರಹ ಕಲೆಗಳಲ್ಲಿ ಪರಿಣತಿ ಪಡೆಯಲು ಅವಕಾಶ ದೊರೆಯಿತು. ಇವುಗಳಿಂದ ಮೂಲವಾಕ್ಯಗಳನ್ನು ಮೊದಲು ಕಲಿಸಿ ಅನಂತರ ಅವುಗಳ ಬೇರೆ ಬೇರೆ ವಾಕ್ಯಗಳನ್ನು ಕಲಿಸುವ ತಂತ್ರವನ್ನು ರೂಪಿಸಿಕೊಳ್ಳಲಾಯಿತು. ಪರಿಮಿತ ಶಬ್ದ ಸಂಪತ್ತಿನೊಳಗೆ ಸರಳ ಸಂಭಾಷಣೆಯನ್ನು ಕಲಿಸಿ ಅದರ

ಮೂಲಕ ಭಾಷೆಯ ರಚನೆಯನ್ನು ಕಲಿಸುವುದು ಇಲ್ಲಿಯ ವೈಶಿಷ್ಟ್ಯ. ಇಷ್ಟಾದರೂ ಈ ಪದ್ಧತಿಯಲ್ಲಿ ಸಾಕಷ್ಟು ತೊಡಕುಗಳಿವೆ. ಇದರಲ್ಲಿ ಅನ್ಯಭಾಷೆ ಮತ್ತು ಸ್ವಭಾಷೆಗಳ ತುಲನಾತ್ಮಕ ಅಧ್ಯಯನಕ್ಕೆ ಆಸ್ಪದವಿಲ್ಲದೆ ಇರುವುದರಿಂದ ವಿದ್ಯಾರ್ಥಿ ಅನೇಕ ಭಾಷಿಕ ಸಮಸ್ಯೆಗಳಿಗೆ ಸಿಕ್ಕಿ ತೊಳಲಾಡಬೇಕಾಯಿತು. ಯಾವುದೋ ಒಂದು ಸಂದರ್ಭವನ್ನು ಆಧರಿಸಿ ಬರೆದ ವಾಕ್ಯಗಳನ್ನು ಕಲಿಯುವುದರಿಂದ ಇತರ ಸಂದರ್ಭಗಳಿಗೆ ಬೇಕಾದ ವಾಕ್ಯಗಳನ್ನು ಇದರಲ್ಲಿ ಅವನು ಬಳಸಲು ಅಸಮರ್ಥನಾಗುತ್ತಾನೆ. ಈ ಕಾರಣದಿಂದ ಈ ಎಲ್ಲಾ ಲೋಪದೋಷಗಳನ್ನು ನಿವಾರಿಸಲು ಸಮಂಜಸವಾದ ಬೋಧನಾ ಪದ್ಧತಿಯೊಂದನ್ನು ರೂಪಿಸಿಕೊಳ್ಳಬೇಕಾಗಿ ಬಂದಿತು. ಇದರಿಂದಾಗಿ ಭಾಷೆಯ ಬೋಧನೆಗೆ ಹೆಚ್ಚು ವೈಜ್ಞಾನಿಕವಾದ ಬೋಧನಾ ಪದ್ಧತಿಯನ್ನು ರೂಪಿಸಿಕೊಳ್ಳಲಾಯಿತು. ಪರಭಾಷೆಯನ್ನು ಸ್ವಭಾಷೆ ಅಥವಾ ಮಾತೃಭಾಷೆಯಂತೆ ಲೀಲಾಜಾಲವಾಗಿ ಬಳಸುವ ಸಾಮರ್ಥ್ಯ ಕಲಿಸುವುದೇ ಈ ಪದ್ಧತಿಯ ಮುಖ್ಯ ಉದ್ದೇಶ. ಪ್ರಾರಂಭದಲ್ಲಿ ಮೂಲವಾಕ್ಯಗಳ ಕಂಠಪಾಠ ಸಂದರ್ಭ ಸನ್ನಿವೇಶಕ್ಕೆ ತಕ್ಕಂತೆ ಅವುಗಳ ರೂಢೀಕರಣ ಭಾಷೆಯ ಕಲಿಕೆಯ ರೂಪದಲ್ಲಿ ನಡೆಯಿತು. ರೂಪಾಂತರ (transformation) ತಂತ್ರಗಳ ಮೂಲಕ ವಿವಿಧ ವಾಕ್ಯಗಳನ್ನು ಉತ್ಪಾದಿಸುವಂತೆ ತರಬೇತಿಕೊಡಲಾಯಿತು. ಭಾಷೆಯ ರಚನೆಗಳನ್ನು ಹಂತಹಂತವಾಗಿ ವಿಶ್ಲೇಷಿಸಿ ಅವುಗಳ ಬಗ್ಗೆ ವಿವರವಾಗಿ ಚರ್ಚೆ ನಡೆಸಲು ಇಲ್ಲಿ ಅವಕಾಶ ದೊರೆಯಿತು. ಯೋಜಿತ ಪಾಠಗಳ ಮೂಲಕ ಭಾಷೆಯ ಕ್ಲಿಷ್ಟ ಸಮಸ್ಯೆಗಳನ್ನು ಸೂಕ್ಷ್ಮ ವಿಚಾರಗಳನ್ನು ಕಲಿಸುವುದರಿಂದ ಅವು ವಿದ್ಯಾರ್ಥಿಗೆ ಭಾರವೆನಿಸಲಾರವು. ಅತ್ಯಾಧುನಿಕ ಭಾಷಾ ಬೋಧನಾ ಸಲಕರಣೆಗಳನ್ನು, ಯಂತ್ರೋಪಕರಣಗಳನ್ನು ಬಳಸುವುದರಿಂದ ಭಾಷೆಯ ಎಲ್ಲಾ ಕೌಶಲಗಳನ್ನು ಯಶಸ್ವಿಯಾಗಿ ಕಲಿಸಲು ಈ ವೈಜ್ಞಾನಿಕ ಪದ್ಧತಿಯಲ್ಲಿ ಸಾಧ್ಯವಿದೆ. ಆದಕಾರಣ ಮೇಲಿನ ಆ ಎಲ್ಲಾ ಬೋಧನಾ ವಿಧಾನಗಳಿಗಿಂತ ಈ ವೈಜ್ಞಾನಿಕ ಪದ್ಧತಿ (Scientific method) ಹೆಚ್ಚು ಪರಿಣಾಮಕಾರಿ ಎನಿಸಿಕೊಂಡಿತು

ಎರಡನೇ ಮಹಾಯುದ್ಧದ ಅನಂತರ ಭಾಷಾವೈಜ್ಞಾನಿಕ ಪದ್ಧತಿಗೆ ಮುದ್ರಿಸಿಕೊಂಡಿದ್ದ ಮುದ್ರಿಕೆಗಳು ಇತರ ಶ್ರವ್ಯ ಸಾಮಗ್ರಿಗಳು ಹೆಚ್ಚು ಜನಪ್ರಿಯವಾದವು. ಇವು ಮನೆಯಲ್ಲಿಯೇ ಕುಳಿತು ಅಭ್ಯಾಸಮಾಡಲು ಅಗತ್ಯವಾದ ಅಧಿಕೃತ ಭಾಷಾ ಮಾದರಿಗಳನ್ನು ಒದಗಿಸಿದವು. ಇದರಿಂದ ವಿದ್ಯಾರ್ಥಿಯ ಶ್ರವ್ಯ ವಾಚ್ಯ ಅಭ್ಯಾಸಕ್ಕಾಗಿ ಹೆಚ್ಚು ಅನುಕೂಲವಾಯಿತು. ಭಾಷಾಬೋಧಕನಿಗಾಗಿ ತಯಾರಿಸಿದ ಅನ್ಯಭಾಷೆ ಮತ್ತು ಸ್ವಭಾಷೆಗಳೊಳಗಿನ ವೈದೃಶ್ಯಗಳನ್ನೊಳಗೊಂಡ ಅಧ್ಯಯನಗಳು ಭಾಷಾವೈಜ್ಞಾನಿಕ ಪದ್ಧತಿಯನ್ನು (Linguistic method) ಹೆಚ್ಚು ಪರಿಣಾಮಕಾರಿಯನ್ನಾಗಿ ಮಾಡಿದವು. ಕಂಠಪಾಠ ಮಾಡಲು ಅಗತ್ಯವಾದ ಸಾಮಾನ್ಯ ಸಂಭಾಷಣೆಯ ವಾಕ್ಯಗಳು, ಪರಭಾಷೆಯ ಮಾತಿನ ಸರಣಿ ಮತ್ತು ವ್ಯಾಕರಣ ಮಾದರಿಗಳು ಅವನ್ನು

ಗ್ರಹಿಸಿ ಪುನರುಚ್ಚರಿಸಲು ಸಹಾಯಕವಾಗುವ ರಚನೆಯನ್ನು ಕುರಿತ ಟಿಪ್ಪಣಿಗಳು, ಮಾದರಿಗಳನ್ನು ಮೈಗೂಡಿಸಿಕೊಳ್ಳಲು ಬೇಕಾದ ಮಾದರಿಪಾಠಗಳು, ತರಗತಿಯ ಹೊರಗೆ ಶ್ರವ್ಯ ಹಾಗೂ ವಾಚ್ಯ ಅಭ್ಯಾಸಕ್ಕೆ ಅಗತ್ಯವಾದ ಪ್ರಯೋಗಶಾಲೆಯ ಸಾಮಗ್ರಿಗಳು ಈ ಪದ್ಧತಿಯನ್ನು ಹೆಚ್ಚು ಯಶಸ್ವಿಗೊಳಿಸಿದವು. ಭಾಷೆಯನ್ನು ಮಾತಾಡುವುದಕ್ಕಾಗಿ ಉಪಯೋಗಿಸುವ ಅವಕಾಶವನ್ನು ಈ ಪದ್ಧತಿ ದೊರಕಿಸಿ ಕೊಟ್ಟಿತು. ಈ ಪದ್ಧತಿಯನ್ನು ಅನುಸರಿಸಿದ ಬೇರೆ ಬೇರೆ ವಿದ್ವಾಂಸರು ಅತ್ಯಾಧುನಿಕ ಪದ್ಧತಿಗಳನ್ನು ಕೆಲವು ಮಾರ್ಪಾಡುಗಳೊಡನೆ ಅಳವಡಿಸಿಕೊಳ್ಳತೊಡಗಿದುದು ಭಾಷೆಯ ಮೇಲಿನ ಆಸಕ್ತಿ ಜನರಲ್ಲಿ ದಿನೇ ದಿನೇ ಹೆಚ್ಚಾಗಲು ಸಾಧ್ಯವಾಯಿತು. ಸತತವಾಗಿ ಸಂದರ್ಭಕ್ಕೆ ತಕ್ಕಂತೆ ಬದಲಾವಣೆಗಳನ್ನು ಅಳವಡಿಸುವ ಪ್ರಯತ್ನಗಳು ನಡೆಯುತ್ತಲೇ ಬಂದವು. ಈ ದಿಕ್ಕಿನಲ್ಲಿ ಪ್ರಗತಿಯ ಹಾದಿಯನ್ನು ಕಂಡುಕೊಳ್ಳಲು ನಾವು ಇನ್ನೂ ಆಲೋಚಿಸುತ್ತಲೇ ಇದ್ದೇವೆ. ಇಂದಿನ ಬಹುತೇಕ ಪ್ರಗತಿಗೆ ಭಾಷಾ ವಿಜ್ಞಾನದ ಪ್ರಗತಿ ಸಕಾರಣವಾಗಿದೆ. ಭಾಷಾವಿಜ್ಞಾನದ ಸಹಾಯದಿಂದ ವಿವಿಧ ಭಾಷಾ ಬೋಧನಾತಂತ್ರಗಳನ್ನು ರೂಪಿಸಿಕೊಳ್ಳುವುದು, ಆ ತಂತ್ರಗಳಿಗೆ ಬಿಗಿಯಾಗಿ ಅಂಟಿಕೊಳ್ಳುವುದು ಹೀಗೆ ಇನ್ನೂ ಹೆಚ್ಚಿನ ಪ್ರಗತಿ ಸಾಧಿಸಬಹುದೆಂದು ಕೆಲವರ ಅಭಿಪ್ರಾಯವಾಗಿದೆ. ಕೆಲವುವೇಳೆ ಇದರಿಂದ ಪ್ರಗತಿ ಕುಂಠಿತವಾಗುವ ಸಂದರ್ಭಗಳು ಇಲ್ಲದೆ ಇಲ್ಲ. ಭಾಷಾವಿಜ್ಞಾನ ಅದರ ಪರಿಧಿಯೊಳಗೆ ಬರುವ ಸಿದ್ಧಾಂತಗಳನ್ನು ಮಾತ್ರ ಪರ್ಯಾಲೋಚಿಸಿ ತನ್ನ ವ್ಯಾಪ್ತಿಗೆ ಬಾರದ ಸಂಗತಿಯನ್ನು ಬಿಟ್ಟು ಬಿಡುತ್ತದೆ. ಒಂದು ಭಾಷೆಯ ಎಲ್ಲಾ ಮುಖಗಳನ್ನು ತನ್ನ ವಿಶ್ಲೇಷಣೆಗೆ ಒಳಪಡಿಸದೆ ಇರಬಹುದಾದ ಸಾಧ್ಯತೆಗಳು ಉಂಟು. ಭಾಷಾ ಬೋಧಕನು ಒಂದು ಭಾಷೆಯನ್ನು ಕಲಿಸುವಾಗ ಅದರ ಎಲ್ಲಾ ಮುಖಗಳ ಜ್ಞಾನವನ್ನು ಗಳಿಸಿಕೊಳ್ಳಬೇಕಾದುದು ಅತ್ಯಗತ್ಯ. ಇಂದು ಭಾಷಾಬೋಧನೆಗೆ ನೆರವಾಗುವ ವಿವಿಧ ಯಂತ್ರೋಪಕರಣಗಳನ್ನು ಕಂಡುಹಿಡಿಯುವುದರ ಕಡೆ ಸಾರ್ವಜನಿಕರ ಆಸಕ್ತಿ ಬೆಳೆಯುತ್ತಿದೆ. ಯಂತ್ರೋಪಕರಣಗಳು ತೀವ್ರಗತಿಯಲ್ಲಿ ಅಭಿವೃದ್ಧಿಹೊಂದುತ್ತಿರುವುದರಿಂದ ಭಾಷಾ ಬೋಧನೆಯನ್ನು ಯಂತ್ರೋಪಕರಣಗಳಿಗೆ ವರ್ಗಾಯಿಸುವ ಆಲೋಚನೆಯಲ್ಲಿ ಮುಂದುವರಿಯುತ್ತಿದ್ದಾರೆ. ಈ ದಿಸೆಯಲ್ಲಿ ಭಾಷಾಬೋಧನೆಗೆ ಹೆಚ್ಚಿನ ಸಹಾಯ ದೊರಕಬಹುದೆಂದು ನಿರೀಕ್ಷಿಸಬಹುದಾಗಿದೆ. ಆದರೆ ಯಂತ್ರೋಪಕರಣಗಳು ಮಾನವನ ಅಭಿವ್ಯಕ್ತಿಗೆ ಅಗತ್ಯವಾದ ಭಾಷೆಯನ್ನು ಕಲಿಸಲಾರವು. ಯಂತ್ರ ಕಲಿಸಬಹುದಾದ ಕೆಲವೇ ಕೆಲವು ಮಾದರಿ ಪಾಠಗಳು ವ್ಯಕ್ತಿಗಳ ವ್ಯವಹಾರಕ್ಕೆ ಸಾಕಾಗಲಾರವು. ಭಾಷೆ ತುಂಬ ಸಂಕೀರ್ಣವಾದದ್ದು. ಭಾಷೆಯ ಬೋಧನೆಯಂತಹ ಕ್ಲಿಷ್ಟ ಕೆಲಸವನ್ನು ಯಂತ್ರ ನಿರ್ವಹಿಸಲಾರದು. ಭಾಷಾ ಬೋಧಕನ ಶಕ್ತಿಯನ್ನು ಹೆಚ್ಚಿಸುವ ಯಂತ್ರೋಪಕರಣಗಳನ್ನು ಸಂಶೋಧನೆಗಳಿಂದ ಕಂಡುಹಿಡಿಯಬಹುದೇ ವಿನಾ ಭಾಷೆಯನ್ನು ಕಲಿಸಲು ಬೋಧಕನ ಬದಲು ಯಂತ್ರಗಳನ್ನು ಬಳಸಲು

ಬರುವುದಿಲ್ಲ. ಅತ್ಯಂತ ಸಂಕೀರ್ಣವಾದ ಭಾಷೆಯನ್ನು ಬೋಧಕನ ಬದಲು ಯಂತ್ರಗಳ ಸಹಾಯದಿಂದ ಕಲಿತರೆ ಅದು ಎಷ್ಟೊಂದು ನಿರುಪಯುಕ್ತವಾದದ್ದು ಆಗಿರುತ್ತದೆ ಎಂಬುದನ್ನು ಊಹಿಸಿಕೊಳ್ಳಬಹುದು. ಸಂಶೋಧನೆಗಳ ದೃಷ್ಟಿಯಿಂದ ಇಂತಹ ಯಂತ್ರಗಳನ್ನು ಕಂಡುಹಿಡಿಯುವುದರತ್ತ ಹೆಚ್ಚಿನ ಪ್ರಗತಿಯನ್ನು ಸಾಧಿಸಬಹುದೇ ವಿನಾ ಅವನ್ನು ಬೋಧಕನ ಬದಲು ಬಳಸುವ ಉದ್ದೇಶದಿಂದಲ್ಲ. ಭಾಷಾ ಬೋಧನೆಗೆ ಯಂತ್ರಗಳನ್ನು ನಿಯೋಜಿಸಿಕೊಳ್ಳುವ ಕಾಲ ಮುಗಿದುಹೋಯಿತು. ಇನ್ನು ನಾವು ಸಾಹಿತ್ಯದ ಅಭ್ಯಾಸದ ಕಡೆ ಮುಂದುವರಿಯಬೇಕಾಗಿದೆ. ಸಾಹಿತ್ಯ ಮೂಲಭೂತವಾಗಿ ಅದು ಭಾಷೆಯನ್ನು ಕಲಿಸುವುದಿಲ್ಲ. ಅಂತಹ ಅಧ್ಯಯನ ಭಾಷೆಯ ಕಲಿಕೆಗೆ ನೆರವಾಗಲಾರದು. ಬೋಧಕನು ತರಗತಿಯಲ್ಲಿ ಯಾವುದಾದರೊಂದು ಮಾದರಿಯ ಪಾಠ ಹೇಳಿದರೆ ಕಲಿಕೆಯ ತಂತ್ರದಿಂದ ಪ್ರಗತಿಯನ್ನು ಸಾಧಿಸುತ್ತಿದ್ದೇವೆ ಎಂಬ ನಂಬಿಕೆಯೂ ದೂರವಾಗುತ್ತಿದೆ. ಭಾಷೆಯನ್ನು ಕಲಿಯುವ ಮತ್ತು ಕಲಿಸುವ ವೈಜ್ಞಾನಿಕ ದೃಷ್ಟಿಯಲ್ಲಿ ಹೆಚ್ಚಿನ ಭರವಸೆ ಏನನ್ನು ನಾವು ತಳೆಯಲಾರದ ಪರಿಸ್ಥಿತಿಯಲ್ಲಿದ್ದೇವೆ. ಭಾಷಾಕಲಿಕೆ ಬಹು ಸಂಕೀರ್ಣವಾದ ಕಲೆ, ಒಂದೇ ಮೂಲವಾಕ್ಯದಿಂದ ಅನೇಕ ವಾಕ್ಯಗಳನ್ನು ಹೆಚ್ಚು ಕಲಾತ್ಮಕವಾಗಿ ಗ್ರಹಿಸುವವರೆಗೆ ಅದರಲ್ಲಿ ಸಂಕೀರ್ಣತೆ ವ್ಯಾಪಿಸಿರುತ್ತದೆ. ನಿಮಿಷದಲ್ಲಿ ನೂರಾರು ಪದಗಳು ಮತ್ತು ವ್ಯಾಕರಣ ನಿಯಮಗಳನ್ನೊಳಗೊಂಡ ಮಾತಿನ ಸರಣಿಯನ್ನು ಲೀಲಾಜಾಲವಾಗಿ ಬಳಸುವ ಕಲೆಯನ್ನು ಕಲಿಯುವುದು ಮತ್ತು ಕಲಿಸುವುದು ಸಾಮಾನ್ಯವಾದ ಮಾತೇನಲ್ಲ. ಯಾವುದಾದರೊಂದು ದಿಕ್ಕಿನಲ್ಲಿ ಪ್ರಗತಿಯನ್ನು ಸಾಧಿಸಿದಾಕ್ಷಣಕ್ಕೆ ಭಾಷೆಯನ್ನು ಕಲಿಯುವ ಅಥವಾ ಬೋಧಿಸುವುದರಲ್ಲಿನ ತೊಡಕನ್ನು ನಿವಾರಿಸಿದಂತಾಗುವುದಿಲ್ಲ.

ಭಾಷಾಬೋಧನೆ ಮತ್ತು ಕಲಿಕೆಯ ವಿಧಾನಗಳಲ್ಲಿ ಅತ್ಯುತ್ತಮವಾದ ಪದ್ಧತಿಯನ್ನು ಅಳವಡಿಸಿಕೊಂಡು ಭಾಷೆಯನ್ನು ಹೆಚ್ಚು ವ್ಯವಸ್ಥಿತವಾಗಿ ಕಲಿಸುವ ಅಥವಾ ಬೋಧಿಸುವ ಶಿಕ್ಷಣದ ಅಗತ್ಯ ಇಂದು ಅವಶ್ಯವಾಗಿದೆ. ಭಾಷಾಬೋಧಕನಿಗಿರಬೇಕಾದ ವೈಜ್ಞಾನಿಕ ದೃಷ್ಟಿ ಬದಲಾಗಬೇಕಾಗಿದೆ. ಅದು ನಿಪುಣನಾದ ವೈದ್ಯನಿಗೆ ದೇಹಶಾಸ್ತ್ರ, ಅಂಗರಚನಾಶಾಸ್ತ್ರ, ರಸಾಯನಶಾಸ್ತ್ರ ಮತ್ತು ಸೂಕ್ಷ್ಮಜೀವಾಣುಗಳ ಶಾಸ್ತ್ರ ಮುಂತಾದುವುಗಳ ಜ್ಞಾನ ಅವಶ್ಯವಿರುವಂತೆ ಭಾಷಾಬೋಧಕನಿಗೂ ಭಾಷಾವಿಜ್ಞಾನ, ಧ್ವನಿವಿಜ್ಞಾನ, ಲಿಪಿವಿಜ್ಞಾನ ಇತ್ಯಾದಿಗಳ ಜ್ಞಾನ ಅತ್ಯಗತ್ಯವಾಗಿರಬೇಕಾಗಿದೆ. ವೈದ್ಯ ಪ್ರತಿಯೊಂದು ರೋಗಕ್ಕೂ ಒಂದೇ ಬಗೆಯ ಔಷಧಿಯನ್ನು ಕೊಡುವುದಿಲ್ಲ. ಪ್ರತಿಯೊಂದು ರೋಗಕ್ಕೂ ಅವನು ಹೆಚ್ಚು ಪರಿಣಾಮಕಾರಿಯಾಗಬಲ್ಲ ಔಷಧವನ್ನು ಆಯಾ ರೋಗಿಯ ರೋಗಕ್ಕೆ ಅನುಗುಣವಾಗಿ ಹಿತಮಿತ ಪ್ರಮಾಣದಲ್ಲಿ ಕೊಡುತ್ತಾ ಹೋಗುತ್ತಾನೆ. ಆಗ ಯಾವುದಾದರೊಂದು ಔಷಧವು ಅನಿರೀಕ್ಷಿತವಾಗಿ ಅಪೇಕ್ಷೆ ಇಲ್ಲದ ಪರಿಣಾಮವನ್ನುಂಟುಮಾಡಿದರೆ ವೈದ್ಯನು ಕೂಡಲೇ ಅದನ್ನು ನಿಲ್ಲಿಸಿ ಅದರ ಬದಲು ಮತ್ತೊಂದು ಔಷಧಿಯನ್ನು ಕೊಡುತ್ತಾನೆ.

ದಿನೇ ದಿನೇ ವೈದ್ಯಕೀಯ ಜ್ಞಾನಕ್ಕನುಗುಣವಾಗಿ ಹೊರಬರುತ್ತಿರುವ ಔಷಧಗಳನ್ನು ರೋಗಿಯ ರೋಗಕ್ಕನುಗುಣವಾಗಿ ಕೊಡಬೇಕಾಗುತ್ತದೆಯೇ ವಿನಾ ತನ್ನ ಮನಸ್ಸಿಗೆ ಬಂದಂತಲ್ಲ. ಅವನು ರೋಗಕ್ಕೆ ಕಾರಣವೇನು ಎಂಬುದನ್ನು ಪರಿಗಣಿಸದೆ ಅಲಕ್ಷಿಸಲು ಸಾಧ್ಯವಿಲ್ಲ. ಅವನು ಒಂದು ಔಷಧವನ್ನು ಕೊಡುವುದಕ್ಕೆ ಮೊದಲು ಅದು ಆ ರೋಗಕ್ಕೆ ಹೆಚ್ಚು ಪರಿಣಾಮಕಾರಿಯೇ, ಕ್ಷೇಮಕರವೇ ಎಂಬುದನ್ನು ಹೊರ ಬಂದಿರುವ ಪ್ರಯೋಗಗಳ ಸಹಾಯದಿಂದ ಖಚಿತಪಡಿಸಿಕೊಳ್ಳಬೇಕಾಗುತ್ತದೆ. ಅದೇ ರೀತಿ ಭಾಷಾ ಬೋಧಕನು ಭಾಷಾವಿಜ್ಞಾನದ ಸಹಾಯವನ್ನಾಗಲಿ, ಧ್ವನಿ ವಿಜ್ಞಾನ, ಮಾನವ-ಶಿಕ್ಷಣಶಾಸ್ತ್ರ, ಮನೋವಿಜ್ಞಾನಗಳ ಸಹಾಯವನ್ನಾಗಲಿ, ವಿದ್ಯಾರ್ಥಿಯ ವಯಸ್ಸು, ಶಿಕ್ಷಣದ ಹಿನ್ನೆಲೆಯನ್ನಾಗಲಿ, ವಿದ್ಯಾರ್ಥಿಯ ವ್ಯಕ್ತಿತ್ವ ಮತ್ತು ಯೋಗ್ಯತೆಯನ್ನಾಗಲಿ ಅಲಕ್ಷ್ಯಮಾಡಲು ಹೋಗಬಾರದು. ತರಗತಿಗೆ ಅದರ ವಿದ್ಯಾರ್ಥಿಗಳಿಗೆ ಉತ್ತಮವೆನಿಸಿದ ವಿಧಾನವನ್ನು ಬೋಧಕನಿಗೆ ಅಳವಡಿಸಿ ಕೊಂಡು ಮುಂದುವರಿಯುವ ಭಾಷಾಬೋಧನೆಯ ವೈಜ್ಞಾನಿಕ ದೃಷ್ಟಿ ಬೋಧನೆಯ ಹೊಸ ಹೊಸ ವಿಧಾನಗಳು ಹೊರಬಂದಂತೆಲ್ಲಾ ಅವನ ಬೋಧನಾ ವಿಧಾನವನ್ನು ಬದಲಾಯಿಸಿಕೊಳ್ಳುತ್ತಾ ಮುಂದುವರಿಯಬೇಕಾಗುತ್ತದೆ. ಹೇಗೆ ವೈದ್ಯನು ವೈದ್ಯಕೀಯ ಸಾಹಿತ್ಯದಲ್ಲಿ ಪ್ರತಿಯೊಂದು ರೋಗಕ್ಕೂ ಪರಿಣಾಮಕಾರಿಯಾದ ಚಿಕಿತ್ಸೆಮಾಡುವ ಹೊಸ ಹೊಸ ವಿಧಾನಗಳು ಹೊರಬಂದಂತೆಲ್ಲಾ ತನ್ನ ಚಿಕಿತ್ಸೆ ಯನ್ನು ಅಳವಡಿಸಿಕೊಳ್ಳುತ್ತಾನೆಯೋ ಹಾಗೆಯೇ ಬೋಧಕನು ಕೂಡ ಭಾಷೆಯನ್ನು ಕಲಿಸಲು ಅಥವಾ ಬೋಧಿಸಲು ಉತ್ತಮ ವಿಧಾನಗಳು ಹೊರಬಂದಂತೆಲ್ಲಾ ಅವು ಗಳಲ್ಲಿ ಅತ್ಯುತ್ತಮವೆನಿಸಿದ ವಿಧಾನವನ್ನು ತನ್ನ ಬೋಧನೆಗೆ ಅಳವಡಿಸಿಕೊಂಡು ಮುಂದುವರಿದರೆ ಸಾಕು. ಸದ್ಯಕ್ಕೆ ಈ ಮಾರ್ಗವನ್ನು ಬಿಟ್ಟರೆ ಮತ್ತಾವ ಮಾರ್ಗವೂ ಭಾಷಾಬೋಧನೆಗೆ ಇಂದು ದೊರೆಯುವುದಿಲ್ಲ.

ಯಾವುದೇ ಒಂದು ವೃತ್ತಿಯನ್ನು ಆರಂಭಿಸುವಾಗ ಆ ವೃತ್ತಿಗೆ ಸಂಬಂಧಿಸಿದ ಎಲ್ಲಾ ಅರ್ಹತೆಗಳನ್ನು ಪ್ರತಿಯೊಬ್ಬನೂ ಪಡೆದಿರಬೇಕಾದುದು ಅತ್ಯಗತ್ಯ. ಅಂತೆಯೇ ಭಾಷಾಬೋಧಕನು ತನ್ನ ಬೋಧಕ ವೃತ್ತಿಗೆ ಅಗತ್ಯವಾದ ತರಬೇತಿಯನ್ನು ಹೊಂದಿರ ಬೇಕಾದು ಅತ್ಯಾವಶ್ಯಕ. ಭಾಷಾಬೋಧಕನು ತಾನು ವಿದ್ಯಾರ್ಥಿಗಳಿಗೆ ಕಲಿಸುವ ಭಾಷೆಯನ್ನು ಸಾಕಷ್ಟು ಚೆನ್ನಾಗಿ ಕಲಿತಿರಬೇಕು. ಬೋಧಕನಿಗೆ ಅದು ದ್ವಿಭಾಷೆಯಾದರೆ ಅದನ್ನು ಅದರ ಮುಖ್ಯ ಧ್ವನಿಗಳು, ಅವುಗಳ ಉಚ್ಚಾರ, ವಾಕ್ಯರಚನೆ, ಪದರಚನೆ, ಶಬ್ದ ಸಂಪತ್ತು ಮುಂತಾದವುಗಳನ್ನು ತಿಳಿದಿರಬೇಕಾದುದು ಅತ್ಯಗತ್ಯ. ಆ ಭಾಷೆಯ ಉಚ್ಚಾರಣೆಯ ಸೂಕ್ಷ್ಮಾತಿ ಸೂಕ್ಷ್ಮ ವ್ಯತ್ಯಾಸಗಳನ್ನು, ಆ ಭಾಷೆಯ ನುಡಿಗಟ್ಟುಗಳನ್ನು, ಗಾದೆ ಮಾತುಗಳನ್ನು ತಿಳಿದಿರಲೇಬೇಕಾಗುತ್ತದೆ. ಭಾಷಾ ಬೋಧಕರಲ್ಲದವರಿಗಿಂತ ಹೆಚ್ಚಿನ ಮಟ್ಟದ ಭಾಷಾ ಪ್ರಾವೀಣ್ಯ ಭಾಷಾ ಬೋಧಕನಿಗೆ ಅವಶ್ಯಕ ಎನಿಸುತ್ತದೆ. ಭಾಷೆ ಭಾಷಾಬೋಧಕನ ಪಾಲಿಗೆ

ದ್ವಿಭಾಷೆಯಾಗಿದ್ದಾಗ ಅದನ್ನು ಅವನು ಹೆಚ್ಚು ಶ್ರದ್ಧೆಯಿಂದ ಅದರಲ್ಲಿ ನೈಪುಣ್ಯವನ್ನು ಗಳಿಸಿಕೊಂಡು ಅದನ್ನು ಹಾಗೆಯೇ ಉಳಿಸಿಕೊಳ್ಳಲು ಯತ್ನಿಸಬೇಕಾಗುತ್ತದೆ. ಮಾತನಾಡುವಾಗ ನಾವು ಧ್ವನಿತರಂಗಗಳನ್ನು ನಮ್ಮ ಬಾಯಿಯ ಮೂಲಕ ಹೊರಡಿಸುತ್ತೇವೆ. ಆ ಧ್ವನಿಸಮೂಹಕ್ಕೆ ಅರ್ಥವಿರುತ್ತದೆ. ಅವನ್ನು ಕೇಳುವವನು ಕೇಳಿದ ತಕ್ಷಣವೇ ಅರ್ಥಮಾಡಿಕೊಳ್ಳುತ್ತಾನೆ. ಭಾಷೆಯಲ್ಲಿ ವಾಕ್ಯವೇ ಹಿರಿಯ ಘಟಕ, ಧ್ವನಿಯೇ ಸಂಕೀರ್ಣವಾದ ಘಟಕ. ಪದ ಇವುಗಳ ನಡುವಿನ ಘಟಕ. ಇವುಗಳನ್ನು ಬೋಧಕನು ವಿಶ್ಲೇಷಿಸಿ ವಿವರಿಸಿಕೊಳ್ಳುವ ಅನುಭವವನ್ನು ಹೊಂದಿರಬೇಕಾದುದು ಅತ್ಯಾವಶ್ಯಕ. ಧ್ವನಿಸಮೂಹಗಳ ಅರ್ಥವನ್ನು ಸಾಂಸ್ಕೃತಿಕ ಹಾಗೂ ಸಾಮಾಜಿಕವಾಗಿ ನಿರ್ಧರಿಸಲಾಗುತ್ತದೆ. ಧ್ವನಿ ಸಮೂಹಕ್ಕೂ ಅರ್ಥಕ್ಕೂ ಇರುವ ಸಂಬಂಧ ನೇರವಾದುದಲ್ಲ. ಅದು ಯಾದೃಚ್ಛಿಕವಾದದ್ದು. ಚಿಕ್ಕ ಚಿಕ್ಕ ಘಟಕಗಳು ಸೇರಿ ದೊಡ್ಡ ದೊಡ್ಡ ಘಟಕಗಳ ನಿರ್ಮಾಣವಾಗಿದೆ. ಅವನ್ನೆ ವಾಕ್ಯ, ಪದ, ರೂಪ, ಧ್ವನಿ ಇತ್ಯಾದಿಯಾಗಿ ಹೆಸರಿಸಿಕೊಳ್ಳಲಾಗುತ್ತಿದೆ. ಭಾಷೆಯಲ್ಲಿ ಅಭಿವ್ಯಕ್ತಿ ಮತ್ತು ಭಾವ ಎಂಬ ಎರಡು ಸಮಾನಾಂತರ ಉಪರಚನೆಗಳಿವೆ. ಇವುಗಳ ಸಂಬಂಧವನ್ನೇ ಭಾಷೆ ಎನ್ನುವುದು. ಧ್ವನಿಗಳಿಂದ ಪದಗಳು, ಪದಗಳಿಂದ ವಾಕ್ಯಗಳು ನಿರ್ಮಾಣವಾಗುತ್ತವೆ. ಇವು ಅಭಿವ್ಯಕ್ತಿಗೆ ಸಂಬಂಧಿಸಿದ ವಿಚಾರಗಳು. ಇವುಗಳ ಹಿಂದೆ ಅವುಗಳ ಭಾವ ಅಡಗಿದೆ. ಆ ಭಾವವೇ ಅರ್ಥಕ್ಕೆ ಸಂಬಂಧಿಸಿದ್ದು. ಇವು ಎರಡು ಪರಸ್ಪರ ಸಂಬಂಧವನ್ನು ಹೊಂದಿರುವುದರಿಂದಲೇ ಅಭಿವ್ಯಕ್ತಿಯಿಂದ ಭಾವವು ಹೊರಹೊಮ್ಮುತ್ತಿದೆ. ಧ್ವನಿಗಳಿಗೆ ಅರ್ಥವಿಲ್ಲ. ಅವುಗಳಿಂದಾದ ಪದಗಳಿಗೆ ಅರ್ಥವಿದೆ. ಪದಗಳು ವಾಕ್ಯದ ಭಾಗಗಳು, ಅವು ಒಂದೊಂದು ಕೆಲವುವೇಳೆ ವಾಕ್ಯವಾಗಬಹುದು. ಪ್ರತಿಯೊಂದು ವಾಕ್ಯವೂ ಕರ್ತೃ, ಕರ್ಮ, ಕ್ರಿಯೆ, ವಿಶೇಷಣ, ಅವ್ಯಯಗಳಂತಹ ಭಾಗಗಳಿಂದ ಕೂಡಿರುತ್ತದೆ. ಈ ಭಾಗಗಳು ಪರಸ್ಪರ ಸಂಬಂಧವನ್ನು ಹೊಂದಿಯೇ ಕೆಲಸ ಮಾಡುತ್ತವೆ. ನಾಮಪದಗಳು, ಸರ್ವನಾಮಗಳು, ಸಾಮಾನ್ಯವಾಗಿ ಕರ್ತೃಗಳಾಗಿಯೂ, ಕ್ರಿಯಾಪದಗಳು ಕ್ರಿಯೆಯಾಗಿಯೂ, ಗುಣವಾಚಕಗಳು, ಕ್ರಿಯಾವಿಶೇಷಣಗಳು ಮುಂತಾದುವು ಅವ್ಯಯಗಳಾಗಿಯೂ ಕಾಣಿಸಿಕೊಳ್ಳುತ್ತಿವೆ. ಅವು ಆ ಸಮಾಜದ ಸಾಂಸ್ಕೃತಿಕ ಪರಂಪರೆಯಿಂದ ಬೆಳೆದುಬಂದ ಅರ್ಥವನ್ನು ಹೊಂದಿರುತ್ತವೆ. ಈ ಅರ್ಥ ಅವುಗಳ ಗುಣ, ಸ್ಥಿತಿ, ವಸ್ತು, ಗತಿ ಇತ್ಯಾದಿಗಳಿಗೆ ಅನುಗುಣವಾಗಿರುತ್ತದೆ. ಪದಸಮೂಹದಲ್ಲಿ ಒಂದು ಕೇಂದ್ರಪದ ಅದರ ಹಿಂದೆ ಅಥವಾ ಮುಂದೆ ವಿಶೇಷಣ ಮತ್ತು ಕ್ರಿಯಾವಿಶೇಷಣಗಳು ಇರುತ್ತವೆ. ಇವು ವಿಶೇಷಣಗಳ ರಚನಾ ಸ್ವರೂಪವನ್ನು ನಿರ್ದೇಶಿಸುತ್ತವೆ. ಭಾಷೆಯ ಪ್ರತಿಯೊಂದು ಪದವೂ ಒಂದು ನಿರ್ದಿಷ್ಟ ಕಾರ್ಯವನ್ನು ನಿರ್ವಹಿಸುತ್ತದೆ. ಪದಗಳು ಅಭಿವ್ಯಕ್ತಿಯ ಸ್ವತಂತ್ರ ಘಟಕಗಳು, ಧಾತುಗಳು ಮತ್ತು ಪ್ರತ್ಯಯಗಳು ಸೇರಿ ಪದಗಳಾಗುತ್ತವೆ. ಆ ಭಾಷೆಯನ್ನು ಆಡುವವನು ಆ ಪದಗಳನ್ನು ಪ್ರತ್ಯೇಕ ಘಟಕಗಳನ್ನಾಗಿ ಗುರುತಿಸಬಲ್ಲ. ಒಂದು

ಭಾಷೆಯನ್ನು ಆಡುವವನು ಪದಗಳ ಧ್ವನಿವೈದೃಶ್ಯದಿಂದ ಅವುಗಳ ಅರ್ಥವನ್ನು ಗುರುತಿಸಿಕೊಳ್ಳುವನು. ಅದೇ ರೀತಿ ಅದನ್ನು ಕೇಳುವವನು ಕೇಳಿದ ತಕ್ಷಣವೇ ಅರ್ಥಮಾಡಿಕೊಳ್ಳಬಲ್ಲ. ವೈದೃಶ್ಯವು ಧ್ವನಿಗಳಲ್ಲಿ ಮಾತ್ರವಲ್ಲ ಆಕೃತಿಗಳಲ್ಲಿಯೂ ತೋರಿಬರುತ್ತದೆ. ಈ ವೈದೃಶ್ಯ ಅರ್ಥಗ್ರಹಿಕೆಗೆ ಬಹಳ ಮುಖ್ಯ. ಕೇಳುವವನು ವಾಕ್ಯ, ಪದ, ಅವುಗಳ ರಚನೆಗಳನ್ನು ಅವುಗಳ ವೈದೃಶ್ಯವನ್ನು ಆಧರಿಸಿಯೇ ಅರ್ಥ ಮಾಡಿಕೊಳ್ಳುತ್ತಾನೆ. ಒಂದು ಭಾಷೆಯಲ್ಲಿರುವ ಧ್ವನಿಗಳೆಲ್ಲವೂ ಧ್ವನಿಮಾಗಳಲ್ಲ. ಹಾಗೆಯೇ ಆಕೃತಿಗಳೆಲ್ಲವೂ ಆಕೃತಿಮಾಗಳಲ್ಲ. ಆಕೃತಿಮಾಗಳಿಗೆ ಅರ್ಥ ಉಂಟು, ಧ್ವನಿಮಾಗಳಿಗೆ ಅರ್ಥವಿಲ್ಲ. ಆದರೆ ಧ್ವನಿಮಾಗಳು ಅರ್ಥವ್ಯತ್ಯಾಸ ಮಾಡಬಲ್ಲ ಸಾಮರ್ಥ್ಯವನ್ನು ಹೊಂದಿವೆ. ಪ್ರತಿಯೊಂದು ಮಗುವು ತನ್ನ ತಂದೆತಾಯಿಯರ ಸಹಾಯದಿಂದ ಅದರ ಮಾತೃಭಾಷೆಯನ್ನು ಕಲಿಯುವಂತೆ ಪರಿಸರಗಳ ಅನಿವಾರ್ಯ ಒತ್ತಡದಿಂದಾಗಿ ಬೇರೊಂದು ಭಾಷೆಯನ್ನು ಕಲಿಯಬಹುದು. ಎರಡು ಭಾಷೆಗಳು ಬಳಕೆಯಲ್ಲಿರುವ ಕ್ಷೇತ್ರಗಳಲ್ಲಿ ವಾಸಿಸುವ ಜನರು ಸಾಮಾನ್ಯವಾಗಿ ದ್ವಿಭಾಷಿಗಳಾಗಿರುತ್ತಾರೆ. ಪ್ರಪಂಚದ ಅನೇಕ ಕಡೆ ದ್ವಿಭಾಷಾ ಪರಿಸ್ಥಿತಿಯುಂಟು. ಕೆಲವುವೇಳೆ ಕೆಲವರು ಅನಿವಾರ್ಯವಾಗಿ ಮೂರು ನಾಲ್ಕು ಭಾಷೆಗಳನ್ನು ಆಡಬಲ್ಲವರಾಗಿರುತ್ತಾರೆ. ಅವುಗಳಲ್ಲಿ ಯಾವುದು ದ್ವಿತೀಯ, ಯಾವುದು ತೃತೀಯ ಎಂದು ಹೇಳಲು ಬರುವುದಿಲ್ಲ. ಪ್ರಥಮ ಭಾಷೆಯನ್ನು ಬಿಟ್ಟರೆ ಉಳಿದೆಲ್ಲ ಭಾಷೆಗಳು ಅವರಿಗೆ ದ್ವಿತೀಯ ಭಾಷೆಗಳೇ ಆಗುತ್ತವೆ. ಒಬ್ಬನು ಮನೆಯಲ್ಲಿ ಒಂದು ಭಾಷೆಯನ್ನು, ಧಾರ್ಮಿಕ ಪರಿಸರಗಳಲ್ಲಿ ಇನ್ನೊಂದು ಭಾಷೆಯನ್ನು, ಉದ್ಯೋಗ ಪರಿಸರದಲ್ಲಿ ಮತ್ತೊಂದು ಭಾಷೆಯನ್ನು ಬಳಸಬಹುದು. ಪ್ರತಿಯೊಂದು ಭಾಷೆಗೂ ತನ್ನದೇ ಆದ ನಿರ್ದಿಷ್ಟ ಸ್ಥಾನಮಾನಗಳಿವೆ. ದ್ವಿತೀಯ ಭಾಷೆಯನ್ನು ಕೇವಲ ಶಾಲಾ ಕಾಲೇಜುಗಳಲ್ಲಿ ಕಲಿಯಲಾಗುತ್ತದೆ.

ಒಂದು ಭಾಷೆ ಆಡುವವರು ಬೇರೆ ಬೇರೆ ಸ್ಥಳ, ಬೇರೆ ಬೇರೆ ಜಾತಿ, ಬೇರೆ ಬೇರೆ ಸಮಾಜ, ಸಂಸ್ಕೃತಿ, ಧರ್ಮ ಮುಂತಾದುವುಗಳಿಗೆ ಸಂಬಂಧಿಸಿದವರು ಆಗಿದ್ದರೆ ಅವರು ಆಡುವ ಭಾಷೆಯಲ್ಲಿ ಅವರ ಸ್ಥಳ, ವರ್ಗ, ಜಾತಿ, ಧರ್ಮ, ವೃತ್ತಿ, ಆಚಾರ, ಸಮಾಜ, ಸಂಸ್ಕೃತಿ ಇತ್ಯಾದಿಗಳಿಗೆ ತಕ್ಕಂತೆ ವ್ಯತ್ಯಾಸವಿರುತ್ತದೆ. ಈ ವ್ಯತ್ಯಾಸ ಅವರಿಗೆ ಪ್ರಾದೇಶಿಕವಾಗಿರಬಹುದು ಅಥವಾ ಸಾಮಾಜಿಕವಾಗಿರಬಹುದು. ಪಂಪನ ಕಾಲದ ಭಾಷೆಗೂ ಇಂದಿನ ಕಾಲದ ಭಾಷೆಗೂ ಸಾಕಷ್ಟು ವ್ಯತ್ಯಾಸವಿದೆ. ಭಾಷೆ ಕಾಲದಿಂದ ಕಾಲಕ್ಕೆ, ಸ್ಥಳದಿಂದ ಸ್ಥಳಕ್ಕೆ, ವ್ಯಕ್ತಿಯಿಂದ ವ್ಯಕ್ತಿಗೆ ವ್ಯತ್ಯಾಸಗೊಳ್ಳುತ್ತಿರುತ್ತದೆ. ಈ ವ್ಯತ್ಯಾಸವನ್ನು ಆ ಭಾಷೆಯನ್ನು ಆಡುವ ಜನರಿಂದಲೇ ಗುರುತಿಸಿಕೊಳ್ಳಬಹುದು. ವೇದಿಕೆಯ ಮೇಲೆ ಭಾಷಣ ಮಾಡುವಾಗ, ಮನೆಯ ದೈನಂದಿನ ವ್ಯವಹಾರದಲ್ಲಿ, ಸಂತೆಯಲ್ಲಿ ಅಥವಾ ಪೇಟೆಯಲ್ಲಿ ತರಕಾರಿಕೊಳ್ಳುವಾಗ, ನ್ಯಾಯಾಲಯದಲ್ಲಿ ಸಾಕ್ಷಿ ಹೇಳುವಾಗ, ತರಗತಿಯಲ್ಲಿ ಪಾಠ ಮಾಡುವಾಗ ವ್ಯಕ್ತಿ ಬಳಸುವ ಭಾಷೆಯಲ್ಲಿಯೂ ವ್ಯತ್ಯಾಸ

ವಿರುತ್ತವೆ. ಸಾಮಾಜಿಕ ಹಾಗೂ ಪ್ರಾದೇಶಿಕ ವ್ಯತ್ಯಾಸವನ್ನು ತಟ್ಟನೆ ಗುರುತಿಸಬಹುದು. ಆದರೆ ವ್ಯಕ್ತಿಯ ವ್ಯತ್ಯಾಸವನ್ನು ತಕ್ಷಣವೇ ಗುರುತಿಸಲು ಸಾಧ್ಯವಾಗುವುದಿಲ್ಲ. ಕೆಲವುವೇಳೆ ಒಬ್ಬ ವ್ಯಕ್ತಿ ಆಡುವ ಭಾಷೆಯಿಂದಲೇ ಅವನು ಯಾವ ಸ್ಥಳದವನು, ಅವನ ಜಾತಿ ಯಾವುದು, ಅವನ ವೃತ್ತಿ ಯಾವುದು, ಅವನು ಶಿಕ್ಷಿತನೆ ಅಥವಾ ಅಶಿಕ್ಷಿತನೆ, ಅವನು ಯಾವ ಸಮಾಜಕ್ಕೆ ಸೇರಿದವನು ಎಂಬುದನ್ನು ಗುರುತಿಸಿಬಿಡಬಹುದು. ಪ್ರಭೇದಗಳು ಭಾಷೆಯಲ್ಲಿ ಸ್ವಾಭಾವಿಕ, ಚಾರಿತ್ರಿಕ, ರಾಜಕೀಯ, ಧಾರ್ಮಿಕ, ಆರ್ಥಿಕ ಘಟನೆಗಳು ಇನ್ನೊಂದು ಭಾಷಾ ಪ್ರಭೇದಕ್ಕೆ ಮನ್ನಣೆಯನ್ನು ದೊರಕಿಸಿಕೊಡುತ್ತವೆ. ಸಾಮಾನ್ಯವಾಗಿ ಜನರು ಅಂತಹ ಪ್ರತಿಷ್ಠಿತ ರೂಪವನ್ನೇ ಕಲಿಯುತ್ತಾರೆ. ಈ ಎಲ್ಲಾ ವಿಚಾರಗಳನ್ನು ಭಾಷೆಯನ್ನು ಬೋಧಿಸುವ ವೃತ್ತಿಗೆ ಕಾಲಿಡುವವನು ಚೆನ್ನಾಗಿ ಅರಿತಿರಬೇಕಾದುದು ಅತ್ಯಾವಶ್ಯಕ.

ಭಾಷಾಬೋಧಕನಿಗೆ ತಾನು ಕಲಿಸುವ ಭಾಷೆ ತನ್ನ ಮಾತೃಭಾಷೆಯಾಗಿದ್ದರೆ ತನ್ನ ಭಾಷೆಯ ಎಲ್ಲಾ ಪ್ರಭೇದಗಳನ್ನು ಆಡಲು ಅರ್ಥಮಾಡಿಕೊಳ್ಳಲು ಸಾಮರ್ಥ್ಯ ಇರಬೇಕು. ವಿದ್ಯಾರ್ಥಿಗಳು ಸಾಮಾನ್ಯವಾಗಿ ಸುಶಿಕ್ಷಿತರಾಗಬೇಕೆಂಬ ಉದ್ದೇಶದಿಂದ ಅನ್ಯಭಾಷೆಯನ್ನು ಕಲಿಯಲು ಆರಂಭಿಸುತ್ತಾರೆಯಾದ್ದರಿಂದ ಅವರು ಶಿಷ್ಟ ಭಾಷಾರೂಪವನ್ನೇ ಕಲಿಯುವುದು, ಅವರಿಗೆ ಕಲಿಸುವುದು ಹೆಚ್ಚು ಯುಕ್ತವಾದದ್ದು. ಇಲ್ಲದಿದ್ದಲ್ಲಿ ಅವರ ಮಾತನ್ನು ಕೇಳಿದವರು ಅವರನ್ನು ಅಶಿಕ್ಷಿತರೆಂದು ತಪ್ಪು ಭಾವಿಸಬಹುದಾದ ಸಾಧ್ಯತೆಗಳಿವೆ. ಕೆಲವು ವೇಳೆ ಅಶಿಕ್ಷಿತವಾದ ಪ್ರಭೇದಗಳನ್ನು ಕೂಡ ಕಲಿಯಬೇಕಾದ ಸಂದರ್ಭಗಳೂ ಇರಬಹುದು. ಬೋಧಕನು ಕಲಿಸುವ ಭಾಷೆಯಲ್ಲಿ ಪ್ರಾವೀಣ್ಯವನ್ನು ಗಳಿಸಿಕೊಳ್ಳಬೇಕಾದರೆ ಅರ್ಥಮಾಡಿಕೊಳ್ಳುವುದು, ಮಾತನಾಡುವುದು, ಓದುವುದು ಮತ್ತು ಬರೆಯುವುದು ಈ ನಾಲ್ಕು ಕಲೆಗಳಲ್ಲಿ ಪರಿಣತನಾಗಿರಬೇಕಾದುದು ಅತ್ಯಗತ್ಯ. ಮಾತನಾಡಲು ಆ ಭಾಷೆಯ ಒಂದು ಶಿಷ್ಟ ಪ್ರಭೇದ ಸಾಕಾದರೂ ಬೋಧಕನು ಆ ಭಾಷೆಯ ಎಲ್ಲಾ ಪ್ರಭೇದಗಳನ್ನು ತಿಳಿದಿರಬೇಕಾಗುತ್ತದೆ. ಅರ್ಥಮಾಡಿಕೊಳ್ಳುವುದು ಮಾತನಾಡುವುದರಲ್ಲಿ ಕಲಿಕೆ ಮುಂದುವರಿದಂತೆಲ್ಲಾ ಓದುವ ಮತ್ತು ಬರೆಯುವ ನೈಪುಣ್ಯವೂ ಹಿಂಬಾಲಿಸಬೇಕಾಗಿರುವುದರಿಂದ ಅದರ ಬಗ್ಗೆ ಬೋಧಕನು ತುಂಬ ಎಚ್ಚರಿಕೆ ವಹಿಸಬೇಕಾಗುತ್ತದೆ. ಬೋಧಕನು ಜನರು ಅರ್ಥಮಾಡಿಕೊಳ್ಳುವ ಸಾಹಿತ್ಯವೂ ಸೇರಿದಂತೆ ಸಾಹಿತ್ಯದ ವಿವಿಧ ಪ್ರಕಾರಗಳನ್ನು ಬೇರೆಯವರು ಅದನ್ನು ಒಪ್ಪುವ ಶೈಲಿಯಲ್ಲಿ ಬರೆಯುವುದನ್ನು ಬಲ್ಲವನಾಗಿರಬೇಕು. ಪತ್ರಗಳನ್ನು ಬರೆಯಲು, ವಿದ್ಯಾರ್ಥಿಗಳು ಬರೆದುದ್ದನ್ನು ತಿದ್ದಲು ಸಮರ್ಥನಾಗಿರಬೇಕಾದುದು ಅವಶ್ಯಕ.

ಒಂದು ಭಾಷೆಯನ್ನು ಮಾತನಾಡುವಷ್ಟು ಕಲಿತಮಾತ್ರಕ್ಕೆ ಅವನು ಅದನ್ನು ಬೋಧಿಸುವ ಅರ್ಹತೆಯನ್ನು ಪಡೆದಿದ್ದಾನೆ ಎನ್ನುವಂತಿಲ್ಲ. ಕಲಿಸುವ ಭಾಷೆಯು ಅವನಿಗೆ ಮಾತೃಭಾಷೆಯಾಗಿದ್ದು ಆ ಭಾಷೆಯ ವಿವಿಧ ಅಂಗಗಳನ್ನು ವಿಶ್ಲೇಷಿಸಿ

ವಿವರಿಸಿ ತೋರಿಸಬಲ್ಲವನಾಗದ ಹೊರತು ಆ ಭಾಷೆಯ ಮಾದರಿಪಾಠಗಳನ್ನು ತಯಾರಿಸಿ ವಿದ್ಯಾರ್ಥಿಗಳಿಗೆ ಹೆಚ್ಚು ವ್ಯವಸ್ಥಿತವಾಗಿ ಬೋಧಿಸಲಾರ. ಅವನಿಗೆ ಅದರ ಬಗ್ಗೆ ಸರಿಯಾದ ಮಾರ್ಗದರ್ಶನ ಮಾಡಲಾರ. ಈ ದೃಷ್ಟಿಯಿಂದ ಅವನು ಆ ಭಾಷೆಯ ಎಲ್ಲಾ ರಚನಾತ್ಮಕ ಅಂಶಗಳ ವಿವರಣೆಯನ್ನು ಕೊಡಬಲ್ಲವನಾಗಿರಬೇಕು. ವಿದ್ಯಾರ್ಥಿಗಳು ಕಲಿಯಬೇಕಾದ ಭಾಷೆಯನ್ನು ಕಲಿಯುವಲ್ಲಿ ಉಂಟಾಗುತ್ತಿರುವ ತೊಡಕುಗಳೇನು ಇತ್ಯಾದಿ ಅಂಶಗಳನ್ನು ಚೆನ್ನಾಗಿ ಅರಿಯಬಲ್ಲವನಾಗಿರಬೇಕು. ಅವನು ಇವೆಲ್ಲಕ್ಕಿಂತ ಹೆಚ್ಚಾಗಿ ಕಲಿತಿರುವ ಕಲಿಯುವ ಎರಡು ಭಾಷೆಗಳಲ್ಲಿ ಕಂಡು ಬರುವ ಸಾಮ್ಯ ಹಾಗೂ ಅಸಾಮ್ಯ ಶಬ್ದ ಭಂಡಾರವನ್ನು ಬಲ್ಲವನಾಗಿರಬೇಕು. ವಿದ್ಯಾರ್ಥಿಗಳಿಗೆ ಇಂತಹ ಭಾಷಾವ್ಯತ್ಯಾಸಗಳನ್ನು ಅದಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ವಿವರವಾಗಿ ಬಿಡಿಸಿ ಹೇಳುವಾಗ ಬೋಧಕನು ತಾನೇ ಪ್ರಾಯೋಗಿಕವಾಗಿ ಭಾಷಾ ವಿಶ್ಲೇಷಣೆಯಲ್ಲಿ ತೊಡಗಬೇಕಾಗುತ್ತದೆ. ಇದಕ್ಕೆ ಭಾಷಾವಿಜ್ಞಾನದ ಜ್ಞಾನ ಅತ್ಯಗತ್ಯ. ಭಾಷೆಯ ಸ್ವರೂಪವನ್ನು ಪೂರ್ಣವಾಗಿ ಅರ್ಥಮಾಡಿಕೊಳ್ಳಲು ಅದನ್ನು ಭಾಷಾಬೋಧನೆಗೆ ಅಳವಡಿಸಿಕೊಳ್ಳಲು ಬೋಧಕನು ಸಾಕಷ್ಟು ಸಮರ್ಥನಾಗಿರಬೇಕಾಗುತ್ತದೆ.

ಭಾಷಾಬೋಧಕನು ಭಾಷೆ ಮತ್ತು ಅದರ ಸಂಸ್ಕೃತಿಗಳಿಗೆ ಇರುವ ನಿಕಟ ಸಂಬಂಧವನ್ನು ಅರಿತುಕೊಳ್ಳಬೇಕಾದುದು ಅತ್ಯಾವಶ್ಯಕ. ಭಾಷೆಯಲ್ಲಿ ವ್ಯಕ್ತವಾಗುವ ಅರ್ಥ, ಅವುಗಳ ವ್ಯತ್ಯಾಸ ಸಾಂಸ್ಕೃತಿಕವಾಗಿ ನಿರ್ಧಾರವಾಗುತ್ತವೆ. ಈ ಸಾಂಸ್ಕೃತಿಕ ಪರಂಪರೆಯಿಂದ ಸೂಚಿತವಾದ ಅರ್ಥವನ್ನು ಗ್ರಹಿಸದೆ ಯಾರೂ ಭಾಷೆಯನ್ನು ಪೂರ್ಣವಾಗಿ ಕಲಿಯಲಾರರು. ಈ ಕಾರಣದಿಂದ ಭಾಷೆಯನ್ನು ಕಲಿಯಲು ಸಂಸ್ಕೃತಿಗೆ ಸಂಬಂಧಿಸಿದ ಕೆಲವು ಸಂಗತಿಗಳ ಜ್ಞಾನ ಬೋಧಕನಿಗಿರಬೇಕಾಗುತ್ತದೆ. ಅಂದರೆ ಮೂಢನಂಬಿಕೆಗಳು, ಸಂಪ್ರದಾಯಗಳು, ಜನಜೀವನ, ಆಚಾರವಿಚಾರಗಳು, ಜನರ ನಡವಳಿಕೆಗಳು, ಹಬ್ಬಹರಿದಿನಗಳು, ಮದುವೆಮುಂಜಿಗಳು ಮುಂತಾದುವುಗಳನ್ನು ಬೋಧಕನು ಚೆನ್ನಾಗಿ ಅರಿತಿರಬೇಕಾಗುತ್ತದೆ. ಜನರ ಸಂಸ್ಕೃತಿಯನ್ನು ತಿಳಿದುಕೊಳ್ಳದೆ ಶಬ್ದಗಳ ಹಿಂದೆ ಅಡಗಿರುವ ಅರ್ಥವನ್ನು ಖಚಿತವಾಗಿ ವಿವರಿಸಿಕೊಳ್ಳಲು ಬೋಧಕನಿಗೆ ಕಷ್ಟವಾಗುತ್ತದೆ. ಈ ಕಾರಣದಿಂದ ಬೋಧಕನು ಆ ಭಾಷೆಯನ್ನಾಡುವ ಜನರ ಭಾವನೆಯನ್ನು ತಿಳಿಯಲು ಅವರ ಸಭೆ ಸಮಾರಂಭಗಳಲ್ಲಿ ಹಬ್ಬಹರಿದಿನಗಳಲ್ಲಿ, ಮದುವೆ ಮುಂಜಿಗಳಲ್ಲಿ, ಸಂಗೀತ ಹಾಸ್ಯಗಳಲ್ಲಿ ನಿತ್ಯಜೀವನದ ವಿವಿಧ ಸಂದರ್ಭಗಳಲ್ಲಿ ಸ್ವತಃ ತಾನೆ ಪಾಲ್ಗೊಳ್ಳಬೇಕಾದುದು ಆವಶ್ಯಕ.

ಭಾಷಾಬೋಧನೆಗೆ ಬೋಧಕನು ತನ್ನ ಸಾಮಾನ್ಯ ತಯಾರಿಯ ಜೊತೆಗೆ ಕೆಲವು ವಿಶೇಷ ರೀತಿಯ ತಯಾರಿಯನ್ನು ಮಾಡಿಕೊಳ್ಳಬೇಕಾಗುತ್ತದೆಯಲ್ಲದೆ ಬೋಧನಾಸಾಮಗ್ರಿಯನ್ನು ತುಂಬ ಎಚ್ಚರಿಕೆಯಿಂದ ತಯಾರಿಸಿಕೊಳ್ಳಬೇಕಾಗುತ್ತದೆ. ಭಾಷಿಕ ತಂತ್ರಗಳ ಜೊತೆಗೆ ಓದಲು ಮತ್ತು ಬರೆಯಲು ಅನುಕೂಲವಾಗುವ

ತಂತ್ರಗಳ ಬಳಕೆ ಬೋಧಕನಿಗೆ ಚೆನ್ನಾಗಿ ತಿಳಿದಿರಲೇಬೇಕು. ಈ ತಂತ್ರಗಳನ್ನು ತರಗತಿಗಳಲ್ಲಿ ಹೇಗೆ ಯಾವ ಹಂತದಲ್ಲಿ ಉಪಯೋಗಿಸಬೇಕು ಎಂಬ ಕಲೆಯನ್ನು ಅರಿತಿರಬೇಕಾಗುತ್ತದೆ. ಅವುಗಳ ಪರಿಣಾಮ ಮುಂತಾದುವುಗಳ ಕಡೆಯೂ ಅವನು ಗಮನಿಸುತ್ತಿರಬೇಕಾಗುತ್ತದೆ. ಭಾಷಾಬೋಧಕನು ಬೋಧನಾಮಾರ್ಗ ಒಂದನ್ನೇ ತಿಳಿದಿದ್ದರೆ ಸಾಲದು. ಅವನು ವಿದ್ಯಾರ್ಥಿಯ ಭಾಷಾಕಲಿಕೆಯನ್ನು ಪರೀಕ್ಷಿಸುವ ವಿಧಾನವನ್ನು ಅರಿತವನಾಗಿರಬೇಕಾಗುತ್ತದೆ. ವಿದ್ಯಾರ್ಥಿಗಳ ಕಲಿಕೆಯ ಸಾಮರ್ಥ್ಯ, ಸಾಧನೆ, ಪ್ರಾವೀಣ್ಯ ಮುಂತಾದುವುಗಳನ್ನು ಪರೀಕ್ಷಿಸಲು ಆಗಾಗ ಸಾಧ್ಯವಾಗ ದಿದ್ದಲ್ಲಿ ವಿದ್ಯಾರ್ಥಿಗಳಿಗೆ ವಿಶೇಷ ಪರೀಕ್ಷೆಗಳನ್ನು ನಡೆಸುತ್ತಿರಬೇಕಾಗುತ್ತದೆ. ಅಂತಹ ಪರೀಕ್ಷೆಗಳಿಗಾಗಿ ಅವನು ವಿಶೇಷ ತಯಾರಿಮಾಡಿಕೊಳ್ಳಬೇಕಾಗುತ್ತದೆ. ಪರೀಕ್ಷೆಯ ಫಲಿತಾಂಶವನ್ನು ಆಗಾಗ ಗಮನಿಸುತ್ತಿರಬೇಕಾಗುತ್ತದೆ. ವಿದ್ಯಾರ್ಥಿಗಳನ್ನು ಅಡಿಗಡಿಗೆ ಅರ್ಥಮಾಡಿಕೊಂಡು ಅವರನ್ನು ತಿದ್ದುತ್ತಿರಬೇಕಾಗುತ್ತದೆ.

ಬೋಧಕನು ಭಾಷಾ ಪ್ರಯೋಗಶಾಲೆ ಮತ್ತು ಅದರ ಉಪಯೋಗಗಳನ್ನು ಚೆನ್ನಾಗಿ ತಿಳಿದಿರಬೇಕಾದುದು ಅತ್ಯಗತ್ಯ. ಅವನಿಗೆ ಪ್ರಯೋಗಶಾಲೆಯನ್ನು ಸ್ಥಾಪಿಸುವ ಅಥವಾ ರಿಪೇರಿ ಮಾಡಿಕೊಳ್ಳುವ ತಾಂತ್ರಿಕ ಜ್ಞಾನದ ಅಗತ್ಯವೇನಿಲ್ಲ. ಆದರೆ ಪ್ರಯೋಗಶಾಲೆಯ ಮೇಲ್ವಿಚಾರಣೆ, ಬೋಧನಾಸಾಮಗ್ರಿಯನ್ನು ತಯಾರಿಸಿ ಕೊಳ್ಳುವುದು, ಅವನ್ನು ವಿದ್ಯಾರ್ಥಿಗಳ ಅಭ್ಯಾಸಕ್ಕಾಗಿ ಬಳಸುವುದು, ಅವರ ಅಭ್ಯಾಸವನ್ನು ತಿದ್ದುವುದು ಮುಂತಾದುವುಗಳ ಬಗ್ಗೆ ಹೆಚ್ಚಿನ ಶ್ರಮವಹಿಸ ಬೇಕಾಗುತ್ತದೆ.

ಮೇಲೆ ಹೇಳಿದ ಈ ಎಲ್ಲಾ ಅರ್ಹತೆಗಳನ್ನು ಎಲ್ಲಾ ಉತ್ತಮ ಬೋಧಕರು ಪಡೆದಿರಲಾರರು. ಆದರೆ ಅವೆಲ್ಲವನ್ನು ಹೊಂದಲು ಪ್ರಯತ್ನಿಸಬೇಕು. ಅಮೆರಿಕ ಮುಂತಾದ ದೇಶಗಳಲ್ಲಿ ಭಾಷಾಬೋಧಕನಿಗೆ ಇರಬೇಕಾದ ಅರ್ಹತೆಗಳನ್ನು ಒಂದು ದೊಡ್ಡ ಪಟ್ಟಿಮಾಡಿ ತೋರಿಸಿದ್ದಾರೆ. ಅವುಗಳಲ್ಲಿ ಶ್ರವಣಸಾಮರ್ಥ್ಯ, ಮಾತ ನಾಡುವುದು, ಓದುವುದು, ಬರೆಯುವುದು ಮುಂತಾದುವುಗಳ ನೈಪುಣ್ಯ, ಭಾಷಾ ವಿಶ್ಲೇಷಣೆ, ಸಂಸ್ಕೃತಿಯ ಜ್ಞಾನ, ಭಾಷಾಬೋಧನೆಯ ವೃತ್ತಿಗೆ ಸಂಬಂಧವಾದ ವಿಶೇಷ ತಯಾರಿಕೆ ಈ ಎಲ್ಲ ಅಂಶಗಳಲ್ಲಿ ಬೋಧಕನು ನಿಪುಣತೆಯನ್ನು ಗಳಿಸಿಕೊಳ್ಳ ಬೇಕಾದುದು ಅವಶ್ಯಕ. ಈ ದಿಸೆಯಲ್ಲಿ ಆಳವಾಗಿ ಆಲೋಚಿಸಿದ ಕೆಲವು ವಿದ್ವಾಂಸರು ಈ ಎಲ್ಲಾ ಸಾಮರ್ಥ್ಯಗಳಲ್ಲಿ ಯಾವುದು ಉತ್ತಮವಾಗಿರಬೇಕು, ಯಾವುದು ಅತ್ಯುತ್ತಮವಾಗಿರಬೇಕು, ಯಾವುದು ಕನಿಷ್ಠವಾಗಿರಬೇಕು ಎಂದು ವಿಂಗಡಿಸಿಕೊಂಡು ತೋರಿಸಿದ್ದಾರೆ. ಇವುಗಳಲ್ಲಿ ಭಾಷೆಯನ್ನು ಕಲಿಸುವವನು ಉತ್ತಮ ಮತ್ತು ಅತ್ಯುತ್ತಮವಾದ ಅರ್ಹತೆಗಳನ್ನು ಹೊಂದಿರಬೇಕಾದುದು ಅತ್ಯಗತ್ಯ.

ಎಂ. ಎಸ್. ಪುಟ್ಟಣ್ಣ
ಸಂಗ್ರಹ : ಡಾ. ಎಚ್. ಎಸ್. ಸುಜಾತಾ

ಹಾತಿಂ ತಾಯ್
(ಮುಂದುವರಿದುದು)

೪ನೇ ಸಂಪುಟ

೧ನೇ ಅಧ್ಯಾಯ

ವಿದ್ವಾಂಸರು ಹೇಳುವುದೇನೆಂದರೆ, ಹತೀಮನು ಷಹಾಬಾದನ್ನು ಬಿಟ್ಟು ಹಲವು ಕಡೆ ಹಾದು ಮುಂದಕ್ಕೆ ಪ್ರಯಾಣ ಮಾಡಿದನು ; ಕೊನೆಗೆ ಒಂದು ಎತ್ತರವಾದ ಪರ್ವತದ ತಪ್ಪಲಿಗೆ ಬಂದನು. ಆ ಕಡೆ ಸ್ವಲ್ಪ ದೂರದಲ್ಲಿ ನೀರಿನ ಚಿಲುಮೆ ಸಿಕ್ಕಿತು. ಹತ್ತಿರಕ್ಕೆ ಹೋಗಿ ನೋಡಲಾಗಿ ಆದು ರಕ್ತವಾಗಿ ಹರಿಯುತಿತ್ತು. ಅದನ್ನು ಕಂಡು ಅವನಿಗೆ ಏನಾಶ್ಚರ್ಯವಾಗಿರಬಹುದು ? ಅವನಿಗೆ ದಿಗ್ಭ್ರಮೆಯಾಯಿತು. ಅವನು ಎಂದಿಗೂ ಕಾಣದಂಥಾ ಅದ್ಭುತಕ್ಕೆ ಕಾರಣ ಹೇಳಲು ಆಗಲಿಲ್ಲ. ಆಯಾಸಪಟ್ಟು ಆಶಾಭಂಗವಾಗಿ ಅವನು ಕಡೆಗೆ ಪ್ರಯಾಣವನ್ನು ಮುಂದಕ್ಕೆ ಸಾಗಿಸಿದ. ಎರಡು ದಿವಸದ ತರುವಾಯ ಒಂದು ದೊಡ್ಡ ಮರದ ಮೇಲೆ ಇವನ ದೃಷ್ಟಿ ಬಿತ್ತು. ಆ ಮರವು ಸುತ್ತಲೂ ಇರುವ ಎಲ್ಲ ಮರಕ್ಕಿಂತಲೂ ಎತ್ತರವಾಗಿತ್ತು. ಅವನು ಜಾಗ್ರತೆಯಾಗಿ ಆ ಮರದ ಬಳಿಗೆ ಹೋದ. ಆದರೆ ಅಲ್ಲಿಗೆ ಹೋಗಿ ಸೇರಿದ ಮೇಲೆ ಏನು ಭಯಂಕರವಾದ ನೋಟವಾಯಿತು ! ಅದರ ಪ್ರತಿಯೊಂದು ಕೊಂಬೆಗೂ ಒಂದೊಂದು ಮನುಷ್ಯನ ತಲೆ ತಗಲಹಾಕಿತ್ತು. ಅದರ ಬುಡದಲ್ಲಿ ಕೆಂಪು ವರ್ಣವಾಗಿರುವ ಒಂದು ಸರೋವರವಿತ್ತು. ಅದರಿಂದ ಕಾಡಿನ ಕಡೆಗೆ ರಕ್ತದ ಪ್ರವಾಹ ಹರಿಯುತ್ತಿತ್ತು.

ಹತೀಮನು ಆ ಮರದ ಕೆಳಗೆ ಕೂತುಕೊಂಡು, ಆಶ್ಚರ್ಯದಿಂದಲೂ ಭಯದಿಂದಲೂ ಆ ನೋಟವನ್ನು ನೋಡಿದ. ಆಗ, ಆ ಮರಕ್ಕೆ ತಗಲಹಾಕಿದ್ದ ತಲೆಗಳಿಂದ ಹೊರಡುವ ದೊಡ್ಡ ನಗುವು ಏಕಕಾಲದಲ್ಲಿ ಅಲ್ಲಿದ್ದ ನಿಶ್ಯಬ್ದತೆಯನ್ನು ಹೋಗಲಾಡಿಸಿತು. ಇದಕ್ಕೆ ಹತ್ತರಷ್ಟು ಆಶ್ಚರ್ಯದಿಂದ ಅವನು ಬೆಚ್ಚಿಬಿದ್ದ, ಯಾಕೆಂದರೆ ಮನುಷ್ಯರ ತಲೆಗಳು ದೇಹದಿಂದ ಬೇರೆಯಾಗಿದ್ದಾಗ್ಯೂ ನಗುವ ಚೈತನ್ಯ ಮಂತ್ರ ಅವುಗಳಿಗೆ ಇತ್ತೆಂಬ ವಿಷಯಕ್ಕೆ ಶುದ್ಧವಾಗಿ ಕಾರಣ ಗೊತ್ತಾಗಲಿಲ್ಲ. ಆ ತಲೆಗಳಿಂದ ಹೊರಟ ರಕ್ತವು ನಿರಂತರವಾಗಿ ಅಲ್ಲಿದ್ದ ತೊರೆಗೆ ಹರಿದು ಹೋಗುತಿದ್ದದ್ದೇನೂ ಕಡಮೆಯಾದ ಆಶ್ಚರ್ಯ

ವಾಗಿರಲಿಲ್ಲ. ಆಳವಾಗಿ ಆಲೋಚನೆ ಮಾಡುತಾ ಈ ಭಯಂಕರವಾದ ರಹಸ್ಯವನ್ನು ಒಡೆಯುವುದು ಹೇಗೆ ಎಂದು ಯೋಚಿಸುತಿರುವಾಗ, ಆ ಮರದ ಮೇಲೆ ಅತ್ಯಂತ ಎತ್ತರವಾಗಿ ನಿಂತಿದ್ದ ಒಂದು ತಲೆ ಕಡೆಗೆ ಇವನ ದೃಷ್ಟಿ ಬಿತ್ತು. ಆ ದೇವಲೋಕದ ಸೌಂದರ್ಯವನ್ನುಳ್ಳ ಆ ಮುಖದ ಮಂದಸ್ಮಿತವನ್ನು ಕಂಡು ಅವನ ಪ್ರಾಣವೇ ಹೋಯಿತೋ ಎನ್ನುವ ಹಾಗಾಗಿ ಮೂರ್ಛೆ ಬಂದು ಕೆಳಕ್ಕೆ ಬಿದ್ದುಬಿಟ್ಟನು. ಕೆಲವು ಗಂಟೆಗಳ ಮೇಲೆ ಮೂರ್ಛೆ ತಿಳಿದು ಎದ್ದು ಕೂತುಕೊಂಡು, ಇಂಥಾ ವಿಚಿತ್ರವಾದ ಸಂಗತಿಗೆ ಕಾರಣವೇನಿದ್ದೀತು? ಇಷ್ಟೊಂದು ಜನ ಸುಂದರ ಸ್ತ್ರೀರುಗಳಿಗೆ ಇಂಥಾ ಘೋರವಾದ ಗತಿ ಹೇಗೆ ಬಂತು? ಎಂದು ತನ್ನೊಳಗೆ ತಾನು ಯೋಚಿಸುತಾ ಇದ್ದನು.

ಆಗ ತನಗೆ ಕಾಣಿಸಿದ ಸಂಗತಿ ಕುರಿತು ತಾನು ಏನು ಮಾಡದೆ ತನ್ನಷ್ಟಕ್ಕೆ ತಾನು ಹೊರಟುಹೋಗತಕ್ಕದ್ದು ತನಗೆ ಅಯೋಗ್ಯವಾದ ಕೆಲಸವೆಂದು ಹಾಗೆ ತಾನು ವಿಚಾರಿಸದೆ ಬಿಟ್ಟುಬಿಟ್ಟರೆ ಅದು ತನಗೆ ತಿಳಿಯದೇನೇ ಹೋಗುವುದೆಂದೂ ಹತೀಮನು ಭಾವಿಸಿಕೊಂಡು, ಸಾಧ್ಯವಾದರೆ ಈ ರಹಸ್ಯದ ಮೂಲವನ್ನು ಕಂಡುಹಿಡಿಯಬೇಕೆಂದು ಆ ಸ್ಥಳದಲ್ಲಿ ಕೆಲವು ದಿವಸ ಇರಲು ನಿಷ್ಕರ್ಷೆ ಮಾಡಿಕೊಂಡನು. ರಾತ್ರೆಯ ಛಾಯವು ಬೀಳುವ ಸಮಯದಲ್ಲಿ ಆ ಸರೋವರದ ಏರಿಯ ಮೇಲೆ ಇರುವ ಮರೆಯಾದ ಸ್ಥಳಕ್ಕೆ ಹೋಗಿ ಅಲ್ಲಿ ಮಲಗಿಕೊಂಡನು. ಆದರೆ ನಿದ್ರೆ ಮಾಡಲು ಕಂಣನ್ನು ಮುಚ್ಚಿಕೊಳ್ಳುವುದಕ್ಕೆ ಮುಂಚೆ ಆ ಸ್ಥಳವು ಇನ್ನೊಂದು ವಿಧವಾಗಿ ಬದಲಾಯಿಸಿತು. ಅದು ಇದ್ದದ್ದೂ ಇವನ ಆಶ್ಚರ್ಯವನ್ನು ವೃದ್ಧಿಮಾಡಿತು. ಆಗ ಮುಚ್ಚಂಜೆಯ* ಬೆಳಕಿನ ಕಡೇ ಕಿರಣವು ಹೋದ ಮೇಲೆ, ಆ ತಲೆಗಳೆಲ್ಲಾ ಆ ಸರೋವರದೊಳಕ್ಕೆ ಅಕಸ್ಮಾತ್ತಾಗಿ ಬಿದ್ದುಬಿಟ್ಟ ಹಾಗೆ ಕಾಣಿಸಿತು. ಅದು ಒಂದು ಕ್ಷಣದಲ್ಲಿ ಒಂದು ಅರಮನೆಯಾಯಿತು. ಅಲ್ಲೆಲ್ಲಾ ಉತ್ತಮವಾದ ಆಸನಗಳನ್ನು ಹಾಕಿತ್ತು. ಅದರ ಮಧ್ಯೆ ಥಳ ಥಳಗುಟ್ಟುವ ಒಂದು ಸಿಂಹಾಸನವಿತ್ತು. ಸ್ವಲ್ಪ ಹೊತ್ತಿನ ಮೇಲೆ ಖಚರರೂಪಿನ ಅನೇಕ ಸ್ತ್ರೀರು ಬಂದರು. ಅವರಲ್ಲಿ ಒಬ್ಬ ಅತ್ಯಂತ ಸುಂದರಿಯಾದ ಸ್ತ್ರೀಯು ಆ ಸಿಂಹಾಸನದ ಮೇಲೆ ಕೂತುಕೊಂಡಳು, ಉಳಿದವರು ಸುತ್ತಲೂ ಇದ್ದ ಆಸನಗಳ ಮೇಲೆ ಕೂತುಕೊಂಡರು. ಆ ಸಭೆಯು ಕೂತುಕೊಂಡ ಮೇಲೆ ಹತೀಮನು ಸಿಂಹಾಸನದ ಮೇಲಿದ್ದ ರಾಣಿಯನ್ನು ಚೆನ್ನಾಗಿ ನೋಡಿದನು. ಅವಳ ತಲೆಯು ಮರದ ಮೇಲೆ ಅತ್ಯಂತ ಎತ್ತರವಾಗಿ ಕಾಣಿಸಿದ ತಲೆಯ ಹಾಗೆಯೇ ಇತ್ತು ಎಂತಲೂ ಅವಳ ಮುಖದ ಸೌಂದರ್ಯವು ಮೊದಲೇ ತನ್ನ ಹೃದಯವನ್ನು ಸೂರೆಗೊಂಡಿತ್ತೆಂತಲೂ ಮನದಟ್ಟು ಮಾಡಿಕೊಂಡನು. ಇತರ ಆಸನಗಳ ಮೇಲೆ ಕೂತಿದ್ದ ಹೆಂಗಸರು ರಾಣಿಯ ಸಮೀಪದಲ್ಲಿ ನಿಂತಿದ್ದ ಹೆಂಗಸರು ಇವರುಗಳ ಮುಖವನ್ನು ಮೊದಲೇ ತಾನು ನೋಡಿದ್ದ ಹಾಗೆ ತೋರಿತು. ಆ ಹೃದಯಾಪಹಾರಿಗಳಾದ ಹೆಂಗಸರಲ್ಲಿ ಕೆಲವರು ಸಂಗೀತವಾದ್ಯ ಸಲಕರಣಗಳನ್ನು ಹಿಡಿದಿದ್ದರು. ಆ ಸಂಗೀತದ ಶಬ್ದವು ಕಿವಿಗೆ ರಮಣೀಯವಾಗಿತ್ತು.

* ಹಸ್ತಪ್ರತಿಯಲ್ಲಿ 'ಮುಚಂಜೆಯು' ಎಂದಿದೆ.

ಆಗ ಇತರರು ವಯ್ಯಾರವಾಗಿ ಮಾಡುತಿದ್ದ ನರ್ತನವು ಕಂಣಿಗೆ ಆನಂದವನ್ನುಂಟು ಮಾಡಿತು. ಹೀಗೆ ಅರ್ಧರಾತ್ರೆ ಕಳೆಯಿತು. ಆಗ ಹತೀಮನು ಆಶ್ಚರ್ಯದಿಂದಲೂ ಆನಂದದಿಂದಲೂ ನೋಡುತಾ ಇರುವಾಗ ಅದೇನು ಸ್ವಪ್ನವೇ ಅಥವಾ ನಿಜವಾದ ನೋಟವೆ ಎನ್ನುವುದು ಗೊತ್ತಿಲ್ಲದೇ ಹೋಯಿತು.

ಅರ್ಧರಾತ್ರೆ ಸಮಯದಲ್ಲಿ ಮೇಜುಗಳನ್ನು ತಂದು ಹಾಕಿದರು. ಉತ್ತಮವಾದ ತಿಂಡೀ ಸಾಮಾನುಗಳನ್ನು ತಂದಿರಿಸಿದರು. ಆಗ ಸಿಂಹಾಸನದ ಮೇಲೆ ಕೂತಿದ್ದ ಹೆಂಗಸು, ಆ ತಟಾಕದ ಸಮೀಪದಲ್ಲಿ ಒಂಟಿಯಾಗಿ ಕೂತಿರುವ ವಿದೇಶಸ್ಥನಿಗಾಗಿ ಬೇರೆ ಮೇಜನ್ನು ತರಿಸಿ ಹಾಕಿಸಿ ಭೋಜನ ಸಾಮಗ್ರಿಗಳನ್ನು ತಂದಿರಿಸುವ ಹಾಗೆ ತನ್ನ ಚಾರರಿಗೆ ಅಪ್ಪಣೇ ಕೊಟ್ಟಳು. ಚಾರರು ಅದರಂತೆ ನಡೆದುಕೊಂಡು ಹತೀಮನ ಬಳಿಗೆ ಮೇಜನ್ನೂ ಆಹಾರವನ್ನೂ ತಂದು, ತಮ್ಮ ರಾಣಿಯ ಅಪ್ಪಣೆಯಾಗಿದೆ, ಭೋಜನ ಮಾಡಬೇಕು, ಎಂದರು.

ಹತೀಮ—ಸುಂದರಾಂಗಿಯಾಗಿ ಅತಿಥಿಸತ್ಕಾರಜ್ಞಳಾದ ನಿಮ್ಮೊಡತಿಯ ಹೆಸರೇನು?

ದಾದಿಯರು—ಯಾವ ಪ್ರಶ್ನೆಯನ್ನೂ ಕೇಳಬೇಡ. ನಿನಗೆ ತೃಪ್ತಿಕರವಾದ ಉತ್ತರ ಕೊಡಲು ನಮಗೆ ಸ್ವಾತಂತ್ರ್ಯವಿಲ್ಲ. ಕೊಟ್ಟದ್ದನ್ನು ಅಂಗೀಕರಿಸು. ಕೊಟ್ಟವರ ಹೆಸರನ್ನು ಕೇಳುವ ತೊಂದರೆ ನಿನಗೆ ಬೇಡ. ನಿನಗೆ ಅದೇನು ಅಂಥಾ ದೊಡ್ಡ ವಿಚಾರವಲ್ಲ.

ಹತೀಮ—ನೀವು ಹೇಳುವುದು ಯುಕ್ತವೆ. ಆದರೆ ನಿಮ್ಮೊಡತಿಯ ಹೆಸರನ್ನು ನೀವು ಹೇಳದ ಹೊರತು ಆ ಕಳುಹಿಸಿದ ಆಹಾರವನ್ನು ನಾನು ಸವಿ ನೋಡುವುದಿಲ್ಲವೆಂದು ದೃಢಮಾಡಿಕೊಳ್ಳಿ.

ಆಗ ಆ ಖಚರಿಯರು ತಮ್ಮೊಡತಿಯ ಬಳಿಗೆ ಹೋಗಿ, ಅವಳು ಕಳುಹಿಸಿದ ಪದಾರ್ಥವನ್ನು ಅಂಗೀಕರಿಸುವುದಿಲ್ಲವೆಂದು ವಿದೇಶಿಯು ಮುಷ್ಕರವಾಗಿ ತಿರಸ್ಕರಿಸುತಾನೆಂದು ಅವಳಿಗೆ ತಿಳಿಸಿದರು. ಅದರ ಮೇಲೆ ಆ ಖಚರರ ರಾಣಿಯು ಆಹಾರವನ್ನು ತೆಗೆದುಕೊಳ್ಳಬೇಕು, ಬೆಳಗಾದ ಮೇಲೆ ಎಲ್ಲವೂ ಗೊತ್ತಾಗುವುದು ಎಂದು ಒಬ್ಬ ದೂತಿಯ ಮುಖಾಂತರ ಹೇಳಿಕಳುಹಿಸಿದಳು. ಹತೀಮನು ಮೊದಲು ತಾನು ಕೇಳಿಕೊಂಡ ಮಾತನ್ನೇ ಹಿಡಿದು ಸಾಧಿಸಿದ, ಮತ್ತು ಆ ವರ್ತಮಾನವನ್ನು ತಂದ ಖಚರಿಯನ್ನು ಹಿಡಿಯುವುದಕ್ಕೆ ಹೋದ. ಅವಳು ಅವನ ಕೈಗೆ ಸಿಕ್ಕದೆ ಸಿಂಹಾಸನದ ಬಳಿಗೆ ಓಡಿಹೋಗಿ ಇತರ ಪರಿವಾರದವರಂತೆ ತಾನೂ ನಿಂತುಕೊಂಡಳು. ಗಾನವೂ ನರ್ತನವೂ ಪುನಃ ಆರಂಭವಾಯಿತು. ಈ ಪ್ರಕಾರ ಆ ಪೆಣ್ಮಣಿಗಳ ಸಭೆಯವರು ರಾತ್ರೆ ಉಳಿದ ಕಾಲವನ್ನು ಕಳೆದರು.

ಪೂರ್ವದಿಕ್ಕಿನಲ್ಲಿ ಅರುಣೋದಯ ಆರಂಭವಾದಾಗ ಎಲ್ಲವೂ ಮಾಯವಾಗಿ ಸರೋವರದ ಅಡಿಗೆ ಹೋದಹಾಗೆ ಕಾಣಿಸಿತು. ಪುನಃ ಆ ತಲೆಗಳು ನೀರಿನಿಂದೆದ್ದು

ಮರದ ಕೊಂಬೆಗಳ ಮೇಲೆ ಹಿಂದಿನ ದಿವಸ ಇದ್ದ ಹಾಗೆಯೇ ತಂತಮ್ಮ ಸ್ಥಾನಗಳನ್ನು ತೆಗೆದುಕೊಂಡವು. ಹಶೀಮನು ರಾತ್ರಿ ತಾನಿದ್ದ ಸ್ಥಳವನ್ನು ಬಿಟ್ಟು ಆ ಮರದ ಕೆಳಗೆ ಹೋಗಿ ಕೂತುಕೊಂಡು ಆ ತಲೆಗಳನ್ನು ಮುಖ್ಯವಾಗಿ ರಾಣಿಯ ತಲೆಯನ್ನು ನೋಡುತಾ ಆ ಮರದ ಕೆಳಕ್ಕೆ ಹೋಗಿ ಕೂತುಕೊಂಡ. ಅವನಿಗೆ ಅನೇಕವಾಗಿ ಬೇರೆ ಬೇರೆ ಉಪಾಯಗಳು ತೋರಿದವು. ಆದರೆ ಯಾವುದೂ ಜಯಕಾರಿಯಾಗಿ ತೋರಲಿಲ್ಲ. ಈ ರಹಸ್ಯವನ್ನು ಹೊರಪಡಿಸುವುದಕ್ಕಾಗಿ ತನ್ನ ಕೈಲಾದ್ದನ್ನೆಲ್ಲಾ ಮಾಡಲು ನಿಶ್ಚೈಸಿಕೊಂಡ. ಸಾಧ್ಯವಾದರೆ ಆ ಮಂತ್ರದ ಗುಟ್ಟನ್ನು ಒಡೆದು, ಉದರ ಮೇಲೆ ಆ ರಾಣಿಯನ್ನು ತನ್ನ ವಧುವಾಗಿ ಮಾಡಿಕೊಳ್ಳಬೇಕೆಂದು ಕೂಡ ನಿರ್ಧರಿಸಿಕೊಂಡ.

ಹೀಗೆ ಇನ್ನೊಂದು ದಿವಸ ಕಳೆಯಿತು. ಪುನಃ ಅಂಧಕಾರದ ತೆರೆಯು ಪುನಃ ಭೂಮಿಯನ್ನು ಕವಿದುಕೊಂಡಿತು. ಆಗ ಆ ತಲೆಗಳೆಲ್ಲಾ ಮರದಿಂದ ಸರೋವರಕ್ಕೆ ಬಿದ್ದವು. ಅದಕ್ಕೆ ಹಿಂದಿನ ರಾತ್ರಿ ಅವನ ಕಣ್ಣಿಗೆ ಏನೇನು ಕಾಣಿಸಿತ್ತೋ ಅದೆಲ್ಲಾ ಪುನಃ ಕಂಡವು. ಮೊದಲಿನ ಹಾಗೆ ಆ ಸರೋವರದ ಏರಿಯ ಮೇಲೆ ಕೂತುಕೊಂಡು ರಾಣಿಯ ವಾಗ್ದಾನವು ನೆರವೇರೀತೇ ಎಂದು ಆತುರವಾಗಿ ನಿರೀಕ್ಷಿಸಿಕೊಂಡಿದ್ದ. ಅರ್ಧರಾತ್ರಿ ಬರಲು, ಹಿಂದಿನ ರಾತ್ರಿ ಅವನು ಯಾರ ಸಂಗಡ ಮಾತನಾಡಿದ್ದನೋ ಆ ಸ್ತ್ರೀಯು ಭೋಜನವನ್ನೂ ಆಹಾರವನ್ನೂ ತಂದಿರಿಸಿದಳು. ಆಗ ಹಶೀಮನು ರಾಣಿಯ ವಾಗ್ದಾನವನ್ನು ಜ್ಞಾಪಕಕೊಟ್ಟ. ಭೋಜನ ಮಾಡು ನಿಷ್ಪ್ರಯೋಜನವಾದ ಪ್ರಶ್ನೆಗಳನ್ನು ಕೇಳಬೇಡ ಎಂದರು. ಆಗ ಹಶೀಮನು—ನಿಮ್ಮ ಯಜಮಾನಿಯ ಹೆಸರು ತಿಳಿಯುವವರೆಗೆ ಆಕೆ ಧರ್ಮಕ್ಕಾಗಿ ಕಳುಹಿಸಿದ ಆಹಾರವನ್ನು ನಾನು ಸವಿ ನೋಡಲಾರೆ, ಎಂದ. ಆ ದೂತಿಯು ತನ್ನೊಡತಿಯ ಬಳಿಗೆ ಹೋಗಿ ಆದ ಫಲವನ್ನು ಅರಿಕೆ ಮಾಡಿದಳು. ಆ ರಾಣಿಯು ಮೊದಲು ಭೋಜನವನ್ನು ಮಾಡಿ ತರುವಾಯ ನನ್ನಲ್ಲಿ ಬರಲಿ ಎಂದು ಅವನಿಗೆ ಬೇಕಾದ ಸಮಾಚಾರ ಆಮೇಲೆ ದೊರೆಯುವುದೆಂದು ಹೇಳಿ ಕಳುಹಿಸಿದಳು. ಆಗ ಹಶೀಮನು ತನಗೆ ಬಡಿಸಿದ ಆಹಾರವನ್ನು ಮೆದ್ದು ರಾಣಿಯ ಸಮ್ಮುಖಕ್ಕೆ ಅವಳ ದೂತಿಯ ಸಂಗಡ ಹೋಗಲು ಎದ್ದನು. ಆಗ ಆ ಖಚರಿಯು ಸರೋವರದಲ್ಲಿ ಮುಳುಗಿದಳು. ಹಶೀಮನು ಸಂದೇಹ ಪಡದೆ ತಾನೂ ಹಾಗೆಯೇ ಮಾಡಿದ. ಅವನ ಕಾಲು ನೆಲಕ್ಕೆ ಸೋಕಿದಮೇಲೆ ಕಣ್ಣಬಿಟ್ಟ. ಸರೋವರವಾಗಲಿ, ಉದ್ದವಾದ ಮರವಾಗಲಿ ಖಚರಿಯರ ಆಸ್ಥಾನವಾಗಲಿ ಯಾವುದೂ ಕಾಣಿಸದೆ ಮಾಯವಾಯಿತು. ಅದಕ್ಕೆ ಬದಲಾಗಿ ಪಿಶಾಚಿಗಳು ಸಂಚರಿಸುವ ಒಂದು ಹಾಳು ಪ್ರದೇಶ ಕಾಣಿಸಿತು. ಖಚರರ ರಾಣಿಯಲ್ಲಿ ಅವನಿಗೆ ಹುಟ್ಟಿದ ಮೋಹವು ವಿಶೇಷವಾಗಿ ಬಲವಾಗಿದ್ದ ಕಾರಣ ಇನ್ನು ಯಾವುದೂ ಅವನ ಬುದ್ಧಿಗೆ ತೋರಲಿಲ್ಲ. ಅವನು ತನ್ನನ್ನು ತಾನೆ ಮರೆತು ದುಃಖಪಡುತಾ ಏಳು ದಿವಸ ಆ ಕಾಡಿನಲ್ಲಿ ತಿರುಗುತಿದ್ದನು. ಆಗ ಅಕಸ್ಮಾತ್ತಾಗಿ ಒಬ್ಬ ಕೇವಲ ವೃದ್ಧನಾದ ಮನುಷ್ಯನು ಹಸರು ಉಡುಪನ್ನು ಹಾಕಿಕೊಂಡು ಬಲಭಾಗದಿಂದ ಇವನೆದುರಿಗೆ ಬಂದನು.

ಹತೀಮನು ಆ ಅಜ್ಜನನ್ನು ನೋಡಿ ಅವನು ಬರುವ ತನಕ ಸುಮ್ಮನೆ ನಿಂತುಕೊಂಡನು. ಅಜ್ಜನು ಹತೀಮನಿಗೆ ಸಲಾಂ ಮಾಡಿ, ಆ ಕಾಡಿಗೆ ಹೇಗೆ ಬಂದೆ ಎಂದು ಆಶ್ಚರ್ಯಪಟ್ಟನು. ಆ ವನದ ಹೆಸರು ಜರಾಸ್ ಎಂದು.

ಹತೀಮ—ನಾನು ಇಲ್ಲಿಗೆ ಹೇಗೆ ಬಂದೆ? (ಏನು ಆಶ್ಚರ್ಯ!)

ಅಜ್ಜ—ನೀನು ಕಂಡದ್ದೆಲ್ಲಾ ಬರೀ ಇಂದ್ರಜಾಲವೆಂದು ತಿಳಿದಿದ್ದಾಗ್ಯೂ ನೀನಾಗಿಯೇ ಆ ಸರೋವರದಲ್ಲಿ ಮುಳುಗಿದೆ. ಇಲ್ಲವೇ? ಈಗ ನೀನು ಆ ಸ್ಥಳದಿಂದ ನೂರು ಹರದಾರಿ ದೂರದಲ್ಲಿದ್ದೀಯೆ.

ಆಗ ಹತೀಮನು ಈ ಸಂಗತಿಯನ್ನು ಕೇಳಿ ನೆಲದ ಮೇಲೆ ಬಿದ್ದು ಗಟ್ಟಿಯಾಗಿ ಅಳುತಾ,—ಅಯ್ಯೋ ನಾನು ಹೇಗೆ ಹಿಂತಿರುಗಿ ಹೋಗಲಿ? ನಾನು ಪ್ರಾಣವನ್ನು ಬಿಟ್ಟುಬಿಡಬೇಕು. ಆದರೂ ನಾನೂ ಆಶಿಪಡುವ ವಸ್ತುವನ್ನು ಹೊಂದಲಾರೆ, ಎಂದುಕೊಳ್ಳುತ್ತಿದ್ದನು.

ಆ ಅಜ್ಜನು ಹತೀಮನ ಸ್ಥಿತಿಯನ್ನು ಕಂಡು ಕನಿಕರದಿಂದ ಈಗ ನಿನ್ನ ಇಷ್ಟವೇನು? ಎಂದು ಕೇಳಿದನು. ಅದಕ್ಕೆ ಹತೀಮನು ಈ ಕ್ಷಣವೇ ನಾನು ಎಲ್ಲಿಂದ ಬಂದೆನೋ ಅಲ್ಲಿಗೆ ಹೋಗತಕ್ಕದ್ದು (ನನ್ನ ಇಷ್ಟ) ಎಂದನು. ಅದಕ್ಕೆ ಆ ಅಜ್ಜನು ಒಂದು ದೊಂಣೆಯನ್ನು ಎತ್ತಿ ಹಿಡಿದು, ಕಂಣ ಮುಚ್ಚಿಕೊಂಡು ಆ ದೊಂಣೆಯನ್ನು ಹಿಡಿದುಕೊ ಎಂದು ಹೇಳಿದ. ಹತೀಮ ಹಾಗೆ ಮಾಡಿದ ಕೂಡಲೆ, ಮೊದಲಿನಂತೆ ಗಿಡದ ಕೊಂಬೆಗಳಿಗೆ ತಲೆಬುರುಡೆಗಳ ನೇತುಹಾಕಿದ್ದುದನ್ನು ಮೊದಲು ಕಂಡನೋ ಅಂಥಾ ಸರೋವರದ ತಡಿಯಲ್ಲಿ ತಾನು ಮೊದಲಿದ್ದ ಕಡೆಯಲ್ಲಿದ್ದ ಹಾಗೆ ಕಾಣಿಸಿತು. ಆದರೆ ಆ ಅಜ್ಜನ ಸೆಲೆಯೇ ಇರಲಿಲ್ಲ. ಮುಂದೆ ಯಾವ ರೀತಿ ನಡೆಯಬೇಕೆಂದು ಯೋಚನೆ ಮಾಡುತಾ ಕೂತುಕೊಂಡನು. ಕಡೆಗೆ ಅಕಸ್ಮಾತ್ತಾಗಿ ಮರವನ್ನು ಹತ್ತಿ ಆ ರಾಣಿಯ ತಲೆಯನ್ನು ಕೆಳಕ್ಕೆ ತರಬೇಕೆಂದು ನಿಶ್ಚಯ ಮಾಡಿಕೊಂಡನು. ಹೀಗೆ ನಿಶ್ಚೈಸಿಕೊಂಡು ಮರ ಹತ್ತುವುದಕ್ಕೆ ಆರಂಭಿಸಿದನು. ಆಗ ಮರವು ಬಹಳ ಬಲವಾಗಿ ಅಳ್ಳಾಡಿದ್ದರಿಂದ ಹತೀಮನು ಕೆಳಕ್ಕೆ ಬಿದ್ದನು. ಪುನಃ ಮರದ ಬುಡವನ್ನು ಹಿಡಿದುಕೊಂಡನು. ಅದು ಅಳ್ಳಾಡದೆ ಇದ್ದದನ್ನು ಕಂಡು ಬಹಳ ಶ್ರಮಪಟ್ಟು ಅರವಾಸಿ ಮರದ ಕೊಂಬೆ ಮೇಲೆ ಹತ್ತಿದನು. ಆಗ ಮರದ ಬುಡದಿಂದ ದೊಡ್ಡದಾಗಿ ಶಬ್ದಹೊರಟಿತು. ಮರ ಸೀಳಿಹೋಗಿ ಹತೀಮನನ್ನು ಆ ಪೊಟ್ಟರೆಯೊಳಕ್ಕೆ ಎಳೆದುಕೊಂಡುಬಿಟ್ಟಿತು. ಅವನ ಅರ್ಧ ದೇಹಮಾತ್ರ ಹೊರಗಡೆ ಕಾಣುತಿತ್ತು.

ಆ ಕಾಲದಲ್ಲಿ ಹತೀಮನು ತನ್ನ ದುಡುಕಿಗಾಗಿ ಪಶ್ಚಾತ್ತಾಪ ಪಟ್ಟು ಆತ್ಮಗತವಾಗಿ—ಈಗ ನನ್ನ ಕಷ್ಟ ಸಂಪೂರ್ಣವಾಯಿತು. ಮಾಯದ ಕಾಡಿನಿಂದ ತಪ್ಪಿಸಿಕೊಂಡು ಬಂದೆ. ಆದರೆ ಈ ಕಷ್ಟವನ್ನು ನಿವಾರಣೆಮಾಡುವುದು ಸಾಧ್ಯವೇ ಇಲ್ಲ. ನಿರಾಶೆಯಾಯಿತಲ್ಲಾ ಎಂಬ ಸಂಕಟದಲ್ಲಿ ತಪ್ಪಿಸಿಕೊಳ್ಳಬೇಕೆಂದು ಕೈಲಾದ

ಮಟ್ಟಿಗೂ ಯತ್ನಮಾಡಿದ. ಆದರೆ ತನ್ನ ಶರೀರವು ಗಳಿಗೆಗಳಿಗೆಗೆ ಮರದೊಳಗೆ ಆಳವಾಗಿ ಹೊಕ್ಕುಕೊಳ್ಳುತಾ ಬಂದ ಹಾಗೆ ಕಾಣಿಸಿತು. ಕಡೆಗೆ ಅವನ ತಲೆಯೂ ಕೈಗಳೂ ಅಷ್ಟು ಮಾತ್ರ ಕಾಣಿಸುವ ಹಾಗಾಯಿತು. ಈ ಸ್ಥಿತಿಯಲ್ಲಿ ಉಸಿರು ಕಟ್ಟಿದ ಹಾಗಾಯಿತು. ಕೊನೇ ಸಾರಿ ಕಣ್ಣು ಮುಚ್ಚಿಕೊಳ್ಳುತೇನೆಯೋ ಎಂಬ ಸ್ಥಿತಿ ಬಂತು. ಆಗ ಹಸಿರುಡಿಗೆಯನ್ನು ಉಟ್ಟಿದ್ದ ಅಜ್ಜನು ಬಂದು ಎದುರಿಗೆ ನಿಂತು—ಚಚ್ಚರವಿಲ್ಲದ ಹುಡುಗ, ಈ ವಿಪತ್ತಿಗೆ ಯಾಕೆ ಸಿಕ್ಕಿಕೊಂಡೆ? ನೀನು ಬದುಕಿಕೊಂಡಿದ್ದು ಬೇಜಾರಾಯಿತೋ? ನಿನ್ನ ಪ್ರಾಣಕ್ಕೆ ಇಷ್ಟು ಶ್ರಮವನ್ನು ತಂದು ಇಟ್ಟುಕೊಂಡಿದ್ದೀಯೆ?

ಹತೀಮನು ಉತ್ತರ ಹೇಳುವ ಸ್ಥಿತಿಯಲ್ಲಿರಲಿಲ್ಲ. ಅವನು ಮೌನವಾಗಿದ್ದ. ಆಗ ಅಜ್ಜನು ತನ್ನ ದೊಣ್ಣೆಯನ್ನು ಮರದ ಮೇಲೆ ಹೊಡೆದ. ಆ ಕ್ಷಣದಲ್ಲಿಯೇ ಹತೀಮ ಸಿಕ್ಕಿಕೊಂಡಿದ್ದ ಮರದ ಭಾಗವು ಎಣ್ಣೆಯ ಹಾಗೆ ಜಿಡ್ಡಾಯಿತು. ಅಜ್ಜನು ಅವನ ಕೈಹಿಡಿದು ಎಳೆದುಕೊಂಡ. ಆಗ ಹತೀಮನ ಶಕ್ತಿಯೆಲ್ಲಾ ಕಂದಿಹೋಗಿದ್ದ ಕಾರಣ ಅವನು ಮರದ ಬುಡದಲ್ಲಿ ಬಿದ್ದುಬಿಟ್ಟ. ಜ್ಞಾನ ಬಂದ ಮೇಲೆ ಆ ಅಜ್ಜನು ಅವನನ್ನು ಕುರಿತು—ಹೇಳೈ ಬಾಲಕ, ದೇಹವಿಲ್ಲದ ತಲೆಗಳನ್ನು ಕಟ್ಟಿ ಪ್ರಯೋಜನವೇನು? ಇಂಥಾ ವಿಪತ್ತುಗಳಿಗೆ ಸಿಕ್ಕಿಕೊಂಡಿದ್ದೀಯಲ್ಲಾ? ಎಂದು ಕೇಳಿದನು. ಅದಕ್ಕೆ ಹತೀಮನು—ಆ ತಲೆಗಳನ್ನು ಇಲ್ಲಿ ತಗಲಹಾಕಿರುವುದಕ್ಕೆ ಕಾರಣವೇನು? ಎಂಬದಾಗಿ ಪ್ರಶ್ನೆಮಾಡಿದ. ಆ ಮಾತಿಗೆ ಅಜ್ಜನು—ಹೇಳುತೇನೆ ಕೇಳು, ನಿನ್ನ ಕುತೂಹಲವನ್ನು ಸಮಾಧಾನ ಮಾಡುತ್ತೇನೆ.

"ಷಾಹ ಅಹ್ಮರ್ ಎಂಬ ಒಬ್ಬ ಮಂತ್ರವಾದಿ ಇದಾನೆ. ಮರದ ಮೇಲೆ ಎತ್ತರವಾಗಿ ಕಾಣಿಸತಕ್ಕ ತಲೆಯು ಅವನ ಮಗಳದು. ಬಹು ಚೆಂದುಳ್ಳ ಈ ಹೆಂಗಸು ತನ್ನ ವಯಸ್ಸಿನ ಒಬ್ಬ ತರುಣನನ್ನು ನೋಡಿ ಮೋಹಿಸಿ, ಅವನನ್ನು ಮದುವೆಯಾಗಬೇಕೆಂದು ಅಪೇಕ್ಷಿಸಿದಳು. ಅವಳು ತಂದೆಯ ಸಮ್ಮತಿಯನ್ನು ಕೇಳಿ, ತಾನು ವಯಸ್ಸಿಗೆ ಬಂದಿದೇನೆ. ತಾನು ಆರಿಸಿಕೊಂಡ ಗಂಡನನ್ನು ತಂದೆಯು ಒಪ್ಪುತಾನೆಂದು ನಿರೀಕ್ಷಿಸಿಕೊಂಡಿದ್ದಳು. ಅವಳು ಹೇಳಿದ ಮಾತನ್ನು ಕೇಳಿ ತಂದೆಗೆ ಅತ್ಯಂತ ಕೋಪೋದ್ರೇಕವಾಗಿ ಈ ಶಿಕ್ಷೆಯನ್ನು ಮಗಳಿಗೆ ಕೊಟ್ಟನು. ಈ ಮರ, ಸರೋವರ, ನಿನ್ನ ಮುಂದೆ ಕಾಣುವ ಇತರ ಪದಾರ್ಥ, ಇವೆಲ್ಲಾ ಅವನ ಮಂತ್ರದ ಫಲವಾಗಿದೆ. ಇಲ್ಲಿಗೆ ನೂರು ಹರದಾರಿ ಇರುವ ಒಂದು ಪರ್ವತದಲ್ಲಿ ಆ ಮಂತ್ರವಾದಿಯ ವಾಸಸ್ಥಳವಿದೆ ಅವನ ಮಗಳ ಹೆಸರು ಸಾರಿನ್ ಪೋಷ್ ಎಂದು. ಅವನಿಗೆ ಮನಸ್ಸು ಬಂದಾಗ ಒಂದು ದಿವಸದೊಳಗಾಗಿ ಇಲ್ಲಿಗೆ ಬಂದುಬಿಡುತಾನೆ. ಅವನು ಮಂತ್ರವಾದದಲ್ಲಿ ಅಷ್ಟೊಂದು ಶಕ್ತ. ಅವನಿರತಕ್ಕ ಸ್ಥಳಕ್ಕೆ ಕೆಂಪುಬೆಟ್ಟ ಎಂದು ಹೆಸರು. ಅವನು ಜೀವಂತನಾಗಿರುವವರೆಗೆ ಯಾವ ಮನುಷ್ಯನೂ ಅವನ ಮಗಳ ಸಮೀಪವೃತ್ತಿಯನ್ನು ಹೊಂದಲಾರ.

ಆ ಮುದುಕನಿಂದ ಈ ವರ್ತಮಾನವನ್ನು ತಿಳಿದು

ಹಶೀಮ—ನಾನು ಈ ಕ್ಷಣದಲ್ಲಿ ಆ ಮರವನ್ನು ಹತ್ತಿ ಮಗಳ ಕಷ್ಟವನ್ನು ಬಿಡಿಸುತೇನೆ. ಮರಣಭೀತಿಯೂ ಕೂಡ ನನಗೆ ವಿಘ್ನವಾಗಿ ಬರಲಾರದು.

ಅಜ್ಜ—ಇದೇ ನಿನ್ನ ಸಂಕಲ್ಪವಾದರೆ, ವಿಪತ್ತುಗಳಿಗೆ ನಿನ್ನ ಪ್ರಾಣವನ್ನು ಈಡು ಮಾಡಿಕೊಡುತೀಯ. ಕೇಡು ಇದೆ ಎಂಬ ಸೂಚನೆ ಕೊಟ್ಟಿದೇನೆ. ಇಂಥಾ ಯೋಚನೆಯನ್ನು ತ್ಯಜಿಸೆಂದು ನಿನಗೆ ಮಿತ್ರನಾಗಿ ನಾನು ಹೇಳುತೇನೆ.

ಹಶೀಮ—ನೀನು ಹೇಳುವುದು ಯುಕ್ತವೆ. ಆದರೆ ಈ ಕಾರ್ಯದಲ್ಲಿ ಏನು ಕೆಟ್ಟದಾದರೂ ಸಿದ್ಧವಾಗಿದೇನೆ.

ಅಜ್ಜ—ಅಪಾಯವಾಗುವುದೆಂದು ಮನದಟ್ಟಾಗಿದ್ದರೂ ಅಂಥ* ಕೆಲಸವನ್ನು ನೀನು ಯಾಕೆ ಮಾಡುತೀಯೆ?

ಹಶೀಮ—ಮಂತ್ರವಾದಿಯ ಮಗಳ ಮೇಲೆ ನನಗೆ ಮೋಹ ಬಿದ್ದಿದೆ. ಆದ್ದರಿಂದ ಇಲ್ಲ ಅವಳನ್ನು ನಾನು ಬಿಡಿಸಿಕೊಳ್ಳುತೇನೆ ಇಲ್ಲ ಅವಳಿಗೆ ಆದ ಗತಿ ನನಗೂ ಆಗಲಿ.

ಆ ಮುದುಕನು ಇನ್ನೂ ಒತ್ತಿ ಬುದ್ಧಿಯನ್ನು ಹೇಳಿದನು. ಆದರೂ ಹಶೀಮನು ಮುಷ್ಕರವನ್ನೇ ಮಾಡಿದನು. ಕಡೆಗೆ

ಅಜ್ಜ—ಎಲ ತರುಣ, ನಾನು ಹೇಳುವ ಬುದ್ಧಿವಾದಕ್ಕೆ ಮನಸ್ಸಂಕೋಚ ಮಾಡಿ ಕೊಳ್ಳದಿದ್ದರೆ, ನೀನು ದುಃಖಪಡಲು ಕಾರಣ ಉಂಟಾಗುವುದೆಂದು (ಹೇಳುತೇನೆ).

ಹಶೀಮ—ನನಗೆ ಇಷ್ಟವಾದ ಪದಾರ್ಥವಿಲ್ಲದಿದ್ದರೆ, ನನಗೆ ಪ್ರಾಣ ಎಷ್ಟು ಮಾತ್ರದ್ದು? ದುಃಖವೆಂದು ಹೇಳುವ ವಿಷಯದಲ್ಲಿ, ಅದು ನನಗೆ ವಾಡಿಕೆ ಯಾದ ವಿಚಾರ. ನಾನು ಮೊದಲು ಹುಟ್ಟಿದ ದಿವಸ ಅದು ನನ್ನ ಹಣೆಯಲ್ಲಿ ಬರೆಯಿತು.

ಅಜ್ಜ—(ಮುಂದೆ ಯಾವ ಮಾತೂ ಇಲ್ಲದೆ ತನ್ನ ದೊಣ್ಣೆಯಿಂದ ಮರವನ್ನು ಬಡಿದು) ಬಾ, ಹತ್ತು.

ಹೀಗೆ ಹೇಳಿ ಅಜ್ಜನು ಮಾಯವಾದನು.

ಹಶೀಮನು ಮರವನ್ನು ತನ್ನ ಪ್ರಿಯಳ ತಲೆ ತಗಲಹಾಕಿರುವ ಕೊನೆವರೆಗೂ ಹತ್ತಿದನು. ಆ ಕೊನೆಯನ್ನು ಮುಟ್ಟಿದ ಮೇಲೆ ಅವನ ಶರೀರದಿಂದ ಅವನ ತಲೆ ಕತ್ತರಿಸಿಹೋಗಿ ಆ ಮರದ ಇನ್ನೊಂದು ಕೊಂಬೆಗೆ ತಗಲಿಕೊಂಡಿತು. ಅವನ ದಿಂಬವು ಸರೋವರದೊಳಕ್ಕೆ ಬಿತ್ತು. ಕತ್ತಲೆಯಾದ ಮೇಲೆ ಆಯಾ ತಲೆಗಳು

* ಹಸ್ತಪ್ರತಿಯಲ್ಲಿ 'ಅಂ' ಎಂದಿದೆ.

ಆಯಾ ಶರೀರಗಳಿಗೆ ಸೇರಿಕೊಂಡು ಎಲ್ಲರೂ ನೀರಿನ ಮಧ್ಯೆ ಆ ಮಾಯದ ಅರಮನೆಯಲ್ಲಿ ಸೇರಿದರು. ಆಗ ಹಕೀಮನು ಮೊದಲು ಕಂಡ ಹಾಗೆಯೇ ಎಲ್ಲಾ ಕಾಣಿಸಿತು. ರಾಣಿಯು ಸಿಂಹಾಸನದ ಮೇಲೆ ಕೂತುಕೊಂಡಳು. ಅವಳ ಅರ್ಧಾಸನದಲ್ಲಿ ಹಕೀಮ ಕೂತುಕೊಳ್ಳುವ ಹಾಗೆ ಆಸ್ಪದ ಕೊಟ್ಟರು. ಅವನು ತನ್ನ ಸ್ಥಿತಿಯೇನು ಎಂಬ ಜ್ಞಾನವೇ ಇಲ್ಲದೆ ಮಂತ್ರವಾದಿಯ ಮಗಳ ಸೌಂದರ್ಯವನ್ನು ಶ್ಲಾಘಿಸುತಾ ಕೂತುಕೊಂಡನು. ತಾನು ಪೂರ್ವದಲ್ಲಿ ಏನಾಗಿದ್ದನೋ ಎಂಬ ಜ್ಞಾಪಕ ಸ್ವಲ್ಪವೂ ಇರಲಿಲ್ಲ. ಅವನು ಅಲ್ಲಿಗೆ ಹೇಗೆ ಬಂದನೋ ಗೊತ್ತಿಲ್ಲ. ತಾನು ಅಲ್ಲಿಂದ ತಪ್ಪಿಸಿಕೊಂಡು ಹೋಗುವುದು ಹೇಗೆ ಎಂಬ ಮಾತು ಅವನ ಮನಸ್ಸಿಗೆ ಬರಲಿಲ್ಲ.

ಹಕೀಮನು ಮನ್ಮಥನ (ಬಾಧೆಯ) ಶಕ್ತಿ ಮಂತ್ರಶಕ್ತಿ ಎಂಬ ಸಂಕೋಲೆ ಬಿದ್ದು ಸೆರೆಸಿಕ್ಕಿದಾನೆಂದು ರಾಣಿಯು ತಿಳಿದುಕೊಂಡಳು; ಆದರೆ ಅವಳು ಮಾತನಾಡದೆ ಸುಮ್ಮನಿರುತಾ ಗಾನಕ್ಕೂ ನರ್ತನಕ್ಕೂ ಗಮನ ಕೊಟ್ಟಳು. ಅರ್ಧರಾತ್ರಿಯಲ್ಲಿ ಅವನ ಕೈ ಹಿಡಿದು ತನ್ನ ಮಗ್ಗಲಲ್ಲಿ ಭೋಜನಕ್ಕೆ ಕೂರಿಸಿಕೊಂಡು ಒಳ್ಳೇ ಸುವಾಸನೆಯಾದ ಆಹಾರವನ್ನು ಕೊಟ್ಟಳು. ಹಕೀಮನು ಅವಳು ಬಡಿಸಿದ್ದನ್ನು ಭೋಜನ ಮಾಡಿ ಪೂರ್ವದಲ್ಲಿ ತಾನು ಏನಾಗಿದ್ದೆ ಎನ್ನುವುದನ್ನೆಲ್ಲಾ ಮರೆತು ಆ ರಾತ್ರಿಯನ್ನೆಲ್ಲಾ ಸಂತೋಷದಲ್ಲಿಯೂ ಉಲ್ಲಾಸದಲ್ಲಿಯೂ ಕಳೆದನು. ಬೆಳಗಾದ ಮೇಲೆ ಅವನ ತಲೆಯು ಇತರ ತಲೆಗಳ ಸಂಗಡ ಗಿಡಕ್ಕೆ ನೇತುಹಾಕಿಕೊಂಡಿತು. ಹೀಗೆ ಅನೇಕ ಹಗಲು ಅನೇಕ ರಾತ್ರಿ ಕಳೆದುಹೋಯಿತು. ಆಗ ಪುನಃ ಅಜ್ಜನು ಅವನ ಸಹಾಯಕ್ಕೆ ಬಂದನು.

ಆ ವೃದ್ಧನು ತನ್ನ ದೊಣ್ಣೆಯಿಂದ ಹಕೀಮನ ತಲೆಯನ್ನು ಮುಟ್ಟಿದನು. ಆ ಕ್ಷಣದಲ್ಲಿಯೇ ಅವನ ಶರೀರವು ಸರೋವರದಿಂದ ಮೇಲಕ್ಕೆ ಎತ್ತು. ಆ ಇನ್ನೊಂದು ಸಾರಿ ಹಕೀಮ ಹಕೀಮನಾದನು. ಅವನು ಸ್ವಪ್ನದಲ್ಲಿ ಎಚ್ಚರವಾದ ಮನುಷ್ಯನ ಹಾಗೆ ಆ ಮರದ ಕೆಳಗೆ ನಿಂತುಕೊಂಡನು. ಆಗ ಅವನಿಗೆ ಜ್ಞಾನ ಬಂತು. ತನ್ನನ್ನು ಕಾಪಾಡಿದ ಆ ಮುದುಕನನ್ನು ಕಂಡು ನಮಸ್ಕಾರ ಮಾಡಿ—

ಹಕೀಮ—ಅಯ್ಯಾ ಅತ್ಯಂತ ವಿಚಿತ್ರವಾದ ಪುರುಷನೆ, ನಾನು ಸೇನೆ ಅಪಾಯಕರವಾದ ಸ್ಥಿತಿಯಲ್ಲಿದ್ದದನ್ನು ನೀನು ಬಲ್ಲೆ, ಸ್ವಲ್ಪಮಟ್ಟಿಗೆ ನನ್ನನ್ನು ನೀನು ಬಿಡಿಸಿಕೊಂಡೆ, ಆದರೆ ಇನ್ನೂ ಎಷ್ಟೋ ಮಾಡಬೇಕಾಗಿದೆ.

ಅಜ್ಜ—(ಮರವನ್ನು ತೋರಿಸುತಾ) ಎಲ ಮೋಸ ಹೋದ ಹುಡುಗ, ನಾನು ಯಾವ ಸ್ಥಿತಿಯಿಂದ ನಿನ್ನನ್ನು ಕಾಪಾಡಿದೆನೋ ಅದು ಎಷ್ಟರಮಟ್ಟಿಗೆ ಭಯಂಕರವಾದ್ದೊ ನೀನೇ ಬಲ್ಲೆ. ನಿನ್ನ ಕಷ್ಟದಲ್ಲಿ ಯಾವುದು ಕಾರಣವೋ ಅದರಿಂದ ತಪ್ಪಿಸಿಕೊಂಡು ನೀನು ಹೋಗಲೊಲ್ಲೆ. ಆ ಹೆಂಣಿನ ವಿಷಯದಲ್ಲಿ ನಿನ್ನ ಪ್ರೀತಿಯು ಇನ್ನೂ ಬದಲಾಯಿಸಲಿಲ್ಲವೊ?

ಹಶೀಮ—ಬದಲಾಯಿಸತಕ್ಕದ್ದೇ ಅಲ್ಲ. ದೇವರಿಗೋಸ್ಕರ ನೀನು ನನಗೆ ಸಹಾಯ ಮಾಡಿದರೆ, ನನ್ನ ಕಾರ್ಯ ಕೈಗೂಡಬಹುದು. ಇಲ್ಲದಿದ್ದರೆ, ನನಗೋಸ್ಕರ ಕಾದಿರುವ ಅಪಾಯುಗಳನ್ನು ನಾನು ಕಂಣಾರ ನೋಡುತ್ತಲೇ ಇದ್ದುಕೊಂಡು ನಾನು ಪ್ರೀತಿಸುವ ಅವಳಿಗೋಸ್ಕರ, ಏನು ಬಂದರೂ ಲಕ್ಷ್ಯಮಾಡದೆ ಇರಬೇಕೆಂದು ನಿಷ್ಕರ್ಷೆ ಮಾಡಿಕೊಂಡಿದೇನೆ.

ಅಜ್ಜ—ಹೀಗೆ ನೀನು ನಿಷ್ಕರ್ಷೆ ಮಾಡಿಕೊಂಡಿರುವುದರಿಂದ, ನೀನು ಮೊದಲು ಮಾಡಬೇಕಾದ ಕೆಲಸವು ಅವಳ ತಂದೆಯಾದ ಮಂತ್ರವಾದಿಯನ್ನು ಕೊಲ್ಲತಕ್ಕದ್ದು. ಅಲ್ಲಿನ ತನಕ ಆ ಮಂತ್ರಶಕ್ತಿಯನ್ನು ಮುರಿಯಲು ಆಗುವುದಿಲ್ಲ.

ಹಶೀಮ—ಆ ಕೆಲಸ ನಾನು ಮಾಡುತೇನೆ, ಅಥವಾ ಅದನ್ನು ಮಾಡುವುದರಲ್ಲಿ ನಾಶವಾಗುತೇನೆ.

ಅಜ್ಜ—ನಾನು ಹೇಳಿದ ಹಾಗೆ ನೀನು ಕೇಳದಿದ್ದರೆ ನಿನ್ನ ಪ್ರಯತ್ನವೆಲ್ಲಾ ವಿಫಲವಾಗುವುದು.

ಹಶೀಮ—(ಆ ಮುದುಕನ ಕಾಲನ್ನು ಕಟ್ಟಿಕೊಂಡು) ಹಾಗಾದರೆ ಹೇಳೈ. ನೀನು ಹೇಳಿದ್ದಕ್ಕೆ ಎಂದಿಗೂ ತಪ್ಪುವುದಿಲ್ಲವೆಂದು ಪ್ರಮಾಣ ಮಾಡುತೇನೆ.

ಅಜ್ಜ—ನಾನು ಒಂದು ಮಂತ್ರ*ವನ್ನು ಉಪದೇಶ ಮಾಡುತೇನೆ. ತಿಳಿದುಕೊಳ್ಳುವನಾಗು. ಅದು ದೇವರ ಕೆಲವು ಗುಣಗಳನ್ನುಚ್ಚಾರಣೆ ಮಾಡತಕ್ಕದ್ದು.

ಹಶೀಮನು ಮನಸ್ಸು ಬಿಟ್ಟು ಕೇಳಿ, ಮಂತ್ರಶಕ್ತಿಯನ್ನು ಸಂಪಾದಿಸಿಕೊಂಡು ಹೊರಟುಹೋಗಲು ಸಿದ್ಧವಾದ. ಆಗ ಅಜ್ಜನಾದ ಆ ಮುದುಕನು—"ಅಯ್ಯಾ ಧೀರ, ಈ ಮಂತ್ರದ ಶಕ್ತಿಯು ನಿನ್ನ ನಡತೆಯಲ್ಲಿದೆ. ನೀನು ಶುದ್ಧನಾಗಿರಬೇಕು. ಎಂದಿಗೂ ಸುಳ್ಳು ಹೇಳಕೂಡದು. ಪ್ರತಿದಿನವೂ ಭಕ್ತಿಯಾಗಿ ಜಲದಲ್ಲಿ ಸ್ನಾನವನ್ನು ಮಾಡಬೇಕು. ಸೂರ್ಯ ಅಸ್ತವಾಗುವವರೆಗೂ ಭೋಜನ ಮಾಡಕೂಡದು. ಅಕ್ರಮವಾದ ಕಾಲದಲ್ಲಿ ಈ ಮಂತ್ರವನ್ನು ಉಚ್ಚರಿಸಕೂಡದು. ಇದರ ಪ್ರಕಾರ ನೀನು ಖಂಡಿತವಾಗಿ ನಡೆಯಬೇಕು. ತರುವಾಯ ನಿನಗೆ ಏನಾದರೂ ಕೇಡು ಸಂಭವಿಸಿದರೆ, ಈ ಪರಿಶುದ್ಧ ಮಂತ್ರವನ್ನು ಉಚ್ಚರಿಸು. ನಿನಗೆ ಜಯವಾಗುವುದು. ಮಂತ್ರವಾದಿಯ ತಂತ್ರಗಳ ಶಕ್ತಿಯೂ ನಿನ್ನ ಮೇಲೆ ಕೆಂದುವುದಿಲ್ಲ" ಎಂದು ಬುದ್ಧಿವಾದವನ್ನು ಹೇಳಿದನು. ಆಗ

ಹಶೀಮನು—ಅಹಮುರ್‌ಬೆಟ್ಟಕ್ಕೆ ನನಗೆ ಹೇಗೆ ದಾರಿ ತಿಳಿಯಬೇಕು ?

---

* ದೇವರ ಒಂದು ನೂರು ನಾಮಗಳು ಅಥವಾ ಗುಣಗಳನ್ನು ಉಚ್ಚಾರಣೆ ಮಾಡುವುದೇ ಮುಸಲ್ಮಾನರಲ್ಲಿ ಈ ಮಂತ್ರವೆಂದು ಹೇಳುತಾರೆ, ಹೇಗೆಂದರೆ : ದೇವರಲ್ಲದೆ, ದೇವರಿಲ್ಲ, ಅವನು ಪರಮ ಕರುಣಾಳು, ದಯಾಳು, ಜಗದೀಶ್ವರ, ಅತ್ಯಂತ ಪರಿಶುದ್ಧ......

ಅಜ್ಜ—ನಿನ್ನ ಬಲಗೈಯಲ್ಲಿ ನನ್ನ ದೊಂಣೆಯನ್ನು ಹಿಡಿದು ಕಂಣ ಮುಚ್ಚಿಕೊ. ದೇವರಲ್ಲಿ ನಂಬಿಕೆ ಇಡು.

ಹಶೀಮನು ಹೇಳಿಕೊಟ್ಟ ಹಾಗೆ ಮಾಡಿದ. ಕೆಲವು ನಿಮಿಷ ಗಾಳಿಯಲ್ಲಿ ತೂರಿ ಕೊಂಡು ಹೋದ ಹಾಗೂ, ತರುವಾಯ ಗಟ್ಟಿನೆಲ ಸಿಕ್ಕಿದ ಹಾಗೂ ತೋರಿತು. ಕಂಣ ಬಿಟ್ಟು ನೋಡಿದ. ಹತ್ತಿರ ಯಾರೂ ಇರಲಿಲ್ಲ. ಅವನೆದುರಿಗೆ ಎತ್ತರವಾದ ಪರ್ವತ ಕಾಣಿಸಿತು. ಅದರ ಮೇಲೆ ಒಂದು ಬಗೆ ಹೂ(tulip)ವಿಶೇಷವಾಗಿ ಬಿಟ್ಟಿತ್ತು. ಆ ಪುಷ್ಪಕ್ಕೆ ಅದು ಅಕಾಲವಾದರೂ ಆ ಹೇರಳವಾಗಿದ್ದ ಅದನ್ನು ನೋಡಿ ಹಶೀಮ ಆಶ್ಚರ್ಯಪಟ್ಟನು.

ಹಶೀಮನು ಆ ಬೆಟ್ಟವನ್ನು ಹತ್ತಲು ಮೊದಲು ಮಾಡಿದನು. ಬಹಳ ಮೆಟ್ಟಲನ್ನು ಹತ್ತಲಿಲ್ಲ ಎನ್ನುವಾಗ ಅವನ ಹೆಜ್ಜೆಗಳು ಅಲ್ಲಿನ ಕಲ್ಲಿಗೂ ಬಂಡೆಗೂ ಕಚ್ಚಿಕೊಂಡುಬಿಟ್ಟವು. ಅವನ ಕೈಲಾದ್ದನ್ನೆಲ್ಲಾ ಮಾಡಿದ. ಅವನ ಪ್ರಯತ್ನ ಭಂಗವಾಯಿತು. ಅವನ ಹೆಜ್ಜೆ ಅವ ನಿಂತಿದ್ದ ಬಂಡೆ ಹೇಗೋ ಹಾಗೆ ಚಲನೆ ಇಲ್ಲದ್ದಾಗಿತ್ತು. ಅವನಿಗೆ ವಿಶೇಷವಾಗಿ ನಿರಾಶೆಯಾಯಿತು. ಆಗ ಇವನ ಮನಸ್ಸಿಗೆ ಅಜ್ಜ ಹೇಳಿಕೊಟ್ಟಿದ್ದ ಮಂತ್ರ ಜ್ಞಾಪಕಕ್ಕೆ ಬಂತು. ದಿವ್ಯವಾದ ಆ ಮಂತ್ರವನ್ನು ಅವನು ಪುರಶ್ಚರಣೆಮಾಡಿದ ಕ್ಷಣದಲ್ಲಿಯೇ, ಕಚ್ಚಿಕೊಂಡಿದ್ದ ಅವನ ಕಾಲು ಬಿಟ್ಟಿತು. ಸಸಾರವಾದ ಕಾಲುಗಳುಳ್ಳವನಾಗಿ ಕೆಂಪು ಬೆಟ್ಟದ ಮೇಲಕ್ಕೆ ಹತ್ತುತಾ ಬಂದನು. ತುಂಭಿಗೆ ಬಂದ ಮೇಲೆ ಒಂದು ವಿಸ್ತಾರವಾದ ಮೈದಾನ ಸಿಕ್ಕಿತು. ಅಲ್ಲಿ ತಂಣಗೆ ಸಿಹಿಯಾಗಿರುವ ಒಂದು ನೀರಿನ ಚಿಲುಮೆಯೊಂದು ಸಿಕ್ಕಿತು. ಅದರ ಸುತ್ತಲೂ ಅವ ಎಂದಿಗೂ ಕಾಣದಂಥಾ ಹಂಣು ಜಗಿಯುತಾ ಫಲವೃಕ್ಷಗಳು ಇದ್ದವು. ಹಶೀಮನು ಆ ಚಿಲುಮೆಯ ಬಳಿಯಲ್ಲಿ ಕೂತುಕೊಂಡು ಮೈ ಕೈ ತೊಳೆದುಕೊಂಡು ತನ್ನ ಮಂತ್ರ ವನ್ನು ಜಪಿಸಿದನು. ಆ ಕಾಡಿನಲ್ಲಿದ್ದ ದುಷ್ಟ ಮೃಗಗಳೂ ವಿಷಪೂರಿತವಾದ ಸರ್ಪಗಳೂ ಅವನ ಕಂಣಿಗೆ ಕಾಣದ ಹಾಗೆ ಹೊರಟುಹೋದವು.

ತನ್ನ ದುಷ್ಟ ಮೃಗಗಳಲ್ಲಿ ಆದ ಅವಾಂತರವನ್ನು ಆ ಮಂತ್ರವಾದಿಯು ನೋಡಿ, ತನ್ನ ಮಂತ್ರಶಾಸ್ತ್ರದ ಪುಸ್ತಕವನ್ನು ನೋಡಲು ಮೊದಲು ಮಾಡಿದನು. ಅದರಲ್ಲಿ "ನೀನು ತಿಳಿಯುವುದು, ಯೇಮನ್ ದೇಶದ ದೊರೆಮಗನಾದ ಹಶೀಮನು ಒಂದಾ ನೊಂದು ದಿವಸ ಈ ಪರ್ವತಕ್ಕೆ ಬಂದು ನೀನು (ಕಲಿತಿರುವ) ತಂತ್ರವೆಲ್ಲಾ ನಿಷ್ಪ್ರಯೋಜನವಾಗುವಂತೆ ಮಾಡುವನು" ಎಂದು ಅದರಲ್ಲಿ (ಬರೆದಿತ್ತು). ಹಶೀಮನು ನೀರಿನ ಚಿಲುಮೆ ಬಳಿ ಬಂದು ಇಳಿದಿದಾನೆಂದು ವರ್ತಮಾನ ತಿಳಿಯಿತು. ಅವನು ಯಾಕೆ ಬಂದಿದಾನೆಂದು ತಿಳಿದು ತನ್ನ ಶಾಸ್ತ್ರದ ರಹಸ್ಯಗಳನ್ನು ಇನ್ನೂ ಒಳಹೊಕ್ಕು ನೋಡಲು ಆರಂಭಿಸಿದನು. ತನ್ನ ಮಗಳನ್ನು ಹಶೀಮ ಮೋಹಿಸಿದಾನೆಂದೂ ತನ್ನ ವಿಶಿಷ್ಟ ಮಂತ್ರಶಾಸ್ತ್ರಗಳ ಮಹಿಮೆ ಯಾವುದೂ ಕೆಂಡದಂಥಾ ಒಂದು ಮಹಾಮಂತ್ರ ಶಕ್ತಿಯಿಂದ ಹಶೀಮ ಬಲವನ್ನು ಹೊಂದಿ ತನ್ನನ್ನು ಕೊಲ್ಲುವುದಕ್ಕೆ ಬಂದಿದಾನೆಂದೂ ಸಹ ತಿಳಿದು ವಿಶೇಷ ಭೀತಿಗೊಂಡನು.

ಮುದುಕನು ಹೇಳಿಕೊಟ್ಟಿದ್ದ ಮಂತ್ರವನ್ನು ಹತೀಮನು ಮರೆತುಹೋಗುವ ಹಾಗೆ ಮಾಡತಕ್ಕದ್ದೊಂದರಲ್ಲಿ ಮಾತ್ರ ತನಗೆ ಕ್ಷೇಮ ಉಂಟೆಂದು ಆ ಮಂತ್ರವಾದಿಯು ತಿಳಿದುಕೊಂಡು ಕೆಲವು ಮಂತ್ರಗಳನ್ನು ತಾನು ಉಚ್ಚರಿಸಿ ನಾಲ್ಕು ದಿಕ್ಕಿಗೂ ಊದಿದನು. ಒಂದು ನಿಮಿಷ ಮಾತ್ರದಲ್ಲಿ ಗಾಳಿಯಿಂದ ಪ್ರೇತಗಳೂ ಪಿಶಾಚಿಗಳೂ ಖಚರರೂ ಬಂದು ಅವನ ಸುತ್ತಲೂ ಸುತ್ತಿಕೊಂಡವು. ರೂಪಿನಲ್ಲಿ ತನ್ನ ಮಗಳ ಹಾಗೆ ಕಾಣುತಾ ಇದ್ದ ಒಬ್ಬ ಖಚರಿಯನ್ನು ಕರೆದು ಅವಳ ಕೈಗೆ ದ್ರಾಕ್ಷಿಯ ರಸವನ್ನು ತುಂಬಿದ ಎರಡು ಪಾತ್ರೆಗಳನ್ನು ಕೊಟ್ಟು ಮಂತ್ರವಾದಿಯು—ನಿನ್ನ ಚಮತ್ಕಾರ ವನ್ನೆಲ್ಲಾ ಉಪಯೋಗಿಸಿ ಈ ಪಾತ್ರೆಯಲ್ಲಿ ಹತೀಮನು (ಪೇಯ ಪದಾರ್ಥ)ವನ್ನು ಅವನಿಗೆ ಕುಡಿಯಿಸು, ಎಂದು ಹೇಳಿ ಕಳುಹಿಸಿದನು. ಆ ಖಚರಿಯು ರಾಣಿಯ ಸಮೀಪದಲ್ಲಿದ್ದ ಇತರ ಹೆಂಗಸರ ಹಾಗೆ ಕಾಣುವವರನ್ನು ಕರೆದುಕೊಂಡು ಸರೋವರದ ಬಳಿಗೆ ಹೋದಳು. ಹತೀಮನು ಅವರನ್ನು ನೋಡಿ—ಮಾಯದ ಮರದ ಬಳಿಯಲ್ಲಿ ನಾನು ಕಂಡವರ ಹಾಗೆಯೇ ಇವರೂ ಇದಾರೆ. ಆಗಲೇ ಅವರೂ ಇಲ್ಲಿಗೆ ಬಂದು ಬಿಡ ತಕ್ಕದ್ದು ಸಾಧ್ಯವೆ ? ಎಂದು ತನ್ನೊಳಗೆ ಯೋಚಿಸಿಕೊಂಡು ಖಚರರ ರಾಣಿಯನ್ನು ತಾನು ಎಲ್ಲಿ ಕಂಡನೋ ಅಂಥಾ ಸ್ಥಳದ ಹಾಗೆಯೇ ಇದೂ ಇದೆಯಾಗಿ ಮೋಸವೇನೂ ಇಲ್ಲದೆ ಇರಬಹುದು ಎಂದು ಆತ್ಮಗತವಾಗಿ ಯೋಚಿಸಿದನು.

ತನ್ನ ಪ್ರೀತಿಪಾತ್ರಳನ್ನು ರೂಪಿನಲ್ಲಿ ಹೋಲುತಾ ಇದ್ದ ಖಚರಿಯು ಹತೀಮ ನನ್ನು ಕುರಿತು ಬಹು ವೈಯ್ಯಾರದಿಂದ—ಧೈರ್ಯಶಾಲಿಯೆ, ನನಗೋಸ್ಕರ ನೀನು ಇಲ್ಲಿಗೆ ಬರುವುದರಲ್ಲಿ ಅನೇಕಾನೇಕ ಅಪಾಯಗಳಿಗೆ ಒಳಗಾಗಬೇಕಾಯಿತು. ನಮ್ಮ ತಂದೆಯು ನನ್ನನ್ನು ಸೆರೆಯಿಂದ ಬಿಡುಗಡೆ ಮಾಡಿಬಿಟ್ಟನು. ಅವನ ಉದ್ಯಾನವನವಾದ ಇಲ್ಲಿ ನಿರ್ಬಂಧವಿಲ್ಲದೆ ನಾನು ತಿರಗಾಡುತೇನೆ. ನಿನ್ನನ್ನು ಕಂಡಕೂಡಲೆ ನನ್ನ ಹೃದಯವು ಆನಂದಪರವಶವಾಯಿತು. ನನ್ನ ನಿಜವಾದ ಪ್ರೀತಿಯು ನಿನ್ನಲ್ಲಿದೆ ಎನ್ನುವುದನ್ನು ನಂಬಿಕೆ ಹೇಳುವುದಕ್ಕೆ ನಾನು ತ್ವರೆಯಿಂದ ಬಂದೆ ; ಎಂದು ಹೇಳಿ ಆ ಕಳ್ಳ ಖಚರಿಯು ಹತೀಮನ ಪಕ್ಕದಲ್ಲಿ ಕೂತುಕೊಂಡು ಆ ಪಾತ್ರೆಗೆ ಆ ಪೇಯವನ್ನು ಹನಿಸಿ ಅವನಿಗೆ ಕುಡಿಯುವುದಕ್ಕೆ ಕೊಟ್ಟಳು. ಹತೀಮನು ಸಂತೋಷವಾಗಿ ಅಪಾಯಪೂರಿತವಾದ ಆ ಪಾತ್ರೆಯನ್ನು ತೆಗೆದುಕೊಂಡು, ಹೀಗೆ ಸಮಾಗಮವಾದ್ದು ತನ್ನ ಪುಣ್ಯೋದಯ ವೆಂದುಕೊಂಡು ಪಾತ್ರೆಯನ್ನು ಎತ್ತಿ ಅದರಲ್ಲಿದ್ದದೆಲ್ಲವನ್ನೂ ಒಂದು ಬಟ್ಟು ಬಿಡದೆ ಕುಡಿದುಬಿಟ್ಟನು.

ಹತೀಮನು ಆ ಹಾಳ ಪೇಯವನ್ನು ಕುಡಿದ ಕ್ಷಣದಲ್ಲಿಯೇ ಅವನ ಪ್ರೇಮಾಸ್ಪ ದಳ ರೂಪವನ್ನು ತಾಳಿದ್ದ ಖಚರಿಯು ದೊಡ್ಡ ಕರೀಭೂತವಾಗಿ ಕೂತಳು. ಆ ಪಿಶಾಚಿಗಳೆಲ್ಲವೂ ಹತೀಮನ ಮೇಲೆ ನುಗ್ಗಿ ಸರಪಣಿಯಿಂದ ಅವನನ್ನು ಬಿಗಿದು ತಮ್ಮ ಯಜಮಾನನಾದ (ಮಂತ್ರವಾದಿ)ಯ ಬಳಿಗೆ ಕರೆದುಕೊಂಡು ಹೋದವು. ಅಲ್ಲಿ ಆ ಮಂತ್ರವಾದಿಯು ಹತೀಮನ ಗಂಭೀರವಾದ ಆಕೃತಿಯನ್ನು ನಿರ್ಭೀತಿಯಾದ ಮುಖ

ರಸವನ್ನೂ ನೋಡಿ ಆಲೋಚನಪರನಾಗಿ, ಅಂಥವನನ್ನು ಕೊಲ್ಲಿಸಬೇಕೆಂದು ತನಗೆ ಹುಟ್ಟಿದ ಕ್ರೂರವಾದ ಇಷ್ಟಕ್ಕೆ ಮರುಕ ಹುಟ್ಟಿ ತನ್ನೊಳಗೆ—ಇಂಥಾ ಧೈರ್ಯಶಾಲಿಯು ಸಾಯಲೇ ಬೇಕಾಗಿ ಬಂದಿದೆಯಲ್ಲಾ! ಆದರೆ ನನಗೆ ದೊಡ್ಡ ಶತ್ರುವಾದ್ದರಿಂದ ಅವನನ್ನು ನಾಶಮಾಡಲೇಬೇಕು, ಎಂದುಕೊಂಡನು. ಈ ರೀತಿಯಾಗಿ ನಿಷ್ಕರ್ಷೆ ಮಾಡಿಕೊಂಡು ಕಟ್ಟಿಹಾಕಿರುವ ಹಶೀಮನನ್ನು ಪರ್ವತದ ಮೇಲೆ ಹಗಲೂ ರಾತ್ರಿಯೂ ಅವಿಚ್ಛಿನ್ನವಾಗಿ ಉರಿಯುತಾ ಇರುವ ಅಗ್ನಿಕುಂಡಕ್ಕೆ ತಳ್ಳಿಬಿಡುವುದೆಂದು ತನ್ನ ಕೈ ಕೆಳಗಿನ ಪಿಶಾಚಿಗಳಿಗೆ ಆಜ್ಞಾಪಿಸಿದನು.

ಆ ದೈವಗಳು ಹಶೀಮನನ್ನು ಹಿಡಿದುಕೊಂಡು ಒಂದು ಸಾವಿರ ಮಣ ಸೀಸ ಕರಗಿ ಮರಳುತಾ ಇರುವ ಕೊಪ್ಪರಿಗೆಗೆ ಹಾಕಿ ತಮ್ಮ ಯಜಮಾನನ ಬಳಿಗೆ ಹೋಗಿ ಅವನ ಶತ್ರು ನಾಶವಾದನೆಂದು ತಿಳಿಸಿದರು. ಆದರೆ ಅಂಥಾ ಮಹಾಜ್ವಾಲೆಯಲ್ಲಿಯೂ ಕೂಡ ಹಶೀಮನು ಇನ್ನೂ ಬದುಕಿದಾನೆಂದು ತನ್ನ ಮಂತ್ರಶಾಸ್ತ್ರದ ಬಲದಿಂದ ಆ ಮಂತ್ರವಾದಿಯು ತಿಳಿದುಕೊಂಡನು. ಅವನಿಗೆ ಬಹಳ ಗಾಬರಿಯಾಯಿತು. ತನ್ನ ಮಂತ್ರದ ಮೇಲೆ ಕೆಂದುವಷ್ಟು ಬಲವಾದ್ದು ಮತ್ತೆ ಯಾವುದೂ ಇಲ್ಲವೆಂದು ಅವನು ತಿಳಿದಿದ್ದನು. ಪುನಃ ತನ್ನ ಮಂತ್ರಶಾಸ್ತ್ರದ ಪುಸ್ತಕವನ್ನು ನೋಡಿ ಶೋಧಿಸುವಾಗ ಭಲ್ಲೂಕಪುತ್ರಿಯು ಕೊಟ್ಟಿದ್ದ ಮುಹ್ರವನ್ನು ಹಶೀಮನು ಬಾಯಲ್ಲಿರಿಸಿ ಕೊಂಡಿದಾನೆಂದು ಗೊತ್ತಾಯಿತು. ಮಂತ್ರವಾದಿಗೆ ಗಾಬರಿ ಇನ್ನೂ ಅಧಿಕ ವಾಯಿತು. ಆ ಮುಹ್ರವನ್ನು ಹಶೀಮನಿಂದ ಬಲವಂತವಾಗಿ ಕಿತ್ತುಕೊಳ್ಳುವುದು ಸಾಧ್ಯವಿಲ್ಲ. ಅದು ಅವನಲ್ಲಿರುವತನಕ ಅವನು ಅಪಾಯರಹಿತ (ಹೀಗಿದ್ದ ಕಾರಣ) ಅವನನ್ನು ಆ ಉರಿಯಿಂದ ಈಚೆಗೆ ತೆಗೆದು ಮೊದಲು ಅವ ಕೂತಿದ್ದ ಸರೋವರದ ಸಮೀಪದಲ್ಲಿ ಕೂರಿಸಿಬಿಡಿ ಎಂದು ತನ್ನ ಕಡೆ ಪಿಶಾಚಿಗಳಿಗೆ ಮಂತ್ರವಾದಿಯು ಅಪ್ಪಣೆ ಕೊಟ್ಟನು. ಅವರು ಅದರಂತೆ ನಡಿಸಿದರು. ಹಶೀಮನು ಅಲ್ಲಿ ಒಂಟಿಯಾಗಿ ನಿಂತು ಬಟ್ಟೆಯನ್ನು ಸರೋವರದಲ್ಲಿ ತೆಗೆದು ಸ್ನಾನಮಾಡಿ ತನ್ನ ಪ್ರಾರ್ಥನೆಯನ್ನ ದೇವರಿಗೆ ಅರ್ಪಿಸಿ, ಮಲಗಿಕೊಂಡನು. ಆ ಮಂತ್ರವಾದಿಗೆ ಇನ್ನೂ ಅಪಾಯ ತಪ್ಪಿತೆಂದು ತೋರಲಿಲ್ಲ. ಮೊದಲಿನ ಹಾಗೆ ಅದೇ ದೈವಗಳ ಮುಖಾಂತ್ರ ಅವನನ್ನು ಪೀಡಿಸಿದನು. ಆ ಪಿಶಾಚಿಗಳಲ್ಲಿ ರಾಣಿಯು ಹಾಗೆ ಕಾಣುತಾ ಇದ್ದ ಒಬ್ಬಳು ಕಾಡಿನಲ್ಲಿದ್ದ ಒಂದು ಡೊಗರಿನಿಂದ ಹಶೀಮನ ಸಮೀಪಕ್ಕೆ ಬಂದು ಅವನನ್ನು ಕುರಿತು

ಪಿಶಾಚಿ—ಹಶೀಮ, ದೂರವಾಗಿ ನಿಂತು ನಾನು ನಿನ್ನೊಡನೆ ಮಾತನಾಡಬೇಕಾಗಿದೆ. ನಿನ್ನ ಪಕ್ಕದಲ್ಲಿ ಬಂದು ನಾನು ಕೂತುಕೊಳ್ಳಲು ಧೈರ್ಯವಿಲ್ಲ. ನಿನ್ನನ್ನು ಕಂಡು ಆನಂದಪಡುತಾ ಇದ್ದೆ. ಅಯ್ಯೋ ನಮ್ಮ ತಂದೆಯು ನನ್ನನ್ನು ಕರೀ ಪಿಶಾಚಿಯಾಗಿ ಮಾಡಿಬಿಟ್ಟನು. ಉಳಿದ ನನ್ನ ಜನರನ್ನೆಲ್ಲಾ ಖಚರಿಯರನ್ನಾಗಿ ಮಾಡಿದನು. ನಾವು ನಿನ್ನನ್ನು ಹಿಡಿದು ಬೆಂಕಿಗೆ ಹಾಕಿದೆವು. ನಮ್ಮ ತಂದೆಯ ಖಂಡಿತವಾದ ಅಪ್ಪಣೆಯನ್ನು ಮೀರಲು ನಮಗೆ ಸಾಮರ್ಥ್ಯವಿಲ್ಲ.

ದೇವರು ಆ ವಿಪತ್ತಿನಿಂದ ನಿನ್ನನ್ನು ಕಾಪಾಡಿದ. ನಿನ್ನ ಕ್ಷೇಮಕ್ಕೋಸ್ಕರ ನನ್ನ ಸಹವಾಸವನ್ನು ಬಿಟ್ಟುಬಿಡು. ನಮ್ಮ ತಂದೆಯು ಏನಾದರೂ ನಾವಿಬ್ಬರೂ ಒಟ್ಟಿಗೆ ಸೇರಿದ್ದನ್ನು ಕಂಡರೆ ನಮ್ಮಿಬ್ಬರನ್ನೂ ಅವನು ಕೊಂದುಹಾಕುವುದು ನಿಜ.

ಈ ಚಕ್ಕಂದದ ಮಾತುಗಳಿಂದ ಹತೀಮನ ಮನಸ್ಸು ಬಲೆಗೆ ಸಿಕ್ಕಿತು. ಅವನು ತನ್ನ ಕೈಗಳನ್ನು ಚಾಚಿ ಆ ಮೋಸದ ಪಿಶಾಚಿಯನ್ನು ತಬ್ಬಿಕೊಂಡನು. ಆಗ

ಪಿಶಾಚಿ—ನಿಜವಾಗಿ ನಿನಗೆ ನನ್ನ ಮೇಲೆ ಪ್ರೀತಿ ಇದೆಯೆ ?

ಹತೀಮ—ನನ್ನ ಮನಃಪೂರ್ವಕವಾಗಿ ನಿನ್ನಲ್ಲಿ ನನಗೆ ಪ್ರೀತಿ ಇದೆ.

ಪಿಶಾಚಿ—ನನ್ನ ಒಂದು ಮಾತನ್ನು ನಡಿಸಿಕೊಡು, ಅದನ್ನು ತಿರಸ್ಕರಿಸಬೇಡ.

ಹತೀಮ—ನಿನಗೆ ಬೇಕಾದನ್ನು ಕೇಳು. ನನ್ನ ಕೈಲಾದರೆ ಅದನ್ನು ಕೊಡುತೇನೆ. ಆದರೆ ನಾನು ಬಡವ. ನಿನಗೆ ಚಿನ್ನವಾಗಲಿ ರತ್ನಗಳಾಗಲಿ ಬೇಕಾದರೆ ನನಗೆ ಗತಿ ಇಲ್ಲ. ಆದರೆ ನೀನು ಕೇಳತಕ್ಕದ್ದೇನು ಹೇಳು ಕೇಳೋಣ.

ಪಿಶಾಚಿ—ಭಲ್ಲೂಕಪುತ್ರಿಯ ಮುಹ್ರವು ನಿನ್ನಲ್ಲಿದೆ ಎಂದು ಕೇಳಿದೇನೆ.

ಹತೀಮ—ಇಷ್ಟರವುಟ್ಟಿಗೆ ನಿನಗೆ ತಿಳಿದದ್ದು ಹೇಗೆ ?

ಪಿಶಾಚಿ—ನಮ್ಮ ತಂದೆಯು ಅವನ ಮಂತ್ರಶಾಸ್ತ್ರದ ಶಕ್ತಿಯಿಂದ ಅದನ್ನು ಕಂಡು ಹಿಡಿದನು. ಅದು ನಿನ್ನಲ್ಲಿದೆ ಎಂದು ಹೇಳಿದನು. ನನಗೆ ಅದು ಬೇಕು.

ಹತೀಮ—ನೀನು ಕೇಳುವ ಪದಾರ್ಥವು ಬಹಳ ಬೆಲೆಯಾದ್ದು. ಆದಾಗ್ಯೂ ನಿನಗೆ ಕೊಡುತೇನೆ.

ಹೀಗೆ ತನ್ನ ಕ್ಷೇಮಕ್ಕೆ ಮುಖ್ಯ ಆಧಾರಭೂತವಾದ ಆ ಪದಾರ್ಥವನ್ನು ತನ್ನ ಪ್ರೀತಿಪಾತ್ರಳ ರೂಪಿನಲ್ಲಿದ್ದ ಪಿಶಾಚಿಗೆ ಕೊಡುವುದರಲ್ಲಿದ್ದನು. ಆಗ ಅಕಸ್ಮಾತ್ತಾಗಿ ಹಸುರು ಉಡುಗೆಯನ್ನುಟ್ಟು ಹತೀಮನ ಪಕ್ಕದಲ್ಲಿ ನಿಂತು, ಅವನ ಕೈಯನ್ನು ಹಿಡಿದು ಕೊಂಡು

ಅಜ್ಜ—ಮೋಸಹೋದವನೆ, ಆ ರತ್ನವನ್ನು ನೀನು ಯಾರಿಗೂ ಕೊಡಬೇಡ. ಹಾಗೆ ಕೊಟ್ಟರೆ ತುಂಬ ದುಃಖಕ್ಕೆ ಕಾರಣವಾಗುವುದು. ನಿನ್ನ ಆಯುಸ್ಸು ಕಡವೆ ಯಾಗುವುದು.

ಹತೀಮ—(ಆಶ್ಚರ್ಯದಿಂದ ಬೆರಗಾಗಿ ಎಚ್ಚೆತ್ತುಕೊಂಡು) ಎಲೈ ಯಜಮಾನ, ನೀನು ಯಾರು ? ಸರಿಯಾದ ಕಾರ್ಯವನ್ನು ನಾನು ಮಾಡುತಾ ಇರುವಾಗ ನೀನು ಯಾಕೆ ಅಡ್ಡಿ ಮಾಡುತೀಯೆ ?

ಅಜ್ಜ—ನಾನು ಇಂಥವನೆಂದು ಇನ್ನೂ ಗೊತ್ತಾಗಲಿಲ್ಲವೆ? ಆ ಮಹಾತ್ಮನಾದ ದೇವರ ಸದ್ಗುಣಗಳನ್ನು ಮೊನ್ನೆ ಮೊನ್ನೆ ನಿನಗೆ ಹೇಳಿಕೊಟ್ಟಂಥಾ ಖ್ವಾಜಾ ಖಿಸರ್* ಎಂಬುವನು ನಾನು.

ಹಶೀಮನು ಜಾಗ್ರತೆಯಾಗಿ ಹೋಗಿ ಆ ಸಿದ್ಧನ ಕಾಲಿಗೆ ನಮಸ್ಕಾರಮಾಡಿ—

ಹಶೀಮ—ಸ್ವಾಮಿ ದೇವಾಂಶಪುರುಷರೆ, ನನ್ನ ಪ್ರೀತಿಗೆ ವಿಷಯವಾದ ವ್ಯಕ್ತಿಯನ್ನು ಹೊಂದುವುದರಲ್ಲಿ ನನಗೆ ಉಂಟಾದ ಜಯವು ತಮ್ಮಿಂದ ಪ್ರಾಪ್ತವಾಯಿತು.

ಅಜ್ಜ—ಅಯ್ಯೋ ಮೋಸಕ್ಕೆ ಸಿಕ್ಕಿದವನೆ, ಇದೆಲ್ಲಾ ಕಂಣಕಟ್ಟು ಮಾಯವೆಂದು ನಿನಗೆ ತಿಳಿಯದೆ? ಇಂಥಾ ಕೃತ್ರಿಮವಾದ ವೇಷದಿಂದ ಆಗಲೇ ನೀನು ಮೋಸ ಹೋದೆಯ? ಮೊದಲು ಸಾರಿ ನೀನು ಬಂದು ಈ ಸರೋವರದ ಬಳಿಯಲ್ಲಿ ಕೂತು ಕೊಂಡಾಗ ಮಂತ್ರವಾದಿಯು ಈ ದೈವದೊಡನೆ ಮಹಾ ವಿಷಪೂರಿತವಾದ ಒಂದು ಬಟ್ಟಲನ್ನು ನಿನಗೆ ಕಳುಹಿಸಿದನು. ಅದನ್ನು ನೀನು ಕುಡಿದ ಕಾರಣ ನಿನಗೆ ಬುದ್ಧಿಯೇ ಕೆಟ್ಟುಹೋಯಿತು. ಅದರಿಂದ ನಿನ್ನನ್ನು ಅವರು ಕಾಯುವ ಕೊಪ್ಪರಿಗೆಗೆ ಹಾಕಲಿಲ್ಲವೆ? ಆಗ ನಿನಗೆ ಕ್ಷೇಮವಾದ್ದು ಈ ಮುಹ್ರದಿಂದಲ್ಲವೆ? ಈಗ ಅದನ್ನು ನೀನು ಕೊಟ್ಟುಬಿಡಬೇಕೆಂದು ಇದ್ದೀಯೆ. ಹಶೀಮ, ನಿನ್ನ ಪ್ರಾಣದ ಮೇಲೆ ನಿನಗೆ ಇಷ್ಟವಿದ್ದರೆ ಈ ಮಹಾನಿಧಿಯನ್ನು ಕೊಡಬೇಡ. ನಾನು ನಿಷ್ಕಲ್ಮಷಚಿತ್ತನಾಗಿ ಹೇಳುತಿದೇನೆಂಬುವುದಕ್ಕೆ ನಿನಗೆ ತಾರ್ಕಣ್ಯ ಬೇಕಾಗಿದ್ದರೆ, ನಾನು ನಿನಗೆ ಉಪದೇಶಮಾಡಿದ ಮಂತ್ರವನ್ನು ಜಪಿಸು. ಇವಳು ನಿಜವಾಗಿ ಆ ಮಂತ್ರವಾದಿಯ ಮಗಳೇ ಆಗಿದ್ದರೆ ಅವಳು ನಿನ್ನ ಸಮೀಪದಲ್ಲಿಯೇ ಕೂತಿರುತಾಳೆ. ಹಾಗಿಲ್ಲದೆ ಇದು ಪಿಶಾಚವಾದರೆ ಇದು ಬೆಂಕಿಯ ಉರಿಯ ಹಾಗಾಗಿ ನಿನ್ನ ಕಂಣಿಗೆ ಕಾಣದೆ ಮಾಯವಾಗುವುದು.

ಆಗ ಹಶೀಮನು ಆ ಮುನಿಯ ಕಾಲಿಗೆ ಮುತ್ತಕೊಟ್ಟು ಕೇವಲ ಕೃತಜ್ಞತಾ ರೂಪವಾದ ವಿಧೇಯತೆಯನ್ನು ತೋರಿಸಿ; ಆ ಸರೋವರದಲ್ಲಿ ಸ್ನಾನವನ್ನು ಮಾಡಿ ಭಕ್ತಿ ಪುರಸ್ಸರವಾಗಿ ಆ ಮಂತ್ರವನ್ನು ಜಪಿಸಿದನು. ಮಂತ್ರೋಚ್ಚಾರಣೆಗೆ ಅವನು ಬಾಯಿಬಿಟ್ಟ ಕ್ಷಣದಲ್ಲಿಯೇ ನಿಶ್ಚಯದ ಪ್ರಕಾಶವು ಅವನ ಮೇಲೆ ಹೊಳೆಯಿತು. ಇವನ ಮುಂದೆ ಆ ದೈವಗಳೆಲ್ಲಾ ಗಡಗಡನೆ ನಡುಗಿಹೋದವು. ಕುಲುಮೆಯಿಂದ ಹೊರಡುವ ಉರಿಯ ಹಾಗೆ ಅವುಗಳ ತಲೇ ಮೇಲೆ ಉರಿ ಹೊರಟಿತು. ಕೆಲವು

* ಮುಸಲ್ಮಾನರಲ್ಲಿ ಖಿಸರ್ ಎಂಬುವುದು ಪ್ರಸಿದ್ಧವಾದ ಹೆಸರು. ಸಕಿಂದರ್ ಧೂಲ್ ಕೊರ್‌ನೇನ್ ಎಂಬ ದೊರೆಗೆ ಖಿಸರನು ಮಂತ್ರಿಯಾಗಿದ್ದನು. ಅವನು ಅಮೃತ ಸರೋವರವನ್ನು ಕಂಡುಹಿಡಿದು, ಆ ಅಮೃತವನ್ನು ಕುಡಿದನು. ಆದ್ದರಿಂದ ಅವನು ಚಿರಂಜೀವಿಯಾಗಿ ಇನ್ನೂ ಬದುಕಿದಾನೆ. ಪ್ರಳಯದವರೆಗೂ ಬದುಕಿರುತಾನೆ. ಖಿಸರ್ ಎಂದರೆ ಹಸರು ವರ್ಣ. ಇದು ಇಷ್ಟವಾದ ವರ್ಣ. ಈ ಬಂಣದ ಬಟ್ಟೆಯನ್ನು ಮೊಹಮ್ಮದನು ಹಾಕಿಕೊಂಡಿದ್ದನು. ಹೀಗೆ ಖ್ವಾಜಾ ಉಡುಪು ಶುದ್ಧವಾಯಿತು.

ನಿಮಿಷಗಳಲ್ಲಿ ಅವುಗಳ ಶರೀರವೆಲ್ಲಾ ಒಣಗಿದ ಕಾಷ್ಟದ ಹಾಗೆ ಧಗ್ಗನೆ ಉರಿದು ಬೂದಿಯಾಯಿತು. ಹೀಗಾದ್ದರಿಂದ ಹತೀಮನಿಗೆ ಮೊದಲು ಹಿಡಿದಿದ್ದ ಹುಚ್ಚು ಬಲವಾಗಿದ್ದ ಕಾರಣ, ಹೀಗಾಯಿತಲ್ಲಾ ಎಂದು ದುಃಖಪಟ್ಟನು. ತನ್ನ ಪ್ರೀತಿ ಪಾತ್ರಳನ್ನು ನೋಡಲು ಸಾಮರ್ಥ್ಯವಿಲ್ಲದಿರುವಾಗ, ಅವಳನ್ನು ನೆನೆಯಿಸಿಕೊಂಡಾದರೂ ಸಂತೋಷಪಡುತಿದ್ದನು. ಈಗ ಅದೂ ತಪ್ಪಿಹೋಯಿತು. ಈ ದುಃಖದಲ್ಲಿ ಹತೀಮನು ರಾತ್ರಿಯನ್ನೆಲ್ಲಾ ರೋದನಮಾಡುತಾ ಕಳೆದನು. ನಿದ್ರೆಯಿಂದ ಒಂದು ಸಾರಿಯೂ ಕಂಣಮುಚ್ಚಲಿಲ್ಲ. ಈ ಮಧ್ಯೆ ಮಂತ್ರವಾದಿಯು ಅವನ ಮಹಾ ದುರ್ವಿದ್ಯದ ಬಲದಿಂದ ಇಬ್ಲೀಸ್* ಎಂಬ ದೊಡ್ಡ ಪಿಶಾಚವನ್ನು ನೆನಿಸಿಕೊಂಡು ಅವನೊಡನೆ ತನ್ನ ವಿಚಾರವನ್ನು ಕುರಿತು ಆಲೋಚನೆ ಮಾಡಿದನು. ಆಗ ಇಬಲಿಸ್—ವಿವೇಕ ವಿಲ್ಲದ ಮಂತ್ರವಾದಿಯೆ, ಹತೀಮನ ಆಯುಸ್ಸು ಮುಗಿಯುವುದಕ್ಕೆ ಇನ್ನೂ ಬಹಳ ದಿವಸ ಕಳೆಯಬೇಕು. ಇದು ದೈವ ನಿಯಾಮಕ. ಭೂಲೋಕದಲ್ಲಿಯಾಗಲಿ, ಪಾತಾಳಲೋಕದಲ್ಲಿಯಾಗಲಿ ಅವನನ್ನು ಕೊಲ್ಲುವುದಕ್ಕೆ ಯಾರಿಗೂ ಸಾಮರ್ಥ್ಯವಿಲ್ಲ. ವಿಧಿಯ ಸಂಗಡ ನೀನು ಜಗಳವಾಡಿದರೆ ವ್ಯರ್ಥ. (ಆ ವಿಧಿಗೆ) ನೀನು ವಿಧೇಯನಾಗಿ ಹತೀಮನಿಗೆ ನಿನ್ನ ಮಗಳನ್ನು ಯಾಕೆ ಮದುವೆ ಮಾಡಿಕೊಡಬಾರದು ?

ಮಂತ್ರವಾದಿ—ನನ್ನಲ್ಲಿ ಪ್ರಾಣದ ಉಸಿರು ಇರುವ ತನಕ ನನ್ನ ಮಗಳನ್ನು ಬದುಕಿರುವವರು ಯಾರಿಗೂ ಮದುವೆ ಮಾಡಿಕೊಡುವುದಿಲ್ಲ.

ಇಬ್ಬಲೀಸ್—ಹಾಗಾದರೆ ನನ್ನನ್ನು ನೀನು ಯಾಕೆ ಅಪೇಕ್ಷಿಸಿದೆ, ಹೇಳು.

ಮಂತ್ರವಾದಿ—ಈ ಹತೀಮನು ಎರಡು ಸಾರಿ ನನ್ನ ಶಕ್ತಿಯನ್ನು ಪ್ರತಿಭಟಿಸಿದ, ನನ್ನ ಮಾಟ ನಡೆಯದ ಹಾಗೆ ಮಾಡಿದ. ಬಹಳ ಸರ್ವೋತ್ತಮವಾದ ಪ್ರಕ್ರಿಯೆಯು ಅವನಲ್ಲಿದೆ. ನೀನು ಅವನ ಜ್ಞಾಪಕಶಕ್ತಿಯನ್ನು ಕೆಡಿಸಿ ಅವನು ಅದನ್ನು ಮರೆತುಬಿಡುವ ಹಾಗೆ ಮಾಡಬೇಕು.

ಇಬ್ಬಲೀಸ್—ನಿನ್ನಕೋರಿಕೆ ವ್ಯರ್ಥವಾದ್ದು. ಆ ಸರ್ವಶಕ್ತನ ನಿಷ್ಕೃಷ್ಟವಾದ ವಿಧಾಯಕದ ಮೇಲೆ ನನಗೆ ಯಾವ ಅಧಿಕಾರವೂ ಇಲ್ಲ. ಹತೀಮನ ಖ್ಯಾತಿಯು ಶಾಶ್ವತ ವಾಗಿರಬೇಕೆಂಬುವುದು ದೈವನಿಯಾಮಕ. ಹತೀಮನ ಮಹಾಕಾರ್ಯಗಳಲ್ಲಿ ಅವನಿಗೆ ಸಹಾಯ ಮಾಡಬೇಕೆಂದು ಖ್ವಾಜಾ ಖಿಸರನನ್ನು ದೇವರು ಕಳುಹಿಸಿದಾನೆ. ಆದಕಾರಣ ಅವನಲ್ಲಿ ಆ ಮಂತ್ರಶಕ್ತಿ ಇರುವ ತನಕ ಅವನ ಹೃದಯದೊಳಕ್ಕೆ ಪ್ರವೇಶಮಾಡಲು ನನಗೆ ಸಾಧ್ಯವಿಲ್ಲ, ಆದರೆ ನಾನು ಇಷ್ಟರಮಟ್ಟಿಗೆ

* ಇದಕ್ಕೆ ಷೈತಾನ್ ಎಂತಲೂ ದೈವವೆಂತಲೂ ಮುಸಲ್ಮಾನರೂ ಕ್ರಿಸ್ತರೂ ಸಹಾ ಹೆಸರಿಟ್ಟಿದ್ದಾರೆ. ಕೆಟ್ಟದಕ್ಕೆಲ್ಲಾ ಅದು ಅಧಿದೇವಕ. ದೇವರು ಈ ದೈವವನ್ನು ಬೆಂಕಿಯಿಂದ ಮಾಡಿ ಸ್ವರ್ಗಕ್ಕೆ ಕಳುಹಿಸಿ ಅಲ್ಲಿ ಚಂದ್ರನನ್ನು ಮುಖ್ಯಾಧಿಕಾರಿಯಾಗಿ ನೇಮಿಸಿದನಂತೆ. ಈ ದೈವದ ದುರಹಂಕಾರದಿಂದಲೂ ದುರಾಶೆಯಿಂದಲೂ ಅದಕ್ಕೆ ಅಧಿಕಾರ ತಪ್ಪಿ ಸ್ವರ್ಗದಿಂದ ಆಚೆಗೆ ಅಟ್ಟಿಬಿಟ್ಟರಂತೆ.

ಮಾಡಬಲ್ಲೆ; ಅವನ ಕಂಣಿಗೆ ಚೆನ್ನಾಗಿ ನಿದ್ರೆ ಬಂದು ಮನುಷ್ಯ ಮಾತ್ರದವರಿಗೆ ಆಗುವ ಹಾಗೆ ಮನೋವಿಕಾರವಾಗುವಂತೆ ಸ್ವಪ್ನಗಳನ್ನು ಉಂಟುಮಾಡಬಲ್ಲೆ.

ಆಗ ಮಂತ್ರವಾದಿಯು ಈ ಮಾತನ್ನು ಕೇಳಿ ತನ್ನ ಗುರುವಾದ (ಇಬಲೀಸ್)ಗೆ ಅವ ಮಾತು ಕೊಟ್ಟು ಸಹಾಯ ಮಾಡುವುದಕ್ಕಾಗಿ ನಮಸ್ಕಾರ ಮಾಡಿ ಪಾತಾಳ ಲೋಕಕ್ಕೆ ಹಾರಿ ಹೊರಟು ಹೋದ. ಈ ಮಧ್ಯೆ ನಿದ್ರೆಯಲ್ಲಿ ತನ್ನ ದುಃಖವನ್ನೆಲ್ಲಾ ಮರೆತುಬಿಟ್ಟ. ಬುದ್ಧಿಯು ಅವನ ಊಹೆಯ ಮೇಲಿದ್ದ (ಅಂಗಸವನ್ನು) ಬಿಟ್ಟು ಬಿಟ್ಟಿತು. ಹಶೀಮನಿಗೆ ಪ್ರಾಪಂಚಿಕ ಸಂಬಂಧವಾದ ಆನಂದವನ್ನುಂಟು ಮಾಡುವ ಸ್ವಪ್ನಗಳು ಬಿದ್ದವು.

ಹಶೀಮನಿಗೆ ಎಚ್ಚರವಾಯಿತು. ಮುಂಕು ಮುಂಕಾಗಿತ್ತು. ಆಗ ಸರೋವರದಲ್ಲಿ ಸ್ನಾನಮಾಡಿ ಮಂತ್ರ ಪುರಶ್ಚರಣೆಯನ್ನು ಮಾಡಲು ಎದ್ದನು. ಆದರೆ ಆ ಮಂತ್ರವಾದಿಯು ತನ್ನ ಮಂತ್ರಶಕ್ತಿಯಿಂದ ದೊಡ್ಡ ಭೂತವನ್ನು ನಿರ್ಮಾಣ ಮಾಡಿ ತನ್ನ ದುರ್ವ್ಯಾಪಾರದ ಮುಖಾಂತರ ಹಶೀಮನನ್ನು ಬಾಧಿಸಲು ಆರಂಭಿಸಿದನು. ಈ ರೀತಿಯಾಗಿ ನಿರ್ಬಂಧವಾಗಲು, ಅವನ ಹೃದಯವು ನಡಗಿಹೋಯಿತು. ತಾನು ಅಪರಿಶುದ್ಧನಾದ್ದರಿಂದ ಆ ಮಹಾಮಂತ್ರವನ್ನು ಹೇಳಲು ಅವನಿಗೆ ಧೈರ್ಯವಿಲ್ಲದೇ ಹೋಯಿತು. (ಆ ಮಂತ್ರಶಕ್ತಿ) ಇಲ್ಲದೇ ಹೋದರೆ ಶತ್ರುವನ್ನು ಪ್ರತಿಭಟಿಸುವುದು ಹೇಗೆ? ಹೀಗೆ ದೃಢವಾದ ಬುದ್ಧಿ ತಪ್ಪಿದ ಕಾರಣ ಪಿಶಾಚಿಯು ಇವನನ್ನು ಹಿಡಿದು ಮಂತ್ರವಾದಿಯ ಬಳಿಗೆ ಕರೆದುಕೊಂಡು ಹೋಯಿತು. ಮಂತ್ರವಾದಿಯು ಅವನನ್ನು ಸರಪಣಿಯಲ್ಲಿ ಬಿಗಿಯಿಸಿ ಹಳ್ಳಕ್ಕೆ ನೂಕುವುದೆಂತಲೂ, ಆ ಹಳ್ಳದ ಬಾಯಿಗೆ ದೊಡ್ಡ ಕಲ್ಲನ್ನು ಹಾಕುವುದೆಂತಲೂ ಅಪ್ಪಣೇ ಮಾಡಿದನು. ಕೂಡಲೆ ಅದರಂತೆ ನಡಿಸಿಬಿಟ್ಟರು. ತನಗೆ ಈ ರೀತಿಯಾಗಿ ನಿರ್ಬಂಧವಾದ್ದನ್ನು ತಿಳಿದು ಹಶೀಮನು ಏಕಾಗ್ರಚಿತ್ತನಾಗಿ ದೇವರ ಧ್ಯಾನದಲ್ಲಿ ಆಸಕ್ತನಾದನು.

ಈ ಗುಹೆಯಲ್ಲಿ ಹಶೀಮನು ಏಳು ಹಗಲು ಏಳು ರಾತ್ರೆ ಅನ್ನ ನೀರಿಲ್ಲದೇ ಇದ್ದನು. ಆಗ ಮಂತ್ರವಾದಿಯು ಕ್ಷುತ್ಪಿಪಾಸಗಳಿಂದ ಅವನು ಜಿತನಾಗಿರಬಹುದೆಂದು ಯೋಚಿಸಿ, ಅವನ ಸ್ಥಿತಿಯನ್ನು ವಿಚಾರಿಸಿಕೊಂಡು ಬರುವ ಹಾಗೆ ಹೇಳಿ ಕೆಲವು ಪಿಶಾಚಿಗಳನ್ನು ಕಳುಹಿಸಿದನು. ಹಶೀಮನು ಇವುಗಳನ್ನು ಲಕ್ಷ್ಯ ಮಾಡಲಿಲ್ಲ, ಅವುಗಳು ಯಾವ ಮಾತನ್ನು ಕೇಳಿದರೂ ಅದಕ್ಕೆ ಉತ್ತರವನ್ನು ಕೊಡಲಿಲ್ಲ. ಇದನ್ನು ಕೇಳಿ ಮಂತ್ರವಾದಿಯು ದೈವಗಳನ್ನು ಕುರಿತು—ಹಶೀಮನಿಗೆ ಹೋಗಿ ಹೇಳಿ, ಭಲ್ಲೂಕ ಪುತ್ರಿಯು ಅವನಿಗೆ ಕೊಟ್ಟಿರುವ ಮುಹ್ರವನ್ನು ಅವನು ನನಗೆ ಕೊಟ್ಟರೆ, ಅವನನ್ನು ನಾನು ಬಿಟ್ಟುಬಿಡುತೇನೆ, ಎಂದು ಹೇಳಿದನು. ಈ ಮಾತನ್ನು ತಿಳಿದು ಹಶೀಮನು—ನಿಮ್ಮೊಡೆಯನಿಗೆ ಹೋಗಿ ಹೇಳಿ, ಅವನ ಮಗಳನ್ನು ತನಗೆ ವಿವಾಹ ಮಾಡಿಕೊಟ್ಟರೆ ನಾನು ಅವನಿಗೆ ಮುಹ್ರವನ್ನು ಕೊಡುತೇನೆ, ಎಂಬದಾಗಿ ಉತ್ತರ ಕೊಟ್ಟನು. ಈ ಮಾತನ್ನು ಮಂತ್ರವಾದಿ ಕೇಳಿದ ಕೂಡಲೆ, ಅವನಿಗೆ ಮಿತಿಮೀರಿ ಕೋಪ ಬಂತು.

ಅವನು ತನ್ನ ದೈವಗಳನ್ನೆಲ್ಲಾ ಸೇರಿಸಿಕೊಂಡು ಹತೀಮು ಸೆರೆಯಲ್ಲಿದ್ದ ಕಡೆಗೆ ಹೋಗಿ, ಅಲ್ಲಿ ದೊಡ್ಡ ಬಂಡೆಗಳನ್ನು ಸೇರಿಸಿ ಹತೀಮನು ಸಾಯುವವರೆಗೆ ಅದೆಲ್ಲವನ್ನೂ ಅವನ ತಲೆಯ ಮೇಲೆ ಹಾಕುವುದೆಂದು ಅಪ್ಪಣೆ ಮಾಡಿದನು. ಅವನ ಪರಿವಾರದವರು ಅದೇ ಪ್ರಕಾರ ತಾವು ಹೊರಬಹುದಾದಷ್ಟು ಕಲ್ಲುಗಳನ್ನು ಸೇರಿಸಿ, ಎಲ್ಲರಿಗೂ ಕಾಣುವಂಥಾ ಒಂದು ಸ್ಥಳದಲ್ಲಿ ಹತೀಮನನ್ನು ಕಟ್ಟಿಹಾಕಿ, ತಮ್ಮ ಯಜಮಾನ ಹೇಳಿದ ಹಾಗೆ ಮಾಡಲು ಆರಂಭಿಸಿದರು. ಅದೇ ಕಾಲದಲ್ಲಿ—ತಕ್ಷಣವೇ ಸಾಯಲು ಸಿದ್ಧವಾಗು ; ನಿನ್ನ ಮುಹ್ರವು ನಿನಗೆ ಯೇನೂ ಉಪಯೋಗಕ್ಕೆ ಬರುವುದಿಲ್ಲ ; ಮಂತ್ರವಾದಿಯು ನಿನ್ನ ತಲೆಯನ್ನು ಚೂರು ಚೂರು ಮಾಡುವ ಹಾಗೆ ನಮಗೆ ಅಪ್ಪಣೆ ಕೊಟ್ಟಿದಾನೆ, ಎಂದು ಆ ಭೂತಗಳು ಹೇಳಿಕೊಳ್ಳುತಾ ಇದ್ದರು. ಅದಕ್ಕೆ ಹತೀಮನು—ಅವನ ಶಕ್ತಿಯಲ್ಲಿದ್ದದನ್ನೆಲ್ಲಾ ಮಾಡಲಿ, ನೋಡುತೇನೆ ; ಆದರೂ ದೇವರ ಸಹಾಯದಿಂದ ನಾನು ಅವನನ್ನು ಕೊಂದುಹಾಕಲೇ ಹಾಕುತೇನೆ, ಎಂದನು. ಈ ಮಾತನ್ನು ಆಡಿ ಮುಗಿಸಿದನೋ ಇಲ್ಲವೋ ಅವನ ತಲೆಯ ಮೇಲೆ ಕಲ್ಲಿನ ಮಳೆಯನ್ನು ಕರೆದರು. ಆದರೆ ಆ ಕಲ್ಲುಗಳು ಕೆಲವು ಗಜ ದೂರದಲ್ಲಿ ಬರುವಾಗಲೇ ದಿಕ್ಕ ದಿಕ್ಕ ಚೆದರಿಸಿಹೋಗಿ ನಿಷ್ಫಲವಾದ್ದನ್ನು ಕಂಡು ಮಂತ್ರವಾದಿಗೂ ಅವನ ಕಡೆಯವರಿಗೂ ಅತ್ಯಾಶ್ಚರ್ಯ ಉಂಟಾಯಿತು. ಹೀಗೆ ಕಲ್ಲುಗಳೆಲ್ಲಾ ಹತೀಮನ ಪಕ್ಕದಲ್ಲಿಯೇ ಹೋಗಿ ಗುಡ್ಡೆಯಾಗಿ ಬಿದ್ದವು. ಮಂತ್ರವಾದಿಯು ಇದಕ್ಕೆ ಕಾರಣವನ್ನು ಕೂಡಲೆ ತಿಳಿದುಕೊಂಡನು. ಅವನ ಪರಿವಾರದವರು ಇದನ್ನು ಕಂಣಾರ ನೋಡಿದಾಗ್ಯೂ ನಂಬಲಾರದೇ ಹೋದರು. ಆವರ ಯಜಮಾನನೂ ಆ ಜನರನ್ನು ಕುರಿತು—ನೀವು ಮನದಟ್ಟು ಮಾಡಿಕೊಳ್ಳಿ, ಈ ಮನುಷ್ಯ ಜೀವಂತವಾಗಿದಾನೆಯೇ, ಸತ್ತನೆ ಎಂಬುದನ್ನು ಹೋಗಿ ಪರೀಕ್ಷೆ ಮಾಡಿ, ಎಂದನು. ಆ ದೈವಗಳು ತಮ್ಮ ಕೈಕಲ್ಲುಗಳನ್ನು ಒಂದು ಕಡೆ ಇರಿಸಿ ಹತೀಮನ ಬಳಿಗೆ ಹೋಗಿ ನೋಡಲಾಗಿ, ಆ ಹತೀಮನಿಗೆ ಯಾವ ಕುಂದಕವೂ ಆಗಿರಲಿಲ್ಲ. ಅವರ ಆಶ್ಚರ್ಯವು ಸ್ವಲ್ಪ ಕಡಮೆಯಾಗಿ ಅವರು ಪುನಃ ಅವನನ್ನು ಕಲ್ಲಿನಿಂದ ಇಡಲು, ಅದರಿಂದ ಪ್ರಯೋಜನವೇನೂ ಇಲ್ಲವಾಯಿತು. ಹತೀಮನ ಸುತ್ತಲೂ ಬಿದ್ದಿದ್ದ ಕಲ್ಲುಗಳು ಹತ್ತರಷ್ಟು ಆಗುವ (ತನಕ ನೋಡಿ), ತಾವು ಪ್ರತ್ಯಕ್ಷವಾಗಿ ನೋಡಿ ಸಮಾಧಾನ ಮಾಡಿಕೊಳ್ಳಲು ಅವರು ಅವನ ಸಮೀಪಕ್ಕೆ ಮತ್ತೂ ಒಂದು ಸಾರಿ ಹೋದರು. ಅದರಿಂದಲೂ ಅವನಿಗೆ ಯೇನೂ ಆಗಲಿಲ್ಲವೆಂದುಕೊಂಡು, ಪುನಃ ಹಾಗೆಯೇ ಹೋಗಿ ಅವಿಚ್ಛಿನ್ನವಾಗಿ ಏಳು ದಿವಸದವರೆಗೆ ಹೊಡೆದರೂ ಅವರ ಯೇಟನಿಂದ ಹತೀಮನಿಗೆ ಏನೂ ಆಗಲಿಲ್ಲ. ಆದರೆ ಅವನ ಶರೀರಕ್ಕೆ ಹಸಿವು ಬಾಯಾರಿಕೆಯಿಂದ ಆಯಾಸ ವಾಯಿತು. ಕಡೆಗೆ ಅವನು ಅವರನ್ನು ಕುರಿತು—ನಿಮ್ಮ ಪ್ರಯತ್ನವೆಲ್ಲಾ ವ್ಯರ್ಥ ವಾದ್ದು ; ಬೆಂಕಿ ನನ್ನನ್ನು ಸುಡಲಿಲ್ಲ, ಈಗ ನೀವು ಎಸೆಯುವ ಕಲ್ಲಿನಿಂದ ಏನೂ ಪೆಟ್ಟಾಗಲಿಲ್ಲ. ಇದರಿಂದ ನನ್ನ ಯಂತ್ರ ಎಷ್ಟು ಬಲವಾದ್ದು ಎನ್ನುವುದನ್ನು ನೀವು ಮನದಟ್ಟು ಮಾಡಿಕೊಂಡಿರಬಹುದು. ಆದರೆ ನನಗೆ ಬಾಯಾರಿಕೆಯು ಸಹಿಸಲಸಾಧ್ಯ

ವಾಗಿದೆ. ನನ್ನನ್ನು ಸರೋವರದ ಬಳಿಗೆ ಯಾರು ಕರೆದುಕೊಂಡು ಹೋಗುತಾರೆಯೋ ಅವರಿಗೆ ನನ್ನ ಮುಹ್ರವನ್ನು ಕೂಡ ಕೊಟ್ಟು ಬಿಡಲು ಇಷ್ಟವಾಗಿದೇನೆ. ಈ ಮುಹ್ರದಲ್ಲಿ ಇನ್ನೂ ಅನೇಕ ಗುಣಗಳಿವೆ. ಹೇಗೆಂದರೆ ಅದನ್ನು ಇರಿಸಿಕೊಂಡಿರುವವನು ಮಂತ್ರವಾದಿಯನ್ನು ಕೊಂದು ಅವನ ಸಿಂಹಾಸನವನ್ನು ಆಕ್ರಮಿಸಬೇಕೆಂದು ಇಷ್ಟಪಟ್ಟರೆ, ಆ ಪ್ರಕಾರ ನಡೆಯುವುದು, ಹೀಗೆಂದು ಹಶೀಮ ನುಡಿದನು. ಆದರೆ ಆ ದೈವಗಳು ಅವನು ಹೇಳಿದ ಹಾಗೆ ಕೇಳದೆ,—ನಮ್ಮೊಡೆಯನ ಇಷ್ಟ ಹೊರತು ನಮಗೆ ಬೇರೆ ಯಾವ ಇಷ್ಟವೂ ಇಲ್ಲ, ನಿನ್ನ ಮುಹ್ರದಿಂದ ನಮಗೆ ಯಾವ ಪ್ರಯೋಜನವೂ ಇಲ್ಲ, ಎಂದವು.

ಹಶೀಮನ ಸಮೀಪದಲ್ಲಿ ನಿಂತಿದ್ದ ಒಂದು ಪಿಶಾಚಿ ಮಾತ್ರ ಅವನನ್ನು ಸಾಯಂಕಾಲವಾದ ಮೇಲೆ ಸರೋವರಕ್ಕೆ ಕರೆದುಕೊಂಡು ಹೋಗುತೇನೆಂದು ಸಂಜ್ಞೆ ಮಾಡಿತು. ಈ ಏರ್ಪಾಡಿಗೆ ಹಶೀಮನು ತೃಪ್ತಿಪಟ್ಟನು. ಸಾಯಂಕಾಲದ ಮೇಲೆ ಕಾವಲುಗಾರರೆಲ್ಲಾ ನಿದ್ರೆಯಲ್ಲಿ ಮುಳುಗಿದರು.

ಆದರೆ ಮೇಲೆ ಹೇಳಿದ ಭೂತ ಮಾತ್ರ ಮುಹ್ರವನ್ನು ತಾನು ಸ್ವೀಕರಿಸಬೇಕೆಂದು ಎಚ್ಚರವಾಗಿಯೇ ಇದ್ದು ಅರ್ಧ ರಾತ್ರಿಯಲ್ಲಿ ತನ್ನ ಜೊತೆಯವರನ್ನು ಬಿಟ್ಟು ಕಳ್ಳತನದಿಂದ ಹೊರಟು ಹಶೀಮನನ್ನು ಕುರಿತು

ಭೂತ—ಇದೇ ನಿನಗೆ ಸಮಯ. ನಿನ್ನನ್ನು ಸರೋವರಕ್ಕೆ ಕರೆದುಕೊಂಡು ಹೋಗುತೇನೆ.

ಹಶೀಮ—(ನನಗೆ) ಇಷ್ಟವೇ. ಆದರೆ ನಿರ್ಬಂಧದಿಂದ ನಾನು ಬಿಡಿಸಿಕೊಳ್ಳುವ ಬಗೆ ಹೇಗೆ?

ಭೂತ—ಆ ಕೆಲಸವನ್ನು ನನಗೆ ಬಿಟ್ಟುಬಿಡು.

ಹೀಗೆ ಹೇಳಿ ಕೆಲವು ಮಂತ್ರವನ್ನು ಬಾಯಲ್ಲಿ ಹೇಳಲು ಆಕಾಶದಿಂದ ಎರಡು ಭೂತಗಳು ಇಳಿದವು. ಈ ಭೂತಗಳು ಹಶೀಮ ಇದ್ದ ಸೆರೆಮನೆ ಬಾಗಿಲಿಗೆ ಹಾಕಿದ್ದಂಥಾ ಕಲ್ಲುಬಂಡೆಗಳನ್ನು ಗಾಡ ತೆಗೆದು ಅವನು ಈಚೆಗೆ ಬರುವ ಹಾಗೆ ಮಾಡಿಕೊಟ್ಟವು. ಆಗ ಇವನನ್ನು, ಕರೆದುತಂದ ಭೂತವು ಸರೋವರದ ಬಳಿಗೆ ಕರೆದುಕೊಂಡು ಹೋಯಿತು.

ಹಶೀಮನು ಸರೋವರದ ಬಳಿಗೆ ಬಂದೊಡನೆಯೇ ಭಕ್ತಿಯಿಂದ ತನ್ನ ಅಹ್ನಿಕವನ್ನು ಮುಗಿಸಿಕೊಂಡನು. ಈ ಸಮಯದಲ್ಲಿ ಇವನನ್ನು ಕುರಿತು

ಭೂತ—ತರುಣನೆ, ನೀನು ಕೊಟ್ಟಿದ್ದ ಮಾತನ್ನು ನೆನಸಿಕೊ. ನಿನ್ನ ಮುಹ್ರವನ್ನು ನನಗೆ ಕೊಡುವನಾಗು. ಈ ಮಾತಿನ ಮೇಲೆಯೇ ನಿನ್ನನ್ನು ನಾನು ಇಲ್ಲಿಗೆ ಕರೆದುತಂದೆ.

ಹಶೀಮ—ನಿಷ್ಕರ್ಷೆಯಾಗಿಯೂ (ಹಾಗೆ ಸರಿ), ನೀನು ನನಗೆ ಇಷ್ಟು ಉಪಕಾರ ಮಾಡಿದ್ದರಿಂದ ನಿನಗೆ ಯುಕ್ತವಾದ ಪ್ರತ್ಯುಪಕಾರವನ್ನು ನಾನು ಮಾಡುತೇನೆ.

ಭೂತ—ಏನು ಪ್ರತ್ಯುಪಕಾರ ಮಾಡುತೀಯೆ, ನಿನ್ನ ವಾಗ್ದಾನವನ್ನು ನೆರವೇರಿಸಿ ಕೊಡುವುದನ್ನು ಬಿಟ್ಟರೆ?

ಹಶೀಮ—(ನಾನು ಮಾಡುವ ಉಪಕಾರವು) ನಿನಗೆ ಅಧಿಕವಾದ ಪ್ರಯೋಜನವನ್ನು ಉಂಟುಮಾಡತಕ್ಕಂಥಾದ್ದು. ಈ ಮಂತ್ರವಾದಿಯಾದ ಸಾಂ ಅಹಮರ್‌ನನ್ನು ಕೊಂದು ಅವನ ಸ್ಥಾನದಲ್ಲಿ ನಿನ್ನನ್ನು ದೊರೆಯಾಗಿ ಮಾಡುತೇನೆ.

ಭೂತ—ರಾಜಪದವಿಗೆ ನಾನು ಆಶೆ ಪಡುವುದಿಲ್ಲ. ನಾನು ಮುಹ್ರವನ್ನು ಕೇಳುತೇನೆ. ನನಗೆ ಅದು ಬೇಕು.

ಹಶೀಮ—ಯೋಚನೆ ಮಾಡು. ಒಬ್ಬ ಮಿತ್ರರಿಂದ ನನಗೆ ಬಂತು ನಾನು ಅದನ್ನು ಹೇಗೆ ಕೊಡಲಿ. ನೀನು ಯಾರಿಗೋಸ್ಕರ ಅದನ್ನು ಕೇಳುತೀಯೆ?

ಭೂತ—ನನಗೋಸ್ಕರ.

ಹಶೀಮ—ದೇವರ ಸೇವೆಯನ್ನು ನೆರವೇರಿಸಲು ನನಗೋಸ್ಕರ ಅದನ್ನು ನೀನು ಕೇಳಿದ್ದರೆ, ನಾನು ಅದನ್ನು ನಿನಗೆ ಕೊಡಬಹುದಾಗಿತ್ತು.

ಭೂತ—ನಾವು ದೇವರು ಎಂದು ನಡೆದುಕೊಳ್ಳತಕ್ಕದು ಇಬ್ಲೀಸ್ ಒಬ್ಬನಿಗೇ. ಅವನು ನಮ್ಮ ದೊರೆಯಾದ ಸಾಂ ಅಹಮರ್‌ನ ಗುರು.

ಹಶೀಮ—ಮುಚ್ಚು, ದೈವದ್ರೋಹಿ. ನಾನು ಪೂಜಿಸತಕ್ಕ ದೇವರು ಸೃಷ್ಟಿಕರ್ತ. ನನ್ನ ಕಷ್ಟವಾದ ಸಮಯದಲ್ಲಿ ನೀನು ಉಪಕಾರ ಮಾಡದೇ ಹೋಗಿದ್ದರೆ, ನಿನ್ನಯೋಗ್ಯತೆಗೆ ತಕ್ಕ ಹಾಗೆ ನಿನ್ನನ್ನು ಕಾಣುತಾ ಇದ್ದೆ.

ಭೂತ—ಜಗಳವನ್ನು ನಿಲ್ಲಿಸೋಣ. ಬಲವಂತವಾಗಿ ಮುಹ್ರವನ್ನು ನಿನ್ನಿಂದ ತೆಗೆದು ಕೊಳ್ಳುವುದು ನನಗೆ ಸುಲಭವಾಗಿದೆ. ನೀನಾಗಿ ಕೊಟ್ಟರೆ, ನಿನ್ನ ಪ್ರಾಣವನ್ನು ಬಿಡುತೇನೆ. ಇಲ್ಲದಿದ್ದರೆ ಈ ಸರೋವರಕ್ಕೆ ನಿನ್ನನ್ನು ತಳ್ಳಿಬಿಡುತೇನೆ.

ಹಶೀಮ—ಛೆ, ಇಬಲೀಸನ ಗುಲಾಮನೆ, ನೀನು ನನ್ನ ಬಳಿಯಿಂದ ಹೊರಟುಹೋಗು. ಮುಹ್ರವನ್ನು ಕೊಡುವುದಕ್ಕೆ ಅದು ನನ್ನದಲ್ಲ.

ಇದರ ಮೇಲೆ ಭೂತವು ಹಶೀಮನಿಗೆ ಮಂತ್ರ ಹಾಕಲು ಆರಂಭಿಸಿತು. ಆದರೆ ಹಶೀಮನು ಆ ಮಹಾಮಂತ್ರ ಪುರಶ್ಚರಣೆಯನ್ನು ಮಾಡಲು, ಅದರ ಶಕ್ತಿಯು ಆ ಶತ್ರುವಿನ ಪ್ರತಿಕೀಲಿನಲ್ಲಿಯೂ ನರಕ ಹುಟ್ಟುವ ಹಾಗೆ ಮಾಡಿತು. ಆ ಭೂತವು ಆ ಕ್ಷಣವೇ ಹಶೀಮನ ಹತ್ತಿರದಿಂದ ಓಡಿಹೋಗಿ ತನ್ನ ಸ್ನೇಹಿತರ ಮರೆ ಬಿದ್ದನು. ಮತ್ತು ತಾನು ಮಾಡಿದ್ದು ಯಾರಿಗೂ ತಿಳಿಯದ ಹಾಗೆ ನಿದ್ರೆ ಬಂದಂತೆ ಕೆಳಗೆ ಮಲಗಿ ಕೊಂಡನು. ನಿಶ್ಚಯ ತಿಳಿದರೆ ತಮ್ಮ ಯಜಮಾನ ಏನು ಮಾಡಿಯಾನೋ ಎಂಬ ಭೀತಿ ಬೇರೆ ಹತ್ತಿಕೊಂಡಿತ್ತು.

ಹಕೀಮನು ಶತ್ರುಗಳ ಬಾಧೆ ತಪ್ಪಿ ಸರೋವರದ ತಡಿಯಲ್ಲಿ ರಾತ್ರಿಯನ್ನೆಲ್ಲಾ ದೇವರ ಧ್ಯಾನವನ್ನೂ ಪ್ರಾರ್ಥನೆಯನ್ನೂ ಮಾಡುತ್ತಾ ಕಳೆಯುತ್ತಿದ್ದನು. ಬೆಳಗಾದ ಮೇಲೆ ಕಾವಲುಗಾರರು ತಮ್ಮ ಅರೆನಿದ್ರೆಯ ಕಣ್ಣನ್ನು ಹೊಸಗಿಕೊಳ್ಳುತ್ತಾ, ಒಬ್ಬೊಬ್ಬರಾಗಿ ತಮ್ಮ ವಶದಲ್ಲಿದ್ದ ಹಕೀಮನನ್ನು ನೋಡಲು ಹೋದರು. ಹಕೀಮನ ಸೆಲೆಯೇ ಇರಲಿಲ್ಲ. ಅವರಿಗೆ ಹುಟ್ಟಿದ ಭಯವನ್ನು ವಿವರಿಸುವುದು ಅಸಾಧ್ಯ. ಯಾಕೆಂದರೆ ತಮ್ಮ ಪರಮ ದಾರುಣನಾದ ಯಜಮಾನನು ತಮ್ಮನ್ನು ಕೇಳಿದರೆ ಏನು ಉತ್ತರ ಹೇಳಬೇಕು? ಆ ಭೂತಗಳು ಒಬ್ಬರಿಗೊಬ್ಬರು ಅವನು ನಮ್ಮನ್ನು ಜೀವ ಸಹಿತ ಬಿಡುವುದಿಲ್ಲ, ಎಂದುಕೊಂಡರು. ಕೊನೆಗೆ ಅವರು (ಭೂತಗಳು) ತಲೆಯ ಮೇಲೆ ಬೂದಿ ಹುಯಿದುಕೊಂಡು ಹೆಜ್ಜೆಯನ್ನು ನಡಗಿಸುತ್ತಾ ಮಂತ್ರವಾದಿಯ ಮುಂದೆ ಹೋಗಿ—ಅಯ್ಯೋ ಮಹಾಶಕ್ತನಾದ ಪ್ರಭುವೆ, ನಮ್ಮ ವಶದಲ್ಲಿದ್ದ ತರುಣನು ತಪ್ಪಿಸಿಕೊಂಡು (ಹೋದ) ಎಂದು ಹೇಳಿದರು.

ಮಂತ್ರವಾದಿಯು ಸಾವಕಾಶವಾಗಿ ತನ್ನ ಪುಸ್ತಕವನ್ನು ನೋಡಿ ನಿಜವಾದ ಸಂಗತಿಯನ್ನು ತಿಳಿದುಕೊಂಡನು. ಹೇಗೆಂದರೆ ಸಾರ್ಮಾಕ ಎಂಬ ಒಬ್ಬ ಕಾವಲುಗಾರನು ರಾತ್ರಿ ಹಕೀಮನನ್ನು ಸೆರೆಯಿಂದ ಬಿಟ್ಟು ಸರೋವರದ ತಡಿಗೆ ಕರೆದುಕೊಂಡು ಹೋಗಿಬಿಟ್ಟನು. ಹೀಗೆಂದು ಗೊತ್ತಾಯಿತು. ಮಂತ್ರವಾದಿಗೆ ಬಹಳ ಕೋಪ ಬಂದು ತಪ್ಪು ಮಾಡಿದ ಕಾವಲುಗಾರನಿಗೆ ಹೇಳಿದ್ದೇನೆಂದರೆ: ಅಪನಂಬಿಕೆಯಾದ ನೀಚ, ನಿನ್ನ ಖೈದಿಯನ್ನು ನೀನು ಹೇಗೆ ಧೈರ್ಯವಾಗಿ ಬಿಟ್ಟೆ? ನಿನ್ನ ಪ್ರಾಣವನ್ನು ಒಪ್ಪಿಸುವುದೇ ಅದಕ್ಕೆ ಉತ್ತರ. ಈ ಕ್ಷಣವೇ ಸಾಯಲು ಸಿದ್ಧವಾಗು, ಹೀಗೆಂದನು. ಸಾರಮಾಕನಿಗೆ ಯಜಮಾನನಿಂದ ಕಾರುಣ್ಯದೊರೆಯುವ ತೋರಿಕೆ ಇರಲಿಲ್ಲವಾದ್ದರಿಂದ ಹಕೀಮನ ಬಳಿಗೆ ಓಡಿಹೋಗಿ ಅವನ ಆಸರೆಯನ್ನು ಬೇಡಿಕೊಳ್ಳತಕ್ಕದ್ದೇ ಉತ್ತಮವಾದ ಉಪಾಯವೆಂದು ತೋರಿತು.

ಹೀಗೆ ಯೋಚಿಸಿಕೊಂಡು ಸಾರಮಾಕನು ಮಂತ್ರವಾದಿಯ ಬಳಿಯಿಂದ ಓಡಿ ಹೋಗಿ ಸರೋವರದ ಹತ್ತಿರ ಕೂತಿದ್ದ ಹಕೀಮನನ್ನು ನೋಡಿ ಅವನ ಕಾಲಿಗೆ ನಮಸ್ಕಾರವನ್ನು ಮಾಡಿ ಸಾರಮಾಕ–ಗಂಭೀರವಾದ ಸ್ವಾಮಿಯೆ, ನಿನಗೋಸ್ಕರ ನನ್ನ ಪ್ರಾಣವನ್ನು ಬಲಿಕೊಡಬೇಕಾಗಿದೆ. ನಾನು ನಿನಗೆ ಯಾವಾಗಲೂ ಕೆಟ್ಟದ ಮಾಡಲಿಲ್ಲ ಕಾರಣ ನನ್ನನ್ನು ಕಾಪಾಡು. ನಾನು ನಿಜವಾಗಿಯೂ ಹೀನ ಅದೃಷ್ಟದವನು. ಒಂದು ಕಡೆ ನೋಡಿದರೆ, ನೀನು ಹೇಳಿದ್ದ ಪ್ರಕಾರ ಮುಹ್ರವನ್ನು ನೀನು ಕೊಡಲಿಲ್ಲ. (ಇನ್ನೊಂದು ಕಡೆ ನೋಡಿದರೆ) ನಿನಗೆ ಉಪಕಾರ ಮಾಡಿದ್ದಕ್ಕೆ ನನಗೆ ಪ್ರಾಣಾಪತ್ತು ಸಂಭವಿಸಿದೆ.

ಹಕೀಮ–ಆ ಭಾಗದಲ್ಲಿ ಮನಸ್ಸನ್ನು ಸಮಾಧಾನ ಮಾಡಿಕೊ. ನಿನಗೆ ಪ್ರತ್ಯುಪಕಾರ ಮಾಡಲು ನನಗೆ ಮನಸ್ಸೂ ಇದೆ. ಶಕ್ತಿಯೂ ಇದೆ.

ತನ್ನ ಚಾರನೂ ಹತೀಮನ ಕಡೆಗೆ ಓಡಿಹೋದನೆಂದು ತಿಳಿದ ಕೂಡಲೆ, ಮಂತ್ರವಾದಿಯು ಅವರಿಬ್ಬರ ಮೇಲೆಯೂ ತನ್ನ ಮಂತ್ರವನ್ನು ಚಲಾಯಿಸಲು ಆರಂಭ ಮಾಡಿದನು. ಸಾರಮಾಕನ ಮೇಲೆ ಅದರ ಫಲವು ಜಾಗ್ರತೆಯಾಗಿ ಕಾಣಿಸಿಕೊಂಡಿತು. ಅವನು "ನಾನು ಉರಿದು ಹೋಗುತಾ ಇದೇನಲ್ಲಾ, ಶೂರನಾದ ಹತೀಮನೆ, ಕಾಪಾಡು" ಎಂದು ಅವನು ಅರಚಿಕೊಂಡನು. ಅವನ ನೆತ್ತಿಯ ಮೇಲಿನಿಂದ ಉರಿ ಎತ್ತು. ಹತೀಮನು ತನ್ನ ಮಂತ್ರವನ್ನು ಜಪಿಸಲು, ಆ ಕ್ಷಣದಲ್ಲಿಯೇ ಆ ಉರಿಯು ತಂಗಾಳಿಯ ಹಾಗೆ ತಣ್ಣಗಾಯಿತು. ಸಾರಮಾಕನು ತನ್ನನ್ನು ಕಾಪಾಡಿದವನ ಸಮೀಪಕ್ಕೆ ಕೇವಲ ಮರ್ಯಾದೆಯಿಂದ ಹೋಗಿ–ಅಯ್ಯಾ ಶೂರನೆ, ಇಲ್ಲಿಂದ ಮುಂದಕ್ಕೆ ನಾನು ಸರ್ವ್ವಾತ್ಮನಾ ನಿನ್ನವನು, ಎಂದನು. ಹತೀಮನು ಅವನಿಗೆ ಗೌರವವನ್ನು ತೋರಿಸಿದನು. ಅವರಿಬ್ಬರೂ ಸೇರಿ ಮಂತ್ರವಾದಿಯ ಪಟ್ಟಣಕ್ಕೆ ಹೊರಟರು. ಇವರ ಅಭಿಪ್ರಾಯವು ಸಾಂ ಅಹಮರನಿಗೆ ಗೊತ್ತಾಗಿ, ಅವನು ಯುದ್ಧಕ್ಕೆ ತನ್ನ ಪ್ರಜೆಗಳನ್ನೂ ಸೇರಿಸಿಕೊಂಡು ಊರ ಹೊರಗಿನ ಬೈಲಿನಲ್ಲಿ ತನ್ನ ಕೌಟಿಲ್ಯ ಶಾಸ್ತ್ರವನ್ನೆಲ್ಲಾ ಕಾರ್ಯತಃ ತೋರಿಸಲು ಆರಂಭ ಮಾಡಿದನು. ಹತೀಮನೂ ಅವನ ಜೊತೆಯವನೂ ಹೀಗೆ ಬರುತಿರಲಾಗಿ, ಥಟ್ಟನೆ ಆಕಾಶದಲ್ಲಿ ಮೋಡಕವಿಯಿತು. ಮಿಂಚಿನ ಪ್ರವಾಹವೋ ಎನ್ನುವ ಹಾಗೆ ಹೊಳೆಯಿತು. ಗುಡುಗಿನ ಶಬ್ದ ಗಟ್ಟಿಯಾಗಾಯಿತು. ಆಗ ಸಾರಮಾಕನು–ಅಯ್ಯಾ ಧೀರನಾದ ಹತೀಮನೆ ಜಾಗ್ರತೆಯಾಗಿ ನಿನ್ನ ಪವಾಡವನ್ನು ನೋಡಿಕೊ. ಇದು ನಿನ್ನ ಶತ್ರುವಿನ ತಂತ್ರದಿಂದಾದ್ದು, ಎಂದನು. ಆಗ ಹತೀಮನು ತನ್ನ ಮಹಾಮಂತ್ರವನ್ನು ಜಪಿಸಿ ಮೇಘದ ಕಡೆಗೆ ತನ್ನ ಉಸಿರನ್ನು ಊದಲು, ಆ ಪ್ರಚಂಡ ಮಾರುತವು ನಿಂತುಹೋಯಿತು. ಎಲ್ಲಾ ಸಮಾಧಾನವಾಯಿತು.

ಮಂತ್ರವಾದಿಗೆ ಈ ಪ್ರಕಾರ ಕಾರ್ಯಭಂಗವಾಗಲು, ಅವನು ಪುನಃ ತನ್ನ ಕೈವಾಡವನ್ನು ತೋರಿಸುತ ಬಂದನು. ಭಾರಿಯಾದ ಕಲ್ಲುಬಂಡೆಗಳು ಭೂಮಿಯಿಂದ ಮೇಲಕ್ಕೆ ಎದ್ದು ಆಕಾಶದಲ್ಲಿ ಬಹಳ ಎತ್ತರವಾಗಿ ಹೋಗಿ ಹತೀಮ ನಿಂತಿದ್ದ ಕಡೆಗೆ ಜಾಗ್ರತೆಯಾಗಿ ಬೀಳಲು ಆರಂಭವಾಯಿತು. ಹತೀಮನು ಇದನ್ನು ಕಾಣಲಿಲ್ಲವಾದ್ದರಿಂದ ಈ ಬಂಡೆಗಳ ಮಳೆಯಲ್ಲಿ ಅವನು ಜಜ್ಜಿಹೋಗುತ್ತಿದ್ದನು. ಆದರೆ ಸಾರಮಾಕನು–ಹತೀಂ, ಜಾಗ್ರತೆಯಾಗಿರು, ಇದು ಮಂತ್ರವಾದಿಯ ಇನ್ನೊಂದು ಬಗೆ ಶಕ್ತಿ, ಎಂದು ಕೂಗಿದನು. ಪುನಃ ಹತೀಮನು ಅದೇ ಮಂತ್ರವನ್ನು ಪುರಶ್ಚರಣೆ ಮಾಡಿ ಬೀಳುತಾ ಇರುವ* ಬಂಡೆಗಳ ಕಡೆಗೆ ಊದಲು, ಅವು ಬೇರೇ ಕಡೆಗೆ ತಿರುಗಿಕೊಂಡು ಮಂತ್ರವಾದಿಯ ಒತ್ತಾಗಿ ನಿಂತಿದ್ದ ಸೇನೆಯ ಕಡೆಗೆ ಹೊರಟು ಅವನ ಅತ್ಯಂತ ಶೂರರಾದ ನಾಲ್ಕು ಸಾವಿರ ಸೇನೆಯವರನ್ನು ನೆಲಸಮನಾಗಿ ಅರೆದುಬಿಟ್ಟವು.

* ಹಸ್ತಪ್ರತಿಯಲ್ಲಿ 'ಇರು' ಎಂದಿದೆ.

ಒಂದು ಬಂಡೆಯು ದೊರೆಯ ತಲೆಗೆ ತಗಲುತಾ ಇತ್ತು. ಅಷ್ಟರಲ್ಲಿಯೇ ಆ ಬಂಡೆ ಬರುವ ದಾರಿಯನ್ನು ಕಂಡು ಅವನು ಮಂತ್ರವನ್ನು ಪಕ್ಕಕ್ಕೆ ಊದಿಬಿಟ್ಟನು. ಈ ಗದ್ದಲದಲ್ಲಿ ಹಕೀಮನೂ ಅವನ ಜೊತೆಯವನೂ ಮುಂದರಿದುಹೋದರು. ಅವನ ಶತ್ರುಗಳು ತಂತಮ್ಮಲ್ಲಿ ನಾವು ನಂನಮ್ಮ (ತಲೆಯನ್ನು) ಉಳಿಸಿಕೊಳ್ಳೋಣ, ನಾವು ಇವನನ್ನು ಎದುರಿಸಲು ಹೋದರೆ ಅವನು ಸೇನೆ ಬಲಾಢ್ಯನಾಗಿದ್ದಾನೆ, ಎಂದು ಮಾತನಾಡಿಕೊಂಡರು. ಆ ಮಂತ್ರವಾದಿಯು ತನ್ನ ಶತ್ರು ಸಮೀಪಕ್ಕೆ ಬರುತಾ ಇರುವುದನ್ನು ಕಂಡು, ಇನ್ನೊಂದು ಸಾರಿ ತನ್ನ ಸಾಮರ್ಥ್ಯವನ್ನು ತೋರಿಸಿದನು. ಕಣ್ಣ ಮಿಟಗಿಸುವುದರಲ್ಲಿ ಭಯಂಕರವಾದ ವಿಕಾರದ ಮೃಗಗಳು ಹಕೀಮನ ಮೇಲೆ ನುಗ್ಗಲು ಎಲ್ಲಾ ಕಡೆಯಿಂದ ಬಂದವು. ಜರಾಮರಣರಹಿತನಾದ ಖಿಸ್ರ್ ಹೇಳಿಕೊಟ್ಟ ಮಹಾಮಂತ್ರವನ್ನು ಪುರಶ್ಚರಣೆ ಮಾಡಿದನು. ಆಗ ಆ ವಿಕಾರದ ಮೃಗಗಳು ಅತಿ ರೋಷದಿಂದ ಮಂತ್ರವಾದಿಯ ಗುಂಪಿನ ಮೇಲೆಯೇ ನುಗ್ಗಿದವು. ಇವುಗಳಿಂದ ಆದ ನಾಶವು ಅತ್ಯಂತ ಭಯಂಕರವಾಗಿತ್ತು. ಮಂತ್ರವಾದಿಯ ಒಟ್ಟು ಸೇನೆಯಲ್ಲಿ ಇಪ್ಪತ್ತು ಸಾವಿರ ಮಂದಿ ಸತ್ತುಬಿದ್ದರು. ಮೂರು ಸಾವಿರ ಮಟ್ಟಿಗೆ ಮಾತ್ರ ಉಳಿದರು. (ಹೋದವರು ಹೋಗಲಾಗಿ) ನಿಂತ ಕೆಲವರು ತಮ್ಮ ದೊರೆಗಿಂತಲೂ ಹಕೀಮನು ಕುಟಿಲ ಮಾಡುವುದರಲ್ಲಿ ಎಷ್ಟೋ ಬಲಶಾಲಿ ಎಂದು ಮನದಟ್ಟು ಮಾಡಿಕೊಂಡು ಆ ಮಂತ್ರವಾದಿಯನ್ನು ಬಿಟ್ಟುಬಿಡಬೇಕೆಂದು ಗೊತ್ತು ಮಾಡಿಕೊಂಡರು. ಆ ಜನರು ಆ ಮಂತ್ರವಾದಿಯನ್ನು ಕುರಿತು—"ಬೇಕೆಂದು ನಿಷ್ಕಾರಣವಾದ ಕೊಲೆಗೆ ನಮ್ಮನ್ನು ಒಪ್ಪಿಸಬೇಕೆಂಬುವುದು ನಿಮ್ಮ ಉದ್ದೇಶವೊ? ಮಹಾ ಬಲಿಷ್ಠನಾದ ಈ ಶತ್ರುವಿನ ಮೇಲೆ ಸರಿಯಾಗಿ ನಿಲ್ಲಲಾರೆವೆನ್ನುವುದೇನೋ ಸ್ಪಷ್ಟವಾಗಿದೆ. ಆದ್ದರಿಂದ ನಾವು ಫಲಾಯನಗೈದು ನಮ್ಮ ತಲೆಯನ್ನು ತಪ್ಪಿಸಿಕೊಳ್ಳಬೇಕು" ಎಂದು ಒದರಿದರು. ಮಂತ್ರವಾದಿಯು ಅತ್ಯಾಗ್ರಹದಿಂದ ಘನಗರ್ಜನೆಯ ಧ್ವನಿಯಲ್ಲಿ—ಅಲ್ಪರಾದಂಥಾ ಹೇಡಿಗಳಾ, ಎಲ್ಲಿಗೆ ಓಡಿ ಹೋಗುತೀರಿ. ಕೆಲವು ನಿಮಿಷಗಳಲ್ಲಿ ಹಕೀಮ ಸೆರೆಸಿಕ್ಕಿ ಬಿಡುತಾನೆ, ಎಂದನು.

ಇವನ ಮಾತನ್ನು ಮುರಿದು ಹೋದ ಇವನ ಸೇನೆಯವರು ಯಾರೂ ಲಕ್ಷ್ಯ ಮಾಡಲಿಲ್ಲ. ಅವರು ಯುದ್ಧರಂಗವನ್ನು ಬಿಟ್ಟುಹೋಗುತಾ ಇರುವುದನ್ನು ಕಂಡು ಮಂತ್ರವಾದಿಯು ಒಂದು ಮಂತ್ರವನ್ನು ಹೇಳಿ ಆ ಜನರ ಕಡೆ ಊದಿದನು. ಅವರೆಲ್ಲರೂ ಹಸಿರು ಮರಗಳಾಗಿ ನಿಂತುಕೊಂಡು ಬಿಟ್ಟರು. ಹೀಗೆ ಒಂಟಿಗನಾಗಿ ನಿಂತ ಸಾಂ ಅಹಮದನು ಬೇರೆ ಒಂದು ಕೆಟ್ಟ ಮಂತ್ರವನ್ನು ಜಪಿಸಲು, ಅವನಿಗೆ ಬೇರೆ ಎರಡು ರೆಕ್ಕೆ ಬಂದು ಅವನು ಅಂತರಿಕ್ಷಕ್ಕೆ ಹಾರಿದನು. ಈ ತಂತ್ರವನ್ನು ಎದುರಿಸುವುದಕ್ಕೆ ಹಕೀಮ ಸಿದ್ಧನಾಗಿರಲಿಲ್ಲ. ಆ ಮಂತ್ರವಾದಿಯೂ ಆಕಾಶದಲ್ಲಿ ಹಾರಿಹೋಗುತಾ ಇರುವುದನ್ನು ಹಕೀಮ ಕಂಡು ಆಶ್ಚರ್ಯಪಟ್ಟು, ಅವನ ಬಲವಾದ ಮಂತ್ರವಾದದಲ್ಲಿ ಇನ್ನೂ ಯಾವ ಕಾರ್ಯವನ್ನು ಮಾಡುತಾನೆಯೋ ನೋಡೋಣವೆಂದು ಕಾತುರನಾಗಿ

ನಿರೀಕ್ಷಿಸುತಾ ಇದ್ದನು. ತರುವಾಯ ಆ ಮಂತ್ರವಾದಿಯು ಕಾಳಗವನ್ನು ಬಿಟ್ಟು ಕಂಣಿಗೆ ಕಾಣಿಸದ ಹಾಗೆ ಆಕಾಶಕ್ಕೆ ಹಾರಿಹೋದನು. ಆಗ ಹತೀಮನು ಸಾರ್ಮಾಕನನ್ನು ಕುರಿತು

ಹತೀಮ—ಈ ಮಂತ್ರವಾದಿಯು ನನ್ನ ಕೈಗೆ ಸೆರೆಸಿಕ್ಕುವವರೆಗೆ ನನ್ನ ಕಷ್ಟ ತೀರಿತೆಂದು ನಾನು ತಿಳಿಯುವುದಿಲ್ಲ.

ಸಾರಮಾಕ—ಈಗ ಮಂತ್ರವಾದಿಯು ಕಂಲಾಖ್ ಎಂಬ ಮಹಾಮಂತ್ರವಾದಿಯಾದ ಅವನ ದೊಡ್ಡ ಗುರುವಿನ ಬಳಿಗೆ ಹೋಗಿದಾನೆ. ಈ ದೊಡ್ಡ ಗುರುವು ದೇವರಿಗೆ ತನ್ನ ಶಿಷ್ಯರು ಕೊಡಬೇಕಾದ ಭಕ್ತಿಯನ್ನು ಅವರುಗಳಿಂದ ತೆಗೆದುಕೊಳ್ಳುತಾನೆ.

ಹತೀಮ—ಅವನು (ದೊಡ್ಡಗುರು) ಇರುವ ಸ್ಥಳ ನಿನಗೆ ಗೊತ್ತಿದೆಯೆ?

ಸಾರಮಾಕ—ಚೆನ್ನಾಗಿ ಗೊತ್ತಿದೆ. ಪ್ರತಿ ವರುಷದಲ್ಲಿಯೂ ನಾವು ಅವನನ್ನು ಕಂಡು ನಮ್ಮ ಸೇವೆಯನ್ನು ಒಪ್ಪಿಸುತಿದ್ದೆವು. ನನ್ನ ಸಂಗಡ ನೀನು ಬಂದರೆ ಅಲ್ಲಿಗೆ ನಿನ್ನನ್ನು ನಾನು ಕರೆದುಕೊಂಡು ಹೋಗಲು ಸಿದ್ಧವಾಗಿದೇನೆ.

ಹತೀಮನು ಸಾರ್ಮಕನನ್ನು ನಂಬುವುದಕ್ಕೆ ಮುಂಚೆ ಅವನಿಂದ ಪ್ರಮಾಣ ಮಾಡಿಸಿಕೊಂಡು ಆ ಸಾರ್ಮಕನಿಗೆ ತನ್ನ ಧರ್ಮವನ್ನು ಬೋಧಿಸಿದನು. ಇವರಿಬ್ಬರೂ ಹೊರಟರು. ಸಾರ್ಮಾಕನು ಸಮೀಪದಲ್ಲಿರುವ ಒಂದು ಕಾಡನ್ನು ತೋರಿಸಿ-ಅಲ್ಲಿ ಕಾಣುವ ಗಿಡಗಳು ಮಂತ್ರವಾದಿಯ ಕಡೆ ಉಳಿದಿರುವ ಸೇನೆ. ಅವರು ಪ್ರಳಯ ವಾಗುವವರೆಗೂ ಹೀಗೆಯೇ ಇಲ್ಲಿರಬೇಕು. ನಿನ್ನ ಪ್ರಬಲವಾದ ಸಾಮರ್ಥ್ಯದಿಂದ ಬೇಕಾದರೆ ಅವರನ್ನು ಮೊದಲಿದ್ದ ಸ್ಥಿತಿಗೆ ತರಬಹುದು, ಎಂದನು. ಆಗ ಹತೀಮನು ಒಂದು ಬಟ್ಟಲು ತುಂಬ ನೀರನ್ನು ತೆಗೆದುಕೊಂಡು ಅವರ ಮೇಲೆ ಊದಿ ದೇವರ ನಾಮೋಚ್ಚಾರಣೆ ಮಾಡಿ ಆ ಬಟ್ಟಲು ಸಾರ್ಮಾಕನ ಕೈಗಿತ್ತು—ಹೋಗಿ ಆ ಮರಗಳ ಮೇಲೆ ಈ ತೀರ್ಥದ ಕೆಲವು ತೊಟ್ಟುಗಳನ್ನು ಚುಮುಕಿಸು, ಎಂದನು.

ಸಾರ್ಮಾಕನು ಆ ಜಲವನ್ನು ತೆಗೆದುಕೊಂಡು ಆ ಮರಗಳ ಮೇಲೆ ಚಿಮಿಕಿಸಲು ಆ ಮರಗಳೆಲ್ಲಾ ಮೊದಲಿನಂತೆ ಮನುಷ್ಯ ರೂಪನ್ನು ತಾಳಿದವು. ಆಗ ಅವರು ಸಾರ್ಮಾಕನನ್ನು ಕುರಿತು—ನಮ್ಮ ಯಜಮಾನನಾದ ಮಂತ್ರವಾದಿಯೇನಾದ? ಎಂದರು. ಅದಕ್ಕೆ ಸಾರ್ಮಾಕನು ನೀವು ಅರಿಯಿರ, ಗುಲಾಮನಾದ ಆ ಪಿಶಾಚಿಯು (ಮಂತ್ರ ವಾದಿ) ನಿಮಗೆ ಮಂತ್ರಹಾಕಿ ನಿಮಗೆ ಮರಗಳ ರೂಪ ಬರುವಂತೆ ಮಾಡಿದ್ದ. ದೇವರಿಗೆ ಪರಮಭಕ್ತನಾದ ಹತೀಮನ ಬಲವಾದ ಮಂತ್ರಶಕ್ತಿಯಿಂದ ನಿಮಗೆ ವಿಮೋಚನೆ ಯಾಯಿತು. ಒಂದು ಬಟ್ಟಲ ನೀರಿನ ಮೇಲೆ ಊದಿ ನರಕದ ಸಾಮರ್ಥ್ಯ ಯಾವುದೂ ಅದರ ಮೇಲೆ ಕೆಂದದ ಹಾಗೆ ಅದಕ್ಕೆ ಮಂತ್ರವನ್ನು ಹಾಕಿ, ಅದನ್ನು ನನ್ನ ಕೈಗೆ ಕೊಟ್ಟನು. ಅದನ್ನು ನಿಮ್ಮ ಮೇಲೆ ಚಿಮಿಕಿಸಿದ ಕ್ಷಣದಲ್ಲಿಯೇ ದೇವರ ದಯದಿಂದ ನಿಮ್ಮ ನಿಜರೂಪು ನಿಮಗೆ ಪ್ರಾಪ್ತವಾಯಿತು. ನಿಮ್ಮ ಪೂರ್ವದ ಒಡೆಯ ಸಾಂ ಅಹ್ಮರನ ವಿಚಾರವೇನೆಂದರೆ, ಅವನು ಈ ಧೀರನಾದ ಹತೀಮನೆದುರಿಗೆ ನಿಲ್ಲಲಾರದೆ

ಓಡಿಹೋದನು. ಈಗ ಅವನು ಕಾಂಲಾಕ್ ಎಂಬ ಮುಖ್ಯ ಮಂತ್ರವಾದಿಯಲ್ಲಿ ಆಲೋಚನೆ ಮಾಡುವುದಕ್ಕೆ ಹೋಗಿದಾನೆ. ಆದರೆ ಅಂಣಂದಿರ, ಈಗ ನನಗೆ ಹೇಳಿ, ನಿಮಗೆ ಹೀಗೆ ರೂಪ ಬದಲಾಯಿಸಿದ ವೇಳೆಯಲ್ಲಿ ನಿಮಗೆ ಯೇನು ಯೋಚನೆ ತೋರಿತು? ನೀವು ಮರಗಳಾಗಿ ನಿಂತಿರುವಾಗ ನಿಮಗೆ ಹೇಗೆ ತೋರುತ್ತಿತ್ತು? ಎಂಬುದಾಗಿ ಸಾರ್ಮ್ಯಕನು ಕೇಳಿದನು. ಅದಕ್ಕೆ ಆ ಜನರು—ನಾವು ಹಾರುವುದಕ್ಕೆ ಹೊರಟಾಗ ಮೊದಲು ನಮ್ಮ ಕಾಲುಗಳು ನೆಲಕ್ಕೆ ಕಚ್ಚಿಕೊಂಡ ಹಾಗೆ ತೋರಿತು. ನಾವು ಅಲಗುವುದಕ್ಕೆ ನಮಗೆ ಸಾಮರ್ಥ್ಯವಿಲ್ಲದ ಹಾಗಾಯಿತು. ತರುವಾಯ ನಮ್ಮ ಶರೀರದಲ್ಲೆಲ್ಲಾ ವಿಶೇಷವಾಗಿ ಯಾತನೆಯಾದಂತೆ ತೋರಿತು. ಈಗ ನಮಗೆ (ಪೂರ್ವದ ಸ್ವರೂಪ) ಬಂತು. ಹಶೀಮು ತಂಣಗೆ ಬದಕಲಿ. ನಮ್ಮ ದೊರೆಯ ಮೇಲೆ ಹೀಗೆ ಜಯವನ್ನು ಹೊಂದಬೇಕಾದರೆ. ಅವನು ನಿಜವಾಗಿಯೂ ಅತ್ಯಂತ ಶಕ್ತನಾಗಿರ ಬೇಕು. ಇನ್ನು ಮುಂದಕ್ಕೆ ಹಶೀಮುನಿಗೆ ಮಾತ್ರ ನಮ್ಮ ಸೇವೆ ಸಲ್ಲತಕ್ಕದ್ದು, ಎಂದು ಹೇಳಿದರು.

ಈ ರೀತಿಯಾಗಿ ನಿಷ್ಕರ್ಷೆ ಮಾಡಿಕೊಂಡು ಎಲ್ಲರೂ ಹಶೀಮುನ ಬಳಿಗೆ ಬಂದು ಕೇವಲ ವಿಧೇಯರಾಗಿ ಅವನಿಗೆ ಸಲಾಂ ಮಾಡಿ—ಅಯ್ಯಾ ಪರಾಕ್ರಮಶಾಲಿಯೆ, ಇದುವರೆಗೆ ನಾವು ಸಾಂ ಅಹ್ಮರ್‌ನ ಸೇವೆಯಲ್ಲಿದ್ದೆವು. ಈಗ ನಿನ್ನಲ್ಲಿ ಸೇವೆ ಮಾಡಲು ಬಂದಿದೇವೆ. ನಿನ್ನ ಪ್ರಾಣವನ್ನು ತೆಗೆಯಬೇಕೆಂದು ನಾವು ಬಂದಿದ್ದಾಗ್ಯೂ ನೀನು ನಮ್ಮ ಕಷ್ಟವನ್ನು ದಯವಿಟ್ಟು ಬಿಡಿಸಿದೆ. ಎಂದು ಅರಿಕೆ ಮಾಡಿದರು. ಆಗ ಹಶೀಮನು ಅವರನ್ನು ಅನುಗ್ರಹದಿಂದ ನೋಡಿ, ಅವರ ಪೂರ್ವದ ಒಡೆಯನಾದ (ಮಂತ್ರವಾದಿಯ) ಮಾಟವು ಅವರ ಮೇಲೆ ಕೆಂದದ ಹಾಗೆ ಇರಲೆಂದು ತನ್ನ ಮಂತ್ರವನ್ನು ಜಪಿಸಿ ಅವರೆಲ್ಲರ ಮೇಲೆಯೂ ಊದಿದನು. ಇದಾದ ಮೇಲೆ ಸೇನೆಯವರು—ಗಂಭೀರವಾದ ಪ್ರಭುವೆ, ನೀನು ನಮ್ಮನ್ನು ಎಲ್ಲಿಗೆ ಕರೆದುಕೊಂಡು ಹೋಗುತೀಯೆ?

ಹಶೀಮು—ಸಾಂ ಅಹ್ಮರನ ವಿಚಾರ ಮುಗಿಯಲಿಲ್ಲ. ಅವನನ್ನು ಕೈಸೆರೆ ಹಿಡಿಯುವ ತನಕ ನಾನು ಇನ್ನು ಯಾವ ಕೆಲಸವನ್ನೂ ಮಾಡಲಾರೆ. ಅವನು ತಾನಾಗಿ ಇಷ್ಟಪಟ್ಟು ಅವನ ಮಗಳನ್ನು ನನಗೆ ಮದುವೆ ಮಾಡಿಕೊಟ್ಟರೆ ಅವನು ಜೀವ ಸಹಿತ ತಪ್ಪಿಸಿಕೊಂಡು ಹೋಗಲೆಂದು ಬಿಟ್ಟುಬಿಡುತೇನೆ. ಹಾಗಿಲ್ಲದಿದ್ದರೆ ಅವನನ್ನು ಕೊಂದುಹಾಕಿಯೇ ಬಿಡತೇನೆಂದು ನಿಷ್ಕರ್ಷೆ ಮಾಡಿಕೊಂಡಿದೇನೆ.

ಸೇನೆಯವರು—ಮಂತ್ರವಾದಿಯ ಮಗಳ ಪರಿಚಯ ನಿನಗೆ ಆದ್ದು ಹೇಗೆ?

ಹಶೀಮ—ನಾನು ಒಂದು ಕಾಡಿನಲ್ಲಿ ಹೋಗುತಿರುವಾಗ ಒಂದು ಸರೋವರದ ತಡಿಯಲ್ಲಿ ಒಂದು ದೊಡ್ಡ ಮರ ಕಾಣಿಸಿತು. ಅಲ್ಲಿ ಒಂದು ಉದ್ದವಾದ ಕೊಂಬೆಗೆ ಮಂತ್ರವಾದಿಯ ಮಗಳ ತಲೆ ತಗಲಹಾಕಿತ್ತು. ಅವಳ ಪರಿವಾರದವರ ತಲೆಗಳು ಕೆಳಗಡೆ ಕೊಂಬೆಗಳಿಗೆ ನೇತುಹಾಕಿದ್ದವು.

ಹೀಗೆ ಅದುವರೆಗೆ ನಡೆದದ್ದನ್ನೆಲ್ಲಾ ಹಶೀಮನು ಹೇಳಿ ವಿವರಿಸಿ, ಮತ್ತೆ ಮುಂದೆ ಉಸುರಿದ್ದೇನೆಂದರೆ,

ಅವಳಿಗೋಸ್ಕರ ನಾನು ಇಲ್ಲಿಗೆ ಬಂದೆ. ಅವರ ತಂದೆ ನನ್ನನ್ನು ಎಷ್ಟರಮಟ್ಟಿಗೆ ಎದುರುಗೊಂಡನೋ ನೀವೇ ಬಲ್ಲಿರಿ. ಅದಾಗ್ಯೂ ದೇವರು ನನಗೆ ಕಡೆಯಲ್ಲಿ ಜಯವನ್ನು ದಯಪಾಲಿಸಲಿ ಎಂದು ಕೋರುತೇನೆ. ಅವನ ದಿವ್ಯಚಿತ್ತಕ್ಕೆ ಸರಿಯಾಗಿ ಕಂಡರೆ ಆ ಮಂತ್ರವಾದಿಯನ್ನು ಅವನ ಗುರುವಿನ ಮನೇಬಾಗಿಲ ಹೊಸಿಲಮೇಲೆಯೇ ಕೊಂದುಬಿಡುತೇನೆ. ಅವನ ಗುರುವೂ ನನ್ನ ಕೈಯಿಂದ ತಪ್ಪಿಸಿಕೊಳ್ಳಲಾರ.

ಪರಿವಾರದವರು—ಹಶೀಮ ಜಾಗ್ರತೆಯಾಗಿರು. ಕಾಮಲಾಕನ ಮಂತ್ರವು ಇರುವುದರಲ್ಲಿ ಬಹು ಬಲವಾದ್ದು.

ಹಶೀಮ—ನೀವು ನಿಜವಾದ ತಮಾಷಿಯನ್ನು ನೋಡಬೇಕಾದರೆ ನನ್ನ ಸಂಗಡ ಬನ್ನಿ, ನಿಮಗೆ ಧೈರ್ಯವಿಲ್ಲದಿದ್ದರೆ ಬೇಡ.

ಪರಿವಾರ—ನೀನು ಮೊದಲೇ ಸತ್ತುಹೋಗಿದ್ದ ನಮಗೆ ಪ್ರಾಣವನ್ನು ಕೊಟ್ಟು ಉದ್ಧಾರ ಮಾಡಿದೆ. ನಾವು ನಿನ್ನನ್ನು ಬಿಟ್ಟುಬಿಡುವ ಮಟ್ಟಿಗೂ ನಮಗೆ ಧೈರ್ಯವೂ ಘನತೆಯೂ ಇಲ್ಲದೇ ಹೋಯಿತು–ಎಂದು (ಯಾರೂ) ಆಡಿಕೊಳ್ಳಕೂಡದು. ನಿನಗೆ ಬೇಕಾದ ಕಡೆಗೆ ಕರೆದುಕೊಂಡು ಹೋಗು. ಅಲ್ಲಿಗೆಲ್ಲಾ ನಿನ್ನ ಹಿಂದೆ ನಾವು ಬರುತೇವೆ.

ಈ ಮಾತನ್ನು ಕೇಳಿ ಹಶೀಮನಿಗೆ ಸಂತೋಷವಾಯಿತು. ಅವರನ್ನು ಹಿಂದುಗಡೆ ಬರುವಂತೆ ಹೇಳಿಬಿಟ್ಟು ದೊಡ್ಡಮಂತ್ರವಾದಿಯಾದ ಕಾಂಲಾಕನು ಇರುವ ಪರ್ವತಕ್ಕೆ ತಾನು ಹೋದನು. ಅವನ ಪರಿವಾರದವರು ಅಷ್ಟೊಂದು ದೂರ ಹೋಗಲು ಇಷ್ಟವಿಲ್ಲದೆ ಹಶೀಮನನ್ನು ಕುರಿತು.

ಪರಿವಾರದವರು—ಪರಾಕ್ರಮಶಾಲಿ, ನಮ್ಮ ಪೂರ್ವದ ದೊರೆಯಾದ ಸಾಂ ಅಹ್ಮರನು ಆ ಪರ್ವತಕ್ಕೆ ನಮ್ಮನ್ನು ಒಂದು ದಿವಸಕ್ಕಿಂತಲೂ ಕಡಮೆಯಾದ ಕಾಲದಲ್ಲಿ ತೆಗೆದುಕೊಂಡು ಹೋಗುತಾ ಇದ್ದನು.

ಹಶೀಮ—ಅವನು ಮಂತ್ರಶಕ್ತಿಯಿಂದ ಹಾಗೆ ಮಾಡುತಾ ಇದ್ದ.

ಪರಿವಾರ—ನೀನು ಹಾಗೆಯೇ ಮಾಡಲಾರೆಯ? ನೀನು ಅವನಿಗಿಂತಲೂ ಮಂತ್ರಶಕ್ತಿಯಲ್ಲಿ ಘಟಕ, ಹಾಗಿಲ್ಲವಾದರೆ ಅವನನ್ನು ನೀನು ಜೈಸುತ್ತಿರಲಿಲ್ಲ. ಒಂದು ಪರ್ವತವನ್ನು ಒಂದು ಅಣುವಾಗಿಯೂ ಅಣುವನ್ನು ಪರ್ವತವಾಗಿಯೂ ಮಾಡುವ ಶಕ್ತಿ ಸಾಂ ಅಹ್ಮರನಿಗೆ ಇತ್ತು. ಇಂಥಾ ಬಲವಾದ ಮಂತ್ರವಾದಿ ನಿನ್ನ ಮುಂದೆ (ನಿಲ್ಲದೆ) ಓಡಿದ. ಮಂತ್ರಶಾಸ್ತ್ರದಲ್ಲಿ ನಿನಗೆ ಚೆನ್ನಾಗಿ ಪರಿಶ್ರಮವಿದ್ದ ಹೊರತು ಅವನನ್ನು ಹಿಂದಟ್ಟಿ ಹೋಗುವ ಯೋಚನೆಯನ್ನು ಮಾಡಕೂಡದು.

ಇಲ್ಲಿ ಸಾಮರ್ಾಕನು ಅವರ ಮಾತನ್ನು ನಿಲ್ಲಿಸಿ,

ಸಾವರ್ಕ—ನೀವು ವಿವೇಕಶೂನ್ಯರು, ಹತೀಮ ಯಾವ ಕಂಣಕಟ್ಟು ಮಾಯವನ್ನೂ ಮಾಡುವುದಿಲ್ಲ. ನಾನು ಅವನನ್ನು ನೋಡಿದರಲ್ಲಿ ನನಗೆ ತಿಳಿದಮಟ್ಟಿಗೆ, ಕಾಂಲಾಕನೆಂಬ ದೊಡ್ಡ ಗುರುವಿನ ಸಹಾಯವಿದ್ದಾಗ್ಯೂ ಹತೀಮನು ಸಾಂ ಅಹ್ಮರನನ್ನು ಜಾಗ್ರತೆಯಾಗಿ ಜೈಸಿಬಿಡುತಾನೆ. ಇದು ನನಗೆ ಚೆನ್ನಾಗಿ ಗೊತ್ತಿದೆ.

ಹತೀಮ:—ಮಿತ್ರರೆ, ಒಬ್ಬ ದೇವಾಂಶ ಪುರುಷನು ನನಗೆ ದಿವ್ಯವಾದ ಒಂದು ಮಂತ್ರವನ್ನು ಉಪದೇಶ ಮಾಡಿದಾನೆ. ನಾನು ಎಲ್ಲಿ ಅದನ್ನು ಪುರಶ್ಚರಣೆ ಮಾಡಿದರೆ ಮತ್ತೆ ಯಾವ ಕುಟಿಲವಾದ ಮಂತ್ರವೂ ಅದರಮೇಲೆ ನನಗೆ ವಿರೋಧವಾಗಿ ಹಾಯುವುದಿಲ್ಲ. ಈ ಮಹಾಮಂತ್ರವಿರಲಿಕ್ಕೆ ನನ್ನ ಮೇಲೆ ನಿಲ್ಲಲು ಮಂತ್ರವಾದಿಗೆ ಶಕ್ತಿ ಇಲ್ಲ.

ಈ ಸೇನೆಯೆಲ್ಲಾ ಹತೀಮನ ಹಿಂದೆ ಹೋಟಿತು. ಆದರೆ ಇವರು ಹೋಗುತಾ ಇದ್ದ ದಾರಿ ಯಾವುದೋ ಇವರಿಗೆ ಗೊತ್ತಾಗಲಿಲ್ಲ. ಅವರು ತಟ್ಟನೆ ಒಂದು ಸರೋವರದ ತಡಿಯಲ್ಲಿ ಇಳಿದರು. ಅದರ ನೀರು ಬಹಳ ನಿರ್ಮಲವಾಗಿತ್ತು. ಅಲ್ಲಿ ಎಲ್ಲರೂ ಬೇಕಾದಷ್ಟು ನೀರನ್ನು ಕುಡಿದರು. ನೀರು ಕುಡಿದು ಮುಗಿಯಲು, ಚಿಲುಮೆಯಲ್ಲಿ ಉಕ್ಕುವ ಹಾಗೆ ಅವರ ಅಂಗಾಲಿನಿಂದ ನೀರು ಉಕ್ಕಿ ವಿಶೇಷವಾಗಿ ಹೋಟಿತು.

ಹತೀಮನು ಇದನ್ನು ನೋಡಿ ಆಶ್ಚರ್ಯಪಟ್ಟು, ತನಗೆ ಬಾಯಾರಿಕೆಯಾಗಿದ್ದಾಗ್ಯೂ ಆ ನೀರನ್ನು ಬಾಯಿಗೆ ಹಾಕದೆ ಸುಮ್ಮನೆ ನಿಂತನು. ಹೇಗಿದ್ದೀರಿ ಎಂದು ತನ್ನ ಪರಿವಾರದವರನ್ನು ಕೇಳಿದ. ಅವರಿಂದ ಉತ್ತರ ಬರಲಿಲ್ಲ. ಅವರು ಇವನನ್ನು ನೋಡುತಾ ಪ್ರತಿಮೆಗಳ ಹಾಗೆ ನಿಂತುಬಿಟ್ಟರು. ಆ ರಾತ್ರಿಯೆಲ್ಲಾ ಹೀಗೆಯೇ ಕಳೆಯಿತು. ಹತೀಮನಿಗೆ ಹಸಿವು ಬಾಯಾರಿಕೆಯಿಂದ ಸಂಕಟ ಹುಟ್ಟಿತು. ಬೆಳಗಾದ ಮೇಲೆ ಅವನು ತನ್ನ ಜನರ ಮುಖವನ್ನು ನೋಡಿದ. ಅವರ ಮುಖವೆಲ್ಲಾ ಊದಿಕೊಂಡು ಚಕ್ಕಳದ ಚೀಲದ ಹಾಗೆ ಕಂಡವು. ಅವರ ಕಂಣುಗಳಿರುವುದು ಕೂಡ ಕಾಣಿಸುತಿರಲಿಲ್ಲ. ಅವನಿಗೆ ತಡೆಯುವುದಕ್ಕಾಗದಷ್ಟು ವ್ಯಸನವಾಯಿತು. ಅದು ಮಂತ್ರದ ಫಲವಾಗಿರಬಹುದೆಂದು ಯೋಚಿಸಿ, ತನ್ನ ಮಹಾಮಂತ್ರವನ್ನು ಜಪಿಸಿದ. ಒಂದು ಕ್ಷಣದಲ್ಲಿ ಊದು ಇಳಿಯಿತು. ಅದೇ ಮಂತ್ರವನ್ನು ಪುನಃ ಹೇಳಿದ, ಅವರ ಕೈಗಳ ಎಲ್ಲಾ ಕಡೆಯಿಂದಲೂ ಹಸರು ಹೊರಟಿತು. ಪುನಃ ಉಚ್ಚರಿಸಿದ ಆ ಜನರೆಲ್ಲರಿಗೂ ಚೆನ್ನಾಗಿ ಜ್ಞಾನ ಬಂತು.

ಹೀಗೆ (ವಿಪತ್ತಿನಿಂದ) ಬಿಡುಗಡೆಯಾದ ಆ ಜನರ ಪ್ರಾರ್ಥನೆಯನ್ನು ಉಪಕಾರ ಸ್ಮರಣೆಯನ್ನು ಕೇಳಿದನು. ಹತೀಮನಿಗೆ ಮೊದಲು ಎಷ್ಟು ದುಃಖ ಬಂದಿತ್ತೋ ಅಷ್ಟೂ ಅಷ್ಟು ಸಂತೋಷವಾಯಿತು. ಕಡೆಗೆ ಅವರನ್ನು ಕುರಿತು

ಹತೀಮ—ಮಿತ್ರರ, ನಿಮಗೆ ಪ್ರಾಪ್ತವಾಗಿದ್ದ ವಿಪತ್ತಿಗೆ ಕಾರಣವೇನು, ವಿವರಿಸಬಲ್ಲಿರ?

ಪರಿವಾದ—ಕಾರಣ ಸ್ಪಷ್ಟವಾಗಿದೆ. ಇದು ಮಂತ್ರವಾದಿ ಹೋದ ದಾರಿ. ಅವನೇ ಈ ಸರೋವರದ ನೀರಿಗೆ ಮಂತ್ರ ಹಾಕಿರತಕ್ಕವನು.

ಈ ಮಾತನ್ನು ಕೇಳಿ ಹತೀಮು ತನ್ನ ಮಂತ್ರವನ್ನು ಹೇಳಿ ಆ ನೀರಿನ ಮೇಲೆ ಊದಿದನು. ಮೊದಲು ಅದರ ನೀರು ಉಕ್ಕುತಾ ಇರುವ ಸಮುದ್ರದ ಹಾಗೆ ಅಲ್ಲೋಲ ಕಲ್ಲೋಲವಾಯಿತು. ನೀರೆಲ್ಲಾ ಕೆಂಪಗಾಯಿತು. ತರುವಾಯ ಅದು ಹಸಿರಾಯಿತು. ತರುವಾಯ ಕ್ರಮೇಣ ನಿಂತು ನಿರ್ಮಲವಾಯಿತು. ಆಗ ಹತೀಮನು ಆ ನೀರಿನಲ್ಲಿ ಮಂತ್ರದ ಸೆಲೆಯೇನೂ ಇಲ್ಲವೆಂದು ಹೇಳಿ ಬೇಕಾದಷ್ಟು ನೀರನ್ನು ತಾನು ಕುಡಿದು, ತನ್ನ ಜನರೂ ಭಯಪಡದೆ ಹಾಗೆ ಮಾಡುವ ಹಾಗೆ ಹೇಳಿದನು ಮತ್ತು ಅವರ ಶರೀರದ ತಾಪವೆಲ್ಲಾ ಹೋಗುವ ಹಾಗೂ ಉತ್ತಮವಾದ ಪ್ರಕ್ರಿಯೆಯಾಗಿ, ಅವರು ಅದರಲ್ಲಿ ಸ್ನಾನ ಮಾಡುವ ಹಾಗೆ ಹೇಳಿದನು.

ಎಲ್ಲರೂ ತಮ್ಮ ಬಾಯಾರಿಕೆಯನ್ನು ಹಿಂಗಿಸಿಕೊಂಡು ನಿರ್ಮಲವಾಗಿಯೂ ಹಿತವಾಗಿಯೂ ಇರುವ ಆ ಸರೋವರದ ನೀರಿನಲ್ಲಿ ಸ್ನಾನ ಮಾಡಿದರು. ಆದರಿಂದ ಅವರಿಗೆ ಬಂದಿದ್ದ ವಿಪತ್ತಿನ ಗುರುತೆಲ್ಲಾ ಪರಿಹಾರವಾಯಿತು. ಅವರಿಗೆ ಹತೀಮನಲ್ಲಿ ಪೂರ್ತಿಯಾದ ನಂಬಿಕೆ ಉಂಟಾಯಿತು. ಅವರು ಅವನಿಗೆ ತಮ್ಮ ನಿಜವಾದ ಕೃತಜ್ಞತೆಯನ್ನು ಒಪ್ಪಿಸಿ—ಮುಂದಕ್ಕೆ ಹೊರಡು, ಧೀರನಾದ ಹತೀಮನೆ, ನೀನು ಮಂತ್ರವಾದಿಯಾದ ಸಾಂ ಅಹ್ಮರನ ಮೇಲೆಯೂ ಅವನ ಗುರುವಾದ ಕಾಂಲಾಕನ ಮೇಲೆಯೂ ನೀನು ಮಾಡುವ ಯುದ್ಧದಲ್ಲಿ ನಾವು ಸಾಯುವವರೆಗೂ ನಿನ್ನ ಹಿಂದೆ ನಾವು ಬರುತೇವೆ. ನೀನು ಅವರೆಲ್ಲರಿಗಿಂತಲೂ ದೊಡ್ಡವನು. ಎಲ್ಲರಿಗಿಂತಲೂ ಉತ್ತಮು, ಎಂದು ಹೊಗಳಿದರು.—ಈ ನಂಬಿಕೆಯನ್ನು ಅವರಿಂದ ಹೊಂದಿ ಹತೀಮನು ಮುಂದಕ್ಕೆ ಪ್ರಯಾಣ ಮಾಡಿದನು. ಆ ಜನರು ಅವನ ಹಿಂದೆಯೇ ಸಂತೋಷವಾಗಿ ಹೋದರು.

ಈ ಮಧ್ಯಕಾಲದಲ್ಲಿ ಸಾಂ ಅಹ್ಮರನು ಸೋತು ಕುಗ್ಗಿಹೋಗಿ ಕಾಂಲಾಕನ ಬಳಿಗೆ ಓಡಿದನು. ಆಗ ಕಾಂಲಾಕನು (ಶಿಷ್ಯ) ಇಳಿದುಹೋಗಿರುವುದನ್ನು ಕಂಡು—ನಿನಗೆ ಯಾವ ವಿಪತ್ತು ಸಂಭವಿಸಿತು, ಇಂಥಾ ವ್ಯಸನಕರವಾದ ಸ್ಥಿತಿಯಲ್ಲಿ ಬಂದಿದ್ದೀಯಲ್ಲಾ ಎಂಬುದಾಗಿ ಕೇಳಿದನು. ಅದಕ್ಕೆ ಸಾಂ ಅಹ್ಮರನು—ಪರಮಗುರುವೆ, ನಿಮ್ಮ ಸಹಾಯವನ್ನು ಬೇಡುವುದಕ್ಕಾಗಿ ಬಂದೆ, ಹತೀಮನೆಂಬುವನು ಮಂತ್ರವಾದದಲ್ಲಿ ನನ್ನನ್ನು ಮೀರಿಸಿದವನು, ಅವನು ನನ್ನನ್ನು ನಮ್ಮ ಮನೆಯಿಂದ ಓಡಿಸಿಬಿಟ್ಟ. ಅವನ ಆಟೋಪದ ದೆಸೆಯಿಂದ ತಪ್ಪಿಸಿಕೊಳ್ಳಲು ನಾನು ಇಲ್ಲಿಗೆ ಓಡಿಬಂದೆ, ಎಂದು ಹೇಳಿದನು. ಅದನ್ನು ಕೇಳಿ ಕಾಮಲಾಕನು ರೌದ್ರವನ್ನು ತಾಳಿ—ಮಗನೆ, ತಾಳು, ಜಾಗ್ರತೆಯಾಗಿ ಈ ಹತೀಮನನ್ನು ನಾನು ಜೈಸಿಬಿಡುತೇನೆ, ಅವನನ್ನು ಸೆರೆಹಿಡಿದು ನಿನ್ನ ವಶಕ್ಕೆ ಕೊಟ್ಟುಬಿಡುತೇನೆ, ನೀನು ಅವನಿಗೆ ಬೇಕಾದ್ದು ಮಾಡು ಎಂದನು.

ಆ ಕೂಡಲೆ ಕಾಮಲಾಕನು ತಾನು ಮಂತ್ರ ಹಾಕುವುದಕ್ಕೆ ಆರಂಭಮಾಡಿದನು. ಮತ್ತು ತಾನು ವಾಸವಾಗಿರುವ ಪರ್ವತದ ಸುತ್ತಲೂ ಭದ್ರಮಾಡಲು ತೊಡಗಿದನು.

ಒಂದು ನಿಮಿಷದಲ್ಲಿ ಪರ್ವತವೆಲ್ಲಾ ಉರಿಯಿಂದ ಮುಚ್ಚಲ್ಪಟ್ಟಿತು. ಹಗಲಿಗೂ ರಾತ್ರಿಗೂ ವ್ಯತ್ಯಾಸವಿಲ್ಲದ ಹಾಗೆ ಪ್ರಕಾಶವಾಯಿತು ನಾಲ್ಕು ದಿವಸದ ಮೇಲೆ ಹಶೀಮನು ಅಲ್ಲಿಗೆ ಬಂದು ಮುಟ್ಟಿದನು. ಅವನ ಸಂಗಡಿದ್ದವರು— ಇದೇ ಕಾಮಲಾಕ ಇರುವ ಬೆಟ್ಟ. ಇದು ಯಾಕೆ ಹೀಗೆ ಉರಿಯುತಿದೆ? ಖಂಡಿತವಾಗಿಯೂ ಇದು ಅವನ ಮಾಟದಿಂದುಂಟಾಗಿರಬೇಕು, ಎಂದುಸುರಿದರು.

ಹಶೀಮನು ಭಕ್ತಿಯಿಂದ ದೇವರನ್ನು ಸ್ತುತಿಸೈದು ಖಿಸರನು ಹೇಳಿಕೊಟ್ಟ ಮಂತ್ರವನ್ನುಚ್ಚರಿಸಲು, ಒಡನೆಯೇ ಪರ್ವತದಿಂದ ಉರಿ ಹೋಗುವುದು ಕಡಮೆಯಾಯಿತು. ಕಾಮಲಾಕನಿಗೆ ಅವನ ಶತ್ರು ಬರುವುದು ಗೊತ್ತಾಯಿತು. ಬಾಯಲ್ಲಿ ಬರೀ ಊದೋಣದರಿಂದಲೇ ಅವನು ಆ ಉರಿಯನ್ನು ಆರಿಸಿದ್ದು ತಿಳಿಯಿತು. ಎರಡನೇ ಸಾರಿ ಇನ್ನೊಂದು ತಂತ್ರವನ್ನು ಮಾಡಿದನು. ಸಮುದ್ರವೇ ಮೇರೆದಪ್ಪಿ ಆಳವಾದ ಹಳ್ಳಗಳಿಂದ ಬರುವುದೋ ಎನ್ನುವ ಹಾಗೆ, ಹಶೀಮನ ಮೇಲೆಯೂ ಅವನ ಜೊತೆಯವರ ಮೇಲೆಯೂ ನೀರಿನ ಪ್ರವಾಹ ನುಗ್ಗಿತು. "ಹಶೀಮ ಕಾಪಾಡಪ್ಪ, ನಾವೆಲ್ಲರೂ ಮುಳುಗಿ ಹೋಗುತ್ತೇವೆ, ಇದನ್ನು ಕಾಮಲಾಕನು ನಿರ್ಮಾಣಮಾಡಿದ್ದು" ಎಂದು ಅವನ ಮಿತ್ರರು ಅರಚಿಕೊಂಡರು. ಹಶೀಮನು ತನ್ನ ಮಂತ್ರವನ್ನು ಜಪಿಸಿ ಆ ನೀರಿನ ಮೇಲೆ ಊದಿದನು. ಆ ನೀರು ಆ ಕ್ಷಣವೇ ನಿಂತಿತು. ಸ್ವಲ್ಪ ಹೊತ್ತಿನಲ್ಲಿ ಅದರ ಗುರುತೇ ಇಲ್ಲದ ಹಾಗಾಯಿತು. ಎರಡನೇ ಸಾರಿಯೂ ತನ್ನ ಶಕ್ತಿಯು ಪ್ರತಿಭಟಿಸಲ್ಪಡಲು, ಕಾಮಲಾಕನು ಅವಮಾನವಾಗಿ, ತಾನೂ ತನ್ನ ಶಕ್ತನಾದ ಶಿಷ್ಯ ಸಾಂ ಅಷ್ಮರನೂ ಪುನಃ ತೊಡಗಿದರು. ಐದರಿಂದ ಹತ್ತು ಮಣಾವರೆಗೂ ಭಾರವಾಗಿರುವ ಕಲ್ಲುಗಳು ಮೇಘಮಂಡಲದಿಂದ ಬೀಳಲು ಆರಂಭವಾಯಿತು. ಹಶೀಮನು ಇದಕ್ಕೂ ಸಿದ್ಧವಾಗಿದ್ದನು. ಅವನೂ ಅವನ ಜನರೂ ಆ ಮಹಾಮಂತ್ರದ ಶಕ್ತಿಯಿಂದ ಬಾಧೆ ಇಲ್ಲದೆ ಸ್ವಸ್ಥವಾಗಿ ಕೂತುಕೊಂಡರು. ಹಗಲು ರಾತ್ರಿಯೂ ಮೂರುದಿವಸ ಈ ಸುರಿಮಳೆ ಅವರ ಸುತ್ತಲೂ ಸುರಿಯಿತು. ಅವರಿಗೆ ಯಾವ ಅಪಾಯವೂ ಆಗಲಿಲ್ಲ. ಕೊನೆಯಲ್ಲಿ ಏನೂ ಕಾಣದ ಹಾಗೆ ಆ ಕಲ್ಲುಗುಡ್ಡೆಯು ಒಂದು ಪರ್ವತದ ಹಾಗೆ ಆಗಲು, ಹಶೀಮನು ಪುನಃ ಮಂತ್ರವನ್ನು ಜಪಿಸಿದನು. ಅದೆಲ್ಲಾ ನಾಶವಾಗಿಹೋಯಿತು. ಆಗ ಹಶೀಮನು ಆ ಪರ್ವತದ ಕಡೆಗೆ ಧೈರ್ಯವಾಗಿ ಹೊರಟನು. ಆಗ ಆ ಮುಖ್ಯ ಮಂತ್ರವಾದಿಯು ಇನ್ನೊಂದು ಮಂತ್ರವನ್ನು ಹಾಕಲು ಆ ಪರ್ವತವು ಹಶೀಮನ ಕಂಣಿಗೆ ಶುದ್ಧವಾಗಿ ಕಾಣದಂತೆ ಮಾಯವಾಯಿತು. ಆದರೂ ಅವನು ಹೆದರಿಕೊಳ್ಳದೆ ಅವನೂ ಅವನ ಕಡೆಯವರೂ ಕೂತುಕೊಂಡರು. ಆ ಜನರೂ ಮಂತ್ರವಾದಿಯ ಕಡೇ ಸಾರಿ ಕೆಲಸವನ್ನು ಕಂಡು ಆಶ್ಚರ್ಯಪಟ್ಟರು. ಹಶೀಮನು ತನ್ನ ಬಲವಾದ ಮಂತ್ರವನ್ನು ಪುರಶ್ಚರಣೆ ಮಾಡಿದನು. ಮೂರು ದಿವಸದ ತರುವಾಯ ಪರ್ವತವು ಪುನಃ ಕಾಣಿಸಿತು. ಹಶೀಮನೂ ಅವನ ಜನರೂ ಸಾವಕಾಶ ಮಾಡದೆ ಅದರ ಮೇಲಕ್ಕೆ ಹತ್ತಲು ಆರಂಭಿಸಿದರು. ಆಗ ಕಾಮಲಾಕನ ಕಡೆಯವರು ಬಂದು

ಹಶೀಮನೂ ಅವನ ಜನರೂ ಸಮೀಪಕ್ಕೆ ಬಂದರೆಂದು ತಿಳಿಸಿದರು. ಇದನ್ನು ಕೇಳಿ ಆ ದೊಡ್ಡ ಮಂತ್ರವಾದಿಯು ಕೂಡಲೆ ಆ ಪರ್ವತದ ಶಿಖರದ ಮೇಲೆ ಮೂರು ಸಾವಿರ ಮೊಳ ಎತ್ತರದಲ್ಲಿ ಒಂದು ಮೇಘ ಮಂಡಲವನ್ನು ಮಾಡಿ ಅಲ್ಲಿಗೆ ಕಾಮಲಾಕನೂ ಸಾಂ ಅಹಮರನೂ ತಮ್ಮ ಪರಿವಾರದೊಡನೆ ಮೇಲಕ್ಕೆ ಏರಿಹೋಗಿ ಶತ್ರುಗಳು ಪುರ ಪ್ರವೇಶವನ್ನು ಮಾಡದಂತೆ ಭದ್ರಮಾಡಿದರು. ಹಶೀಮನು ಕಡೆಗೆ ಪರ್ವತಾಗ್ರಕ್ಕೆ ಹೋದನು. ಅಲ್ಲಿ ಒಂದು ದೊಡ್ಡ ಪಟ್ಟಣ ಕಾಣಿಸಿತು. ಅದರೊಳಕ್ಕೆ ಹೋಗಲು, ಅಲ್ಲಿ ಉತ್ತಮವಾದ ಆಹಾರ, ಹಂಣುಗಳು ಅತ್ಯಂತ ರುಚಿಕರವಾದ ಪೇಯಗಳು ನಾಲಿಗೆಗೆ ರುಚಿಕರವಾದ ವಿಶಿಷ್ಟ ಪದಾರ್ಥಗಳು ಇವೆಲ್ಲಾ ಸಿಕ್ಕಿದವು. ಹಶೀಮನ ಜೊತೆಯಲ್ಲಿದ್ದವರು ಕೂಡಲೆ ಅದನ್ನು ತಿನ್ನಲು ಆರಂಭ ಮಾಡಿದರು. ಈ ಹಾಳ ಪದಾರ್ಥಗಳನ್ನು ರುಚಿ ನೋಡಿದ ಕ್ಷಣದಲ್ಲಿಯೇ ಹಿಂದೆ ಮಾಯದ ಸರೋವರದ ಬಳಿಯಲ್ಲಿ ಆದ ಹಾಗೆಯೇ ಅವರೆಲ್ಲರೂ ಊದಿಕೊಂಡುಬಿಟ್ಟರು. ಹಶೀಮನು ತನಗಾಗಿ ಇಂಥಾ ಬಲೆ ಎಲ್ಲವನ್ನೂ ದೊಡ್ಡ ಮಂತ್ರವಾದಿಯು ಒಡ್ಡಿದಾನೆಂದುಕೊಂಡು, ಮೊದಲಿನಂತೆ ಒಂದು ಬಟ್ಟಲು ನೀರನ್ನು ತೆಗೆದುಕೊಂಡು ಅದನ್ನು ಮಂತ್ರಿಸಿ ಆ ಜನರು ಕುಡಿಯಲೆಂದು ಕೊಟ್ಟನು. ಅವರು ಅದನ್ನು ರುಚಿ ನೋಡಿದ ಕ್ಷಣದಲ್ಲಿಯೇ ಆ ಮಂತ್ರದ ಶಕ್ತಿ ಹೋಯಿತು. ಹಾಗೆಯೇ ಅಲ್ಲಿದ್ದ ತಿಂಡೀ ಸಾಮಾನಿನ ಮೇಲೆಯೂ ಊದಿ ತನ್ನ ಜನರನ್ನು ಕುರಿತು—ಈಗ ಆ ತಿಂಡಿಯಲ್ಲಾ ಶುದ್ಧವಾಯಿತು. ನೀವು ಬೇಕಾದಷ್ಟು ತಿನ್ನಬಹುದು, ಎಂದನು. ಅವರ ಕುತ್ತು ಸಮಾಧಾನವಾದ ತರುವಾಯ ಮೇಲೆ ಯಾವ ಕಡೆ ಇರುವ ಮೇಘಮಂಡಲಕ್ಕೆ ಆ ಮಂತ್ರವಾದಿಗಳು ಹೋಗಿದಾರೆಂದು ಕೇಳಿದನು. ಆಗ ಕಾಮಲಾಕನೂ ಅವನ ಶಿಷ್ಯನೂ ಎಲ್ಲದರ ಮೇಲೆ ಗುಬರಿನ ಆಕಾರವಾಗಿ ದೊಡ್ಡದಾಗಿರತಕ್ಕ ಮೇಘದಲ್ಲಿದಾರೆ, ಎಂದು ತಿಳಿಸಿದನು.

ಹಶೀಮನು ತನ್ನ ಮಂತ್ರೋಚ್ಚಾರಣೆಯನ್ನು ಏಳು ಸಾರಿ ಆಕಾಶಕ್ಕೆ ಊದಿದನು. ಆಗ ಆ ಮೇಘವೆಲ್ಲಾ ಆ ಮಂತ್ರವಾದಿಗಳೊಡನೆ ಆ ಪರ್ವತಾಗ್ರದಲ್ಲಿ ಬಿದ್ದು (ದೊಡ್ಡದಾಗಿ) ಸದ್ದಾಯಿತು. ಹಶೀಮನ ಶತ್ರುಗಳು ಇದಕ್ಕಾಗಿ ಬಹಳ ಆಶ್ಚರ್ಯಪಟ್ಟರು. ಇದರಿಂದ ಸುಲಭವಾಗಿ ಅವರು ಹಗೆಗಳ (ವಶರಾದರು). ಅವರ ಅಂಗಗಳು ಮುರಿದು ಹೋದವು. ಅನೇಕರು ಪುಡಿ ಪುಡಿಯಾದರು. ಆ ದುರ್ಮಾರ್ಗರಿಗೆ ನರಕ ಪ್ರಾಪ್ತವಾಯಿತು. ಸಾಂ ಅಹ್ಮರನೂ ಅವನ ಗುರುವೂ ಸ್ವಲ್ಪ ಚೇತರಿಸಿಕೊಂಡು ಎದ್ದು ಪರ್ವತ ಪ್ರಾಂತಕ್ಕೆ ದಿಕ್ಕುಕೆಟ್ಟು ಓಡಿದರು. ಅಕಸ್ಮಾತ್ತಾಗಿ ಅವರು ಪರ್ವತಾಗ್ರದಿಂದ ತಲೆ ಕೆಳಗಾಗಿ ಬಿದ್ದು ಪಾಪಿಷ್ಠರಾದ ತಮ್ಮ ಪ್ರಾಣವನ್ನು ನರಕಕ್ಕೆ ಭಾಗಿಯಾಗುವಂತೆ ಮಾಡಿದರು.

ಹೀಗೆ ತನ್ನ ಶತ್ರುಗಳೆಲ್ಲಾ ಪೂರ್ತಿಯಾಗಿ ಸೋತದ್ದಕ್ಕೆ ಹಶೀಮನಿಗೆ ಎಷ್ಟು ಸಂತೋಷವಾಯಿತೋ ಸುಲಭವಾಗಿ ಊಹಿಸಿಕೊಳ್ಳಬಹುದು. ಅವನು ತಲೆಯಿಂದ ನೆಲವನ್ನು ಮುಟ್ಟಿ ಭಕ್ತಿಯಿಂದ ದೇವರಿಗೆ ನಮಸ್ಕಾರಮಾಡಿ, ತನಗೆ ಜಯವಾಗುವ

ಹಾಗೆ ಮಾಡಿದ್ದಕ್ಕಾಗಿ ದೇವರಿಗೆ ವಂದನೆ ಮಾಡಿದನು. ಇದು ಆದ ಮೇಲೆ ಹಶೀಮನು ಸಾರಮಾಕನನ್ನು ಕುರಿತು—ಅಯ್ಯಾ ಮಿತ್ರ ನಿನಗೆ ಒಂದು ದಾನವನ್ನು ನಾನು ಕೊಡಬೇಕಾಗಿದೆ. ಈ ಮಂತ್ರವಾದಿಗಳನ್ನು ಸೋಲಿಸಿದ ಮೇಲೆ ಅವರ ರಾಜ್ಯವನ್ನು ನಿನಗೆ ಕೊಡುತೇನೆಂದು ವಾಗ್ದಾನ ಮಾಡಿದ್ದೆ. ಇದರಂತೆ ನಡಿಸಲು ನಾನು ಸಿದ್ಧವಾಗಿದೇನೆ. ಆದರೆ ನೀನು ಮಾತ್ರ ಆ ನಿಜವಾದ ಸರ್ವಶಕ್ತನಾದ ಆ ಒಬ್ಬನೇ ಒಬ್ಬ ದೇವರನ್ನು ಹೊರತು ಮತ್ತೆ ಯಾವ ದೇವರನ್ನೂ ಅಂಗೀಕಾರ ಮಾಡಕೂಡದು, ಮತ್ತು ಆವನ ಭಕ್ತರನ್ನು ಯಾವ ಹಿಂಸೆಯೂ ಯಾವ ತೊಂದರೆಯೂ ಇಲ್ಲದಂತೆ ಕಾಪಾಡಬೇಕು. ಈ ರೀತಿಯಲ್ಲಿ ತನ್ನ ಮಿತ್ರನಿಗೆ ಹೇಳಿ ತನ್ನ ಇತರ ಪರಿವಾರದವರನ್ನು ತನ್ನ ಸನ್ನಿಧಿಗೆ ಕರೆಯಿಸಿ ಅವರನ್ನು ಕುರಿತು—ನಾನು ಇಲ್ಲಿ ನಿಮ್ಮೆಲ್ಲರ ಮುಂದೆಯೂ ಸಾರಮಾಕನನ್ನು ಮುಂದಕ್ಕೆ ನಿಮಗೆ ದೊರೆಯಾಗಿರೆಂದು ನೇಮಿಸಿದೇನೆ. ಆವನಿಗೆ ನೀವೆಲ್ಲರೂ ವಿಧೇಯರಾಗಿರಬೇಕು. ಇದರ ಮೇಲೆ ನೀವು ನಿಜವಾದ ಮತ್ತು ಒಬ್ಬನೇ ಒಬ್ಬನಾದ ದೇವರನ್ನು ಅಂಗೀಕಾರ ಮಾಡಿ ಅವನಿಗೆ ನೀವು ಚಾರರೆಂದು ತಿಳಿದು ರಾತ್ರಿ ಹಗಲು ಅವನನ್ನು ಆರಾಧಿಸಬೇಕು. ನೀವು ಪ್ರಾಮಾಣಿಕರಾಗಿದ್ದರೆ ಅವನು ಖಂಡಿತವಾಗಿ ನಿಮಗೆ (ಕರ್ಮಾನುಸಾರವಾಗಿ) ಪ್ರತಿಫಲವನ್ನು ಕೊಡುವನು. ನೀವು ಕ್ಷೇಮವಾಗಿರಿ. ಈ ಮಧ್ಯೆ ನಾನು ಸಾರಿನ್‌ಪೋಷ್ ಎಂಬ ಸೌಂದರ್ಯ (ನಿಧಿ)ಯ ಸಮೀಪಕ್ಕೆ ತ್ವರೆಯಾಗಿ ಹೋಗಬೇಕು, ಎಂದು ಹೇಳಿದನು. ಆಗ ಆ ಜನರೆಲ್ಲರೂ—ಅಯ್ಯಾ ಧೀರನೆ ದೇವರು ನಿನ್ನನ್ನು ಕಾಪಾಡಲಿ. ನಿನ್ನ ಅಪ್ಪಣೆಯಂತೆ ಖಂಡಿತವಾಗಿ ನಾವೆಲ್ಲರೂ ನಡೆದುಕೊಳ್ಳುತೇವೆ ಎಂದು ದೃಢವಾಗಿ ನಂಬು. ನಮ್ಮ ಮೇಲೆ ನೀನು ನೇಮಿಸಿರುವ ದೊರೆಗೆ ಎಂದಿಗೂ ಅವಿಧೇಯವಾಗಿರುವುದಿಲ್ಲ, ಹೀಗೆಂದು ಎಲ್ಲರೂ ಕೂಗಿ ಹೇಳಿದರು.

ಹಿಂದೆ ಮಂತ್ರವಾದಿಯ ಕೈಕೆಳಗೆ ಪ್ರಜೆಗಳಾಗಿದ್ದವರನ್ನು ಬಿಟ್ಟು ಹಶೀಮನು ಮುಂದಕ್ಕೆ ಹೊರಟನು. ಇವನು ಹಗಲು ರಾತ್ರೆ ಸಹಾ ನಡೆಯುತಾ ಮುಂದಕ್ಕೆ ಹೊರಟು ಮಾಯದ ಸರೋವರದ ಬಳಿಗೆ ಬಂದನು. ಅಲ್ಲಿ ಮೊದಲು ತಾನು ಕಂಡಿದ್ದ ಹೆಂಗಸರು ಕೆಲವರನ್ನು ಕಾವಲಿಗಾಗಿ ಇಟ್ಟಿದ್ದರು. ಅವರಲ್ಲಿ ಒಬ್ಬ,

ಕಾವಲುಗಾತಿ—ನೀನು ಯಾರು, ಎಲ್ಲಿಂದ ಬಂದೆ?

ಹಶೀಮ—ನಾನು ಈ ಕಡೆ ಹೋಗುವಾಗ ನಿಮ್ಮಲ್ಲಿ ಕೆಲವು ದಿವಸ ಇದ್ದು ಕಾಲ ಕಳೆದೆ. ನಿಮಗಾದ ಕಾಯಕ್ಲೇಶಕ್ಕೆ ನಾನೂ ಭಾಗಿಯಾಗಿದ್ದೆ. ಆ ಸರೋವರದ ಬಳಿ ಬೆಳೆದು ಜೋಲಾಡುತಿರುವ ಮರದ ಕೊಂಬೆಗಳಿಗೆ ಕೆಲವು ದಿವಸ ನನ್ನ ತಲೆಯನ್ನೂ ತಗಲಹಾಕಿತ್ತು. ನಿಮ್ಮೊಡತಿ ಆ ಸುಂದರಿಯಾದ ರಾಣಿಗೆ ನನ್ನ ವಿನಯದ ನಡತೆಯನ್ನು ತಿಳಿಸಿ.

ಕಾವಲುಗಾತಿ—(ಸುಂದರಿಯಾದ ಕಾವಲುಗಾತಿಯು ತನ್ನೊಡತಿಯ ಬಳಿಗೆ ಹೋಗಿ) ತಾಯಿ, ಹಶೀಮನೆಂಬ ಒಬ್ಬ ತರುಣ ಬಂದು ತಮ್ಮ ಮನೆಯ ಬಾಗಿಲಲ್ಲಿ

ನಿಂತಿದಾನೆ. ಮಂತ್ರಕ್ಕೆ ಸಿಕ್ಕಿದ್ದ ವೇಳೆಯಲ್ಲಿ ಕೆಲವು ದಿವಸ ನಮ್ಮ ಬಳಿಯಲ್ಲಿ ಕಾಲವನ್ನು ಕಳೆದನು. ತಮ್ಮ ಸನ್ನಿಧಾನಕ್ಕೆ ಬರಲು ಅಪ್ಪಣೆಯನ್ನು ಬೇಡುತಿದಾನೆ.

ರಾಣಿಯು ಸ್ವಲ್ಪ ಆಲೋಚಿಸಿ—ಅಷ್ಟು ದಿವಸದಿಂದ ಹತೀಮು ಎಲ್ಲಿ ಹೋಗಿದ್ದ? ಆಹ್ಮರ್ ಪರ್ವತಕ್ಕೆ ಹೋಗಿದ್ದನೆಂದು ನಂಬುತೇನೆ. ನಮ್ಮ ತಂದೆಯು ಸಮಾಚಾರವನ್ನು ಕುರಿತು ಏನಾದರೂ ಹೇಳಿಯಾನು. ಹೋಗಿ ಇದು ನಿಜವೇ ಕೇಳಿ, ಹಾಗಿದ್ದರೆ ಅವನನ್ನು ಒಳಕ್ಕೆ ಬಿಡಿ, ಎಂದು ಅಪ್ಪಣೆ ಮಾಡಿದಳು. ರಾಣಿಯ ಸಮೀಪದಲ್ಲಿದ್ದ ಕನ್ನೆಯು ಬಂದು ವಿಚಾರಿಸಲಾಗಿ, ಅದಕೆಲ್ಲಾ ಒಪ್ಪಿಕೊಂಡು ಹತೀಮನು ಹೇಳಿದ್ದೇನೆಂದರೆ,

ಹತೀಮು—ಆ ಮಂತ್ರವಾದಿಯು ದೇವರಿಗೆ ಭಯಪಟ್ಟವನಲ್ಲ. ಅವನು ಈಗ ನರಕದಲ್ಲಿದಾನೆ. ಅವನು ಮಾಡಿದ ಅನ್ಯಾಯಕ್ಕೆ ಪ್ರತಿಯಾಗಿ ಅನುಭವಿಸುತಿದಾನೆ. ಅವನು ಆಕೃತ್ಯಗಳನ್ನು ಮಾಡುತಾ ಇರುವಾಗಲೇ ಅವನನ್ನು ಛೇದಿಸಿದ್ದಾಯಿತು. ಇದರ ವಿವರವನ್ನು ರಾಣಿಯ ಎದುರಿಗೆ ನಾನು ಹೇಳುತೇನೆ.

ಆ ದಾದಿಯು ಈ ಮಾತನ್ನು ಕೇಳಿ ತಮ್ಮೊಡತಿಯ ಮುಂದೆ ಹತೀಮ ಹೇಳಿದ್ದನ್ನು ಅರಿಕೆ ಮಾಡಿದಳು. ಈ ಕೆಟ್ಟ ವರ್ತಮಾನವನ್ನು ಕೇಳಿ ರಾಣಿಗೆ ಅತ್ಯಂತ ವ್ಯಸನ ಉಂಟಾಯಿತು. ಅವಳ ಕಂಣಿಂದ ಧಾರಾಳವಾಗಿ ನೀರು ಸುರಿಯಿತು. (ಸಮಿಪದಲ್ಲಿದ್ದ) ಸಖಿಯರು—ನಿಮ್ಮ ತಂದೆಯಂಥಾ ತಂದೆಗೆ ದುಃಖಪಡುವುದು ತಪ್ಪು. ಒಂದು ಮಾತು ಖಂಡಿತ, ನಿಮ್ಮ ತಂದೆ ಸಾಯದಿದ್ದರೆ, ಆತನ ಕ್ರೂರವಾದ ಮಂತ್ರದ ನಿರ್ಬಂಧದಲ್ಲಿ ನಾವು ಇನ್ನೂ ಇರಬೇಕಾಗಿತ್ತು. ಈಗಾ ಹತೀಮನನ್ನೂ ಕರೆಯೋಣ, ಆ ಸಂಗತಿಯನ್ನು ಕೇಳೋಣ ಎಂದರು. ಇದಕ್ಕೆ ರಾಣಿ ಒಪ್ಪಿದಳು. ಅವಳ ಇಷ್ಟ ಪ್ರಕಾರ ಹತೀಮನು ಅರಸಿ ಇದ್ದೆಡೆಗೆ ಹೋದನು. ಸಾರಿನ್‌ಪೇಷಳು ಸರ್ವೋತ್ತಮವಾದ ಉಡುಗೆಯನ್ನುಟ್ಟು, ರತ್ನಖಚಿತವಾದ ಪಚ್ಚೆಯ ಸಿಂಹಾಸನದ ಮೇಲೆ ಕೂತುಕೊಂಡಳು.

ಹತೀಮನು ಒಂದು ಸಾರಿ ಆ ರಾಣಿಯನ್ನು ಅವಲೋಕನ ಮಾಡಿದನು. ಅವನ ಬುದ್ಧಿ ಸ್ವಾಧೀನ ತಪ್ಪಿತು. ಚೇತನರಹಿತನಾಗಿ ಕೆಳಕ್ಕೆ ಬಿದ್ದುಬಿಟ್ಟನು. ಜಾಡ್ಯದಂತೆ ತೋರಿದ ಸ್ಥಿತಿಯನ್ನು ಕಂಡು, ಆಕೆ ಆತುರಳಾಗಿ ಎದ್ದು ಬಂದು ಸೀಸೆಯಲ್ಲಿ ಪನ್ನೀರನ್ನು ತರಿಸಿ ಅವನ ಮುಖದ ಮೇಲೆ ಸ್ವಲ್ಪ ಎರಚಿದಳು. ಅವನಿಗೆ ಜ್ಞಾನ ಬಂದ ಮೇಲೆ ಅವನಿಗೆ ರತ್ನಖಚಿತವಾದ ಒಂದು ಆಸನವನ್ನು ತರಿಸಿಹಾಕಿಸಿ ಅವನನ್ನು ಅದರ ಮೇಲೆ ತನ್ನ ಪಕ್ಕದಲ್ಲಿ ಕೂರಿಸಿಕೊಂಡು ಅವನು ಅದುವರೆಗೂ ಕೇಳದಂಥಾ ಅತ್ಯಂತ ಮೃದುವಾದ ಧ್ವನಿಯಲ್ಲಿ ಹತೀಮನ ಪ್ರಯಾಣದ ವಿಚಾರವನ್ನೂ ಅವಳ ತಂದೆಯ ಮರಣದ ವಿಚಾರವನ್ನೂ ಕುರಿತು ಅವನ ಸಂಗಡ ಮಾತನಾಡಲು ಆರಂಭ ಮಾಡಿದಳು.

ಹಕೀಮನು ಸ್ವಲ್ಪವೂ ಮರೆಮಾಚದೆ ತಾನು ನೋಡಿದ್ದು ಮಾಡಿದ್ದು ಅನುಭವಿಸಿದ್ದು ಎಲ್ಲವನ್ನೂ ವಿವರಿಸಿ ಹೇಳಿದ ಬಗೆ ಹೇಗೆಂದರೆ :

ಹಕೀಮ—ಸುಂದರಾಂಗಿಯಾದ ರಾಣಿಯೇ, ನಾನು ನಿನಗೋಸ್ಕರ ಈ ಕಷ್ಟಗಳನ್ನೆಲ್ಲಾ ಅನುಭವಿಸಿದೆ. ನನ್ನ ಪ್ರೀತಿಯ ಫಲವು ಆನಂದಜನಕವಾಗಿದ್ದೀತೆ ಎಂದು ನಿನ್ನ ಸಾಮೀಪ್ಯದ ಆನಂದವು ನನ್ನ ಕಷ್ಟಕ್ಕೆ ಪ್ರತಿಫಲರೂಪವಾಗಿ ಆದೀತೇ ಎಂದು ನಾನು ಕೋರುತೇನೆ. ನೀನಿಲ್ಲದ ಬಾಳಿನಲ್ಲಿ ನಾನು ಇರುವುದಕ್ಕಿಂತಲೂ ಸಾಯುವುದು ಜಾಗ್ರತೆಯಾದರೆ ಸಾಕು. ಆಗ ಸಮೀಪದಲ್ಲಿದ್ದ ದಾದಿಯರು ಎಲ್ಲರೂ ಹಕೀಮನ ಮಾತನ್ನು ಪುಷ್ಟೀಕರಿಸಿ

ದಾದಿಯರು—ಈತನು ಅರಬ್ ದೇಶದ ಪ್ರಸಿದ್ಧನಾದ ದೊರೆ. ಆತನು ಇಲ್ಲಿಗೆ ಬಂದ ದಿವಸ ನಿನಗೆ ಸುದಿವಸ. ನಿಮ್ಮ ತಂದೆಯ ಮರಣದ ವಿಚಾರವನ್ನು ಯೋಚಿಸ ಬೇಡ, ಯಾಕೆಂದರೆ ಆತನು ಮಂತ್ರವಾದಿಯಾಗಿ ಕ್ರೌರ್ಯದಲ್ಲಿಯೂ ಹಿಂಸೆ ಯಲ್ಲಿಯೂ ಆನಂದಪಡುತಾ ಇದ್ದನು. ಈ ಪರಾಕ್ರಮಶಾಲಿಯಾದ ಯೌವನಸ್ಥನು ಇಂಥಾ ರಾಕ್ಷಸನ ಬಾಧೆಯನ್ನು ಪ್ರಪಂಚಕ್ಕೆ ತಪ್ಪಿಸಿದ್ದು ಮನುಷ್ಯರಿಗೆ ಕ್ಷೇಮವಾಯಿತು.

ಹೀಗೆ ದಾದಿಯರು ಅರಿಕೆ ಮಾಡಿದ್ದನ್ನು ಕೇಳಿ ರಾಣಿಯು ಅವರು ಹೇಳಿದ್ದಕ್ಕೆ ಒಪ್ಪಿದಳು. ವಿವಾಹಾಂಗವಾದ ಕಾರ್ಯವೆಲ್ಲಾ ನಡೆದ ಮೇಲೆ ಅವಳು ಹಕೀಮನನ್ನು ಮದುವೆಯಾದಳು. ಆದರೆ ಹಕೀಮನು ಅವಳ ಸಹವಾಸದ ಆನಂದವನ್ನು ಅನುಭವಿಸುವುದಕ್ಕೆ ತರುಣದಲ್ಲಿ ಅಕಸ್ಮಾತ್ತಾಗಿ ಅವನ ಮನಸ್ಸು ಕುಗ್ಗಿಹೋಯಿತು. ಅವನು ಚಿಂತಾಕ್ರಾಂತನಾದನು. ಅಸ್ಸಿರಿಯ ದೇಶದ ದೊರೆಮಗನಾದ ಮುನೀರನ ಜ್ಞಾಪಕ ಬಂತು. ಅವನು ಅನುಭವಿಸುತಾ ಇರುವ ಯಾತನೆಯ ಯೋಚನೆಯು ಹಕೀಮನ ಮನಸ್ಸಿಗೆ ವಿಶೇಷವಾಗಿ ಅಂಟಿ ಅವನ ಶರೀರದಲ್ಲೆಲ್ಲಾ ನಡುಕ ಹುಟ್ಟಿತು. ಅವನ ರಾಜಕನ್ಯೆಯು ಅವನ ಪರೋಪಕಾರವನ್ನು ಕಂಡು ಚಿತ್ತವಿಕಳವಾಗಿ, ಹಕೀಮನ ಆ ಸ್ಥಿತಿಗೆ ತಾನು ಕಾರಣಭೂತಳೆಂದು ಯೋಚಿಸುತಾ ನಿಂತುಕೊಂಡಳು. ರಾಣಿ—ಇಂಥಾ ವಿರಾಗದಿಂದ ನನ್ನನ್ನು ಈತ ಕಾಣಬೇಕಾದರೆ, ಅವನ ದೃಷ್ಟಿಯಲ್ಲಿ ನಾನು ಯಾವ ಅಪರಾಧವನ್ನು ಮಾಡಿದೆ? ಅವನ ಅಸಮಾಧಾನಕ್ಕೆ ಕಾರಣವನ್ನು ಕಂಡು ಹಿಡಿಯಲು ನಾನು ಏನು ಮಾಡಲಿ?

ಹೀಗೆಂದುಕೊಂಡು ರಾಣಿಯು ಏನೂ ತೋರದೇ ಹೋದ್ದರಿಂದ ಸುಮ್ಮನೇ ಇದ್ದಳು. ಕಡೆಗೆ ಹಕೀಮನು ತನ್ನ ವಿಚಿತ್ರವಾದ ನಡತೆಯಿಂದ ಅವಳ* ಮನಸ್ಸು ವಿಕಲ್ಪವಾಯಿತೆಂದು ತಿಳಿದನು. ಕಡೆಗೆ ಅವಳ ವಿಷಯದಲ್ಲಿ ತನಗೆ ಅನುರಾಗವಿಲ್ಲ

* ಹಸ್ತಪ್ರತಿಯಲ್ಲಿ 'ಅಳ' ಎಂದಿದೆ.

ವೆಂಬ ಆಕ್ಷೇಪಣೆಯಿಂದ ನಿವೃತ್ತನಾಗುವುದಕ್ಕಾಗಿ, ಹಿಂದಿನ ಕಥೆಯನೆಲ್ಲಾ ಅವಳಿಗೆ ವಿವರಿಸಲು ನಿಶ್ಚರ್ಯ ಮಾಡಿಕೊಂಡನು.

ಹತೀಮು—ನನ್ನ ಪ್ರಾಣವೇ, ನನ ಜೀವವೇ ಯಾಕೆ ಇಳಿದುಹೋದೆ? ಸೂರ್ಯಚಂದ್ರರಿಬ್ಬರೂ ಯಾಕೆ ಮಂಕಾದರು? ನನ ಪ್ರೀತಿಯೆ, (ಹೇಳುತೇನೆ) ತಿಳಿದುಕೊ. ಅಸ್ಸಿರಿಯ ದೇಶದ ರಾಜಕುಮಾರನಾದ ಮುನೀರ್ ಎಂಬುವನಿಗಾಗಿ ನಾನು ನನ್ನ ರಾಜ್ಯವನ್ನು ಬಿಟ್ಟೆ. ಅವನು ಹಸನ್‌ಬನು ಎಂಬುವಳಲ್ಲಿ ಅತಿಯಾಗಿ ಮೋಹಗೊಂಡಿದಾನೆ. ಆ ಸ್ತ್ರೀಯು ಏಳು ಪ್ರಶ್ನೆಗಳನ್ನು ಹಾಕಿದಾಳೆ. ಅದಕ್ಕೆ ಯಾವನು ಅರ್ಥ ಮಾಡುತಾನೆಯೋ ಅಂಥವನಿಗೆ ಅವಳ ಸುಂದರವಾದ ಹಸ್ತವು ಪಾರಿತೋಷಕವಾಗುವುದು. ಅಸ್ಸಿರಿಯ ದೇಶದ ರಾಜಪುತ್ರನು (ಅದಕ್ಕೆ ಅರ್ಥ ಮಾಡಲು) ಯತ್ನಮಾಡಿದ. ನಿಷ್ಪ್ರಯೋಜನವಾಯಿತಾದ ಕಾರಣ ಅಲ್ಲೆಲ್ಲಿಯೋ ಅಲೆಯುತಿದ್ದ, ನಾನು ಅರಬಸ್ಥಾನದ ಕಾಡಿನಲ್ಲಿ ಅವನನ್ನು ಕಂಡೆ. ಷಹಾಬಾದಿಗೆ ಹಿಂತಿರುಗಿ ಬಂದು ಆ ಪ್ರಶ್ನೆಗಳಿಗೆಲ್ಲಾ ಅರ್ಥಮಾಡುತೇನೆಂದು ಒಪ್ಪಿಕೊಂಡೆ. ಈಗ ಆ ಮಿತ್ರನು ಆ ಪಟ್ಟಣದ ಒಂದು ಕಾರಾವಾನ್‌ಸಿರೈನಲ್ಲಿ ವಾಸವಾಗಿದಾನೆ. ನಾನು ದೇಶಾಟನ ಮಾಡಿ ಮೂರು ಒಗಟುಗಳಿಗೆ ಅರ್ಥಮಾಡಿದೆ. ಈಗ ನಾಲ್ಕನೇದಕ್ಕಾಗಿ ಹುಡುಕಿಯಾಡುತಿದೇನೆ. ನಾನು ನಿನ್ನನ್ನು ಕಂಡ ಕೂಡಲೆ ನಾನು ನನ್ನನ್ನು ಮರೆತು ಪ್ರಪಂಚವನ್ನೇ ಮರೆತುಬಿಟ್ಟೆ. ಈಗ ದೇವರ ಕಲಾಕ್ಷವು ಪ್ರೇಮಬಂಧದಿಂದ ಕಟ್ಟಿದ್ದರಿಂದ, ಆಶಾಭಂಗವಾಗಿರುವ ನನ್ನ ಮಿತ್ರನ ಯೋಚನೆಯು ನನ್ನ ಮನಸ್ಸನ್ನು ಕಲಕಿತು. ಅಸ್ಸಿರಿಯ ದೇಶದ ರಾಜಪುತ್ರನಿಗೆ ಅನುಕೂಲವಾಗುವ ಹಾಗೆ ಮಾಡಲು ನನ್ನ ಕೈಲಾದ್ದನ್ನೆಲ್ಲಾ ಮಾಡಬೇಕೆಂದು ಹರಕೆ ಹೊತ್ತಿದೇನೆ. ಅವನ ಇಷ್ಟಪೂರ್ತಿಯಾಗುವ ತನಕ ಈ ಪ್ರಾಪಂಚಿಕ ಸಂಬಂಧವಾದ ಯಾವ ಆನಂದವೂ ನನಗೆ ಬೇಕಾಗಿಲ್ಲ. ತನಗೆ ಉತ್ತರೋತ್ತರವೇನಾದರೂ ಆದೀತೆ ಎಂದು ಅವನು ಸಂಕಟಪಡುತಿರುವಾಗ ನಾನು ನನ್ನ ಆನಂದವನ್ನು ನೋಡಿಕೊಳ್ಳತಕ್ಕದ್ದು ಬಹಳ ಅಕ್ರಮ. ಆದ್ದರಿಂದ ಕರಂ ಎಂಬ ಪಟ್ಟಣಕ್ಕೆ ನಾನು ಈ ಕೂಡಲೆ ಹೊರಡಬೇಕು.

ರಾಣಿ—ಈ ಮಧ್ಯೆ ನನ್ನ ಗತಿಯೇನಾಗಬೇಕು?

ಹತೀಮು—ನಮ್ಮ ತಂದೆಯು ದೊರೆಯಾಗಿರುವ ಯೇಮನ್ ಎಂಬುವ ನನ್ನ ಸ್ವದೇಶಕ್ಕೆ ಕರೆದುಕೊಂಡು ಹೋಗಬೇಕೆಂದು ಇದೇನೆ.

೨ನೇ ಅಧ್ಯಾಯ

ಈ ಪ್ರಕಾರ ಹತೀಮನು ತನ್ನ ಪತ್ನಿಯನ್ನು ಅವಳ ಪರಿವಾರದವರನ್ನು ಅರಬಸ್ಥಾನದಲ್ಲಿ ತನ್ನ ತಂದೆಯ ರಾಜ್ಯಕ್ಕೆ ಕಳುಹಿಸಿ ತಾನು ಕರಂ ಎಂಬ ಪಟ್ಟಣಕ್ಕೆ ಹೊರಟನು. ಅಲ್ಲಿ ಕೆಲವು ಜನರನು ಕಂಡು

ಹಶೀಮು—ಅಪ್ಪ ಮಿತ್ರರ, "ನಿಶ್ಚಯವನ್ನು ಹೇಳತಕ್ಕವನು ಯಾವಾಗಲೂ ಸಮಾಧಾನ ವಾಗಿರುತಾನೆ" ಎಂಬದಾಗಿ ಕೂಗುತಾ ಇರುವ ಮನುಷ್ಯ ಈ ಪೂರದಲ್ಲಿದಾನೆಯೆ? ಹೇಳಬಲ್ಲಿರ?

ಪುರನಿವಾಸಿಗಳು—ಅಯ್ಯಾ ಆಗಂತುಕನೆ, ನೀನು ಕೇಳತಕ್ಕಂಥಾ ಮನುಷ್ಯ ನಿಜ ವಾಗಿಯೂ ಇಲ್ಲಿ ಯಾರೂ ಇಲ್ಲ. ಆದರೆ ಒಬ್ಬ ಮನುಷ್ಯ ಮಾತ್ರ ಇದಾನೆ, ಅವನು ಮುಪ್ಪಿನ ಮುದುಕ. ಅವನು ತನ್ನ ಮನೇ ಬಾಗಿಲ ಮೇಲಗಡೆ ಈ ಮಾತನ್ನು ಬರೆದಿದಾನೆ, ಇದನ್ನು ನಾವು ಬಲ್ಲೆವು.

ಹಶೀಮು—ಅವನು ಎಲ್ಲಿ ವಾಸವಾಗಿದಾನೆ ಹೇಳಬಲ್ಲಿರ?

ಪುರನಿವಾಸಿಗಳು—ಹಳೇ ಕರಂ ಎಂಬ ಗ್ರಾಮದಲ್ಲಿ ಅವನು ವಾಸವಾಗಿದಾನೆ. ಆ ಸ್ಥಳವು ಇಲ್ಲಿಗೆ ಮೂರು ಹರದಾರಿ ಇದೆ. ಅಲ್ಲಿಯೇ ಕರಂ ಎಂಬ ಪಟ್ಟಣವು ಮೊದಲು ಇದ್ದದ್ದು.

ಹಶೀಮನು ಆಗಲೇ ಹೊರಟು ಮೂರನೇ ಜಾವದೊಳಗಾಗಿ ಹಳೇ ಕರಂ ಎಂಬ ಗ್ರಾಮಕ್ಕೆ ಬಂದನು. ಅಲ್ಲಿ ಒಂದು ಉತ್ತಮವಾದ ಉಪ್ಪರಿಗೆ ಕಾಣಿಸಿತು. ಅದರ ಬಾಗಿಲ ಮೇಲೆ ಆ ಒಗಟಿಯ ಮಾತೇ ಬರೆದಿತ್ತು. ಆ ಬಾಗಿಲಿಗೆ ಹೋಗಿ ಹಶೀಮನು ಕದವನ್ನು ತಟ್ಟಿದನು. ಒಳಗಿನಿಂದ-ವಿದೇಶಿಯೆ, ಎಲ್ಲಿಂದ ಬಂದೆ, ಇಲ್ಲಿ ನಿನಗೆ ಯೇನು ಕೆಲಸ, ಎಂಬ ಧ್ವನಿ ಕೇಳಿತು. ಅದಕ್ಕೆ ಹಶೀಮನು-ನಾನು ಷಹಾಬಾದಿನಿಂದ ಬಂದಿದೇನೆ. ಈ ಮನೆಯ ಯಜಮಾನನೊಡನೆ ನನಗೆ ಕೆಲಸವಿದೆ, ಎಂದನು, ದ್ವಾರಪಾಲಕನು ಓಡಿ ಹೋಗಿ ಈ ಸುದ್ದಿಯನ್ನು ತಿಳಿಸಲು, ಸಾವಕಾಶ ಮಾಡದೆ ಅವನನ್ನು ಒಳಕ್ಕೆ ಬಿಡುವುದೆಂದು ಅಪ್ಪಣೆಯಾಯಿತು.

ವಯಸ್ಸಾದಂಥಾ ಆ ಮನೇ ಯಜಮಾನನು ಹಶೀಮನನ್ನು ಮರ್ಯಾದೆಯಿಂದ ಕಂಡು ನೀರನ್ನೂ ಆಹಾರವನ್ನೂ ಅವನಿಗೆ ಕೊಟ್ಟು ಆದರಿಸಿದನು. ಆ ಪ್ರಕಾರ (ಹಶೀಮನು) ಹೊಟ್ಟೆಗೆ ಆಧಾರ ಮಾಡಿಕೊಂಡು ವಿಶ್ರಾಂತಿಯನ್ನು ಹೊಂದಿದ ತರುವಾಯ, ಆ ಯಜಮಾನನು ಹೇಳಿದ್ದು,

ಯಜಮಾನ—ಅಯ್ಯ ವಿದೇಶಿ, ಹೇಳ್ಳೈ, ಇಲ್ಲಿಗೆ ಪ್ರಯಾಣ ಮಾಡಿ ಬಂದ ಕಾರಣ ವೇನು? ಯಾವ ದೇಶದಿಂದ ಬಂದೆ? ಇಬ್ಬರಿಗಿಂತಲೂ ಹೆಚ್ಚಾಗಿ ಈ ದೇಶಕ್ಕೆ ಬಂದದ್ದೇ ತಿಳಿಯದು. ಆ ಇಬ್ಬರಲ್ಲಿ ನೀನು ಒಬ್ಬ.

ಹಶೀಮು—ಅಯ್ಯಾ ವೃದ್ಧಶ್ರೇಷ್ಠನೆ, ನಾನು ಯೇಮನ್ ದೇಶದವನು. ನಾನು ಇಲ್ಲಿಗೆ ಷಹಾಬಾದ್ ಎಂಬ ಪಟ್ಟಣದಿಂದ ಬಂದೆ. ಅಲ್ಲಿ ಅಸ್ಸೀರಿಯ ದೇಶದ ದೊರೆ ಮಗನಾದ ಮುನೀರ್ ಎಂಬುವನು ವಾಸವಾಗಿದಾನೆ. ಆ ಪೂರ ರಾಣಿ ಯಾದ ಹಸನ್‌ಬನು ಎಂಬುವಳಲ್ಲಿ ಈ ತರುಣನು ಅತ್ಯಂತ ವ್ಯಾಮೋಹ ಉಳ್ಳವನಾಗಿದಾನೆ. ಆ ಸುಂದರಿಯು ಹೇಳಿರುವ ಏಳು ಒಗಟೆಗಳಿಗೆ ಉತ್ತರ

ವನ್ನು ಸಂಪಾದನೆ ಮಾಡಿದ ಹೊರತು ಅವನಿಗೆ ಇಷ್ಟಾಪತ್ತಿಯಾಗುವುದಿಲ್ಲ. ಮೂರು ಪ್ರಶ್ನೆಗಳಿಗೆ ನಾನು ಉತ್ತರವನ್ನು ಹೇಳಿದೆ. ಈಗ ನಾಲ್ಕನೇದಕ್ಕೆ (ಉತ್ತರವನ್ನು) ಹುಡುಕುತಾ ಇದೇನೆ (ಆ ನಾಲ್ಕನೇ) ಒಗಟೆಯು ನಿಮ್ಮ ಮನೇ ಬಾಗಿಲ ಮೇಲೆ ಬರೆದಿದೆ.

ಯಜಮಾನ—(ಹತೀಮ ಹೇಳಿದ ಮಾತಿಗೆ ಸಂತೋಷಪಟ್ಟು) ಅಯ್ಯಾ ಧೈರ್ಯಶಾಲಿ, ನೀನು ನಿಜವಾಗಿ ಗಾಂಭೀರ್ಯ ಉಳ್ಳವನು. ಪ್ರಪಂಚದಲ್ಲಿ ನಿನ್ನ ಖ್ಯಾತಿಯು ನಿನ್ನ ತರುವಾಯ ಬಹುಕಾಲ ನಿಲ್ಲುವದು. ಪರರಿಗಾಗಿ ನಿನ್ನ ಹಾಗೆ ಇಷ್ಟು ಕಷ್ಟವನ್ನು ಪಡತಕ್ಕ ಮನುಷ್ಯ ಇಲ್ಲ. ಈ ದಿವಸ ಬಹುದೂರದಿಂದ ಬಂದಿದೀಯೆ. ಈ ದಿನ ರಾತ್ರೆ ನೀನು ವಿಶ್ರಾಂತಿ ಹೊಂದುವುದು ಯುಕ್ತವಾಗಿದೆ. ನನ್ನ ಮನೇ ಬಾಗಿಲ ಮೇಲೆ ಬರೆದಿರುವ ಮಾತಿನ ಸಂದರ್ಭವನ್ನು ನಾನು ನಾಳೆ ನಿನಗೆ ವಿವರಿಸಿ ಹೇಳುತೇನೆ.

ಹತೀಮ—ಆದರದಿಂದ ತಾವು ಹೇಳಿದ ಮಾತಿನ ಪ್ರಕಾರ ನಡೆದುಕೊಳ್ಳಲು ಒಪ್ಪಿದೆ. ಆದರೆ ಒಂದು ಮಾತನ್ನು ಮಾತ್ರ ತಮ್ಮನ್ನು ಕೇಳಬೇಕಾಗಿದೆ. ಕರಂನಲ್ಲಿದ್ದ ಜನರೆಲ್ಲಾ ತಮಗೆ ವಯಸ್ಸು ಬಹಳವಾಗಿದೆ ಎಂದು ನನ್ನೊಡನೆ ಹೇಳಿದರು. ಆದಾಗ್ಯೂ ನಿಮಗೆ ಪೂರ್ವವಯಸ್ಸು ಮೀರಿ (ಸ್ವಲ್ಪ ದಿವಸವಾಗಿ)ದೆ ಎಂದು ನನಗೆ ತೋರುತ್ತಿದೆ. ಆದರೂ ತಮ್ಮ ತಲೆಯ ಕೂದಲು ಒಂದೂ ನರೆತಿಲ್ಲವಲ್ಲಾ ಹಾಗಾದರೆ ಜನರು ಹೇಳುವ ಹಾಗೆ ಕರಂಪಟ್ಟಣ ಈ ಸ್ಥಳದಲ್ಲಿದ್ದಾಗಿನಿಂದ ನೀವು ಬದುಕಿದ್ದೀರಿ ಎನ್ನುವುದು ನಿಜವೆ?

ಯಜಮಾನ—ಧೀರನಾದ ಹತೀಮ, ಈ ರಾತ್ರೆ ಮಲಗಿಕೊ, ನೀನು ಕೇಳುವ ಸಂಗತಿ ಯೆಲ್ಲಾ ನಾಳೆ ನಿನಗೆ ಪೂರ್ತಿಯಾಗಿ ತಿಳಿಯುವುದು.

ಹತೀಮನು ಆ ಪ್ರಕಾರ ವಿಶ್ರಾಂತಿಯನ್ನು ಹೊಂದಿ ಆನಂದವಾಗಿ ನಿದ್ರೆ ಮಾಡಿ ದನು. ಬೆಳಗಾದ ಮೇಲೆ ಎದ್ದು ಆತಿಥ್ಯವನ್ನು ಹೊಂದಿ, ಮುನ್ನಾ ದಿವಸದ ವಿಷಯ ವನ್ನು ಪುನಃ ಪ್ರಸ್ತಾಪಿಸಿದನು.

ಯಜಮಾನ—ಹಾಗಾದರೆ ಕೇಳ್ಳೈ ಹತೀಮ, ಕರಂ ಪಟ್ಟಣ ಇಲ್ಲಿದ್ದು ಏಳನೂರು ವರುಷ ವಾಯಿತು. ನಾನು ಹೇಗೆ ಕಾಣಿಸಿದಾಗ್ಯೂ ನನ್ನ ನಿಜವಾದ ವಯಸ್ಸು ಎಂಟು ನೂರುವರುಷ. ನನ್ನ ಯೌವನದಲ್ಲಿ ನಾನು ಜೂಜಾಡತಕ್ಕವನಾಗಿದ್ದೆ. ಹಗಲು ರಾತ್ರೆಯೂ ನನ್ನ ಕೆಲಸ ಜೂಜಾಡುವುದೇ. ಒಂದು ದಿವಸ ನನ್ನ ಅದೃಷ್ಟವು ನನ್ನ ಕೈಬಿಟ್ಟಿತು. ನನ್ನಲ್ಲಿದ್ದುದೆಲ್ಲವನ್ನೂ ಸೋತುಬಿಟ್ಟೆ. ಈ ರೀತಿಯಲ್ಲಿ ನಿರ್ಗತಿಕನಾಗಿ ಕಂಡಹಾಗೆಯೋ ಕಾಣದ ಹಾಗೆಯೋ ಅನುಕೂಲವಾದ ಹಾಗೆ ಕಳ್ಳತನ ಮಾಡಲು ಕತ್ತಲೆಯಾದೊಡನೆಯೇ ತೆರಳಿದೆ. ಬಡವರನ್ನೂ ನಿರ್ಗತಿಕರನ್ನೂ ಮುತ್ತುವುದರಿಂದ ಕಷ್ಟಕ್ಕೆ ತಕ್ಕಷ್ಟು ದೊರೆಯುವುದಿಲ್ಲವೆಂದು

ನಾನು ಯೋಚಿಸಿ, ನಮ್ಮ ದೊರೆಯ ಅರಮನೆಗೆ ನುಗ್ಗಬೇಕೆಂದು ಗೊತ್ತು ಮಾಡಿಕೊಂಡೆ. ಮೆಲ್ಲಗೆ ದೊರೇ ಮನೇಗೋಡೆ ಸಮೀಪಕ್ಕೆ ಹೋದೆ. ಹಗ್ಗದ ಏಣಿಯನ್ನು ಒಂದು ಕಿಟಿಗಿಗೆ ಕಟ್ಟಿದೆ. ನಿಶ್ಶಬ್ದವಾದ ಮೇಲೆ ಒಂದು ತೊಟ್ಟಿಗೆ ಪ್ರವೇಶ ಮಾಡಿದೆ. ಅಲ್ಲಿ ರಾಜಪುತ್ರಿಯು ಮಲಗಿ ನಿದ್ರೆ ಮಾಡುತಿದ್ದಳು. ಆ ತೊಟ್ಟಿಯ ಹೊರಗಡೆಯಲ್ಲಿ ಯುವತಿಯಾದ ಆ ರಾಣಿಯ ದಾದಿಯರೆಲ್ಲಾ ಜ್ಞಾನವಿಲ್ಲದೆ ಗಾಢನಿದ್ರೆಯಲ್ಲಿ ಮಲಗಿದ್ದರು. ಅವಳ ರತ್ನಖಚಿತವಾದ ಒಡವೆಗಳನ್ನು ಚಿನ್ನದೊಡವೆಗಳನ್ನೂ ಅವಳ ಪಕ್ಕದಲ್ಲಿ ಉರಿಯುತಾ ಇದ್ದ ಚಿನ್ನದ ದೀಪಸ್ತಂಭವನ್ನು ತೆಗೆದುಕೊಂಡು ಯಾರೂ ಕಾಣದ ಹಾಗೆ ಅರಮನೆಯಿಂದ ತಪ್ಪಿಸಿಕೊಂಡು ಓಡಿಬಂದೆ. ಓಡಿಬರುತಾ ಒಂದು ಕಾಡಿಗೆ ಬಂದೆ. ಅಲ್ಲಿ ಒಂದು ಕಳ್ಳರ ಗುಂಪಿನವರು ಸಿಕ್ಕಿದರು. ತಾವು ಕಳವು ಮಾಡಿತಂದ ಸಾಮಾನುಗಳನ್ನು ಹಂಚಿಕೊಳ್ಳುವುದರಲ್ಲಿ ಬಹು ಸಂಭ್ರಮವಾಗಿದ್ದರು. ಅವರು ನನ್ನನ್ನು ಕಂಡಕ್ಷಣದಲ್ಲಿಯೇ—ಎಲ ಮಾರ್ಗಸ್ಥ ನಿಂತುಕೋ; ನೀನು ಯಾರು ಹೇಳು, ಎಲ್ಲಿಂದ ಬಂದೆ? ಎಂದು ಕೂಗಿದರು. ನನ್ನ ಪೂರ್ವಕಥಾ ವೃತ್ತಾಂತವನ್ನೂ ನಾನು ದೊರೆಯ ಅರಮನೆಗೆ ನುಗ್ಗಿದ್ದನ್ನೂ, ರಾಜಪುತ್ರಿಯ ಜವಾಹಿರನ್ನು ಹೊತ್ತುಕೊಂಡುಹೋದ್ದನ್ನೂ ಆ ಕಳ್ಳರಿಗೆ ಹೇಳಿದೆ. ಅವರ ಆಶ್ಚರ್ಯಕ್ಕೆ ನಾನು ಅವರಿಗೆ ಒಂದು ದೊಡ್ಡ ಕೆಂಪನ್ನು ಅವರಿಗೆ ತೋರಿಸಿದೆ. ಅವರ ದುರಾಶೆಯ ಬಾಯಿನ ಹರಿತ ಹೆಚ್ಚಾಯಿತು. ಅವರು ಬಲವಂತವಾಗಿ ಆ ನಗಗಳನ್ನು ಕಿತ್ತುಕೊಳ್ಳಬೇಕೆಂದಿದ್ದರು. ಕಾಡಿನಿಂದ ಒಬ್ಬ ರಾಕ್ಷಸನ ಧ್ವನಿಯ ಹಾಗೆ ಭಯಂಕರವಾದ ಧ್ವನಿ ಕೇಳಿಬಂತು. ಆ ಧ್ವನಿಗೆ ನಾವು ನಿಂತಿದ್ದ ನೆಲ ನಡುಗಿಹೋಯಿತು. ಕಳ್ಳರು ಭೀತರಾಗಿ ಓಡಿಹೋದರು. ನಾನು ನಿಂತಿದ್ದ ಕಡೆಯಲ್ಲಿಯೇ ಅಳ್ಳಾಡದೆ ನಿಂತಿದ್ದೆ.

ಈ ಕೂಗನ್ನು ಕೂಗಿದ ಮನುಷ್ಯನು ನನ್ನ ಸಮೀಪಕ್ಕೆ ಬಂದು—ನೀನು ಯಾರು, ಎಲ್ಲಿಂದ ಬಂದೆ? ನಿಶ್ಚಯ ಹೇಳು, ಎಂದು ನಿಷ್ಠುರವಾಗಿ ಕೇಳಿದ. ನನ್ನ ಕೆಟ್ಟ ಬಾಳಿನ ಪ್ರತಿಸಂಗತಿಯನ್ನು ಹೇಳಿ ಅವನಿಗೆ ನಾನು ಅನ್ಯಾಯವಾಗಿ ಸಂಪಾದಿಸಿದ್ದ ವಸ್ತುಗಳನ್ನೂ ಆ ಬೆಲೆಯಾದ ಕೆಂಪನ್ನೂ ಕೂಡ ಮರೆಮಾಚದೆ ತೋರಿಸಿದೆ. ಆಗ ಅವನು—ನೀನು ನನ್ನೊಡನೆ ನಿಶ್ಚಯ ಹೇಳಿದ್ದೀಯೆ, ನಿನಗೆ ಒಳ್ಳೇದಾಯಿತು. ನಿನ್ನ ಅಪರಾಧಗಳನ್ನೆಲ್ಲಾ ಕ್ಷಮಿಸಿದೇನೆ. ಈ ಭಂಡಾರವನ್ನೆಲ್ಲಾ ನೀನೇ ಅನುಭವಿಸಿಕೊ. ಇನ್ನು ಮುಂದಕ್ಕೆ ಜೂಜಾಡುವುದಿಲ್ಲವೆಂದು ಪ್ರಮಾಣ ಮಾಡಿಕೊಡು, ಎಂದು ಹೇಳಿದನು. ದೇವರ ಸಾನ್ನಿಧ್ಯದಲ್ಲಿಯೂ ಆ ಬಲಿಷ್ಠನಾದ ಪುರುಷನ ಸಾನ್ನಿಧ್ಯದಲ್ಲಿಯೂ ನಾನು ಎಂದೆಂದಿಗೂ ಜೂಜಾಡುವುದಿಲ್ಲವೆಂದು ಪ್ರಮಾಣಮಾಡಿದೆ. ಆಗ ಆ ವಿಚಿತ್ರವಾದ ಗುರುವು—ನಿನ್ನ ಪ್ರಮಾಣದಂತೆ ನಡೆ, ನಿನ್ನ ಆಯುಸ್ಸು ಒಂಭೈನೂರು ವರುಷದ ವರೆಗೆ ಹೋಗುವುದು ಎಂದನು. ಒಬ್ಬರನ್ನು ಬಿಟ್ಟು ಒಬ್ಬರು ಪರಸ್ಪರ ಅಗಲಿದೆವು.

ನಾನು ಈ ಸ್ಥಳಕ್ಕೆ ಬಂದೆ. ಆಗ ಈ ಊರು ಜನಭರಿತವಾಗಿತ್ತು. ನನಗೆ ಉಳಿದಿದ್ದ ಹಣದಲ್ಲಿ ಈ ಉಪ್ಪರಿಗೆಯನ್ನು ಕಟ್ಟಿದೆ. ನನ್ನ ಪೂರ್ವದ ಪರಿಚಿತರು ನನ್ನ ಐಶ್ವರ್ಯ ವನ್ನು ಕಂಡು ಅಸೂಯೆಪಟ್ಟು, ಆ ಪಟ್ಟಣದ ಅಧಿಕಾರಿಯನ್ನು ಕುರಿತು, ನಾನು ಕಡೆ ಕಡೇವರೆಗೆ ಬಡವನಾಗಿದ್ದನೆಂಬದಾಗಿಯೂ, ರಾಜಕುಮಾರನಿಗೆ ಇರುವಂಥಾ ದೊಡ್ಡ ಅರಮನೆಯನ್ನು ಕಟ್ಟುವ ಹಾಗೆ ವಿಶೇಷವಾದ ಹಣ ನನ್ನಲ್ಲಿದೆ ಎಂಬುದಾಗಿಯೂ ಅಷ್ಟು ಹಣವನ್ನು ಪ್ರಾಮಾಣಿಕನಾಗಿದ್ದು ನಾನು ಸಂಪಾದಿಸಿರಲಾರನೆಂತಲೂ ತಿಳಿಸಿದರು. ಆ ಅಧಿಕಾರಿಯು ನನ್ನನ್ನು ಕರೆಯಿಸಿ ಕೇಳಿದನು. ಅವನ ಮುಂದೆ ಸ್ವಲ್ಪವೂ ಮರೆಮಾಚದೆ ಎಲ್ಲವನ್ನೂ ವಿವರವಾಗಿ ಹೇಳಿದೆ. ಇದನ್ನು ಕೇಳಿ ಆ ಅಧಿಕಾರಿಯೂ ನನ್ನನ್ನು ದೊರೆಯ ಬಳಿಗೆ ಕರೆದುಕೊಂಡು ಹೋದ. ಆ ರಾಜನಿಗೆ ವಿಶೇಷವಾಗಿ ಕೋಪೋದ್ರೇಕವಾಗುವಂತೆ ಮಾಡಿದ್ದನಷ್ಟೆ.

ಆ ದೊರೆಯ ಮುಂದೆಯೂ ನಾನು ಇದ್ದ ನಿಶ್ಚಯವನ್ನೆಲ್ಲಾ ಹೇಳಿಬಿಟ್ಟೆ. ಅವನು ಕೊನೆಯವರೆಗೂ ಕೇಳಿ ನನ್ನ ಅಪರಾಧವನ್ನು ಧಾರಾಳವಾಗಿ ಕ್ಷಮಿಸಿ ಆ ವಿಷಯದಲ್ಲಿ ಯಾರೂ ನನ್ನನ್ನು ತಿರಸ್ಕಾರಭಾವದಲ್ಲಿ ಕಾಣಕೂಡದೆಂದು ಖಂಡಿತ ವಾದ ಅಪ್ಪಣೆಯನ್ನು ಮಾಡಿದನು. ಮತ್ತು ಆ ದೊರೆ ಹೇಳಿದ್ದೇನೆಂದರೆ: "ಈ ಮನುಷ್ಯನು ಉದ್ದಕ್ಕೂ ನಿಶ್ಚಯವನ್ನೇ ಹೇಳಿದಾನೆ. ಆದ್ದರಿಂದ ನನ್ನ ಕ್ಷಮೆಗೆ ಇವನು ಅರ್ಹನಾಗಿದಾನೆ. ಇವ ಮಾಡಿದ ಹಾಗೆ ತನ್ನ ಅಪರಾಧವನ್ನು ಧೈರ್ಯವಾಗಿ ಒಪ್ಪಿಕೊಂಡಂಥಾ ಕಲ್ಲೆದೆಯ ಕಳ್ಳನನ್ನು ನಾನು ಇದುವರೆಗೆ ನೋಡಲೂ ಇಲ್ಲ. ಅಂಥವನ ಸಂಗತಿಯನ್ನು ನಾನು ಇದುವರೆಗೆ ಕೇಳಲೂ ಇಲ್ಲ." ನಾನು ಕದ್ದದನ್ನೆಲ್ಲಾ ದೊರೆಯು ನನಗೇ ಕೊಟ್ಟದ್ದೂ ಅಲ್ಲದೆ ಮೇಲೆ ಬೇಕಾದಷ್ಟು ದ್ರವ್ಯವನ್ನು ಕೊಟ್ಟನು. ಅದು ಇನ್ನೂ ವೆಚ್ಚವಾಗದೆ ಹಾಗೆಯೇ ಇದೆ. ಆ ದಿವಸ ನಾನು ದೊರೇಮನೆಯಿಂದ ಬಂದ ತರುವಾಯ, ಅದನ್ನು ನೋಡಿದವರಿಗೆಲ್ಲಾ ಎಚ್ಚರಿಕೆಗಾಗಿ, ನನ್ನ (ಮನೆಯ) ಬಾಗಿಲ ಮೇಲೆ ''ನಿಶ್ಚಯ ಹೇಳತಕ್ಕವನು ಯಾವಾಗಲೂ ಸುಖವಾಗಿರುತಾನೆ'' ಎಂದು ಬರೆದೆ.

ಹೀಗೆ ಸತ್ಯವಾದಿಯು ತನ್ನ ಕಥೆಯನ್ನು ಹೇಳಿ ಮುಗಿಸಿ ಹತೀಮನನ್ನು ಕುರಿತು—ಅಯ್ಯಾ ಉದಾರಿಯೆ, ನೀನು ನನ್ನ ಚರಿತ್ರೆಯನ್ನು ಕೇಳಿದೆಯಷ್ಟೆ. ನಾನು ಇಷ್ಟರಮಟ್ಟಿಗೆ ನಿನ್ನ ಸೇವೆಯನ್ನು ಮಾಡಿದೆನಲ್ಲಾ ಎಂದು ನಾನು ನಿಜವಾಗಿ ಆನಂದ ಪಡುತೇನೆ. ಅಯ್ಯಾ, ಗಂಭೀರವಾದ ಹತೀಮನೆ, ಇಲ್ಲಿಂದ ಅರಬಸ್ಥಾನದವರೆಗೆ ಪ್ರಯಾಣ ಮಾಡಿಕೊಂಡು ಹೋಗತಕ್ಕ ಕಷ್ಟವನ್ನೂ ಆಯಾಸವನ್ನೂ ಸಹಿಸತಕ್ಕವರು ನೀನು ಹೊರತು ಇನ್ನು ಯಾರೂ ಇಲ್ಲ ಎಂದು ಆ ವೃದ್ಧನು ಸ್ತೋತ್ರ ಮಾಡಿದನು. ಕೆಲವು ದಿವಸದ ಮೇಲೆ ಹತೀಮನು ಆ ವೃದ್ಧನ ಅನುಜ್ಞೆಯನ್ನು ಪಡೆದು ಷಹಾಬಾದಿಗೆ ಹೊರಟನು. ಹೋಗುತಾ ಇರುವಾಗ ದಾರಿಯಲ್ಲಿ ತನ್ನ ಮನದಿನಿಯ ಳಾದ ಸಾರಿನ್‌ಪೇಷಳ ಮೇಲೆ ಯೋಚನೆ ಹೋಗಿ ಸದಾ ಇವನ ಮನಸ್ಸನ್ನು ಅವಳು

ಆಕ್ರಮಿಸಿದಳು. ಸ್ನೇಹಿತನಾದ ಮುನೀರನನ್ನೂ ಹಸನ್ ಬನುವಿನ ಏಳು ಒಗಟಿಗಳನ್ನೂ ಯೋಚಿಸಿಕೊಂಡ. ಪ್ರಯೋಜನವಿಲ್ಲ. ಆದ್ದರಿಂದ ಷಹಾಬಾದಿಗೆ ಹೋಗುವುದಕ್ಕೆ ಮುಂಚೆ ತಮ್ಮ ತಂದೆಯ ಮನೆಯಲ್ಲಿ ತನ್ನ ಹೆಂಡತಿಯನ್ನು ನೋಡಬೇಕೆಂದು ನಿಷ್ಕರ್ಷೆ ಮಾಡಿಕೊಂಡನು.

೩ನೇ ಅಧ್ಯಾಯ

ಒಂದು ದಿವಸ ಯೇಮನ್ ರಾಜ್ಯದ ಸಮೀಪಕ್ಕೆ ಬರಲಾಗಿ, ಒಂದು ನಿರ್ಮಲವಾದ ಜಲವುಳ್ಳ ಸರೋವರ ಸಿಕ್ಕಿತು. ಅದನ್ನು ಕಂಡು ಹತೀಮನಿಗೆ ಬಹಳ ಸಂತೋಷವಾಯಿತು. ಅದರ ಹತ್ತಿರ ಹೋಗಲಾಗಿ ಅಲ್ಲಿ ಬೂತೀಮಾರ್* ಎಂಬ ಒಂದು ಜೊತೆ ಪಕ್ಷಿಗಳು ಕಾಣಿಸಿದವು. ಹತೀಮನಿಗೆ ಪಕ್ಷಿಭಾಷೆ ಬರುತ್ತಿದ್ದ ಕಾರಣ ಆ ಹಕ್ಕಿಗಳೆರಡೂ ಮಾತನಾಡಿಕೊಳ್ಳುವುದನ್ನು ಧ್ಯಾನಿಸಿ ಕೇಳುತಿದ್ದನು.

ಹೆಣ್ಣುಹಕ್ಕಿ— ಪ್ರಿಯನೆ, ನೀನು ಹೀಗೆ ಹೋಗಕೂಡದು. ಆ ಕಾರ್ಯದ ಯೋಚನೆಯನ್ನೇ ಬಿಟ್ಟುಬಿಡು ಎಂದು ಕೇಳಿಕೊಳ್ಳುತ್ತೇನೆ.

ಗಂಡುಹಕ್ಕಿ—ನಿನ್ನ ತಿಳುವಳಿಕೆ ಇಲ್ಲದ ಮಾತನ್ನು ಬಿಟ್ಟುಬಿಡು. ನಮ್ಮ ನಿರ್ಮಾಣಕರ್ತನಾದ ದೇವರಿಗೆ ಸಮರ್ಪಕವಾಗುವಂಥಾ ಕಾರ್ಯವನ್ನು ಮಾಡಬೇಕೆಂದಿದ್ದೇನೆ. ಅವನಿಗೆ ನಾವೆಲ್ಲರೂ ಜವಾಬುದಾರರು. ನಿನಗೆ ಹಾಗೆ ತೋರಿದ ಮಾತ್ರಕ್ಕೇ ನನಗೆ ಅಡ್ಡಿ ಮಾಡುತೀಯ? ವಿವೇಕಿ ಯಾವಾಗ ತಾನೆ ಹೆಂಗಸಿನ ಬುದ್ಧಿವಾದವನ್ನು ಗಣನೆ ಮಾಡುತಾನೆ? ನಿಮ್ಮದೆಲ್ಲಾ ಸುಳ್ಳಲ್ಲವೆ? ನೀನು ಹೇಳುವ ಪ್ರಕಾರ ನಾನು ಯಾಕೆ ನಡೆಯಬೇಕು? ಹೆಂಗಸು ಎಳೆದುಕೊಂಡು ಹೋದ ತಪ್ಪುದಾರಿಗೆ ಹೋಗಿ ನಾಚಿಗೆಕೇಡಾದ ದೊರೆಯ ಕಥೆಯನ್ನು ಓದಿ ಅರಿಯೆಯ?

ಆ ದೊರೆಯ ಕಥೆಯನ್ನು ಕೇಳಬೇಕೆಂದು ಹೆಣ್ಣು ಹಕ್ಕಿಯು ಬಹಳವಾಗಿ ಆಶೆಪಟ್ಟಿದ್ದರಿಂದ ಗಂಡುಹಕ್ಕಿಯು, ಅದನ್ನು ಹೇಳಲು ಆರಂಭಮಾಡಿತು.

ಗಂಡು. ಒಂದಾನೊಂದು ಕಾಲದಲ್ಲಿ ಒಬ್ಬ ದೊರೆಯು ಬೇಟೆಗೆ ಹೋದನು. ಅವನು ಹಗಲೆಲ್ಲಾ ಕಷ್ಟಪಟ್ಟರೂ ಬೇಟೆಯೇನೂ ಸಿಕ್ಕಲಿಲ್ಲ. ಸಾಯಂಕಾಲದ ಸಮಯವಾಯಿತು. ದಾರಿ ತಪ್ಪಿ ಹೋಯಿತು. ಪರಿವಾರವೂ ಇಲ್ಲದೆ ಕಾಡಿನಲ್ಲಿ (ಒಂಟಿಯಾಗಿ) ಅಲೆಯುತಾ ಬಂದನು. ಸುಂದರವಾದ ಒಂದು ತೋಟ ಸಿಕ್ಕಿತು. ಅದರೊಳಕ್ಕೆ ಪ್ರವೇಶ ಮಾಡಿದ. ಸ್ವಲ್ಪ ದೂರ ಹೋದ ಮೇಲೆ ಒಂದು

* ಬೂತಿಮಾರ್ ಎಂಬ ಈ ಪಕ್ಷಿಗೆ ಗಂತಾರ್ ಎಂತಲೂ ಒಂದು ಹೆಸರುಂಟು. ಹೀಗೆಂದರೆ ದುಃಖ ಪಡತಕ್ಕದ್ದೆಂದು ಅರ್ಥ. ಈ ಪಕ್ಷಿಯು ಪದೇಪದೇ ನದೀತೀರಕ್ಕೆ ಹೋಗುವುದುಂಟು. ನೀರೆಲ್ಲಾ ಮುಗಿದುಹೋಗುವುದಲ್ಲಾ ಎಂಬ ಭಯದಿಂದ ಸದಾ ಈ ಹಕ್ಕಿ ದುಃಖಪಡುವುದಂತೆ. ಹೀಗೆ ತಿಳಿದುಕೊಂಡು ತನಗೆ ದಾಹ ಹೆಚ್ಚಾದರೂ ನೀರು ಮುಗಿದುಹೋಗುವುದಲ್ಲಾ ಎಂಬ ಯೋಚನೆಯಿಂದ ನೀರನ್ನು ಕುಡಿಯುವುದಿಲ್ಲವಂತೆ.

ಅರಮನೆ ಸಿಕ್ಕಿತು. ಅದರ ಹತ್ತಿರ ಒಂದು ಕೊಳವಿತ್ತು. ಆ ದೊರೆಗೆ ಬಹಳ ಆಯಾಸವಾಗಿದ್ದದರಿಂದ ಅವನು ಆ ಕೊಳದ ತಡಿಯಲ್ಲಿ ಕೂತುಕೊಂಡ. ಅವನು ತನ್ನ ಆನ್ಹಿಕವನ್ನು ಮಾಡಿಕೊಳ್ಳುತಾ ಇರಲಾಗಿ ಅವನ ಕೈಗೆ ಒಂದು ಕಬ್ಬಿಣದ ಸರಪಣಿ ಸಿಕ್ಕಿತು. ಅದನ್ನು ಎಳೆದುಕೊಳ್ಳುವುದಕ್ಕೆ ಮೊದಲು ಮಾಡಿದ. ಕಷ್ಟವಾಯಿತು. ಅದಕ್ಕೆ ಏನೋ ದೊಡ್ಡ ಭಾರವನ್ನು ಕಟ್ಟಿದ್ದ ಹಾಗೆ ತೋರಿತು. ದೊರೆಯು ಅದನ್ನು ಎರಡು ಕೈಯಲ್ಲಿಯೂ ಹಿಡಿದು ತನ್ನ ಬಲವನ್ನೆಲ್ಲಾ ಬಿಟ್ಟು ಎಳೆದ. ಕೊನೆಗೆ ಆ ಸರಪಣಿಗೆ ತಗಲಹಾಕಿದ್ದ ಒಂದು ಪೆಟ್ಟಿಗೆಯು ಮೇಲಕ್ಕೆ ಬಂತು. ಆ ಪೆಟ್ಟಿಗೆಯನ್ನು ತೆಗೆದು ನೋಡಬೇಕೆಂದು ಅವನಿಗೆ ಆಶೆಯಾಯಿತು. ಅದರ ಬೀಗದ ಕೈ ಆ ಪೆಟ್ಟಿಗೆಗೇ ಕಟ್ಟಿತ್ತು. ಅದನ್ನು ತೆಗೆದು ನೋಡಲಾಗಿ, ಬಹು ಸುಂದರಿಯಾದ ಒಬ್ಬ ಹೆಂಗಸು ಅದರೊಳಗಿದ್ದಳು. ಅವನ ಆಶ್ಚರ್ಯವನ್ನು ಕೇಳಬೇಕೆ? ಅವಳ ಸೌಂದರ್ಯವನ್ನು ನೋಡಿ ವಿಸ್ಮಿತನಾಗಿ ಸ್ವಲ್ಪವೂ ಚಲಿಸದೆ ಸ್ವಲ್ಪ ಹೊತ್ತು ಹಾಗೆಯೇ ನಿಂತುಕೊಂಡನು. ಕಡೆಗೆ ದೊರೆಯನ್ನು ಕುರಿತು—ಸ್ವಾಮಿ ಗಾಬರಿಯಾಗಬೇಡಿ. ತಮ್ಮಂತೆಯೇ ನಾನೂ ರಕ್ತಮಾಂಸ ಮಜ್ಜ ಉಳ್ಳಂಥಾ ಶರೀರವಿರತಕ್ಕವಳು, ಎಂದಳು. ತರುವಾಯ ಪೆಟ್ಟಿಗೆಯನ್ನು ಬಿಟ್ಟು ಈಚೆಗೆ ಬಂದು ತನ್ನಲ್ಲಿದ್ದ ಒಂದು ಸೀಸೆಯಿಂದ ಒಂದು ಪೇಯವನ್ನು ಬೇರೆ ಬಟ್ಟಲಿಗೆ ಹನಿಸಿ ಅದನ್ನು ದೊರೆಗೆ ಕೊಟ್ಟಳು. ಅದನ್ನು ಅವನು ಕುಡಿದ. ಅವರಿಬ್ಬರೂ ನೀರಿನ ತಡಿಯಲ್ಲಿದ್ದ ಹುಲ್ಲು ಹಸಳೆಯ ಮೇಲೆ ಕೂತುಕೊಂಡು ಪ್ರಣಯಸಂಬಂಧಿಗಳು ಮಾತನಾಡುವ ಹಾಗೆ ಸಂಭಾಷಣೆ ಮಾಡುತಿದ್ದರು. ಕೊನೆಗೆ ದೊರೆಗೆ ತನ್ನ ಸ್ಥಿತಿ ಜ್ಞಾಪಕಕ್ಕೆ ಬಂತು. ತನಗಾಗಿ ತನ್ನ ಪರಿವಾರದ ಜನರು ಪೇಚಾಡಬಹುದೆಂದು ತೋರಿತು. ಅವನು ಹೊರಡಬೇಕೆಂದು ಮೇಲಕ್ಕೆ ಎದ್ದು, ತನ್ನ ಬೆರಳಿನಿಂದ ಬೆಲೆಯಾದ ಒಂದು ಉಂಗುರವನ್ನು ತೆಗೆದು ಅವಳಿಗೆ ಕೊಡಲು ಹೋದ. "ನನ್ನ ಜ್ಞಾಪಕಾರ್ಥವಾಗಿ ಇದನ್ನು ಅಂಗೀಕರಿಸು. ನಾನು ಈಗ ನಿನ್ನನ್ನು ಬಿಟ್ಟು ಹೊರಡಬೇಕು. ನಾವು ಮುಂದಕ್ಕೆ ಒಬ್ಬರನ್ನೊಬ್ಬರು ಕಾಣಬಹುದು. ಈ ಉಂಗುರವನ್ನು ತೋರಿಸಿದರೆ (ನಿನ್ನ ಜ್ಞಾಪಕ ಬರುವುದು). ನಿನ್ನಲ್ಲಿ ನಾನು ಆನಂದವಾಗಿ ಕಾಲವನ್ನು ಕಳೆದುದೆಲ್ಲಾ ಸ್ಮೃತಿಗೆ ಬರುವುದು.

ದೊರೆ ಆಡಿದ ಈ ಮಾತನ್ನು ಕೇಳಿ ಆ ಸ್ತ್ರೀಯು ಗಟ್ಟಿಯಾಗಿ ನಕ್ಕು ತನ್ನೆದೆಯಿಂದ ಒಂದು ಉಂಗುರದ ಸರವನ್ನು ತೆಗೆದು—ಸ್ವಾಮಿ, ನನ್ನ ಗಂಡನಿಗೆ ನನ್ನಲ್ಲಿ ವಿಶೇಷವಾದ ಅನುಮಾನವಿದೆ. ಮನುಷ್ಯಮಾತ್ರದವರು ವಾಸವಾಗಿರುವ ಕಡೆ ನಾನು ವಾಸ ಮಾಡುವುದನ್ನು ಕೂಡ ಅವನು ಸಹಿಸಲಾರ. ಆದ ಕಾರಣ ಕಾಡಮಧ್ಯೆ ಒಂಟಿಯಾಗಿರುವ ಈ ವನಕ್ಕೆ ನನ್ನನ್ನು ಕರೆದು ತಂದನು. ಪ್ರತಿ ರಾತ್ರೆಯೂ ಅವನು ಬಂದು ನನ್ನ ಬಳಿಯಲ್ಲಿ ವಾಸವಾಗಿರುತಾನೆ. ಬೆಳಗ್ಗೆ ಹೊರಟುಹೋಗುವಾಗ ಈ

ಪೆಟ್ಟಿಗೆಗೆ ಬೇಕಾದಷ್ಟು ಅನ್ನನೀರನ್ನು ಹಾಕಿ ನನ್ನನ್ನು ಅದರಲ್ಲಿ ಕೂಡಿ ಸರೋವರದೊಳು ಈ ಪೆಟ್ಟಿಗೆ ಸಿಕ್ಕಿದ ಕಡೆ ಹಾಕಿ ಹೋಗುತಾನೆ. ನಿನ್ನ ಹಾಗೆಯೇ ಅನೇಕ ದೊರೆಗಳೂ ಐಶ್ವರ್ಯವಂತರೂ ಇದರ ಸಮೀಪದಲ್ಲಿ ಬೇಟೆಯಾಡುತಾ ದಾರಿ ತಪ್ಪಿ ಇಲ್ಲಿಗೆ ಬಂದು ನನಗೆ ಉಂಟಾಗಿರುವ ಸೆರೆಯನ್ನು ಕಂಡು ಅದನ್ನು ಸ್ವಲ್ಪ ಹೊತ್ತು ತಪ್ಪಿಸಿ ನನ್ನ ಸಹವಾಸದಲ್ಲಿ ಇದ್ದು ಆನಂದಪಟ್ಟು ಹೊರಟುಹೋಗುವಾಗ ಉಂಗುರಗಳನ್ನು ಕೊಟ್ಟಿ ದ್ದಾರೆ. ಅದಕ್ಕೆ (ಈ ಸರವೇ) ದೃಷ್ಟಾಂತ. ಆ ಉಂಗುರಗಳನ್ನಂತೂ ನನ್ನಲ್ಲಿರಿಸಿ ಕೊಂಡಿರುತೇನೆ. ಅವುಗಳ ಸಂಖ್ಯೆಯೇನೋ ದೊಡ್ಡದಾಗಿದೆ. ಆದ್ದರಿಂದ ಯಾವ ಯಾವುವು (ಯಾರು ಯಾರು) ಕೊಟ್ಟರು ಜ್ಞಾಪಿಸಿಕೊಳ್ಳುವುದಕ್ಕಾಗುವುದಿಲ್ಲ. ಆದ್ದರಿಂದ ಧೀರನೇ, ನಿನ್ನ ಉಂಗುರವನ್ನೇನೋ ಅಂಗೀಕಾರ ಮಾಡಿ ಇರಿಸಿರುತೇನೆ. ಆದರೆ ಯಾವುದನ್ನು ಯಾರು ಕೊಟ್ಟರು ಎನ್ನುವುದನ್ನು ಜ್ಞಾಪಕದಲ್ಲಿರಿಸಿಕೊಂಡಿರ ಲಾರೆ, ಎಂದಳು. ಇಂಥಾ ಅಹಂಕಾರಪೂರ್ವಕವಾಗಿ ಅವಳು ಮಾಡಿದ ಅಂಗೀಕಾರ ವನ್ನು ಆ ದೊರೆಯು ಕೇಳಿ, ಅವಳು ಕೇಳಿಕೊಂಡ ಪ್ರಕಾರ ಆ ಹೆಂಗಸನ್ನು ಆ ಪೆಟ್ಟಿಗೆ ಯೊಳಗೆ ಕೂಡಿ ಅದನ್ನು ಆ ಜಲಗೃಹಕ್ಕೆ ಹಾಕಿ ತಮ್ಮೂರಿಗೆ ಹೊರಟುಹೋದನು. ಅವನು ಅರಮನೆಗೆ ಬಂದು ತಲಪಿದ ಮೇಲೆ, ಅರಸು ಹುಬ್ಬನ್ನು ಗಂಟಿಹಾಕಿಕೊಂಡು ಅಸಮಾಧಾನ ಪಟ್ಟುಕೊಂಡಿದ್ದ ಹಾಗೆ ಅವನ ಪರಿವಾರದ ಜನರಿಗೆ ತೋರಿತು. ಮಂತ್ರಿಗಳು ಅವನ ಸಮೀಪಕ್ಕೆ ಬಂದು, ಅವನಿಗೆ ವ್ಯಸನ ಪ್ರಾಪ್ತವಾಗಿದೆಯಲ್ಲಾ ಎಂದು ತಾವು ವ್ಯಸನಾಕ್ರಾಂತರಾಗಿದೇವೆ, ಆ (ವ್ಯಸನಕ್ಕೆ) ತಾವು ಕಾರಣಭೂತರಲ್ಲ ದಿದ್ದರೆ ಸಾಕೆಂದು ಅರಿಕೇ ಮಾಡಿದರು. ದೊರೆಯು ಆ ಕಥೆ ಯಾವುದು ಹೇಗೆ ನಡೆಯಿತೋ ಅದೆಲ್ಲವನ್ನೂ ಹೇಳಿ ಸ್ತ್ರೀಸಾಮಾನ್ಯಕ್ಕೇ ಅತ್ಯಂತ ತಿರಸ್ಕಾರವನ್ನು ತೋರ್ಪಡಿಸಿದನು. ಮಂತ್ರಿಯು ದೊರೆಯ ಸಾಹಸವನ್ನೆಲ್ಲಾ ಕೇಳಿ, ಈ ವಿಷಯವು ದೊರೆಯ ರಾಜ್ಯದ ಪ್ರತಿಗ್ರಾಮದಲ್ಲಿಯೂ ತಿಳಿದಿದೆ, ಸ್ತ್ರೀರ ಚಾಂಚಲ್ಯಕ್ಕೆ ಧೈರ್ಯಕೆಡ ತಕ್ಕದ್ದು ವ್ಯರ್ಥ ಎಂದನು. ಕಡೆಗೆ ದೊರೆಯು ಆ ವಿಚಾರವನ್ನು ಮನಸ್ಸಿಗೆ ಅಂಟಿಸಿ ಕೊಳ್ಳದೆ ನಂಬಿಕೆಯಾದ ತನ್ನ ಅಧಿಕಾರಿಗಳಲ್ಲಿ ಎಂದಿನ ಹಾಗೇ ಸಂತೋಷವಾಗಿಯೂ ಸಲಿಗೆಯಾಗಿಯೂ ಇದ್ದನು.

ಬೂತಿಮಾರ್ ಗಂಡು ಹಕ್ಕಿಯು ಹೇಳಿದ ಕಥೆ ಹೀಗೆ ಮುಗಿಯಿತು. ತರುವಾಯ ಗಂಡು ಹಕ್ಕಿಯು ಹೆಣ್ಣು ಹಕ್ಕಿಯನ್ನು ಕುರಿತು ಹೇಳಿದ್ದೇನೆಂದರೆ :

ಈ ಪ್ರಕಾರ ನೀನೂ ಹಾಗೆಯೇ ನಂಬಿಕೆಗೆ ಅನರ್ಹಳು ಎನ್ನುವುದರಲ್ಲಿ ನನಗೆ ಸಂಶಯವಿಲ್ಲ. ನೀನು ಹೇಳುವ ಮಾತಿನಂತೆ ನಾನು ಯಾಕೆ ನಡೆಯಬೇಕು ? ನ್ಯಾಯ ವಾದ್ದೆಂದು ನಾನು ತಿಳಿದಿರತಕ್ಕದ್ದನ್ನು ಮಾಡಲು (ನಿನ್ನ ಮಾತಿನಿಂದ) ಯಾಕೆ ಅಡ್ಡಿ ಯಾಗಬೇಕು ? ನಾನೇನು ಇಲ್ಲಿರತಕ್ಕ ಹಕೀಮತಾಯಿಯ ಹಾಗೆಯೇ ? ಅಸ್ಸಿರಿಯ ದೇಶದ ರಾಜಕುಮಾರನಾದ ಮುನೀರನ ಕಾರ್ಯವನ್ನು ಮಾಡಿಕೊಡುವುದಾಗಿ ಒಪ್ಪಿದನು. ಈಗ ಒಬ್ಬ ಹೆಂಗಸಿನ ವಿಲಾಸಕ್ಕೆ (ಮರುಳಾಗಿ) ತನ್ನ ಘನವಾದ

ಕೆಲಸದಿಂದ ಕೈಯನ್ನು ಹಿಂದಕ್ಕೆ ತೆಗೆದುಕೊಂಡನು. ಅತ್ಯಂತ ವಿವೇಕಿಗಳಾದವರ ಮೇಲೆ ಕೂಡ ಹೆಂಣು ಜಾತಿಯ ಸಾಮರ್ಥ್ಯ ಇಷ್ಟರಮಟ್ಟಿಗೆ ಇದೆ.

ಹತೀಮನು ತಿಳುವಳಿಕೆಯನ್ನು ಹುಟ್ಟಿಸತಕ್ಕ ಬೂತಿಮಾರ್ ಪಕ್ಷಿಯ ಸಂವಾದವನ್ನು ಕೇಳಿ ನಾಚಿಗೆಗೊಂಡು, ಸಮಯದಲ್ಲಿ ತಾನು ಹಿಂತೆಗೆದದ್ದನ್ನು ಸೂಚನೆ ಕೊಟ್ಟದ್ದಕ್ಕಾಗಿ ದೇವರಿಗೆ ವಂದಿಸಿ ಮೊದಲು ಉದ್ದೇಶ್ಯ ಮಾಡಿದ್ದಂತೆಯೇಮನ್ ದೇಶಕ್ಕೆ ಹೋಗುವುದಕ್ಕೆ ಬದಲಾಗಿ ತನ್ನ ಹೆಜ್ಜೆಯನ್ನು ಷಹಾಬಾದಿನ ಕಡೆಗೆ ತಿರುಗಿಸಿದನು. ಅಲ್ಲಿಗೆ ಹೋದ ಮೇಲೆ ಹಸನ್‌ಬನುವಿನ ಕಡೆ ಜನರು ಸಂತೋಷವಾಗಿ ಅವನನ್ನು ಎದುರುಗೊಂಡು ಕಾರವಾನ್‌ಸಿರೈಗೆ ಕರೆದುಕೊಂಡು ಹೋಗಿ ತಮ್ಮ ಒಡತಿಗೆ ಹತೀಮ ಕ್ಷೇಮವಾಗಿ ಬಂದ ವರ್ತಮಾನವನ್ನು ಕೊಟ್ಟರು. ಹಸನ್‌ಬನುವು ಅವನನ್ನು ತನ್ನ ಅರಮನೆಗೆ ಕರೆಯಿಸಿಕೊಂಡು ಆದರಿಸಿ ಅವನು ಮಾಡಿದ ಸಾಹಸವನ್ನು ಪೂರ್ತಿಯಾಗಿ ಕೇಳಿದಳು. ತರುವಾಯ ಹತೀಮನು ಕಾರವಾನ್‌ಸಿರೈಗೆ ಹೋಗಿ ತನ್ನ ಮಿತ್ರನಾದ ಅಸ್ಸಿರಿಯ ದೊರೆಮಗನ ಗೋಷ್ಠಿಯಲ್ಲಿ ರಾತ್ರಿಯನ್ನು ಕಳೆದನು. ಮಾರನೇ ದಿವಸ ಐದನೇ ಪ್ರಶ್ನೆ ಎಂಥಾದ್ದು ಎಂಬುವುದನ್ನು ತಿಳಿಯುವುದಕ್ಕೋಸ್ಕರ ಹಸನ್‌ಬನುವನ್ನು ಹೋಗಿ ಕಂಡನು. ಅವಳು ಅವನನ್ನು ಅರಮನೆಯಲ್ಲಿ ಮರ್ಯಾದೆಯಿಂದ ಕಂಡು–ಧೀರನಾದ ಹತೀಮನೆ, ನಿನಗೆ ಹೇಳತಕ್ಕ ಐದನೇ ಕಾರ್ಯ ಯಾವುದೆಂದರೆ “ನಿಡ ಎಂಬ ಪರ್ವತದ ಸಮಾಚಾರವನ್ನು ತಂದು ಹೇಳುವುದು” ಎಂದಳು. ಆಗ ಹತೀಮನು ಹೊರಡಲು ಹಸನ್‌ಬನುವಿನ ಅನುಮತಿಯನ್ನು ಹೊಂದಿದನು. ಹೊರಡುವುದಕ್ಕೆ ಮುಂಚೆ ಅಸ್ಸಿರಿಯ ದೇಶದ ರಾಜಕುಮಾರನನ್ನು ಭೇಟಿ ಮಾಡಿ—ಅಯ್ಯಾ ಮಿತ್ರ, ಸಂತೋಷವಾಗಿರು. ನಾನು ಐದನೇ ವಿಜಯಯಾತ್ರೆಗೆ ಹೊರಡುತೇನೆ. ದೇವರು ನಮಗೆ ಕಲ್ಯಾಣವನ್ನು ಉಂಟುಮಾಡುತಾನೆ. ಈ ಮಧ್ಯೆ ಕ್ಷೇಮವಾಗಿರು, ಎಂದು ಹೇಳಿ ಹರಸಿದನು.

(ಮುಂದುವರೆಯುವುದು)

ಸಾ. ರಾ. ನರಸಿಂಹಪ್ರಸಾದ್

ಕಲ್ಪನೆಗಳಿಗೆ

ನಿನಗೆ ರೆಕ್ಕೆಗಳಿಲ್ಲ,
ಆದರೂ ದೂರಕ್ಕೆ ಹಾರಬಲ್ಲೆ.
ಆಳ–ಎತ್ತರಕ್ಕೆ ಈಜಬಲ್ಲೆ.
ದೂರದ ತೀರಕ್ಕೆ ಓಡಬಲ್ಲೆ.
ಓಡುವ ನಡುವೆ ಚಿಂತೆ ಇಲ್ಲ.
ವಾಸ್ತವ ಮರೆತು,
ಭವಿಷ್ಯದ ಬೆಂಗಾಡಿನಲ್ಲಿ ಸುತ್ತುವೆ.
ಭೂತಕಾಲ ಮರೆಯುವೆ.
ವರ್ತಮಾನದ ನಡು ಬೆಳಕಲ್ಲಿ ಕಂಡದ್ದು
ಕನಸೆಂದು ಭ್ರಮಿಸುವೆ.
ಓ ನನ್ನ ಎದೆಯಾಂತರಾಳದಲ್ಲಿ
ಅರಳುವ ಕಲ್ಪನೆಗಳೆ
ಜಾತಿ ಭೇದಗಳಿಲ್ಲ, ನಯವಂಚನೆ ಅರಿತಿಲ್ಲ.
ಎಲ್ಲೆಂದರಲ್ಲಿ ಮೂಡುವೆ.
ಭಾವನೆಗಳ ಮೇಲೆ ಸವಾರಿ,
ಕನಸುಗಳಲ್ಲಿ ಬೆಳೆಯುವೆ–
ಮಂಜಾಗಿ ಮಂದರಪರ್ವತ–
ದಂತೆ ಎತ್ತರಕ್ಕೆ ನಿಲ್ಲುವೆ–
'ವಾಸ್ತವ್ಯದ ಬಿಸಿಲು' ಮೈ–ಮನ
ಮುಟ್ಟಿದಾಗ–ಮಂಜಿನ ನಿನ್ನ
ಕಲ್ಪನೆಗಳು ಕರಗಿ–ನೀರಾಗಿ ಹರಿದು–
ಕಣ್ಣೀರ ಸುರಿಸುವೆ–ಕೊರಗುವೆ !

ಸಂಪಾದಕೀಯ

ಅಭಿನಂದನೆ

ಪಂಪ ಪ್ರಶಸ್ತಿ

ಪ್ರೊ. ತೀ. ನಂ. ಶ್ರೀಕಂಠಯ್ಯನವರ (೨೯.೧೧.೧೯೦೬—೭.೯.೧೯೬೬) 'ಭಾರತೀಯ ಕಾವ್ಯಮೀಮಾಂಸೆ'ಗೆ ಕರ್ನಾಟಕ ಸರ್ಕಾರದ ೧೯೮೯ರ ಪಂಪಪ್ರಶಸ್ತಿ ದೊರೆತಿದೆ. ೧೯೪೭ ರಿಂದ ೧೯೬೬ರ ವರೆಗೆ ಕನ್ನಡದಲ್ಲಿ ಪ್ರಕಟವಾದ ಸೃಜನೇತರ ಶ್ರೇಷ್ಠ ಕೃತಿ ಯೆಂದು ಅದಕ್ಕೆ ಈ ಪ್ರಶಸ್ತಿ ನೀಡಲಾಗಿದೆ. ಎಂದೋ ಈ ಕೃತಿಗೆ ಸಲ್ಲಬೇಕಾದ ಗೌರವವು ಮರಣೋತ್ತರ ಪ್ರಶಸ್ತಿ ರೂಪದಲ್ಲಿ ಸಲ್ಲುತ್ತಿರುವುದು ಸಂತೋಷ, ಸಂತಾಪ ಗಳ ಮಿಶ್ರಭಾವನೆಯನ್ನು ಉಂಟುಮಾಡಿದೆ. ಈ ಸಂದರ್ಭದಲ್ಲಿ ಸಂತೋಷದಿಂದ ಅವರನ್ನು ಅಭಿನಂದಿಸುವುದಕ್ಕೆ ಅವರಿಲ್ಲ. ಇಪತ್ನಾಲ್ಕು ವರ್ಷಗಳ ಹಿಂದೆಯೆ ಗತಿಸಿದ ಅವರ ವಿದ್ವತ್ತಿನ ಮಹತ್ವವನ್ನು ಈ ಪ್ರಶಸ್ತಿಯ ನೆವದಲ್ಲಿ ಸಾರ್ವತ್ರಿಕವಾಗಿ ಮತ್ತೆ ಸ್ಮರಿಸಿಕೊಳ್ಳಲು ದೊರೆತ ಅಪರೂಪದ ಅವಕಾಶವೆಂದು ಭಾವಿಸಿ 'ಪ್ರಬುದ್ಧ ಕರ್ಣಾಟಕ'ದ ಪರವಾಗಿ ಅವರನ್ನು ಅಭಿವಂದಿಸುತ್ತೇವೆ.

ತೀ.ನಂ.ಶ್ರೀ.ಯವರ 'ಭಾರತೀಯ ಕಾವ್ಯಮೀಮಾಂಸೆ' ಪ್ರಕಟವಾದದ್ದು ೧೯೫೩ರಲ್ಲಿ. ಆದರೆ ಅದನ್ನು ಅವರು ಬರೆದು ಮುಗಿಸಿ ಅಚ್ಚಿಗೆ ಸಿದ್ಧಗೊಳಿಸಿದ್ದು ೧೯೪೨ರಲ್ಲಿ. ಈ ವಿಳಂಬಕ್ಕೆ ಕಾರಣವನ್ನು ಅವರೇ ತಿಳಿಸಿದ್ದಾರೆ: "ಆ ವೇಳೆಗಾಗಲೆ ಎರಡನೆಯ ಮಹಾಯುದ್ಧವು ವಿಜೃಂಭಿಸಿತ್ತು. ಅದರ ಕರಾಳಚ್ಛಾಯೆ ನಮ್ಮ ನಾಡನ್ನು ಚೆನ್ನಾಗಿಯೇ ಮುಸುಕಿತ್ತು. ಯುದ್ಧೋದ್ಯಮವೊಂದು ಹೊರತು ಬೇರೆ ಯಾವುದಕ್ಕೂ ಪುರಸ್ಕಾರವಿಲ್ಲದ ಆ ದುರ್ದಿನ ಪರಂಪರೆಯಲ್ಲಿ ಪುಸ್ತಕವು ಅಚ್ಚಿನ ಮನೆಯನ್ನು ಕಾಣುವುದಕ್ಕೇ ಶ್ರಮವಾಯಿತು. ಆ ಬಳಿಕವಂತೂ ತುಂಬ ತಡ, ತೊಡಕು. ರಾಷ್ಟ್ರದ ಉಪಪ್ಲವವು ಗ್ರಂಥ ವಿನಾಶದ ಕಾರಣಗಳಲ್ಲಿ ಒಂದೆಂಬ ರಾಜ ಶೇಖರನ ಉಕ್ತಿ ಜ್ಞಾಪಕಕ್ಕೆ ಬಂದಿತು; ಅನುಭವಕ್ಕೂ ಬರುವುದೋ ಏನೋ ಎಂಬ ಭಯವೂ ಸುಳಿಯದೆ ಇರಲಿಲ್ಲ. ಸಂಬಂಧಪಟ್ಟವರೆಲ್ಲರ ಕೈಮೀರಿದ ಹಲವು ಕಾರಣ ಗಳಿಂದ, ಮಹಾಯುದ್ಧವು ಮುಗಿದ ಮೇಲೆ ಕೂಡ ಇದರ ಮುದ್ರಣವು ಮುಗಿಯಲು ಹಲವು ವರ್ಷಗಳು ಸಂದವು."

ಈ ಹಿನ್ನೆಲೆ ಮತ್ತು ಪಂಪಪ್ರಶಸ್ತಿ ಪಡೆದ ಇಂದಿನ ಸಂದರ್ಭ ಎರಡರಲ್ಲಿಯೂ ಅನಿರೀಕ್ಷಿತದ ಅಂಶ ಸೇರಿಕೊಂಡಿದೆ. ಪಂಪ ಪ್ರಶಸ್ತಿ ಪ್ರದಾನ ಪ್ರಾರಂಭ ೧೯೮೮ರಲ್ಲಿ ಆದದ್ದು. ಆ ಪ್ರಶಸ್ತಿ ಕುರಿತ ನಿಯಮಾವಳಿ ರೂಪಿತವಾದದ್ದೂ ಆ ವರ್ಷವೇ. ೧೯೪೨ರಲ್ಲಿಯೇ ಕೃತಿ ಪ್ರಕಟವಾಗಿದ್ದರೆ ೧೯೪೭–೧೯೬೬ರ ಕಾಲಾವಧಿಯಲ್ಲಿ ಪ್ರಕಟ

ವಾದ ಸೃಜನೇತರ ಕೃತಿಗೆಂದು ದೊರೆಯುವ ಪಂಪಪ್ರಶಸ್ತಿ ಅದಕ್ಕೆ ದೊರೆಯುತ್ತಲೇ ಇರಲಿಲ್ಲ. ಆ ದೃಷ್ಟಿಯಿಂದ ಯೋಚಿಸಿದಾಗ ಮಾತ್ರ ಹಾಗೆ ಪ್ರಕಟಣೆಗೆ ವಿಳಂಬ ವಾದದ್ದು ಒಳ್ಳೆಯದಕ್ಕೇ ಎಂದು ಅನಿಸಿದರೆ ಆಶ್ಚರ್ಯವಿಲ್ಲ. ಹಾಗೆಂದು ಈ ಪ್ರಶಸ್ತಿ ಹೀಗೆ ಅವರ ನಿಧನಾನಂತರದ ಇಷ್ಟು ವರ್ಷಗಳ ಮೇಲೆ ಅದಕ್ಕೆ ದೊರೆತದ್ದೂ ಒಳ್ಳೆಯದಕ್ಕೇ ಎಂದು ಹೇಳುವುದಕ್ಕೆ ಬಾಯಿ ಕಟ್ಟುತ್ತದೆ. ತೀ.ನಂ.ಶ್ರೀ. ಅವರು ಈಗ ಬದುಕಿದ್ದರೆ ಎ. ಎನ್. ಮೂರ್ತಿರಾವ್, ಕಾರಂತ, ಕುವೆಂಪು, ಪು.ತಿ.ನ.ರಂಥ ಹಿರಿಯ ಸಾಹಿತಿಗಳ ಪಂಕ್ತಿಯಲ್ಲಿ ಅವರೆಲ್ಲರಿಗಿಂತ ಕಿರಿಯ ವಯಸ್ಸಿನವರಾಗಿ ಇರುತ್ತಿದ್ದರು. 'ರೆ' ಪ್ರಪಂಚದ ಇಂಥ ಮಾತಿನಲ್ಲಿ ಅರ್ಥವಿಲ್ಲ ಎಂದರೂ ಭಾವವಿಲ್ಲ ಎನ್ನುವಂತಿಲ್ಲ.

ತೀ.ನಂ.ಶ್ರೀ. ಅವರ 'ಭಾರತೀಯ ಕಾವ್ಯಮೀಮಾಂಸೆ' ಅವರ ವಿದ್ವತ್ತನ್ನು ಪ್ರತಿನಿಧಿಸುವ ಶಿಖರ ಕೃತಿ. ಅದೊಂದು ವಿದಗ್ಧತೆ ಮತ್ತು ಸಹೃದಯತೆಗಳ ಅನನ್ಯ ಪಾಕ. ಭಾರತೀಯ ಕಾವ್ಯಮೀಮಾಂಸೆಯನ್ನು ಅಧಿಕಾರಯುತವಾಗಿ ಅಷ್ಟು ಸಮಗ್ರ ಮತ್ತು ಸಾರವತ್ತಾದ ಬಗೆಯಲ್ಲಿ ನಿರೂಪಿಸುವ ಕೃತಿ ಮತ್ತೊಂದಿಲ್ಲ. ಕುವೆಂಪು ಅದನ್ನು ಕಾವ್ಯಮೀಮಾಂಸೆ, ಸಾಹಿತ್ಯವಿಮರ್ಶೆ ಕುರಿತ 'ಆಚಾರ್ಯಕೃತಿ' ಎಂದು ಅದು ಪ್ರಕಟವಾಗುತ್ತಿರುವ ಸಂದರ್ಭದಲ್ಲಿಯೆ ಮುನ್ನುಡಿಯಲ್ಲಿ ಪ್ರಶಂಸಿಸಿದ್ದರು. ಆ ಮಾತೂ ಆ ಕೃತಿಯಂತೆಯೆ ತನ್ನ ಮೌಲಿಕ ಮಹತ್ವವನ್ನು ಉಳಿಸಿಕೊಂಡಿದೆ:

> "ಭಾರತದ ಪ್ರಾಚೀನ ಲಾಕ್ಷಣಿಕರ ಕಾವ್ಯಮೀಮಾಂಸೆಯನ್ನು ಕುರಿತು ಇದುವರೆಗೆ ಇಷ್ಟು ಪ್ರಮಾಣಭೂತವಾದ, ಪರಿಪೂರ್ಣವಾದ, ಗ್ರಂಥ ಹೊರಬಿದ್ದಿರಲಿಲ್ಲ. ಇಂಗ್ಲಿಷಿನಲ್ಲಿ ಕೂಡ ಇಂಥ ಗ್ರಂಥವಿಲ್ಲವೆಂದರೆ ತಪ್ಪಾಗಲಾರದು. ಶಬ್ದಾರ್ಥಗಳ ಸಂಬಂಧ, ಭಾವಗಳ ವ್ಯಾಪ್ತಿ. ಶಬ್ದಶಕ್ತಿ, ಧ್ವನಿವ್ಯಾಪಾರ ಮೊದಲಾದವುಗಳ ಬಗ್ಗೆಯಷ್ಟೇ ಅಲ್ಲದೆ, ಪ್ರಾಚೀನ ವಿಮರ್ಶಕರು ಗುರುತಿಸಿದ ಮಹತ್ವದ ಮೌಲ್ಯಗಳಾದ—ರಸ, ಭಾವ, ಧ್ವನಿ, ರೀತಿ, ಗುಣ, ಅಲಂಕಾರ ಮೊದಲಾದವುಗಳ ಬಗ್ಗೆ ಅಧಿಕಾರಯುತವಾದ ಚರ್ಚೆ ಇಲ್ಲಿ ದೊರೆಯುತ್ತದೆ. ಮತ್ತು ಈ ಚರ್ಚೆಗಳ ಮೂಲ ಸ್ವರೂಪದ ಚಿತ್ರವನ್ನು ಸಜೀವವಾಗಿ ಕೊಟ್ಟಿದ್ದರಿಂದ ಎಲ್ಲಿಯೂ ಸಂಶಯಕ್ಕೆ ಆಸ್ಪದ ಉಳಿದಿಲ್ಲ. ನಿರೂಪಣೆಯ ಶೈಲಿ, ಸರಳತೆ, ಸ್ಪಷ್ಟತೆ ಹಾಗೂ ಹೃದಯಂಗಮತೆಗಳ ದೃಷ್ಟಿಯಿಂದ ಅದ್ವಿತೀಯ ವಾದದ್ದು....ಕುವೆಂಪುರವರು ತಮ್ಮ ಮುನ್ನುಡಿಯಲ್ಲಿ ಹೇಳಿದಂತೆ ಸತ್ಯವಾಗಿ ಇದೊಂದು 'ಆಚಾರ್ಯಕೃತಿ'."
>
> [ಯುಗಧರ್ಮ ಹಾಗೂ ಸಾಹಿತ್ಯದರ್ಶನ ೧೯೬೨ ಪುಟ ೩೦೩–೦೪]

> "ತೀ.ನಂ.ಶ್ರೀಕಂಠಯ್ಯನವರ 'ಭಾರತೀಯ ಕಾವ್ಯಮೀಮಾಂಸೆ', ಅದರ ಮುನ್ನುಡಿಯಲ್ಲಿ ಶ್ರೀ ಕುವೆಂಪು ಅವರು ಕರೆದಿರುವಂತೆ ಒಂದು

'ಆಚಾರ್ಯಕೃತಿ'. ಭಾರತೀಯ ಕಾವ್ಯಮೀಮಾಂಸೆಯ ವಿಚಾರವನ್ನು ಕುರಿತು ಕನ್ನಡದಲ್ಲಿ ಇಷ್ಟು ಸಂಗ್ರಾಹಕವೂ, ಸರಳವೂ, ಪ್ರಮಾಣ ಭೂತವೂ ಆದ ಕೃತಿ ಇದುವರೆಗೂ ಬಂದಿಲ್ಲ ಎನ್ನುವುದಷ್ಟೆ ಅಲ್ಲ, ಕಾವ್ಯಮೀಮಾಂಸೆಯ ಕ್ಷೇತ್ರದಲ್ಲಿ ಇನ್ನು ಮುಂದೆ ನಡೆಯಬೇಕಾದ ಕಾರ್ಯದ ಹರಹು ಎಷ್ಟೆಂಬುದರ ಕಡೆಗೆ ಮಾರ್ಗದರ್ಶಕವೂ ಆದ ಕೃತಿ ಎಂಬ ಅರ್ಥದಲ್ಲಿ ಇದು ಇಂದಿಗೂ 'ಆಚಾರ್ಯ ಕೃತಿ'ಯಾಗಿಯೇ ನಿಂತಿದೆ........ನಮಗೆ ತೋರುವ ಮಟ್ಟಿಗೆ ಇಷ್ಟು ಸಮಗ್ರವಾಗಿ ಭಾರತೀಯ ಕಾವ್ಯಮೀಮಾಂಸೆಯನ್ನು ಹೃದ್ಯವಾಗಿ ಪರಿಚಯ ಮಾಡಿ ಕೊಡುವ ಗ್ರಂಥ. ಬಹುಶಃ ಇತರ ಯಾವ ಭಾರತೀಯ ಭಾಷೆ ಗಳಲ್ಲಿಯೂ ಬಂದಿರಲಾರದು; ಇಂಗ್ಲಿಷಿನಲ್ಲಂತೂ ಬಂದಿಲ್ಲವೆಂದರೆ ತಪ್ಪಾಗಲಾರದು........ಈ ಕೃತಿಯಲ್ಲಿ ಶ್ರೀಕಂಠಯ್ಯನವರ ಗಮನ, 'ಕಾವ್ಯಗಾಯತ್ರಿ' ಎಂದು ಅವರೇ ಕರೆಯುವ ರಸ, ಧ್ವನಿ, ಔಚಿತ್ಯ ಗಳನ್ನು ಕುರಿತ ಕಡೆಗೆ. ರಸ ಮತ್ತು ಧ್ವನಿ ಈ ವಿಷಯಗಳನ್ನು ಕುರಿತು ಇಷ್ಟು ಸಮಗ್ರವಾಗಿ ಮತ್ತು ತಿಳಿಯಾಗಿ ಕನ್ನಡದಲ್ಲಿ ಬೇರೆ ಬರವಣಿಗೆಯೇ ಇಲ್ಲ; ಅಷ್ಟೇ ಅಲ್ಲ ಮತ್ತೆ ಯಾರೂ ಆ ಎರಡು ವಿಷಯಗಳನ್ನು ಕುರಿತು ಬರೆಯುವ ಅಗತ್ಯವೂ ಇಲ್ಲ."

('ಭಾರತೀಯ ಕಾವ್ಯಮೀಮಾಂಸೆ': ಒಂದು 'ಆಚಾರ್ಯಕೃತಿ', ಶ್ರೀಕಂಠತೀರ್ಥ ಪುಟ ೮೫ ಮತ್ತು ೯೨)

—ಈ ಮೇಲಿನ ಅವತರಣಿಕೆಗಳಲ್ಲಿ ಮೊದಲನೆಯದು ಪ್ರೊ. ಕೀರ್ತಿನಾಥ ಕುರ್ತ ಕೋಟಿಯವರದು; ಎರಡನೆಯದು ಡಾ. ಜಿ. ಎಸ್. ಶಿವರುದ್ರಪ್ಪನವರದು. ನಾಡಿನ ಸುವಿಖ್ಯಾತ ವಿದ್ವಾಂಸರೂ ವಿಮರ್ಶಕರೂ ಆಗಿರುವ ಈ ಮಹನೀಯರಿಬ್ಬರ ಈ ಮಾತುಗಳು ತೀ.ನಂ.ಶ್ರೀ. ಅವರ ಭಾರತೀಯ ಕಾವ್ಯಮೀಮಾಂಸೆಯ ಸ್ವರೂಪ, ಗುಣ ವಿಶೇಷ ಮತ್ತು ಮಹತ್ವ ಕುರಿತಂತೆ ಕನ್ನಡ ವಿದ್ವಾಂಸರ, ವಿಮರ್ಶಕರ ಅಭಿಪ್ರಾಯ ಗಳನ್ನು ಸರಿಯಾಗಿ ಮತ್ತು ಸಮರ್ಥವಾಗಿ ಪ್ರತಿನಿಧಿಸುತ್ತವೆ.

ತೀ.ನಂ.ಶ್ರೀ. ನವೋದಯ ತಲೆಮಾರಿನ ವಿಮರ್ಶಕಮುಖ್ಯರಲ್ಲಿ ಒಬ್ಬರು. ಅವರ 'ಕಾವ್ಯಸಮೀಕ್ಷೆ', 'ಸಮಾಲೋಕನ', 'ಪಂಪ' ಎಂಬ ವಿಮರ್ಶೆಯ ಕೃತಿಗಳಲ್ಲಿಯೂ ಕೃತಿವಿಮರ್ಶೆಯ ಇತರ ಬರೆಹಗಳಲ್ಲಿಯೂ ಆ ತಲೆಮಾರಿನ ಸಹೃದಯತೆ ಉತ್ಕೃಷ್ಟ ಮತ್ತು ನಿಷ್ಕೃಷ್ಟ ರೀತಿಯಲ್ಲಿ ಪ್ರಕಾಶಗೊಂಡಿದೆ. ಜೊತೆಜೊತೆಗೇ ಅವರ ರುಚಿಸಂಸ್ಕಾರ ಮತ್ತು ವಿಮರ್ಶನ ಪ್ರಜ್ಞೆಯ ಸ್ವೋಪಜ್ಞ ತೇಜಸ್ಸೂ ಅವರ ವಿಮರ್ಶೆಯಲ್ಲಿ ಹೊಳಹುಹಾಕಿದೆ. ಪರಂಪರೆ ವ್ಯಕ್ತಿ ವಿಶಿಷ್ಟ ಸಂವೇದನೆಯ ಸಹಯೋಗದಲ್ಲಿ ಆವಿಷ್ಕಾರಗೊಳ್ಳುವಾಗಿನ ಅನನ್ಯತೆ ಅವರ ವಿಮರ್ಶೆ ಯನ್ನು ಓದುತ್ತಿರುವಾಗ ಅನುಭವಕ್ಕೆ ಬರುತ್ತದೆ. ಆದರೆ ಅವರ ಆ ಸ್ವೋಪಜ್ಞತೆ,

ಆ ಆಸನ್ನತೆ ಸಹೃದಯ ಸ್ಪಂದನದಲ್ಲಿ ಕಾಣಿಸಿದಷ್ಟು ಚುರುಕಾಗಿ, ಸೃಜನಶೀಲವಾಗಿ ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಕಾಣಿಸುವುದಿಲ್ಲ ಎಂದು ಅನಿಸುವುದುಂಟು.

ಆದಕ್ಕೆ ಕಾರಣವಿದೆ: 'ಭಾರತೀಯ ಕಾವ್ಯಮೀಮಾಂಸೆ'ಯಂಥ ಕೃತಿಯಲ್ಲಿ ಉದಾಹರಣೆ, ನಿದರ್ಶನಗಳೆಂದು ಎತ್ತಿಕೊಡುವ ಕಾವ್ಯದ ತುಣುಕುಗಳನ್ನು ಕುರಿತ ವಿಮರ್ಶೆ ವ್ಯಾಖ್ಯಾನಗಳಲ್ಲಿ ಲೇಖಕನ ಸಹೃದಯತೆ ಕ್ರಿಯಾಶೀಲವಾಗುವ ಬಗೆ ಮತ್ತು ವ್ಯಾಪಕತೆಗೂ ಕೃತಿ ವಿಮರ್ಶೆಯ ಸಂದರ್ಭದಲ್ಲಿ ಸಹೃದಯತೆ ಕ್ರಿಯಾಶೀಲ ವಾಗುವ ಬಗೆ ಮತ್ತು ವ್ಯಾಪಕತೆಗೂ ವ್ಯತ್ಯಾಸವಿದೆ. ಶಾಸ್ತ್ರಶುದ್ಧ ಗ್ರಹಿಕೆಯ ಚೌಕಟ್ಟು ಮತ್ತು ಅಗತ್ಯಕ್ಕೆ ಅನುಗುಣವಾಗಿ ಸಾಮಾನ್ಯವಾಗಿ ಕೃತಿಯ ಸ್ಥಳೀಯ ಅರ್ಥವಂತಿಕೆಯ ಆಯಾಮದಲ್ಲಿ ಅಂದರೆ ಹೆಚ್ಚು ಕಡಮೆ ಪ್ರಾಯೋಗಿಕ ವಿಮರ್ಶೆಯ ಪರಿಮಿತಿಯಲ್ಲಿ ಲೇಖಕನ ಸಹೃದಯತೆ, ವಿಮರ್ಶನ ಪ್ರಜ್ಞೆಗಳನ್ನು ಅಂಥ ಕೃತಿ ನಿರ್ದೇಶಿಸುತ್ತದೆ, ನಿಯಂತ್ರಿಸುತ್ತದೆ, ಬಳಸಿಕೊಳ್ಳುತ್ತದೆ. ಆದರೆ ಸಾಹಿತ್ಯ ವಿಮರ್ಶೆ ಕೃತಿಯೊಳಗಿನ ಪದ, ವಾಕ್ಯ, ಘಟನೆ, ಸನ್ನಿವೇಶಗಳ ಸ್ಥಳೀಯ ಅರ್ಥವಂತಿಕೆ, ಒಟ್ಟು ಕೃತಿಯ ಪ್ರಬಂಧಧ್ವನಿಯೊಂದಿಗೆ ಏರ್ಪಟ್ಟಿರುವ ಅವುಗಳ ಸಂಬಂಧ, ಅದರಿಂದ ಆವಿಷ್ಕಾರಗೊಳ್ಳುವ ಅನುಭವ ವಿಶೇಷ—ಇವುಗಳನ್ನು ಕಾಣಿಸುವುದರ ಜೊತೆಗೆ ಭೂತ, ವರ್ತಮಾನ ಮತ್ತು ಸ್ವಾನುಭವದ ತಿಳಿವಳಿಕೆಯ ಬೆಳಕಿನಲ್ಲಿ ಆ ಅನುಭವದ ಮೌಲ್ಯಮಾಪನದ ಹೊಣೆಯನ್ನೂ ಹೊತ್ತು ಸಾಗಬೇಕಾಗುತ್ತದೆ. ಆಗ ವಿಮರ್ಶಕ ಎದುರಿಸುವ ಸವಾಲು ಹೆಚ್ಚು ಸಂಕೀರ್ಣವಾಗುತ್ತದೆ; ಹಾಗೆಯೆ ಹೆಚ್ಚು ಪ್ರಯೋಜನಕಾರಿಯೂ ಆಗುತ್ತದೆ. 'ಭಾರತೀಯ ಕಾವ್ಯಮೀಮಾಂಸೆ'ಯ ಪ್ರಕಾರ ಕಾವ್ಯದ ಪರಮಪ್ರಯೋಜನ ರಸಾನುಭವ ಆ ಪರಿಕಲ್ಪನೆಯನ್ನು ನಂಬಿಕೆಯ ನೆಲೆಯಲ್ಲಿಯೆ ಒಪ್ಪಿ ವ್ಯವಹರಿಸಿದ ತೀ.ನಂ.ಶ್ರೀ. ಅವರ ವಿಮರ್ಶನ ಪ್ರಜ್ಞೆ ಸಹೃದಯತೆ, ರಸಜ್ಞತೆಗಿಂತ ಹೆಚ್ಚಿನ ವ್ಯಾಪ್ತಿ ಪಡೆಯಲಿಲ್ಲ; ಸಂಕೀರ್ಣತೆಯನ್ನು ಎದುರಿಸಲಿಲ್ಲ ಎಂದು ಅನಿಸುತ್ತದೆ. ತೀ.ನಂ.ಶ್ರೀ. ಅವರ 'ಭಾರತೀಯ ಕಾವ್ಯಮೀಮಾಂಸೆ'ಗೆ ಇರುವಷ್ಟು ಮತ್ತು ಇರುವಂಥ ತಾಳಿಕೆಯ ಗುಣ ಅವರ ಕೃತಿ ವಿಮರ್ಶೆಯ ಲೇಖನಗಳಲ್ಲಿ ಆ ಪ್ರಮಾಣದಲ್ಲಿ ಇಲ್ಲದಿರುವುದಕ್ಕೆ ಬಹುಶಃ ಅದು ಕಾರಣ. ಆದರೂ ಅವುಗಳ ಚಾರಿತ್ರಿಕ ಮಹತ್ವಕ್ಕೆ ಚ್ಯುತಿಯಿಲ್ಲ.

ಭಾಷಾಶಾಸ್ತ್ರವೂ ಭಾರತೀಯ ಕಾವ್ಯಮೀಮಾಂಸೆಯಂತೆಯೇ ತೀ.ನಂ.ಶ್ರೀ. ಅವರಿಗೆ ಅತ್ಯಂತ ಪ್ರಿಯವಾದ ವಿಷಯವಾಗಿತ್ತು. ಕರ್ನಾಟಕ ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳಲ್ಲಿ ಭಾಷಾಶಾಸ್ತ್ರದ ಪ್ರೌಢ ಅಧ್ಯಯನಕ್ಕೆ ಒಂದು ಭದ್ರನೆಲೆ ಒದಗಿಸಿದ ಶ್ರೇಯಸ್ಸಿನ ಸಿಂಹಪಾಲು ಅವರಿಗೆ ಸಲ್ಲುತ್ತದೆ. ಭಾಷಾಶಾಸ್ತ್ರಜ್ಞರಾಗಿ ಅವರಿಗೆ ಭಾರತಾದ್ಯಂತ ತುಂಬ ಮನ್ನಣೆಯಿತ್ತು. ಅವರು ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ಭಾಷಾಶಾಸ್ತ್ರ ಶಿಕ್ಷಣಕ್ಕೆ ಸಂಬಂಧಿಸಿದಂತೆ ನಡೆಸುತ್ತಿದ್ದ ಗ್ರೀಷ್ಮ ಹಾಗೂ ಬೇಸಿಗೆ ಶಾಲೆಗಳಲ್ಲಿ ಗೌರವ ಪ್ರಾಧ್ಯಾಪಕರೂ, ಭಾಷಾಶಾಸ್ತ್ರಜ್ಞ ಟರ್ನರ್ ಸಮಿತಿಯ

ಸದಸ್ಯರೂ, ಅಖಿಲಭಾರತ ಭಾಷಾವಿಜ್ಞಾನಿಗಳ ಸಂಘದ ಅಧ್ಯಕ್ಷರೂ ಆಗಿದ್ದರು. ರಾಕ್‌ಫೆಲ್ಲರ್ ಪ್ರತಿಷ್ಠಾನದ ಗೌರವ ವೇತನದ ಮೇಲೆ ಅಮೆರಿಕ ಸಂಯುಕ್ತ ಸಂಸ್ಥಾನದ ಮಿಚಿಗನ್ ಮತ್ತು ಪೆನ್ಸಿಲ್ವೇನಿಯಾ ವಿಶ್ವವಿದ್ಯಾನಿಲಯಗಳಲ್ಲಿ ಭಾಷಾಶಾಸ್ತ್ರದ ಉನ್ನತ ವ್ಯಾಸಂಗ ಮಾಡಿದ್ದಲ್ಲದೆ ಆ ಸಂಬಂಧವಾಗಿ ಅವರು ಇಂಗ್ಲೆಂಡ್, ಫ್ರಾನ್ಸ್, ಸ್ವಿಟ್ಸರ್ಲೆಂಡ್, ಹಾಲೆಂಡ್, ಇಟಲಿ ದೇಶಗಳ ಪ್ರವಾಸವನ್ನೂ ಮಾಡಿದ್ದರು (೧೯೫೫-೫೬). ೧೯೫೮ರಲ್ಲಿ ಡೆಕ್ಕನ್ ಕಾಲೇಜಿನವರು ಮೈಸೂರಿನಲ್ಲಿ ಭಾಷಾಶಾಸ್ತ್ರದ ಬೇಸಿಗೆ ಶಾಲೆಯನ್ನು ನಡೆಸಿವಾಗ ತೀ.ನಂ.ಶ್ರೀ.ಯವರು ಸ್ಥಳೀಯ ನಿರ್ದೇಶಕರಾಗಿದ್ದರು. ಅವರು ನಿವೃತ್ತರಾದ ಮೇಲೆಯೂ ದೆಹಲಿ ವಿಶ್ವವಿದ್ಯಾನಿಲಯದಿಂದ ಭಾಷಾಶಾಸ್ತ್ರದ ಪ್ರಾಧ್ಯಾಪಕ ಹುದ್ದೆಗೆ ೧೯೬೫ರಲ್ಲಿ ಅವರಿಗೆ ಆಹ್ವಾನ ಬಂದಿತ್ತು (ಅದನ್ನು ಅವರು ಒಪ್ಪಿಕೊಂಡಿರಲಿಲ್ಲ.) ಕನ್ನಡ ಭಾಷಾಚರಿತ್ರೆ ಎಂಬ ಗ್ರಂಥ ಬರೆಯಲು ಎಲ್ಲ ಸಿದ್ಧತೆ ಮಾಡಿಕೊಂಡಿದ್ದರು. ಅನಿರೀಕ್ಷಿತವಾಗಿ ಬಂದ ಅವರ ಸಾವಿನಿಂದಾಗಿ ಭಾಷಾಶಾಸ್ತ್ರ ಕುರಿತಂತೆ ಬರಬಹುದಾಗಿದ್ದ ಮಹತ್ವದ ಗ್ರಂಥವೊಂದು ಬರದಂತಾಯಿತು. ಇದು ತೀ.ನಂ.ಶ್ರೀ. ಅವರಿಗೆ ಆದ ವೈಯಕ್ತಿಕ ನಷ್ಟಮಾತ್ರವಲ್ಲದೆ ಕನ್ನಡ ನಾಡಿಗೂ ಆದ ದೊಡ್ಡ ನಷ್ಟವೆಂದೇ ಹೇಳಬೇಕು.

ಹೊಸಗನ್ನಡ ಛಂದಸ್ಸಿಗೆ ಸಂಬಂಧಿಸಿದಂತೆ ತೀ.ನಂ.ಶ್ರೀ. ಬರೆದ ಲೇಖನಗಳೂ ತುಂಬ ಮೌಲಿಕವಾಗಿವೆ. "ಕನ್ನಡದಲ್ಲಿ ಹೊಸಮಟ್ಟುಗಳಿಗಿರುವ ಆವಶ್ಯಕತೆ', 'ಹೊಸ ಛಂದಸ್ಸಿನ ಲಯಗಳು', 'ಮಾತ್ರೆ, ಮುಡಿ, ಪದ್ಮಗಣ' ಎಂಬ ಲೇಖನಗಳಂತೂ ಹೊಸಗನ್ನಡ ಛಂದಸ್ಸಿನ ಅಧ್ಯಯನಕ್ಕೆ ಒಂದು ಹೊಸ ದಾರಿಯನ್ನೇ ತೆರೆದು ತೋರಿದ ಲೇಖನಗಳು. ''ಹೊಸ ಛಂದಸ್ಸಿನ ಜೀವಲಯಗಳನ್ನು ಗುರುತಿಸಿ, ಮೂಲ ಲಯ ಮತ್ತು ವೈವಿಧ್ಯಕ್ಕಾಗಿ ತರುವ ಬೇರೆ ಬಗೆಯ ಗಣಗಳು ('ಗಣಪರಿವೃತ್ತಿ'), ಮೌನವು ಮಾತ್ರೆಗಳ ಜಾಗದಲ್ಲಿ ಬರುವ ಸಾಧ್ಯತೆ ಇತ್ಯಾದಿಗಳನ್ನು ಅವರು ಗುರುತಿಸಿ, ಆಯಾ ತತ್ವಗಳಿಗೆ (concepts) ಹೆಸರನ್ನು ಕೊಡದೇ ಹೋಗಿದ್ದರೆ, ಹೊಸಗನ್ನಡ ಛಂದಸ್ಸಿನ ಬಗ್ಗೆ ನಮಗಿರುವ ಅರಿವು ಎಷ್ಟು ತೆಳುವಾಗುತ್ತಿತ್ತು ಎಂಬುದನ್ನು ನೆನೆದರೆ ಭಯವಾಗುತ್ತದೆ"—ಎಂದು ಕನ್ನಡನಾಡಿನ ಅಗ್ರಗಣ್ಯ ಸಂಶೋಧಕರಲ್ಲಿ ಒಬ್ಬರಾದ ಡಾ. ಎಂ. ಚಿದಾನಂದಮೂರ್ತಿಯವರು ಹೇಳಿರುವ ಮಾತು ಉಲ್ಲೇಖನೀಯವಾಗಿದೆ.

'ನಂಬಿಯಣ್ಣನ ರಗಳೆ', 'ಗದಾಯುದ್ಧ ಸಂಗ್ರಹ' ಇವು ತೀ.ನಂ.ಶ್ರೀ. ಅವರ ಸಂಪಾದಿತ ಕೃತಿಗಳು. ರನ್ನನ 'ಗದಾಯುದ್ಧ'ವನ್ನು ಕುರಿತ ಬಿ.ಎಂ.ಶ್ರೀ. ಪರಂಪರೆಯ ವಿಮರ್ಶೆ, ವ್ಯಾಖ್ಯಾನಗಳ ಜಾಡನ್ನು ಅನುಸರಿಸಿ ತೀ.ನಂ.ಶ್ರೀ. ಸಂಗ್ರಹಕಾರ್ಯ ನಡೆಸಿರುವುದರಿಂದ ಅವರ ಗದಾಯುದ್ಧ ಸಂಗ್ರಹದ ಸಂಪಾದನಕಾರ್ಯದಲ್ಲಿ ಆ ಮಟ್ಟಿಗೆ ವಸ್ತುನಿಷ್ಠತೆಯ ಕೊರತೆ ಕಾಣಿಸುತ್ತದೆ. ಅವರ ಸಂಪಾದಿತ ಕೃತಿಗಳಲ್ಲಿ ಗ್ರಂಥ ಸಂಪಾದನಶಾಸ್ತ್ರ ಕುರಿತ ವಿದ್ವತ್ತು, ಪಾಠನಿರ್ಣಯದಲ್ಲಿ ಪ್ರಕಟವಾಗಿರುವ ಸಹೃದಯತೆ, ಸಂವೇದನಶೀಲತೆ ಇವು ಉನ್ನತಮಟ್ಟದ್ದಾಗಿವೆ. ಜಾನಪದವೂ

ತೀ.ನಂ.ಶ್ರೀ.ಯವರ ಆಸಕ್ತಿಯ ವಲಯದಿಂದ ಹೊರಗಿರಲಿಲ್ಲ. ಕ್ಷೇತ್ರಕಾರ್ಯ ಮಾಡದಿದ್ದರೂ ಅವರು 'ಮಕ್ಕಳಿಗೆ ಹೇಳುವ ಕಥೆಗಳು' ಎಂಬ ಲೇಖನ ಬರೆದಿದ್ದಾರೆ; "ಹೆಣ್ಣುಮಕ್ಕಳ ಪದಗಳು" ಎಂಬ ಗ್ರಂಥ ಸಂಪಾದನೆಯ ಕಾರ್ಯಮಾಡಿದ್ದಾರೆ. ಸುಪ್ರಸಿದ್ಧ ಜನಪದ ಕಥನ ಕವನ 'ಕೆರೆಗೆ ಹಾರ' ಕುರಿತು ಅವರು ಬರೆದ ವಿಮರ್ಶೆಯೂ ಪ್ರಸಿದ್ಧವಾಗಿದೆ.

ತೀ.ನಂ.ಶ್ರೀ. ಸೃಜನಶೀಲ ಬರಹಗಾರರೂ ಹೌದು. ಅವರ ಸಾಹಿತ್ಯ ರಚನೆ ಪ್ರಾರಂಭವಾದದ್ದು ಕಾವ್ಯದಿಂದ ಅವರ 'ಒಲುಮೆ' (೧೯೩೨) ಹೊಸಗನ್ನಡದಲ್ಲಿ ಪ್ರೇಮ-ಕವನಗಳ ಮೊದಲ ಕವನಸಂಕಲನವೆಂಬ ಖ್ಯಾತಿ ಪಡೆದಿದೆ. 'ನಂಟರು' ಅವರ ಲಲಿತ ಪ್ರಬಂಧಗಳ ಸಂಕಲನ. 'ರಾಕ್ಷಸನ ಮುದ್ರಿಕೆ' (೧೯೪೨), 'ಬಿಡಿ ಮುತ್ತುಗಳು' (೧೯೭೦) ಅವರು ಭಾಷಾಂತರಿಸಿದ ಕೃತಿಗಳು. ತೀ.ನಂ.ಶ್ರೀ. ಅವರ ಇಂಗ್ಲಿಷ್ ಲೇಖನಗಳೂ ಸುಮಾರು ಇಪ್ಪತ್ತರಷ್ಟಿವೆ. ಕಾವ್ಯ ಮೀಮಾಂಸೆಗೆ ಸಂಬಂಧಿಸಿದ ಕೆಲವು ಮಹತ್ವದ ಲೇಖನಗಳು '*Imagination in Indian Poetics and Other Literary Studies*' (೧೯೮೦) ಎಂಬ ಅವರ ಮರಣಾನಂತರ ಪ್ರಕಟವಾದ ಗ್ರಂಥದಲ್ಲಿ ಸೇರಿವೆ. ವ್ಯಾಕರಣಕ್ಕೆ ಸಂಬಂಧಿಸಿದಂತೆ ಅವರು ಪ್ರಕಟಿಸಿದ 'ಕನ್ನಡ ಮಧ್ಯಮ ವ್ಯಾಕರಣ' (೧೯೩೯) ಎಂಬ ಗ್ರಂಥ ಮತ್ತು ಇತರ ಲೇಖನಗಳೂ ತುಂಬ ಮಹತ್ವದವಾಗಿವೆ. ಕನ್ನಡ ನಿಘಂಟಿಗೆ ಅವರು ನೀಡಿದ ಕೊಡುಗೆ, ಸೇವೆ ಸ್ಮರಣೀಯವಾಗಿವೆ.

ತೀ.ನಂ.ಶ್ರೀ. ಕನ್ನಡದ ಶ್ರೇಷ್ಠ ವಿದ್ವಾಂಸರ ಅಗ್ರಪಂಕ್ತಿಯಲ್ಲಿ ಶಾಶ್ವತವಾದ ಸ್ಥಾನ ಪಡೆದಿರುವವರು. ಕನ್ನಡದ ವಿದ್ವತ್ ಪರಂಪರೆಯನ್ನು ಬೆಳೆಸಿದ ಅಗ್ರಗಣ್ಯರಲ್ಲಿ ಅವರೂ ಒಬ್ಬರು. ಆ ವಿಷಯದಲ್ಲಿ ಅವರಿಗೆ ಸಮಾನರು ಅವರ ತಲೆಮಾರಿನವರಲ್ಲಿ ಬಹುಶಃ ಪ್ರೊ. ಡಿ. ಎಲ್. ನರಸಿಂಹಾಚಾರ್ಯರೊಬ್ಬರೇ. ತೀ. ನಂ. ಶ್ರೀ.ಯವರ ನೆನಪಿಗೆ ಅವರ ಹಿರಿಯರು, ಮಿತ್ರರು, ಅಭಿಮಾನಿಗಳು ಮತ್ತು ವಿದ್ಯಾರ್ಥಿಗಳು ೧೯೭೬ರಲ್ಲಿ 'ಶ್ರೀಕಂಠತೀರ್ಥ' ಎಂಬ ತುಂಬ ಮೌಲಿಕವಾದ ಗ್ರಂಥವನ್ನು ಎಂ. ಚಿದಾನಂದಮೂರ್ತಿ, ತೀ. ಶ್ರೀ. ನಾಗಭೂಷಣ ಮತ್ತು ತೀ. ನಂ. ಶಂಕರನಾರಾಯಣ ಅವರ ಸಂಪಾದಕತ್ವದಲ್ಲಿ ಸಿದ್ಧಪಡಿಸಿ ಅರ್ಪಿಸಿದ್ದಾರೆ. ದೇ. ಜವರೇಗೌಡರು ೧೯೬೭ರಲ್ಲಿ 'ತೀ.ನಂ.ಶ್ರೀ.' ಎಂಬ ಹೆಸರಿನಲ್ಲಿ ಅವರ ಜೀವನ ಚರಿತ್ರೆ ಪ್ರಕಟಿಸಿದ್ದಾರೆ.

ಕೇಂದ್ರಸಾಹಿತ್ಯ ಅಕಾದೆಮಿ ಪ್ರಶಸ್ತಿ

ಡಾ. ಹಾ.ಮಾ. ನಾಯಕರ 'ಸಂಪ್ರತಿ' ಎಂಬ ಗ್ರಂಥಕ್ಕೆ ಕೇಂದ್ರಸಾಹಿತ್ಯ ಅಕಾದೆಮಿಯ ೧೯೮೯ರ ಸಾಹಿತ್ಯ ಪ್ರಶಸ್ತಿ ದೊರೆತಿದೆ. ಅದಕ್ಕಾಗಿ 'ಪ್ರಬುದ್ಧ ಕರ್ಣಾಟಕ'ವು ಅವರನ್ನು ಅಭಿನಂದಿಸುತ್ತದೆ.

ಡಾ. ಹಾ.ಮಾ. ನಾಯಕರು (೧೯೩೧) ಕನ್ನಡದ ತುಂಬ ಮಹತ್ವದ ಗದ್ಯ ಲೇಖಕರು; ನಾಡಿನ ಸುವಿಖ್ಯಾತ ಅಂಕಣ ಬರಹಗಾರರು. ನಿರಂತರವಾದ ಶ್ರದ್ಧಾವಂತ ಕೃಷಿಯಿಂದ ಕನ್ನಡದಲ್ಲಿ ಅಂಕಣ ಬರಹದ ಪ್ರಕಾರಕ್ಕೆ ಒಂದು ರೂಪಗೌರವ, ಗುಣಗೌರವ ತಂದುಕೊಟ್ಟವರಲ್ಲಿ ಅವರು ಮುಖ್ಯರು. ಅವರ ಅಂಕಣ ಬರಹಗಳಲ್ಲಿ ನಾನಾ ವಿಷಯ, ಸಂಗತಿಗಳನ್ನು ಕುರಿತ ಸಾಮಾನ್ಯ ಜ್ಞಾನದ-General Knowledgeನ—ಬೆರಗುಗೊಳಿಸುವ ವ್ಯಾಪ್ತಿ, ವಿಸ್ತಾರ ಇದೆ; ತಮ್ಮದೇ ಆದ ಅನುಭವಗಳನ್ನೂ ವಿಷಯ ಸಂಗತಿಗಳ ನಿರೂಪಣೆಯಲ್ಲಿ ನೇಯ್ದುಮಾಡುವ ಕುಶಲ ಕಸಬುಗಾರಿಕೆ ಇದೆ; ಅಭಿಪ್ರಾಯ, ವ್ಯಾಖ್ಯಾನಗಳನ್ನು ಸೂತ್ರರೂಪದ ಮಾತುಗಳಲ್ಲಿ ಸೂಚಿಸುತ್ತಾ ಸಾಗುವಲ್ಲಿಯೂ ಸ್ವೋಪಜ್ಞತೆ ಇದೆ; ಸೂಕ್ಷ್ಮಜ್ಞತೆ ಇದೆ.

ಅಂಕಣ ಬರಹಗಳ ಸಂಕಲನವಾದ 'ಸಂಪ್ರತಿ'ಗೆ (೧೯೮೮) ಡಾ. ನಾಯಕರು ಕೇಂದ್ರ ಸಾಹಿತ್ಯ ಅಕಾದೆಮಿಯ ಪ್ರಶಸ್ತಿ ಪಡೆದಿರುವುದು ಒಂದು ವಿಶೇಷ. ಕೇಂದ್ರ ಸಾಹಿತ್ಯ ಅಕಾದೆಮಿ ೧೯೫೪ರಿಂದ ಸಾಹಿತ್ಯ ಕೃತಿಗಳಿಗೆ ಪ್ರಶಸ್ತಿ ನೀಡುತ್ತ ಬಂದಿದೆ. ಆದರೆ, ಅಂಕಣ ಸಾಹಿತ್ಯ ಪ್ರಕಾರದಲ್ಲಿ ಬಂದ ಕೃತಿಗೆ ಕೇಂದ್ರಸಾಹಿತ್ಯ ಅಕಾದೆಮಿ ಪ್ರಶಸ್ತಿ ನೀಡಿದ್ದು ಇಷ್ಟು ವರ್ಷಗಳಲ್ಲಿ ಒಂದೇ ಒಂದು ಸಲ. ಆ ಏಕೈಕ ಗೌರವಕ್ಕೆ ಪಾತ್ರರಾದ ಸಾಹಿತಿ ಡಾ. ಹಾ.ಮಾ. ನಾಯಕರು. ಆ ದೃಷ್ಟಿಯಿಂದ ವೈಯಕ್ತಿಕವಾಗಿ ಅವರು ಒಂದು ಮಹತ್ವದ ದಾಖಲೆ ಸ್ಥಾಪಿಸಿದಂತಾಗಿದೆ. ಜೊತೆಗೆ ಅಂಕಣ ಸಾಹಿತ್ಯ ಪ್ರಕಾರಕ್ಕೇ ರಾಷ್ಟ್ರಮಟ್ಟದಲ್ಲಿ ಒಂದು ವಿಶೇಷ ಮನ್ನಣೆಯನ್ನು ತಂದುಕೊಟ್ಟ ಕೀರ್ತಿಗೂ ಅವರು ಪಾತ್ರರಾಗಿದ್ದಾರೆ. ಅವರ ಅಂಕಣ ಬರಹಗಳಿಗೆ ಪ್ರಶಸ್ತಿ ದೊರೆತದ್ದು ಇದೇ ಮೊದಲ ಸಲವಲ್ಲ. ಅವರ 'ಸಂಪ್ರತಿ'ಗೆ ಈ ಮೊದಲೇ ಐ.ಬಿ.ಎಚ್. ಪುಸ್ತಕ ಪ್ರಕಟನ ಸಂಸ್ಥೆ ತನ್ನ ಪ್ರತಿಷ್ಠಿತ ಶಿಕ್ಷಣ ಪ್ರತಿಷ್ಠಾನ ಬಹುಮಾನವನ್ನಿತ್ತು ಗೌರವಿಸಿತ್ತು (೧೯೮೯). ಡಾ. ನಾಯಕರ ಇನ್ನೊಂದು ಮಹತ್ವದ ಅಂಕಣ ಬರಹಗಳ ಸಂಕಲನ 'ಸಾಹಿತ್ಯ ಸಲ್ಲಾಪ'ಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಚಿನ್ನದ ಹಬ್ಬದ ಪ್ರಶಸ್ತಿ ದೊರೆತಿತ್ತು (೧೯೮೦).

'ಗ್ರಂಥಲೋಕದ ಸುತ್ತಮುತ್ತ', 'ಸಲ್ಲಾಪ', 'ಸಂಪುಟ', 'ಸಂಪದ', 'ಸ್ಪಂದನ', 'ಸಮೂಹ', 'ಸಂಪರ್ಕ', 'ಸಾಂಪ್ರತ', 'ಸಂವಹನ'—ಇವು ಡಾ. ಹಾ.ಮಾ. ನಾಯಕರು ಪ್ರಕಟಿಸಿದ ಅಂಕಣ ಬರಹಗಳ ಇತರ ಸಂಕಲನಗಳು.

ಅವರ ಅಂಕಣ ಬರಹಗಳನ್ನು ಅನೇಕ ಸುಪ್ರಸಿದ್ಧ ಸಾಹಿತಿಗಳು ಮುಕ್ತಕಂಠದಿಂದ ಪ್ರಶಂಸಿಸಿದ್ದಾರೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ :

"ಹಲವು ವರ್ಷಗಳಿಂದ ಪತ್ರಿಕೆಗಳಲ್ಲಿ ಬರೆಯುತ್ತಿರುವ ನಾನು ಓದುಗರ ಗಮನ ಸೆಳೆಯಲು ಏನೇನೋ ಚಮತ್ಕಾರ ಮಾಡುತ್ತೇನೆ. ಆದರೆ ಅಂಥ ಯಾವುದೇ ಚಮತ್ಕಾರವನ್ನು ಮಾಡದೆ ಓದುಗರನ್ನು ಆಕರ್ಷಿಸುವ ಅವರ ಶೈಲಿಯನ್ನು ನೋಡಿ ನಾನು ಅನೇಕ ಸಾರಿ ಅಸೂಯೆಪಟ್ಟಿದ್ದೇನೆ. ನನಗೆ ಇದು ಸಾಧಿಸಿಲ್ಲವಲ್ಲ ಎನಿಸುತ್ತದೆ. ಒಬ್ಬ ಲೇಖಕರಿಗೆ ಇದಕ್ಕಿಂತ ಹೆಚ್ಚಿನ ಪ್ರಶಂಸೆ ಸಾಧ್ಯವಿಲ್ಲ. ವ್ಯಾಪಕ ವಾದ ವ್ಯಾಸಂಗ, ವಿಶಾಲವಾದ ಅನುಭವ, ಅನುಕಂಪನಶೀಲವಾದ ಮನಸ್ಸು ಈ ಬರಹಗಳ ಹಿಂದೆ ಕೆಲಸ ಮಾಡುತ್ತದೆ. ಹಾ. ಮಾ. ನಾ. ಅವರದು ಜಗತ್ತಿನ ಎಲ್ಲ ಒಳ್ಳೆಯ ಪ್ರವೃತ್ತಿಗಳಿಗೂ ಸದಾ ತೆರೆದು ಕೊಂಡ ಮನಸ್ಸು....ಅವರದು ಕನ್ನಡದ ನೆಲೆಯಲ್ಲಿ ಗಟ್ಟಿಯಾಗಿ ಊರಿನಿಂತ ವಿಶ್ವದೃಷ್ಟಿ. ಆದ್ದರಿಂದಲೇ ಅವರ ಬರವಣಿಗೆಯ ಗುಣ, ಪರಿಣಾಮ ಅನನ್ಯವಾದಂಥವು."

"ಈಗ (ಸಂಪ್ರತಿ) ಬಹಳ ಉದ್ವೇಗಜನಕ ಕಾಲ. ಡಾ. ಹಾ.ಮಾ. ನಾಯಕರ ಸುಸಂಸ್ಕೃತ ಸಂವೇದನಾಶೀಲ ಮನಸ್ಸು ತನ್ನ ತಿಳಿ, ಓಜಸ್ವೀ ಶೈಲಿಯಲ್ಲಿ ಬರೆದ ನಿರ್ಭೀತ ಅಂಕಣಗಳು ಜನರ ಮೆಚ್ಚುಗೆ ಪಡೆಯುವುದು ಸ್ವಾಭಾವಿಕ. ಇಂದಿನ ಕೋಲಾಹಲ ಕಾಲದಲ್ಲೂ ಅವರು ಸಂಯಮ ಸಮತೋಲಗಳನ್ನು ಉಳಿಸಿಕೊಂಡು ಬಂದಿದ್ದು ನಾಡಿನ ಸಂಸ್ಕೃತಿಗೆ ಒಂದು ಅಪೂರ್ವ ಕೊಡುಗೆಯಾಗಿದೆ. ಕನ್ನಡ ಪತ್ರಿಕೆಗಳಿಗೆ ಈ ಸಂಯಮ ಸಮತೋಲಗಳ ಪರಂಪರೆಯೇ ಇದೆ. ಮಾಸ್ತಿ, ಡಿ. ವಿ. ಜಿ., ತಿ. ತಾ. ಶರ್ಮರ ಈ ಪರಂಪರೆಯನ್ನು ಸಂಪ್ರತಿಯ ಸಂದಿಗ್ಧ ಸಮಯದಲ್ಲೂ ಉಳಿಸಿಕೊಂಡ ಶ್ರೇಯಸ್ಸು ಹಾ.ಮಾ.ನಾ.ಗೆ ಸಲ್ಲಬೇಕು.

ಇಂಗ್ಲಿಷೂ ಸೇರಿದಂತೆ ನನಗೆ ಗೊತ್ತಿರುವ ನಾಲ್ಕೈದು ಮುಖ್ಯ ಭಾರತೀಯ ಭಾಷೆಗಳ ಪತ್ರಿಕೋದ್ಯಮದಲ್ಲಿ ಡಾ. ಹಾ.ಮಾ. ನಾಯಕರ ಅಂಕಣಗಳಂತೆ ಸಾಂಸ್ಕೃತಿಕ ಮಹತ್ವ ಮತ್ತು ಸಾಹಿತ್ಯಿಕ ಸೌಂದರ್ಯ ವಿರುವ ಅಂಕಣಗಳನ್ನು ನಾನು ನೋಡಿಲ್ಲ. ವಿಷಯಗಳ ಆಯ್ಕೆ, ನಿರೂಪಣೆ, ಪ್ರತಿಪಾದನೆಗಳಲ್ಲಿ ಅವರು ಅದ್ವಿತೀಯರು."

"ವಿಶ್ವದ ಎಲ್ಲ ವಿಷಯಗಳ ಬಗೆಗೂ ರಾಜಕೀಯ ವ್ಯಕ್ತಿಗಳೇ ಅಧಿಕಾರವಾಣಿಯಿಂದ ಮಾತನಾಡುತ್ತಿರುವ ಇಂದಿನ ನಮ್ಮ ವಿಪರ್ಯಸ್ತ ಸಾಂಸ್ಕೃತಿಕ ಸಂದರ್ಭದಲ್ಲಿ ಭಾಷೆ ಸತ್ಯದ ಮುಖವನ್ನು ಮುಚ್ಚುವ ಹಿರಣ್ಮಯ ಪಾತ್ರೆಯಾಗಿಬಿಟ್ಟಿದೆ. ಇಂಥ ಅವಸ್ಥೆಯನ್ನು ಮೀರಿ ಒಬ್ಬ ವಿಚಾರವಂತ, ಪ್ರಚಲಿತ ವ್ಯಕ್ತಿ-ವಿಷಯಗಳ ಬಗ್ಗೆ ಪರಿಶ್ರಮ ಮತ್ತು ಚಿಂತನೆಗಳಿಂದ ತಾನು ದೊರಕಿಸಿಕೊಂಡ ತಿಳಿವಳಿಕೆಯನ್ನು ಸಾಮಾನ್ಯ ಜನರೊಂದಿಗೆ ಹಂಚಿಕೊಂಡಾಗ ಅದಕ್ಕೆ ವಿಶೇಷ ಮಹತ್ವ ಬರುತ್ತದೆ. ಕೆಲವರಲ್ಲಿ ಈ ತಿಳಿವಳಿಕೆ ಇದ್ದರೂ ಅದನ್ನು ಇತರರಿಗೆ ಕೊಡಬೇಕೆನ್ನುವ ಲವಲವಿಕೆಯಾಗಲಿ ಮತ್ತು ಇಂಥ ಕಾರ್ಯಕ್ಕೆ ಬೇಕಾದ ಕಲೆಯಾಗಲಿ ಇರುವುದಿಲ್ಲ.

ಹಾ.ಮಾ. ನಾಯಕರ ವ್ಯಕ್ತಿತ್ವದಲ್ಲಿ ಈ ಎರಡೂ ಗುಣಗಳು ಇರುವುದರಿಂದ ಅವರ ದನಿ ಆಕರ್ಷಕವಾಗಿದೆ. ವರ್ಷದುದ್ದಕ್ಕೂ ಪ್ರತಿ ವಾರ ತಪ್ಪದೆ ಈ ದನಿ ಕೇಳಿಬಂದರೂ ಅದು ಎಂದೂ ನೀರಸ ಅಥವಾ ನಿರರ್ಥಕ ಎನಿಸಿದ್ದಿಲ್ಲ. ಇದು ನಾಯಕರ ಶ್ರೇಷ್ಠ ಸಾಧನೆ."

—ಈ ಮೇಲಿನ ಮೂರು ಅವತರಣಿಕೆಗಳಲ್ಲಿ ಮೊದಲನೆಯದು ಕನ್ನಡದ ಮುಂಚೂಣಿಯ ಅಂಕಣ ಬರಹಗಾರರಲ್ಲಿ ಒಬ್ಬರಾದ ಪ್ರೊ. ಎಚ್. ಎಸ್. ಕೆ. ಅವರದು. ಎರಡನೆಯದು ಕೇಂದ್ರ ಸಾಹಿತ್ಯ ಅಕಾದೆಮಿ ಪ್ರಶಸ್ತಿ ಪಡೆದವರಲ್ಲಿ ಒಬ್ಬರಾದ ಕಾದಂಬರಿಕಾರ, ಕವಿ, ವಿಮರ್ಶಕ ಡಾ. ಶಂಕರ ಮೊಕಾಶಿ ಪುಣೇಕರ ಅವರದು. ಮೂರನೆಯದು ಮಹಾರಾಷ್ಟ್ರದ ಮರಾಠವಾಡಾ ವಿಶ್ವವಿದ್ಯಾನಿಲಯದ ಇಂಗ್ಲಿಷ್ ವಿಭಾಗದ ಮುಖ್ಯಸ್ಥರಾಗಿದ್ದು ನಿವೃತ್ತರಾಗಿರುವ ಹಾಗೂ ಕನ್ನಡದ ಮಹತ್ವದ ಸಾಹಿತ್ಯ ವಿಮರ್ಶಕರಲ್ಲಿ ಒಬ್ಬರಾದ ಡಾ. ಜಿ.ಎಸ್. ಅಮೂರ ಅವರದು.

ಡಾ. ನಾಯಕರು ಅಂಕಣ ಬರಹವನ್ನು ಜನಶಿಕ್ಷಣದ ಕಾಯಕ ಎಂಬ ಶ್ರದ್ಧೆಯಿಂದಲೂ ಬರೆಯುತ್ತ ಬಂದವರು. ಸಾಹಿತಿಗಳು ಮಾತ್ರವಲ್ಲ ಸಾಮಾನ್ಯ ಅಭಿರುಚಿ ಮತ್ತು ಆಸಕ್ತಿ ಇರುವ ಓದುಗರೂ ಅವರ ಅಂಕಣ ಬರಹಗಳನ್ನು ಅಪೂರ್ವ ಎಂಬಂಥ ರೀತಿಯಲ್ಲಿ ಮೆಚ್ಚಿಕೊಂಡಿದ್ದಾರೆಂಬುದಕ್ಕೆ ಅವರ ವಾರವಾರದ ಅಂಕಣ ಬರಹಗಳನ್ನು ಕುರಿತಂತೆ ಪ್ರಕಟವಾಗುತ್ತಿದ್ದ ಓದುಗರ ಪತ್ರಗಳು ಸಾಕ್ಷಿಯಾಗಿವೆ. ಕಥೆ, ಕಾದಂಬರಿಗಳನ್ನು ಬರೆಯದೆ ವಿಚಾರಶೀಲ ಸಾಹಿತ್ಯದ ಬರವಣಿಗೆಯ ಮೂಲಕವೇ ಇಷ್ಟು ಪ್ರಸಿದ್ಧಿ ಮತ್ತು ಜನಪ್ರಿಯತೆಯನ್ನು ಪಡೆದ ಕನ್ನಡ ಸಾಹಿತಿ ಬಹುಶಃ ಬೇರೆ ಯಾರೂ ಇಲ್ಲ.

ಡಾ. ನಾಯಕರು ಸುಪ್ರಸಿದ್ಧ ಸಾಹಿತ್ಯ ವಿಮರ್ಶಕರು. ೧೯೫೬ರಿಂದ ೧೯೬೫ರ ವರೆಗೆ ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಪ್ರಕಟವಾದ ಕೃತಿಗಳ ವಿಮರ್ಶಾತ್ಮಕ

ಸಮೀಕ್ಷೆಯು ಅವರ 'ಸಮೀಕ್ಷೆ' ಗ್ರಂಥದಲ್ಲಿರುವ ಲೇಖನ ಅವರ ವಿಮರ್ಶೆಯ ಬರೆವಣಿಗೆಗಳಲ್ಲಿ ಮುಖ್ಯವಾದದ್ದು 'Kannada Literature : A Decade' ಎಂಬ ಹೆಸರಿನಲ್ಲಿ ಅದು ಒಂದು ಪ್ರತ್ಯೇಕ ಇಂಗ್ಲಿಷ್ ಗ್ರಂಥವಾಗಿಯೂ ಪ್ರಕಟವಾಗಿದೆ. 'ಗ್ರಂಥಲೋಕದ ಸುತ್ತಮುತ್ತ' 'ಸಂಪುಟ' 'ಸಂಪದ' ದಂಥ ಗ್ರಂಥಗಳಲ್ಲಿ ಅನೇಕ ಸಾಹಿತ್ಯ ಕೃತಿಗಳನ್ನು ಕುರಿತ ವಿಮರ್ಶಾತ್ಮಕ ಅವಲೋಕನ ಬರೆಹಗಳಿವೆ. ಅಂಕಣ ಬರೆವಣಿಗೆಯ ಇತರ ಪುಸ್ತಕಗಳಲ್ಲಿಯೂ ಕವಿ, ಕೃತಿಗಳಿಗೆ ಸಂಬಂಧಿಸಿದ ಎಷ್ಟೋ ಉತ್ತಮ, ಉಪಯುಕ್ತ ಲೇಖನಗಳಿವೆ.

ಸಹೃದಯತೆಗೆ, ರಸಜ್ಞತೆಗೆ ಡಾ. ನಾಯಕರ ವಿಮರ್ಶೆಯಲ್ಲಿ ಕೊರತೆಯಿಲ್ಲ. ಹಾಗೆಂದು ಭಾವುಕತೆ ಅವರ ಬರವಣಿಗೆಯ ಲಕ್ಷಣವಲ್ಲ. ಸಮೃದ್ಧ ಲೋಕಾನುಭವ, ಕೃತಿಯ ಜೀವಾಳವನ್ನು ಗುರುತಿಸುವ ಸಂವೇದನಶೀಲತೆ, ಮೌಲ್ಯನಿಷ್ಠೆಯುಳ್ಳ ಜೀವನವಿವೇಕ ಅವರ ವಿಮರ್ಶೆಯನ್ನು ನಿರ್ದೇಶಿಸುವುದು, ನಿಯಂತ್ರಿಸುವುದು ಓದುಗನ ಅನುಭವಕ್ಕೆ ಬರುತ್ತದೆ. ಅವರ ಲೇಖನಗಳಲ್ಲಿ ಕೃತಿಯ ವಿವರವಾದ ವಿಶ್ಲೇಷಣೆ, ಆಳವಾದ ಪರಿಕಲ್ಪನಾತ್ಮಕ ಮತ್ತು ತಾತ್ವಿಕ ಒಳನೋಟಗಳು, ವ್ಯಾಪಕವಾದ ತೌಲನಿಕ ಪರಾಮರ್ಶನ—ಇವು ಹೆಚ್ಚಿನ ಪ್ರಮಾಣ ಮತ್ತು ನೆಲೆಗಳಲ್ಲಿ ಕ್ರಿಯಾಶೀಲವಾಗಿದ್ದರೆ ಡಾ. ಹಾ. ಮಾ. ನಾಯಕರ ವಿಮರ್ಶೆಯ ಮಹತ್ವ ಇನ್ನೂ ಹೆಚ್ಚಿನದಾಗುತ್ತಿತ್ತು. ತಮ್ಮ ಧೀಮಂತಿಕೆ, ಪ್ರತಿಭೆ, ವ್ಯುತ್ಪತ್ತಿ, ಕರ್ತೃತ್ವ ಶಕ್ತಿಗಳನ್ನು ಅವರು ಸಾಹಿತ್ಯ ವಿಮರ್ಶೆಯ ಬರೆವಣಿಗೆಗೇ ಸಂಪೂರ್ಣವಾಗಿ ದುಡಿಸದಿದ್ದುದು ಇದಕ್ಕೆ ಕಾರಣವಿರಬಹುದು. ಡಾ. ನಾಯಕರು ಲಲಿತಪ್ರಬಂಧ, ಕಿರುಪ್ರಬಂಧ, ಜೀವನ ಚರಿತ್ರೆ, ಕವಿತೆ, ಅನುವಾದ, ಮಕ್ಕಳ ಸಾಹಿತ್ಯ, ಗ್ರಂಥಸೂಚಿ ಮುಂತಾದ ಪ್ರಕಾರಗಳಲ್ಲಿಯೂ ಅನೇಕ ಕೃತಿಗಳನ್ನು ಪ್ರಕಟಿಸಿದ್ದಾರೆ.

ಡಾ. ಹಾ.ಮಾ. ನಾಯಕರು ಕನ್ನಡದಲ್ಲಿ ಮಾತ್ರವಲ್ಲದೆ ಭಾಷಾವಿಜ್ಞಾನದಲ್ಲಿಯೂ ಪ್ರಾಧ್ಯಾಪಕರು. ಮೈಸೂರು ವಿಶ್ವವಿದ್ಯಾನಿಲಯದಿಂದ ೧೯೫೫ರಲ್ಲಿ ಕನ್ನಡದಲ್ಲಿ ಬಿ.ಎ. (ಆನರ್ಸ್) ಪದವಿ ಪಡೆದು, ಕೆಲಕಾಲ ತುಮಕೂರಿನ ಸರ್ಕಾರಿ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ಸೇವೆ ಸಲ್ಲಿಸಿ, ಕಲ್ಕತ್ತಾ ವಿಶ್ವವಿದ್ಯಾನಿಲಯದಲ್ಲಿ ಪ್ರಥಮವರ್ಗ ಪ್ರಥಮಸ್ಥಾನದೊಂದಿಗೆ ಚಿನ್ನದ ಪದಕ ವಿಜೇತರಾಗಿ ಉತ್ತೀರ್ಣರಾದರು. ಮುಂದೆ ಕೆಲವು ವರ್ಷಗಳಕಾಲ ಶಿವಮೊಗ್ಗದ ಸಹ್ಯಾದ್ರಿ ಕಾಲೇಜು, ಮೈಸೂರಿನ ಮಹಾರಾಜ ಕಾಲೇಜು, ಮಾನಸಗಂಗೋತ್ರಿ ಇವುಗಳಲ್ಲಿ ಅಧ್ಯಾಪಕರಾಗಿದ್ದು, ಅಮೆರಿಕದ ಇಂಡಿಯಾನಾ ವಿಶ್ವವಿದ್ಯಾನಿಲಯಕ್ಕೆ ಹೋಗಿ ಅಲ್ಲಿ ವರ್ಣನಾತ್ಮಕ ಭಾಷಾವಿಜ್ಞಾನ ಮತ್ತು ಸಾಂಸ್ಕೃತಿಕ ಮಾನವಶಾಸ್ತ್ರ ವಿಷಯಗಳಲ್ಲಿ ಅಧ್ಯಯನ ಮಾಡಿ ೧೯೬೪ರಲ್ಲಿ 'Kannada: Literary and Colloquial' ಎಂಬ ಸಂಶೋಧನ ಪ್ರಬಂಧಕ್ಕೆ ಅವರು ಪಿಎಚ್.ಡಿ. ಪದವಿ ಪಡೆದರು. ಭಾಷಾಶಾಸ್ತ್ರದಲ್ಲಿ ಅತ್ಯುತ್ತಮ ಅಧ್ಯಾಪಕರೆಂದು ಖ್ಯಾತರಾಗಿರುವ ಅವರು ವಿಶ್ವವಿದ್ಯಾನಿಲಯ

ಅನುದಾನ ಆಯೋಗದ (ಯು.ಜಿ ಸಿ.) 'Linguistic panel'ನ ಸದಸ್ಯರಾಗಿದ್ದಾರೆ. ಡೆಹ್ರಾಡೂನ್ (೧೯೫೭), ಕೊಯಮುತ್ತೂರು (೧೯೬೦), ಬ್ಲೂಮಿಂಗ್‌ಟನ್ (೧೯೬೪)ಗಳಲ್ಲಿ ನಡೆದ ಭಾಷಾವಿಜ್ಞಾನದ ಬೇಸಿಗೆ ಶಾಲೆಗಳಲ್ಲಿ ಹಾಗೂ ರುಮೇನಿಯಾದಲ್ಲಿ ೧೯೬೭ರಲ್ಲಿ ನಡೆದ '10th International Congress of Linguistics'ನಲ್ಲಿ ಅವರು ಭಾಗವಹಿಸಿದ್ದರು.

ಜಾನಪದ ಅಧ್ಯಯನ ಕರ್ನಾಟಕದಲ್ಲಿ ಶಾಸ್ತ್ರೀಯವಾಗಿ ಬೆಳೆಯುವುದಕ್ಕೆ ಕಾರಣಕರ್ತರಾದ ಮುಖ್ಯರಲ್ಲಿ ಡಾ. ಹಾ.ಮಾ. ನಾಯಕರೂ ಒಬ್ಬರು. 'Folklore'ಗೆ ಈಗ ಬಳಕೆಯಲ್ಲಿರುವ 'ಜಾನಪದ' ಎಂಬ ಪದವನ್ನು ಸೂಚಿಸಿದವರೂ ಅವರೆ. ಅವರ 'ಜಾನಪದ ಸ್ವರೂಪ' ಕರ್ನಾಟಕದಲ್ಲಿ ಜಾನಪದ ಅಧ್ಯಯನಕ್ಕೆ ಸಂಬಂಧಿಸಿದಂತೆ ಸೂಕ್ತ ಅರಿವು ಮತ್ತು ಮಾರ್ಗದರ್ಶನ ನೀಡಿದ ಗ್ರಂಥವೆನಿಸಿದೆ. ಅದು ಇತರ ಭಾಷೆಗಳಿಗೂ ಅನುವಾದವಾಗಿದೆ. ಅವರ 'ಜಾನಪದ ಗ್ರಂಥಸೂಚಿ' ಜಾನಪದ ಕುರಿತು ಕನ್ನಡದಲ್ಲಿ ಬಂದ ಗ್ರಂಥಗಳ, ಲೇಖನಗಳ ಸೂಚಿಮಾತ್ರವಲ್ಲದೆ ಆ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಒಂದು ಉಪಯುಕ್ತವಾದ ಅಪೂರ್ವ ಆಕರಗ್ರಂಥವೂ ಆಗಿದೆ. ಅವರು ಕಲ್ಕತ್ತಾದಲ್ಲಿ ೧೯೭೮ರಲ್ಲಿ ನಡೆದ 'Folklore Session of 10th International Congress of Anthropological and Ethnological Sciences'ದ ಅಧ್ಯಕ್ಷರೂ ೧೯೭೪ರಲ್ಲಿ ಮಂಡ್ಯದಲ್ಲಿ ನಡೆದ ೪೮ನೆಯ ಅಖಿಲಭಾರತ ಸಾಹಿತ್ಯ ಸಮ್ಮೇಳನದಲ್ಲಿ ಜಾನಪದ ಗೋಷ್ಠಿಯ ಅಧ್ಯಕ್ಷರೂ, ದಾವಣಗೆರೆಯಲ್ಲಿ ನಡೆದ ಅಖಿಲಕರ್ನಾಟಕ ಜಾನಪದ ಸಮ್ಮೇಳನದ (೧೯೮೭) ಅಧ್ಯಕ್ಷರೂ ಆಗಿದ್ದರು.

ಡಾ. ನಾಯಕರು ಅಧ್ಯಾಪಕವೃತ್ತಿಗೆ ಸೇರಿದವರಾಗಿದ್ದರೂ ಅವರು ತಮ್ಮ ಸೇವಾವಧಿಯ ಹೆಚ್ಚಿನಕಾಲ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದರು (೧೯೬೯–೮೪). ಅವರು ಶೀಲ, ಶಿಸ್ತು, ದುಡಿಮೆ, ದಕ್ಷತೆ, ನ್ಯಾಯ ನಿಷ್ಠುರತೆಗಳಿಂದ ಆಡಳಿತವನ್ನು ನಡೆಸಿಕೊಂಡು ಬಂದವರು. ನಮ್ಮ ಇಂದಿನ ಸಾಮಾಜಿಕ, ಸಾಂಸ್ಕೃತಿಕ ಸಂದರ್ಭದಲ್ಲಿ ವ್ಯವಸ್ಥೆ, ಆಡಳಿತಗಳು ಹೇರುವ ಒತ್ತಡ, ಅಡೆತಡೆಗಳ ನಡುವೆಯೂ ಶೈಕ್ಷಣಿಕ ಪರಿಸರದಲ್ಲಿ ಮುನ್ನೋಟವಿರುವ ಒಬ್ಬ ಸಮರ್ಥ ಆಡಳಿತಗಾರ ಹೇಗಿರಬಹುದು ಎಂಬುದಕ್ಕೆ ಡಾ. ನಾಯಕರು ಮಾದರಿ ಎಂಬಂತಾದವರು. ತಮ್ಮ ನಡೆವಳಿಕೆ, ವ್ಯವಹಾರಗಳ ಮೂಲಕವೇ ಸಮರ್ಥ ಆಡಳಿತದ ಮತ್ತು ಶ್ರೇಷ್ಠ ಮಟ್ಟದ ಶಿಸ್ತಿನ ಪರಿಕಲ್ಪನೆಯನ್ನು ಸ್ಪಷ್ಟಪಡಿಸಿಕೊಡುತ್ತಿದ್ದವರು ಅವರು. ಕಲಬುರ್ಗಿ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದು ಒಂದು ತತ್ವದ ಕಾರಣಕ್ಕಾಗಿ ಅವರು ಆ ಹುದ್ದೆಗೆ ರಾಜೀನಾಮೆ ಕೊಟ್ಟು ಕನ್ನಡ ಅಧ್ಯಯನ ಸಂಸ್ಥೆಗೇ ಮರಳಿಬಂದು ಪ್ರಾಧ್ಯಾಪಕರಾಗಿ ಕೆಲಸಮಾಡುತ್ತಿರುವುದಕ್ಕೂ ಡಾ. ನಾಯಕರ ಈ ಬಗೆಯ ಮನೋಧರ್ಮವೇ ಕಾರಣ ಎನ್ನಬಹುದು.

ಆಡಳಿತಗಾರರಾಗಿದ್ದಾಗಲೂ ಡಾ. ನಾಯಕರು ಅವರ ಸ್ವಂತದ ವಿಕಾಸ ಮತ್ತು

ಸಾಧನೆಯ ದೃಷ್ಟಿಯಿಂದ ಕಳೆದುಕೊಂಡದ್ದಕ್ಕಿಂತ ಹೆಚ್ಚಿನದನ್ನು ಪಡೆದುಕೊಳ್ಳುವ ದಾರಿಯನ್ನು ಕಂಡುಹಿಡಿದುಕೊಂಡವರು. ಅವರ ಮಾತಿನಲ್ಲಿಯೇ ಹೇಳುವುದಾದರೆ ಅವರು 'ಸ್ಥಿತಪ್ರಜ್ಞರು'. ಆಡಳಿತ, ಅಧಿಕಾರಗಳಿಗೆ ಒದಗಿಬರುವ ಅನುಕೂಲ, ಅವಕಾಶಗಳನ್ನು ಕನ್ನಡ ಕಟ್ಟುವ ಕೆಲಸದ ಅವರ ಆದರ್ಶಕ್ಕೆ ಪ್ರಯೋಜನವಾಗುವಂತೆ ಬಳಸಬಹುದಾದ ವ್ಯವಹಾರ ವಿವೇಕವನ್ನು ಆ ಸ್ಥಿತಪ್ರಜ್ಞೆ ಅವರಲ್ಲಿ ಬೆಳೆಸಿತೆನ್ನಬೇಕು. ಅಂಕಣ ಬರೆಹಗಳು ಹಾಗೂ 'ಸೂಲಂಗಿ', 'ಸಂಗತಿ' ಗ್ರಂಥಗಳಲ್ಲಿರುವಂಥ ಕಿರು ಪ್ರಬಂಧಗಳು ಕಿರುವ್ಯಾಪ್ತಿಯ ಬರವಣಿಗೆಗಳು. ಡಾ. ನಾಯಕರ ಕಿರುಪ್ರಬಂಧಗಳು ಆ ಪ್ರಕಾರದ ಬರವಣಿಗೆಗೆ ಉತ್ಕೃಷ್ಟ ಮಾದರಿಗಳಾಗಿವೆ. ಅಷ್ಟು ಅಡಕವಾಗಿ, ಚೂಪಾಗಿ, ಸ್ಫಟಿಕಸ್ಪಷ್ಟವಾಗಿ, ಚಿಂತನೆಯ ಸಾರವಾಗಿ ಇರುವ ಬರವಣಿಗೆಗಳು ಕನ್ನಡದಲ್ಲಿ ಅಪರೂಪ. ಇಂಥ ಪ್ರಕಾರಗಳನ್ನು ತಮ್ಮ ವಿಚಾರ, ಚಿಂತನಗಳ ಅಭಿವ್ಯಕ್ತಿಯ ಮಾಧ್ಯಮಗಳನ್ನಾಗಿ ಆಯ್ಕೆ ಮಾಡಿಕೊಂಡದ್ದಕ್ಕೆ ಈ 'ಸ್ಥಿತಪ್ರಜ್ಞೆ'ಯೂ ಕಾರಣವಾಗಿರಬಹುದು.

ಬರೆಹಗಾರರಾಗಿ ಅವರ ಕೊಡುಗೆ ತುಂಬ ಮಹತ್ವದ್ದಾದರೂ ಡಾ. ನಾಯಕರ ಕರ್ತೃತ್ವಶಕ್ತಿ ಅದ್ವಿತೀಯವಾದ ರೀತಿಯಲ್ಲಿ ದುಡಿದದ್ದು ಕನ್ನಡವನ್ನು ಕಟ್ಟುವ, ಕಾಯುವ ಕೆಲಸದಲ್ಲಿ. ಬೀದರಿನಲ್ಲಿ ೧೯೮೫ ರಲ್ಲಿ ನಡೆದ ಐವತ್ತೇಳನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ತಮ್ಮ ಅಧ್ಯಕ್ಷ ಭಾಷಣದಲ್ಲಿ ಅವರು ತಮ್ಮನ್ನು 'ಅದ್ಭುತ ಸೃಜನಶೀಲ'ರ, 'ಮಹಾವಿದ್ವಾಂಸ'ರ ಗುಂಪಿಗೆ ಸೇರಿಸಿಕೊಳ್ಳದೆ 'ಕನ್ನಡದ ಕೆಲಸಗಾರ'ರ ಗುಂಪಿಗೆ ಸೇರಿಸಿಕೊಂಡು "ನಾನು ಕನ್ನಡದ ಕೆಲಸಗಾರರಲ್ಲಿ ಕೊನೆಯವನು, ಕಿರಿಯವನು, ನನಗಿಂತ ಕೊನೆಯವರಿಲ್ಲ, ಕಿರಿಯರಿಲ್ಲ" ಎಂದು ವಿನಯದ ಮಾತುಗಳನ್ನಾಡಿದ್ದರು. ಆದರೆ ಈವರೆಗೆ ಕನ್ನಡ ಕಟ್ಟುವ, ಕಾಯುವ ಕೆಲಸ ಮಾಡಿದ, ಮಾಡುತ್ತಲಿರುವ ಯಾರಿಗಿಂತಲೂ ಡಾ. ನಾಯಕರು ಮಾಡಿದ ಕೆಲಸದ ಪ್ರಮಾಣ, ವ್ಯಾಪ್ತಿ ಮತ್ತು ಪ್ರಯೋಜನ ಕಡಮೆಯದಲ್ಲ. "ನಮ್ಮ ಹಿರಿಯರು ಮಾಡಿಹೋದ ಕೆಲಸ ಕನ್ನಡವನ್ನು ಕಟ್ಟುವುದು ; ಕನ್ನಡವನ್ನು ಕಟ್ಟುವ ಕೆಲಸ ಸತತವಾಗಿ ನಡೆಯುವಂಥದು ; ನಡೆಯಬೇಕಾದದ್ದು" ಎಂಬ ತಿಳಿವಳಿಕೆಯಿಂದ ಡಾ. ನಾಯಕರು ಸತತವಾಗಿ ಅದಕ್ಕಾಗಿ ಶ್ರದ್ಧೆ, ನಿಷ್ಠೆಗಳಿಂದ ದುಡಿಯುತ್ತ ಬಂದಿದ್ದಾರೆ.

ಡಾ. ಹಾ.ಮಾ. ನಾಯಕರು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದ ಕಾಲಾವಧಿಯಲ್ಲಿ ಕನ್ನಡದ ಬೆಳವಣಿಗೆಗೆ ಅಗತ್ಯವಾದ ಎಷ್ಟೋ ಯೋಜನೆಗಳನ್ನು ಕಾರ್ಯಗತಗೊಳಿಸಿದ್ದರು. ಅವರು ನಿರ್ದೇಶಕರಾಗುವುದಕ್ಕಿಂತ ಹಿಂದೆಯೇ ರೂಪಿತವಾಗಿದ್ದ ಯೋಜನೆಗಳ ಕಾರ್ಯವನ್ನು ಸಮರ್ಥವಾಗಿ ಮುಂದುವರಿಸಿಕೊಂಡು ಬಂದದ್ದು ಮಾತ್ರವಲ್ಲದೆ ಹೊಸ ಹೊಸ ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸಿದರು. ಅವರ ಪ್ರಧಾನ ಸಂಪಾದಕತ್ವದಲ್ಲಿ ಕನ್ನಡ ವಿಶ್ವಕೋಶ, ಎಪಿಗ್ರಾಫಿಯಾ

ಕರ್ನಾಟಕ, ಕನ್ನಡ ಸಾಹಿತ್ಯ ಚರಿತ್ರೆ, ಛಂದಸ್ಸಿನ ಚರಿತ್ರೆ ಇವುಗಳಿಗೆ ಸಂಬಂಧಿಸಿದ ಹಲವು ಸಂಪುಟಗಳು ಪ್ರಕಟವಾಗಿವೆ. ಕಾನೂನು ಪುಸ್ತಕಮಾಲೆ, ಕನ್ನಡ ಲೇಖಕರನ್ನು ಕನ್ನಡೇತರರಿಗೆ ಪರಿಚಯಿಸುವ ಇಂಗ್ಲಿಷ್ ಪುಸ್ತಕಗಳ ಮಾಲೆ —'Kannada writers and their work'—ಇವುಗಳಲ್ಲಿಯೂ ಹಲವು ಪುಸ್ತಕಗಳು ಹೊರಬಂದಿವೆ. ಇವುಗಳಲ್ಲದೆ ಬಿ. ಎಸ್. ಗುಪ್ತಾ ಅವರ ದಾನದ ಜನ್ಮಭೂಮಿ ಟ್ರಸ್ಟ್ ದತ್ತಿ ಪುಸ್ತಕ ಮಾಲೆ, ಪ್ರಾಚೀನ ಕನ್ನಡ ಕೃತಿಗಳ ಸಂಪಾದನೆ ಮತ್ತು ಪ್ರಕಟನೆ, ಧರ್ಮಶಾಸ್ತ್ರದ ಇತಿಹಾಸ ಸಂಪುಟಗಳ ಯೋಜನೆ, ಸ್ನಾತಕ ಮತ್ತು ಸ್ನಾತಕೋತ್ತರ ಹಂತಗಳಲ್ಲಿನ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ಅಗತ್ಯವಾದ ಪಠ್ಯ ಪುಸ್ತಕಗಳು ಮತ್ತು ಸಂದರ್ಭಗ್ರಂಥಗಳನ್ನು ಒಳಗೊಂಡ 'ಪಠ್ಯಪುಸ್ತಕಮಾಲೆ', ಸುಲಭ ಆವೃತ್ತಿಯ ಪ್ರಕಟಣೆ, ಸಮಗ್ರ ಕೃತಿಗಳ ಪ್ರಕಟನ ಯೋಜನೆ, ರಾಷ್ಟ್ರೀಯ ವಿಚಾರಗೋಷ್ಠಿಗಳನ್ನು ಸಂಘಟಿಸಿ ಅವುಗಳಲ್ಲಿ ಮಂಡಿತವಾದ ಪ್ರಬಂಧಗಳ ಸಂಕಲನ ಗ್ರಂಥಗಳ ಪ್ರಕಟನ ಯೋಜನೆ—ಹೀಗೆ ಹತ್ತು ಹಲವು ಯೋಜನೆಗಳಿಗೆ ಸಂಬಂಧಿಸಿದಂತೆ ಡಾ. ನಾಯಕರ ಅಧಿಕಾರಾವಧಿಯಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ಮೂಲಕ ಅಪಾರ ಕಾರ್ಯನಡೆದಿದೆ. ಭಂಡಾರ್‌ಕರ್ ವಿಮರ್ಶಾತ್ಮಕ ಆವೃತ್ತಿಯ ಮಹಾಭಾರತದ ಕನ್ನಡ ಅನುವಾದ ಯೋಜನೆ ಡಾ. ನಾಯಕರ ಅಧಿಕಾರಾವಧಿಯಲ್ಲಿಯೆ ರೂಪಿತವಾಗಿದ್ದಲ್ಲದೆ ಐದು ಸಂಪುಟಗಳ ಸಿದ್ಧತೆಯ ಕಾರ್ಯವೂ ಆಗಲೇ ಮುಗಿದಿತ್ತು. ಎಷ್ಟೋ ಪ್ರಕಟನೆಗಳಿಗೆ ರಾಜ್ಯ ಮತ್ತು ಕೇಂದ್ರ ಸರಕಾರಗಳ ಪ್ರಶಸ್ತಿಗಳೂ ಬಂದಿವೆ.

ಮೈಸೂರು ದಸರಾ ಕವಿ ಸಮ್ಮೇಳನವನ್ನು ಪ್ರತಿವರ್ಷ ಏರ್ಪಡಿಸಿ, ಅಲ್ಲಿ ಕವಿಗಳು ಒಪ್ಪಿಸಿದ ಕವನಗಳ ಸಂಕಲನ ಗ್ರಂಥಗಳನ್ನು ಸಂಪಾದಿಸಿ ಪ್ರಕಟಿಸುವ ಯೋಜನೆಯ ಮುಖ್ಯ ನಿರ್ವಾಹಕರಾಗಿದ್ದವರು ಡಾ. ನಾಯಕರು. ಅವರ ಸಂಪಾದಕತ್ವದಲ್ಲಿ ಹಲವು ಅಂಥ ಕವನ ಸಂಕಲನಗಳು ಪ್ರಕಟವಾಗಿವೆ. ಆ ಯೋಜನೆ ಮುಂದುವರಿದುಕೊಂಡು ಬರುತ್ತಿದೆ. ಭಾರತ ಸ್ವಾತಂತ್ರ್ಯದ ಬೆಳ್ಳಿ ವರ್ಷದ ಸಂದರ್ಭದಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ಆಶ್ರಯದಲ್ಲಿ ಅಭೂತಪೂರ್ವವೆಂಬಂಥ ಸಾಹಿತ್ಯ ಸಮಾವೇಶವನ್ನು ಸಂಘಟಿಸಿ, ಆ ಗೋಷ್ಠಿಗಳಲ್ಲಿ ಮಂಡಿತವಾದ ಪ್ರಬಂಧಗಳನ್ನು ಸಂಪಾದಿಸಿ 'ಬಿಡುಗಡೆ ಬೆಳ್ಳಿ' (೧೯೭೪) ಎಂಬ ಹೆಸರಿನಲ್ಲಿ ಡಾ. ಹಾ. ಮಾ. ನಾಯಕರು ಪ್ರಕಟಿಸಿದ್ದಾರೆ. ಆ ಗ್ರಂಥ ಆಧುನಿಕ ಕನ್ನಡ ಸಾಹಿತ್ಯದ ಅಭ್ಯಾಸಿಗಳಿಗೆ ಒಂದು ಶ್ರೇಷ್ಠ ಮಟ್ಟದ ಪರಾಮರ್ಶನ ಗ್ರಂಥವಾಗಿ ಇದೆ. ಅವರು 'ಪ್ರಬುದ್ಧ ಕರ್ಣಾಟಕ'ದ ಸಂಪಾದಕರೂ ಆಗಿದ್ದರು (೧೯೭೫–೭೯).

ಸ್ನಾತಕೋತ್ತರ ದಕ್ಷಿಣ ಭಾರತೀಯ ಅಧ್ಯಯನ ವಿಭಾಗ, ಭಾರತೀಯ ಸಾಹಿತ್ಯದ ಡಿಪ್ಲೊಮಾ, ಭಾಷಾಂತರ ಎಂ.ಫಿಲ್. ತರಗತಿ ಇವು ಡಾ. ನಾಯಕರ ಅಧಿಕಾರಾವಧಿಯಲ್ಲಿ ಅವರ ಪ್ರಯತ್ನದ ಫಲವಾಗಿ ಪ್ರಾರಂಭವಾದವು. ಕನ್ನಡೇತರರಿಗೆ ಕನ್ನಡ ಸಾಹಿತ್ಯವನ್ನು ಪರಿಚಯಿಸುವ ಉದ್ದೇಶವುಳ್ಳ "Kannada Studies" ಎಂಬ

ಇಂಗ್ಲಿಷ್ ಪತ್ರಿಕೆಯನ್ನು ೧೯೬೫ರಿಂದ ಇತರರೊಂದಿಗೆ ಪ್ರಾರಂಭಿಸಿ ಕೆಲವು ಸಂಚಿಕೆಗಳನ್ನು ಅವರು ಹೊರತಂದಿದ್ದರು. ಕರ್ನಾಟಕ ವಿಶ್ವವಿದ್ಯಾನಿಲಯ ಸಂದರ್ಶಕ ಪ್ರಾಧ್ಯಾಪಕ ಹುದ್ದೆಗೆ ೧೯೭೪ರಲ್ಲಿ ಡಾ. ಹಾ. ಮಾ. ನಾಯಕರನ್ನು ಆಹ್ವಾನಿಸಿತ್ತು. ಅದನ್ನು ಕಾರಣಾಂತರಗಳಿಂದ ಅವರು ಒಪ್ಪಿಕೊಂಡಿರಲಿಲ್ಲ. ಡಾ. ಹಾ. ಮಾ. ನಾಯಕರನ್ನು ಕುರಿತು ಚಂದ್ರಯ್ಯ ನಾಯುಡು ಅವರು 'ಕನ್ನಡದ ನಾಯಕ ಹಾ. ಮಾ. ನಾಯಕ' (೧೯೮೭) ಎಂಬ ಪುಸ್ತಕವನ್ನು ಪ್ರಕಟಿಸಿದ್ದಾರೆ.

ಡಾ. ಹಾ. ಮಾ. ನಾಯಕರು ಕರ್ನಾಟಕ ರಾಜ್ಯದ ವಿಶ್ವವಿದ್ಯಾನಿಲಯಗಳಲ್ಲಿ ಈಗಿರುವ ಪ್ರಾಧ್ಯಾಪಕರಲ್ಲೆಲ್ಲ ಸೇವಾ ಹಿರಿತನ ಉಳ್ಳವರಾಗಿದ್ದಾರೆ. ಸಾಹಿತ್ಯಿಕ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಅವರು ಪಡೆದ ಮನ್ನಣೆ, ಪ್ರಶಸ್ತಿಗಳನ್ನೆಲ್ಲ ಪಟ್ಟಿಮಾಡಿ ಹೇಳುವುದು ಸುಲಭವಲ್ಲ. ಅವರು ಪಡೆದ ಸಾಹಿತ್ಯಿಕ, ಶೈಕ್ಷಣಿಕ ಮನ್ನಣೆ, ಪ್ರಶಸ್ತಿಗಳನ್ನು ಕುರಿತಂತೆ ಕೆಲವನ್ನು ಈಗಾಗಲೆ ಉಲ್ಲೇಖಿಸಲಾಗಿದೆ; ಇನ್ನೂ ಎಷ್ಟೋ ಇವೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ (೧೯೭೯–೮೪), ಕೇಂದ್ರ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿ ಮತ್ತು ಕನ್ನಡ ಸಾಹಿತ್ಯದ ಪ್ರಾದೇಶಿಕ ಸಮಿತಿಯ ಸಂಚಾಲಕರಾಗಿ, ಭಾರತೀಯ ಜ್ಞಾನಪೀಠ ಆಯ್ಕೆ ಸಮಿತಿಯ (ಕನ್ನಡ) ಸಂಚಾಲಕರಾಗಿ (೧೯೭೭–೮೦), ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ, ನ್ಯಾಶನಲ್ ಬುಕ್ ಟ್ರಸ್ಟಿನ ಸಲಹಾ ಸಮಿತಿಯ ಸದಸ್ಯರಾಗಿ ಮತ್ತು ಕೇಂದ್ರ ಸರಕಾರ ಪ್ರತಿನಿಧಿತ ಟ್ರಸ್ಟಿಯಾಗಿ, ಕರ್ನಾಟಕ ರಾಜ್ಯದ ಪಂಪಪ್ರಶಸ್ತಿ, ಬಿ. ಡಿ. ಗೊಯಂಕಾ ಪ್ರಶಸ್ತಿಗಳ ಆಯ್ಕೆ ಸಮಿತಿ ಸದಸ್ಯರಾಗಿ, ನವದೆಹಲಿಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಾಹಿತ್ಯಗೋಷ್ಠಿಯ ಅಧ್ಯಕ್ಷರಾಗಿ (೧೯೭೮), ಬೆಳಗಾವಿ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ (೧೯೭೧) ಅವರು ಮನ್ನಣೆ ಪಡೆದಿದ್ದಾರೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಮಾತ್ರವಲ್ಲದೆ ಕರ್ನಾಟಕ ರಾಜ್ಯ ಸರ್ಕಾರದ ಸಾಹಿತ್ಯ ಪ್ರಶಸ್ತಿ (೧೯೮೩), ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸಾಹಿತ್ಯ ಪ್ರಶಸ್ತಿ (೧೯೮೬), ಮೈಸೂರು ವಿಶ್ವವಿದ್ಯಾನಿಲಯದ ಹೊನ್ನಶೆಟ್ಟಿ ಬಹುಮಾನ (೧೯೫೪), ವರ್ಧಮಾನ ಪ್ರಶಸ್ತಿ (೧೯೯೦) ಇತ್ಯಾದಿ ಸಾಹಿತ್ಯಿಕ ಗೌರವ, ಪ್ರಶಸ್ತಿಗಳನ್ನು ಅವರು ಪಡೆದಿದ್ದಾರೆ.

ಪೆನ್‌ಸಿಲ್ವೇನಿಯಾ ವಿಶ್ವವಿದ್ಯಾನಿಲಯದ ಗೌರವಾನ್ವಿತ ಸಂದರ್ಶಕ ವಿದ್ವಾಂಸರಾಗಿ (೧೯೭೪), ಇಂಡಿಯಾನ ವಿಶ್ವವಿದ್ಯಾನಿಲಯದ ಮಷಿನ್ ಟ್ರಾನ್ಸ್‌ಲೇಷನ್ ಯೋಜನೆಯ ಸಹಾಯಕರಾಗಿ (೧೯೬೩–೬೪), ಫುಲ್‌ಬ್ರೈಟ್ ಪ್ರವಾಸ ಅನುದಾನ ಪಡೆದ ವಿದ್ವಾಂಸರಾಗಿ (೧೯೬೨), ಕರ್ನಾಟಕ ವಿಜ್ಞಾನ ಪರಿಷತ್ತಿನ ಸದಸ್ಯರಾಗಿ, ಉಪಾಧ್ಯಕ್ಷರಾಗಿ, ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದ ಕಲೆ ಮತ್ತು ಸಮಾಜಶಾಸ್ತ್ರಗಳ ಸಂಶೋಧನ ಯೋಜನೆಗಳ ಶಿಫಾರಸು ಸಮಿತಿ ಮತ್ತು ಎಡ್ವಾನ್ಸ್‌ಡ್ ಸಮಿತಿಯ ಸದಸ್ಯರಾಗಿ (೧೯೮೧), ಯು.ಜಿ.ಸಿ.ಯ ರಾಷ್ಟ್ರೀಯ

ಉಪನ್ಯಾಸಕರಾಗಿ (೧೯೮೩–೮೪), ಮದ್ರಾಸ್ ವಿಶ್ವವಿದ್ಯಾನಿಲಯ ಮತ್ತು ಮಧುರೆಯ ಕಾಮರಾಜ ವಿಶ್ವವಿದ್ಯಾನಿಲಯಗಳ ಎಕೆಡೆಮಿಕ್ ಕೌನ್ಸಿಲ್ ಸದಸ್ಯರಾಗಿ, ಮೈಸೂರು ವಿಶ್ವವಿದ್ಯಾನಿಲಯದ ಫ್ಯಾಕಲ್ಟಿ ಆಫ್ ಆರ್ಟ್ಸ್‌ನ ಡೀನ್ ಆಗಿ, ಬೆಂಗಳೂರು ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯಗಳ ಫ್ಯಾಕಲ್ಟಿ ಆಫ್ ಆರ್ಟ್ಸ್‌ನ ಸದಸ್ಯರಾಗಿ, ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾಗಿ ಕರ್ನಾಟಕ ಪದವಿ ಪೂರ್ವ ಶಿಕ್ಷಣ ಮಂಡಳಿಯ ಸದಸ್ಯರಾಗಿ—ಹೀಗೆ ಇನ್ನೂ ಹಲವಾರು ಸ್ಥಾನ, ಹುದ್ದೆಗಳಲ್ಲಿ ಶೈಕ್ಷಣಿಕ ಗೌರವ, ಮನ್ನಣೆಗಳನ್ನು ಡಾ. ನಾಯಕರು ಪಡೆದಿದ್ದಾರೆ.

ನಮ್ಮ ಜನಜೀವನದಲ್ಲಿ, ಶಿಕ್ಷಣದಲ್ಲಿ, ಆಡಳಿತದಲ್ಲಿ ಕನ್ನಡ ಭಾಷೆಯ ಸ್ಥಾನಮಾನ ಹೇಗಿರಬೇಕು ಎಂಬ ಬಗ್ಗೆ ಡಾ ಹಾ.ಮಾ. ನಾಯಕರು ಸ್ಪಷ್ಟವಾಗಿ, ಖಚಿತವಾಗಿ ಚಿಂತನೆ ಮಾಡಿದವರು, ಧೈರ್ಯವಾಗಿ ಪ್ರತಿಪಾದಿಸಿದವರು, ಅದನ್ನು ತಮ್ಮ ಬದುಕಿನಲ್ಲಿ ನಿಷ್ಠೆಯಿಂದ ಅನುಷ್ಠಾನಕ್ಕೆ ತಂದವರು. ತಮ್ಮ ಮಕ್ಕಳಿಗೆ ಕನ್ನಡ ಮಾಧ್ಯಮದಲ್ಲಿಯೆ ಶಿಕ್ಷಣ ಕೊಡಿಸಿದವರು. ಅವರು ೧೯೮೫ರಲ್ಲಿ ಬೀದರಿನಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ತಮ್ಮ ಅಧ್ಯಕ್ಷಭಾಷಣದಲ್ಲಿ ಹೇಳಿದ ಈ ಮಾತುಗಳು, ಕೇಳಿದ ಈ ಪ್ರಶ್ನೆಗಳು ಕನ್ನಡ ಭಾಷೆ, ಸಾಹಿತ್ಯದ ಉಳಿವು, ಬೆಳವಣಿಗೆಯ ಬಗ್ಗೆ ಆಸಕ್ತಿ, ಕಾಳಜಿ ಇರುವವರೆಲ್ಲ ಪ್ರಾಮಾಣಿಕವಾಗಿ ಕೇಳಿಕೊಂಡು ಉತ್ತರ ಪಡೆಯಬೇಕಾದಂಥವು :

> "ಕನ್ನಡ ಕನ್ನಡ ಎನ್ನುವ ನಾವು ನಮ್ಮನ್ನೇ ಪ್ರಶ್ನಿಸಿಕೊಳ್ಳುವುದು ತೀರ ಅಗತ್ಯ. ಕನ್ನಡ ಹೇಳುವುದಕ್ಕೆ ಮಾತ್ರ ಅಲ್ಲ, ಅನುಸರಿಸುವುದಕ್ಕೂ ಕೂಡ ಎಂದು ಎಷ್ಟು ಜನ ತಿಳಿದಿದ್ದೇವೆ ? ನಮ್ಮ ಮಕ್ಕಳನ್ನು ಯಾವ ಶಾಲೆಗಳಲ್ಲಿ ಓದಿಸುತ್ತಿದ್ದೇವೆ ? ನಾವು ಯಾವ ಪತ್ರಿಕೆಗಳನ್ನು ಓದುತ್ತಿದ್ದೇವೆ ? ನಾವು ನೋಡುವುದು ಯಾವ ಸಿನಿಮಾಗಳನ್ನು ? ನಮ್ಮ ಮನೆಯ ಬೋರ್ಡು ಯಾವ ಭಾಷೆಯಲ್ಲಿದೆ ? ನಮ್ಮ ಲೆಟರ್ ಹೆಡ್‌ಗಳು ಅಚ್ಚಾಗಿರುವುದು, ನಮ್ಮ ಮನೆಯ ಲಗ್ನ ಪತ್ರಿಕೆಗಳು ಅಚ್ಚಾಗಿರುವುದು ಯಾವ ಭಾಷೆಯಲ್ಲಿ ? ನಾವು ಬ್ಯಾಂಕುಗಳಿಗೆ ಚೆಕ್ ಬರೆಯುವುದು ಕನ್ನಡದಲ್ಲೇ ? ನಾವು ಬರೆಯುವ ಕಾಗದ ಪತ್ರಗಳಲ್ಲಿ ಎಷ್ಟು ಭಾಗ ಕನ್ನಡ? ಇಂಥ ನೂರು ಪ್ರಶ್ನೆಗಳನ್ನು ನಾವು ಕೇಳಿಕೊಳ್ಳಬೇಕು. ಅವುಗಳ ಉತ್ತರ ನಮ್ಮನ್ನು ಚುಚ್ಚದಿದ್ದರೆ ಮಾತ್ರ ನಾವು ಕನ್ನಡವನ್ನು ಕುರಿತು ಮಾತಾಡಲು ಯೋಗ್ಯತೆ ಗಳಿಸಿಕೊಂಡಿದ್ದೇವೆ ಎಂದು ಅರ್ಥ. ಕನ್ನಡಿಗರು ಮೊದಲು ಕನ್ನಡದವರಾಗಬೇಕು.... ನಮ್ಮೆಲ್ಲರ ಮೊದಲನೆಯ ಹಾಗೂ ಕೊನೆಯ ಕೆಲಸ ಈಗ ಕನ್ನಡವನ್ನು ಉಳಿಸಬೇಕಾದುದೇ ಆಗಿದೆ."

ರಂ. ರಾ. ದಿವಾಕರ

ರಂಗನಾಥ ರಾಮಚಂದ್ರ ದಿವಾಕರ ಅವರು ೧೫-೧-೧೯೯೦ ರಂದು ತಮ್ಮ ೯೬ನೆಯ ವಯಸ್ಸಿನಲ್ಲಿ ನಿಧನರಾದರು. ಕರ್ನಾಟಕದ ಮತ್ತು ಭಾರತದ ಆಧುನಿಕ ಚರಿತ್ರೆಯಲ್ಲಿ ತಮ್ಮ ಹೆಸರನ್ನು ಅಂಕಿಸಿಹೋದ ಹಿರಿಯರಲ್ಲಿ ಒಬ್ಬರಾಗಿರುವ ಅವರ ನಿಧನಕ್ಕೆ ‘ ಪ್ರಬುದ್ಧ ಕರ್ಣಾಟಕ ’ವು ಸಂತಾಪ ಸೂಚಿಸುತ್ತದೆ.

ದಿವಾಕರರು ಹುಟ್ಟಿದ್ದು ೩೦-೯-೧೮೯೪ ರಲ್ಲಿ; ಧಾರವಾಡದ ಮಡಿಹಾಳದಲ್ಲಿ. ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣಗಳನ್ನು ಬೆಳಗಾವಿಯಲ್ಲಿ ಮುಗಿಸಿ ಹುಬ್ಬಳ್ಳಿಯ ಲೆಮಿಂಗ್ಟನ್ ಪ್ರೌಢಶಾಲೆಯಿಂದ ಮೆಟ್ರಿಕ್ ಪರೀಕ್ಷೆಯಲ್ಲಿ ೧೯೧೧ರಲ್ಲಿ ಅವರು ಉತ್ತೀರ್ಣರಾದರು. ೧೯೧೬ರಲ್ಲಿ ಪುಣೆಯ ಫರ್ಗ್ಯುಸನ್ ಕಾಲೇಜಿನಿಂದ ಇಂಗ್ಲಿಷ್ ಆನರ್ಸ್ ಪದವಿ ಪಡೆದ ಅವರು ಅದೇ ವರ್ಷ ಧಾರವಾಡದ ವಿಕ್ಟೋರಿಯಾ ಪ್ರೌಢ ಶಾಲೆಯಲ್ಲಿ ಶಿಕ್ಷಕರಾಗಿ ಸೇರಿದರು. ಎಂ.ಎ., ಎಲ್‌ಎಲ್ ಬಿ. ಜೊತೆಜೊತೆಯಲ್ಲಿಯೇ ಅಧ್ಯಯನ ಮಾಡಿ ೧೯೧೮ ರಲ್ಲಿ ಎರಡೂ ಪದವಿಗಳನ್ನು ಪಡೆದರು. ಕೊಲ್ಲಾಪುರದ ರಾಜಾರಾಮ ಕಾಲೇಜಿನಲ್ಲಿ ಇಂಗ್ಲಿಷ್ ಉಪನ್ಯಾಸಕರಾಗಿ ಸೇರಿಕೊಂಡ ಅವರು ಧಾರವಾಡದ ವಿಕ್ಟೋರಿಯ ಪ್ರೌಢಶಾಲೆಯಲ್ಲಿ ಕಾಲೇಜ್ ಪ್ರಾರಂಭವಾದಾಗ ಅಲ್ಲಿಗೆ ಉಪನ್ಯಾಸಕರಾಗಿ ಬಂದರು. ಅಧ್ಯಾಪಕವೃತ್ತಿ ಅವರಿಗೆ ತುಂಬ ಪ್ರಿಯವಾಗಿದ್ದರೂ ೧೯೨೦ರಲ್ಲಿ ಲೋಕಮಾನ್ಯ ತಿಲಕ್ ತೀರಿಕೊಂಡ ವೇಳೆ ಗಾಂಧೀಜಿ ನೀಡಿದ ಅಸಹಕಾರ ಚಳವಳಿಯ ಕರೆಯಿಂದ ಆಕರ್ಷಿತರಾಗಿ ಅಧ್ಯಾಪಕವೃತ್ತಿಗೆ ರಾಜೀನಾಮೆಯಿತ್ತು ಅವರು ಸ್ವಾತಂತ್ರ್ಯ ಹೋರಾಟಕ್ಕೆ ತಮ್ಮನ್ನು ಅರ್ಪಿಸಿಕೊಂಡರು. ೧೯೨೧ರಲ್ಲಿ ಇತರರೊಡನೆ ‘ಕರ್ಮವೀರ’ ಪತ್ರಿಕೆಯನ್ನು ಪ್ರಾರಂಭಿಸಿದರು. ಧಾರವಾಡ ಹುಬ್ಬಳ್ಳಿಗಳಿಗೆ ಗಾಂಧೀಜಿ ಭೇಟಿನೀಡಿದ ಕಾಲದಲ್ಲಿ ಧಾರವಾಡದ ರಾಷ್ಟ್ರೀಯ ಶಾಲೆಯಲ್ಲಿ ಅಧ್ಯಾಪಕ ರಾಗಿ ಸೇವೆ ಸಲ್ಲಿಸುವುದಾಗಿ ಗಾಂಧೀಜಿಗೆ ಮಾತುಕೊಟ್ಟದ್ದರಿಂದ ಮತ್ತೆ ಅಧ್ಯಾಪಕ ವೃತ್ತಿಗೆ ಮರಳಿದರು.

ಅಸಹಕಾರ ಚಳವಳಿಗೆ ಧುಮುಕಿದ ದಿವಾಕರ ಅವರು ಒಂದುವರ್ಷ ಸೆರೆಮನೆ ವಾಸವನ್ನು ಅನುಭವಿಸಿದರು. ಬಿಡುಗಡೆಯಾಗಿ ಬಂದವರೆ ಹಿಂದಿನ ‘ಕರ್ಮವೀರ’ದ ಜೊತೆಗೇ ‘ ನವಶಕ್ತಿ ’ ಎಂಬ ಇಂಗ್ಲಿಷ್ ವಾರಪತ್ರಿಕೆಯನ್ನು ಪ್ರಾರಂಭಿಸಿದರು. ಎರಡು ತಿಂಗಳೊಳಗೇ ‘ ಕರ್ಮವೀರ’ದಲ್ಲಿ ರಾಷ್ಟ್ರಭಕ್ತಿಯ ಲಾವಣಿಗಳನ್ನು ಪ್ರಕಟಿಸಿದ್ದಕ್ಕಾಗಿ ಮತ್ತೆ ಬಂಧಿತರಾಗಿ ದಂಡಸಹಿತವಾದ ಎರಡು ವರ್ಷಗಳ ಕಠಿಣಸಜೆ ಅನುಭವಿಸಿದರು (೧೯೨೩-೨೫). ೧೯೨೫ ರಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ಸಿನ

ಪ್ರಧಾನ ಕಾರ್ಯದರ್ಶಿಯಾದರು. 'ಕರ್ಮವೀರ'ದ ಸಂಪಾದಕತ್ವವೂ ಮುಂದುವರಿದಿತ್ತು. ೧೯೨೫–೨೯ರ ವರೆಗಿನ ಅವಧಿಯಲ್ಲಿ ಅವರು ಖಾದಿ ಮತ್ತು ಹಿಂದಿ ಪ್ರಚಾರ ಕೈಗೊಂಡರು. ೧೯೨೮ರಲ್ಲಿ ನೆಹರೂ ಸಮಿತಿಯ ಎದುರು ಪ್ರತ್ಯೇಕ ಬ್ರಿಟಿಶ್ ಕರ್ನಾಟಕ ಭಾಗದ ರಾಜ್ಯ ರಚನೆಯ ಆವಶ್ಯಕತೆಯನ್ನು ಪರಿಣಾಮಕಾರಿಯಾಗಿ ಪ್ರತಿಪಾದಿಸಿದರು. ೧೯೨೯ರಲ್ಲಿ ಅವರು ಕರ್ನಾಟಕ ಪ್ರದೇಶ ಕಾಂಗ್ರೆಸ್ಸಿನ ಅಧ್ಯಕ್ಷರೂ ಆದರು.

ದಿವಾಕರರು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದ ಕಾಲ ಅವರ ಸಾಧನೆಯ ಶಿಖರ ಕಾಲ. ಉತ್ತರಕನ್ನಡ ಜಿಲ್ಲೆಯ ಅಂಕೋಲೆ, ಶಿರ್ಶಿ, ಸಿದ್ದಾಪುರ ತಾಲೂಕುಗಳಲ್ಲಿ ಮತ್ತು ಧಾರವಾಡಜಿಲ್ಲೆಯ ಹಿರೆಕೆರೂರು ತಾಲೂಕಿನಲ್ಲಿ ಕರನಿರಾಕರಣೆಯ ಚಳವಳಿಯನ್ನು ಸಂಘಟಿಸಬೇಕೆಂದು ಕರ್ನಾಟಕ ಸತ್ಯಾಗ್ರಹ ಮಂಡಳವು ನಿರ್ಣಯಿಸಿ ಆ ಸಂಘಟನೆಯ ನೇತಾರತ್ವವನ್ನು ದಿವಾಕರರಿಗೆ ವಹಿಸಿತು. ಕರನಿರಾಕರಣೆಯ ವೀರಹೋರಾಟದ ಅಗ್ನಿಪರೀಕ್ಷೆಯಲ್ಲಿ ಗೆದ್ದು ಬರುವುದು ಅಂಕೋಲಾ ತಾಲೂಕಿನವರಿಗೆ ಮಾತ್ರ ಸಾಧ್ಯ ಎಂಬ ಸತ್ಯಾಗ್ರಹಮಂಡಳದ ಅಭಿಪ್ರಾಯ ಮತ್ತು ನಿರೂಪದಂತೆ ದಿವಾಕರರು ಉತ್ತರಕನ್ನಡ ಜಿಲ್ಲೆಗೆ ಬಂದು ಅಂಕೋಲಾ ತಾಲೂಕಿನ "ಸೂರ್ವೆಯ ಕಳಶದೇವರ ದೇವಸ್ಥಾನದ ಪ್ರಾಂಗಣದಲ್ಲಿ ಅಂಕೋಲಾ ತಾಲೂಕಿನ ರೈತರಲ್ಲಿ ಪ್ರಭಾವಿ ಜನರಾದ ನಾಡವರ ಮುಖಂಡರ" ಸಭೆ ಕರೆದರು. ಉಪ್ಪಿನ ಸತ್ಯಾಗ್ರಹ, ಜಂಗಲ ಸತ್ಯಾಗ್ರಹ, ವಿದೇಶಿ ವಸ್ತುಗಳ ಬಹಿಷ್ಕಾರ, ಪಾನ ಪ್ರತಿಬಂಧ, ಗ್ರಾಮಪಂಚಾಯಿತಿಗಳ ಸಂಘಟನೆ—ಇವುಗಳಲ್ಲಿ ಅಂಕೋಲಾ ತಾಲೂಕಿನವರು ಆಗಲೇ ವಿಶೇಷ ಹೆಸರು ಗಳಿಸಿದ್ದರು. ಆ ಸಭೆಯಲ್ಲಿ ದಿವಾಕರರು "ತ್ಯಾಗವೃತ್ತಿಯನ್ನು ಪರಾಕಾಷ್ಠೆಯ ಮಟ್ಟದಲ್ಲಿ ವ್ಯಕ್ತಪಡಿಸಲು ಸಮರ್ಥರಾದ ಜನರೇ ಈ (ಕರನಿರಾಕರಣೆಯ) ಅಸ್ತ್ರವನ್ನು ಎತ್ತಬಲ್ಲರು" ಎಂದು ಸಾರಿ ನಾಡವರನ್ನು ಹುರಿದುಂಬಿಸಿದರು. ಅದರಿಂದ ಪ್ರೇರಿತರಾಗಿ "ನಾಡವರ ಸ್ತ್ರೀಪುರುಷರು ಕರನಿರಾಕರಣದ ಯಜ್ಞಕುಂಡದಲ್ಲಿ ಸರ್ವಸ್ವವನ್ನೂ ಬಲಿದಾನ ಮಾಡುವ ಪ್ರತಿಜ್ಞೆ ಸ್ವೀಕರಿಸಲು ಮುಂದೆ ಬಂದರು."

ಕರ್ನಾಟಕದ ಕರನಿರಾಕರಣೆಯ ಇತಿಹಾಸದ ದೃಷ್ಟಿಯಿಂದ ಅತ್ಯಂತ ಮಹತ್ವದ್ದೂ ಹಾಗೂ ಸಂಸ್ಮರಣೀಯವೂ ಆದ ಆ ಸಭೆಯಲ್ಲಿಯೇ "ಕರನಿರಾಕರಣ ಆಂದೋಲನದ ಬೀಜಾರೋಪಣವಾಯಿತು". ನಾಡವರು ಮಾಡಿದ ಪ್ರತಿಜ್ಞೆಯಂತೆ ನಡೆದುತೋರಿಸಿ ಅಪ್ರತಿಮ ಚರಿತ್ರೆ ನಿರ್ಮಿಸಿದರು. ಆ ಐತಿಹಾಸಿಕ ಸಭೆ ನಡೆದ ಸೂರ್ವೆ ಊರಿನಲ್ಲಿಯೂ ೩೯ ರೈತರಲ್ಲಿ ೩೩ ರೈತರು ಕರನಿರಾಕರಣೆಯ ಚಳುವಳಿಯಲ್ಲಿ ಭಾಗವಹಿಸಿದ್ದರಿಂದ ತಮ್ಮ ಆಸ್ತಿಯನ್ನು ಕಳೆದುಕೊಂಡರು. ಇದರ ಕೀರ್ತಿ ಅಂಕೋಲಾ ತಾಲೂಕಿನ ನಾಡವರ ಸಮಾಜದವರ ಹಾಗೂ ಹಾಲಕ್ಕಿ ಒಕ್ಕಲಿಗರಲ್ಲಿ ಕೆಲವು ಕುಟುಂಬದವರ ಸಾಹಸ, ತ್ಯಾಗ, ಬಲಿದಾನಗಳಿಗೆ ಹೇಗೊ ಹಾಗೆ ದಿವಾಕರ ಮತ್ತು ಚಳವಳಿಯಲ್ಲಿ ನಾಡವರ ಸೇನೆಯ 'ಸೇನಾಪತಿ' ಎಂದು ದಿವಾಕರರಿಂದ

ನೇಮಿಸಲ್ಪಟ್ಟ ದ.ಪ. ಕರಮರಕರ, 'ಸರ್ವಾಧಿಕಾರಿ' ಎಂದು ಹೆಸರಿಸಲ್ಪಟ್ಟ ಬಾಸ್ಕೋಡ ರಾಮನಾಯಕರಂಥರವರ ಅಸದೃಶನಾಯಕತ್ವಕ್ಕೂ ಸಲ್ಲುತ್ತದೆ. ದಿವಾಕರರು ಮುಂದೆ ಶಿರ್ಸಿ, ಸಿದ್ದಾಪುರ ತಾಲೂಕುಗಳಲ್ಲಿ ಕರನಿರಾಕರಣೆ ಚಳವಳಿಯ ನೇತಾರತ್ವವನ್ನು ವಹಿಸಿಕೊಂಡು ಹವ್ಯಕರನ್ನು ಅಪ್ರತಿಮ ತ್ಯಾಗ, ಬಲಿದಾನಗಳಿಗೆ ಸಂಘಟಿಸಿ ಅಲ್ಲಿಯೂ ಕರನಿರಾಕರಣೆ ಚಳವಳಿಯ ಅದ್ಭುತ ಯಶಸ್ಸಿಗೆ ಕಾರಣರಾದರು. (ಆ ಕರನಿರಾಕರಣೆ ಮತ್ತು ಆ ಕಾಲದ ದಿವಾಕರರ ಅಪ್ರತಿಮ ಸಾಧನೆ, ಸಂಘಟನಶಕ್ತಿ ಕುರಿತ ವಿವರಗಳಿಗೆ ೧೯೫೫ರಲ್ಲಿ ಅವರು ಪ್ರಕಟಿಸಿದ 'ಕರನಿರಾಕರಣೆಯ ವೀರಕಥೆ' ಎಂಬ ಗ್ರಂಥವನ್ನು ಓದಬೇಕು.)

೧೯೩೨ರಲ್ಲಿ ದಿವಾಕರರು ಶಿರ್ಸಿ, ಸಿದ್ದಾಪುರಗಳ ಕಾನೂನುಭಂಗ ಚಳವಳಿಯನ್ನು ಬೆಂಬಲಿಸಿ 'ಕರ್ಮವೀರ' ಪತ್ರಿಕೆಯಲ್ಲಿ ಬರೆದರೆಂಬ ಕಾರಣಕ್ಕೆ ಅವರಿಗೆ ಮೂರು ವರ್ಷಗಳ ಸಜೆಯಾಯಿತು. ಅನಾರೋಗ್ಯದ ಕಾರಣದಿಂದಾಗಿ ೧೯೩೪ ರಲ್ಲಿ ಬಿಡುಗಡೆಯಾಗಿ ಬಂದ ಅವರು ಮೊಹರೆ ಹಣಮಂತರಾಯರು ಬೆಳಗಾವಿಯಿಂದ ಹೊರಡಿಸುತ್ತಿದ್ದ 'ಸಂಯುಕ್ತ ಕರ್ನಾಟಕ' ಪತ್ರಿಕೆಯನ್ನು ತಮ್ಮ ಕೈಗೆ ತೆಗೆದುಕೊಂಡರು. ೧೯೩೫ ರಲ್ಲಿ ಆ ಪತ್ರಿಕೆಯನ್ನು ಹುಬ್ಬಳ್ಳಿಗೆ ಸ್ಥಳಾಂತರಿಸಿದರು. ೧೯೪೨ರ ಚಲೇಜಾವ್ ಚಳವಳಿಯ ಕಾಲದಲ್ಲಿ ದಿವಾಕರರು ಭೂಗತರಾಗಿದ್ದು ನಡೆಸಿದ ಸಂಘಟನೆಯ ಚಟುವಟಿಕೆಯೂ ಮಹತ್ವದ್ದಾಗಿತ್ತು. ಅವರ ಪತ್ನಿ ರಾಧಾಬಾಯಿಯವರೂ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದ ದಿಟ್ಟ ಮಹಿಳೆಯಾಗಿದ್ದರು.

ಸ್ವಾತಂತ್ರ್ಯಾನಂತರದ ಕಾಲದಲ್ಲಿ ದಿವಾಕರರು ಹಲವು ಅಧಿಕಾರ ಅಂತಸ್ತುಗಳಲ್ಲಿದ್ದು ಸೇವೆ ಸಲ್ಲಿಸಿದರು. ಅವರು ಕೇಂದ್ರ ಸರಕಾರದಲ್ಲಿ ವಾರ್ತಾಮಂತ್ರಿಯಾದರು (೧೯೪೮-೫೨); ೧೯೫೨ ರಿಂದ ೧೯೫೭ರ ವರೆಗೆ ಬಿಹಾರದ ರಾಜ್ಯಪಾಲರಾದರು; ೧೯೬೨ ರಿಂದ ೧೯೬೮ ರ ವರೆಗೆ ರಾಜ್ಯಸಭೆಯ ಸದಸ್ಯರೂ ಆಗಿದ್ದರು. ತಾನು ನಂಬಿದ ಸಂಸ್ಥೆ, ತಾನು ಗೌರವಿಸುವ ತತ್ತ್ವಾದರ್ಶಗಳಿಗೆ ಸಂಬಂಧಿಸಿದಂತೆ ದಿವಾಕರರು ಕೊಡುಗೈತನವನ್ನು ತೋರಿಸುತ್ತ ಬಂದಿದ್ದರು. ಅವರು ಕೇಂದ್ರದಲ್ಲಿ ಮಂತ್ರಿಯಾಗಿದ್ದಷ್ಟು ಕಾಲ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಗೆ ಪ್ರತಿತಿಂಗಳೂ ಒಂದು ನೂರು ರೂಪಾಯಿ ದೇಣಿಗೆ ನೀಡುತ್ತಿದ್ದರು. ವಿನೋಬಾಭಾವೆಯವರು ಬಿಹಾರ ರಾಜ್ಯದಲ್ಲಿ ಪಾದಯಾತ್ರೆ ಕೈಗೊಂಡಿದ್ದಾಗ ದಿವಾಕರರು ಪ್ರತಿತಿಂಗಳೂ ಮುನ್ನೂರು ರೂಪಾಯಿಗಳ 'ದ್ರವ್ಯದಾನ' ಮಾಡುತ್ತಿದ್ದರು. ಅವರು ಗಾಂಧಿಸ್ಮಾರಕ ನಿಧಿಯ ಅಧ್ಯಕ್ಷರೂ ಆಗಿದ್ದರು.

ದಿವಾಕರರು ಮುಖ್ಯವಾಗಿ ರಾಜಕಾರಣಿ. ಅವರ ರಾಜಕಾರಣದ ಪರಿಕಲ್ಪನೆ ಲೋಕಮಾನ್ಯ ತಿಲಕ್, ಮಹಾತ್ಮಾ ಗಾಂಧಿಯಂಥ ಮಹಾನಾಯಕರ ಜೀವನ ಮತ್ತು ಚಿಂತನೆಗಳ ಬೆಳಕಿನಲ್ಲಿ ರೂಪಿಸಿಕೊಂಡದ್ದಾಗಿತ್ತು. ಆದ್ದರಿಂದ ತಿಲಕ್, ಗಾಂಧೀಜಿ

ಯವರಂತೆ ಅವರೂ ರಾಜಕಾರಣದ ಜೊತೆಯಲ್ಲಿಯೇ ಪತ್ರಿಕಾ ವ್ಯವಸಾಯಗಾರರಾಗಿಯೂ ಉಳಿದರು. ಅವರಂತೆಯೆ ರಾಜಕಾರಣದಲ್ಲಿ ಧಾರ್ಮಿಕತೆ, ಆಧ್ಯಾತ್ಮಿಕತೆಗಳನ್ನೂ ರೂಢಿಸುವ ಆಸಕ್ತಿ ಉಳ್ಳವರಾಗಿದ್ದರು. ಅವರ ಧಾರ್ಮಿಕ ಮತ್ತು ಆಧ್ಯಾತ್ಮಿಕ ಚಿಂತನೆಗಳು ಉಪನಿಷತ್ತು, ಭಗವದ್ಗೀತೆ, ನಾರದ ಮತ್ತು ಶಾಂಡಿಲ್ಯ ಭಕ್ತಿಸೂತ್ರಗಳು ಮುಂತಾದವುಗಳಿಂದಲೂ ಶ್ರೀರಾಮಕೃಷ್ಣ ಪರಮಹಂಸ, ವಿವೇಕಾನಂದ, ಅರಬಿಂದೊ ಅವರ ಚಿಂತನೆಗಳಿಂದಲೂ ಹೆಚ್ಚಿನ ಪೋಷಣೆ ಪಡೆದಿದ್ದವು. ದಿವಾಕರರು ಅನೇಕ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಅವರ ಗ್ರಂಥಗಳು ಅವರ ಈ ಆದರ್ಶ ಮತ್ತು ಚಿಂತನೆಗಳನ್ನು ಪ್ರತಿಬಿಂಬಿಸುತ್ತವೆ.

ದಿವಾಕರರು ಬಹುಭಾಷಾಜ್ಞಾನವುಳ್ಳವರಾಗಿದ್ದರು. ಕನ್ನಡ, ಹಿಂದಿ, ಮರಾಠಿ, ಸಂಸ್ಕೃತ, ಇಂಗ್ಲಿಷ್ ಭಾಷೆಗಳನ್ನು ಚೆನ್ನಾಗಿ ಬಲ್ಲವರಾಗಿದ್ದರು. ಗುಜರಾಥಿ, ಬಂಗಾಲಿ ಭಾಷೆಗಳ ಪರಿಚಯವೂ ಅವರಿಗಿತ್ತು. ಕನ್ನಡ, ಹಿಂದಿ, ಇಂಗ್ಲಿಷ್, ಮರಾಠಿ ಭಾಷೆಗಳಲ್ಲಿ ಅವರ ಪುಸ್ತಕಗಳು ಪ್ರಕಟವಾಗಿವೆ. ಅವರು ಕನ್ನಡದಲ್ಲಿ ' ಉಪನಿಷತ್ ಪ್ರಕಾಶ ' (ಎರಡು ಭಾಗಗಳಲ್ಲಿ), ' ಗೀತೆಯಗುಟ್ಟು ', ' ಶ್ರೀರಾಮಕೃಷ್ಣ ', ' ಅಂತರಾತ್ಮನಿಗೆ ', ' ಕರ್ಮಯೋಗ ', ' ಉಪನಿಷತ್ ಕಥೆಗಳು ', ' ವಚನಶಾಸ್ತ್ರ ರಹಸ್ಯ ', 'ಹರಿಭಕ್ತಿಸುಧಾ', 'ಭಕ್ತಿಸೂತ್ರಗಳು', 'ಸೆರೆಯ ಮರೆಯಲ್ಲಿ', 'ಗಾಂಧೀಜಿ ಕಥೆಗಳು ', ' ಬಾಪು ', ' ಸತ್ಯಾಗ್ರಹ–ಇತಿಹಾಸ ಮತ್ತು ತಂತ್ರ ', ' ಮಹಾತ್ಮರ ಮನೋರಂಗ ', ' ಗಾಂಧೀಜಿ–ನಾನು ಕಂಡಂತೆ ', ' ಹಳ್ಳಿಗರ ಕೈಪಿಡಿ ', 'ವಿಶ್ವಮೇಧ', ' ಕರನಿರಾಕರಣೆಯ ವೀರಕಥೆ ', ' ವಿಶ್ವಾತ್ಮನಿಗೆ '—ಮೊದಲಾದ ಗ್ರಂಥಗಳನ್ನು ಪ್ರಕಟಿಸಿದ್ದಾರೆ.

' ಅಂತರಾತ್ಮನಿಗೆ ', ' ವಿಶ್ವಾತ್ಮನಿಗೆ ' ಎಂಬ ಕೃತಿಗಳಲ್ಲಿ ದಿವಾಕರರ ಜೀವನ ದರ್ಶನ ಕಾಣಿಸುತ್ತದೆ. ' ವಚನಶಾಸ್ತ್ರ ರಹಸ್ಯ ' ವೀರಶೈವ ಶರಣರ ವಚನಗಳನ್ನು ಕುರಿತು ರಚಿತವಾದ " ಬಹುಶಃ ಪ್ರಥಮ ತೌಲನಿಕ ಮತ್ತು ವಸ್ತುನಿಷ್ಠ ಗ್ರಂಥ " ಎನ್ನಲಾಗಿದೆ (ವಿಷಯ ವಿಶ್ವಕೋಶ "ಕರ್ನಾಟಕ" ಸಂಪುಟ ೧೯೭೯). ' ಸೆರೆಯ ಮರೆಯಲ್ಲಿ ' (೧೯೪೦) ಸೆರೆಮನೆಯ ಅವರ ಅನುಭವಗಳನ್ನು ನಿರೂಪಿಸುವ ಆತ್ಮ ಚರಿತ್ರಾತ್ಮಕ ಲಕ್ಷಣವುಳ್ಳ ಗ್ರಂಥ. ಇದಕ್ಕಿಂತ ಮೊದಲು ಕನ್ನಡದಲ್ಲಿ ಬಂದ ತಮ್ಮ ನೆನಪುಗಳನ್ನು ನಿರೂಪಿಸುವಂಥ ಈ ಪ್ರಕಾರದ ಗ್ರಂಥ ಜಿ. ಪಿ ರಾಜರತ್ನಂ ಅವರ ' ಹತ್ತು ವರುಷ ' (೧೯೩೯) ಮಾತ್ರ ಎಂದೂ ಸೆರೆಮನೆಯ ಅನುಭವಗಳನ್ನು ನಿರೂಪಿಸುವ ಗ್ರಂಥವಾಗಿ ಕನ್ನಡದಲ್ಲಿ ದಿವಾಕರರ ಈ ಗ್ರಂಥವೇ ಬಹುಶಃ ಮೊತ್ತ ಮೊದಲನೆಯದೆಂದೂ ಡಾ. ಹಾ. ಮಾ. ನಾಯಕರು ಗುರುತಿಸಿದ್ದಾರೆ. ('ಸಂಪುಟ', ಪು. ೬, ೧೩೩) ವಿಶ್ವಕನ್ನಡ ಮೇಳದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಕಟನೆಯ ಸರಣಿಯಲ್ಲಿ ' ಸತ್ಯಾಗ್ರಹ ' ಗ್ರಂಥವೂ ಒಂದಾಗಿದೆ.

ಮೇಲೆ ಹೆಸರಿಸಿದ ಗ್ರಂಥಗಳಲ್ಲಿ ಹಲವು ಹಿಂದಿಯಲ್ಲಿಯೂ ಅನುವಾದವಾಗಿ

ಪ್ರಕಟವಾಗಿವೆ. ಎಂ. ಆರ್. ಶ್ರೀನಿವಾಸಮೂರ್ತಿಯವರ ‘ ನಾಗರಿಕ ’ ಎಂಬ ನಾಟಕವನ್ನು ದಿವಾಕರರು ಹಿಂದಿಗೆ ಅನುವಾದಿಸಿ ಪ್ರಕಟಿಸಿದ್ದಾರೆ. ಸತ್ಯಾಗ್ರಹ ಕುರಿತ ಅವರ ಗ್ರಂಥವನ್ನು ‘ ಸತ್ಯಾಗ್ರಹ-ತಂತ್ರ ಆಣಿ ಇತಿಹಾಸ ’ ಎಂಬ ಹೆಸರಿನಲ್ಲಿ ಮರಾಠಿಯಲ್ಲಿಯೂ ಪ್ರಕಟಿಸಿದ್ದಾರೆ. “ಮಹಾಯೋಗಿ” ಎಂಬುದು ಅರವಿಂದರ ಜೀವನವನ್ನು ಕುರಿತು ಅವರು ಇಂಗ್ಲಿಷ್‌ನಲ್ಲಿ ಬರೆದ ಗ್ರಂಥವಾಗಿದೆ. ಅವರ ‘The Power of Truth or the Essence of Gandhism’ ಎಂಬ ಪುಸ್ತಕ ಅಮೆರಿಕದಲ್ಲಿ ಪ್ರಕಟವಾಗಿದೆ.

ಗಾಂಧೀಜಿ ಕಾಂಗ್ರೆಸ್ ಸಂಘಟನೆಯ ಅನುಕೂಲಕ್ಕಾಗಿ ಭಾಷಾಮಂಡಳಗಳನ್ನು ರಚಿಸಿದಾಗ ಕರ್ನಾಟಕಕ್ಕೂ ಒಂದು ಮಂಡಳವನ್ನು ರಚಿಸುವಂತೆ ಮಾಡುವುದರಲ್ಲಿ ದಿವಾಕರರು ಪ್ರಮುಖ ಪಾತ್ರವಹಿಸಿದ್ದರು. ಕರ್ನಾಟಕ ಪ್ರಾಂತ ರಚನೆಯ ಪರವಾಗಿ ನೆಹರೂ (ಮೋತಿಲಾಲ್) ಸಮಿತಿಯ ಮುಂದೆ ದಿವಾಕರರು ಪ್ರಭಾವಶಾಲಿಯಾದ ರೀತಿಯಲ್ಲಿ ವಾದ ಮಂಡಿಸಿದ್ದಲ್ಲದೆ ೧೯೨೮ರಲ್ಲಿ ಏಕೀಕರಣದ ಬಗ್ಗೆ ದಿವಾಕರರು ಒಂದು ಪುಸ್ತಕವನ್ನೂ ಬರೆದಿದ್ದರು. ಅವರಿಗೆ ಅರುವತ್ತು ವರ್ಷ ತುಂಬಿದಾಗ ಆರ್. ಎಸ್. ಹುಕ್ಕೇರಿಕರರ ಅಧ್ಯಕ್ಷತೆಯ ಸಂಪಾದಕ ಸಮಿತಿ ಇಂಗ್ಲಿಷಿನಲ್ಲಿ ‘ಕರ್ನಾಟಕ ದರ್ಶನ’ ಎಂಬ ಬೃಹತ್ ಗ್ರಂಥವನ್ನು ಸಂಪಾದಿಸಿ ಅರ್ಪಿಸಿತ್ತು (೧೯೫೫). ಕರ್ನಾಟಕದ ಸುಪ್ರಸಿದ್ಧ ವಿದ್ವಾಂಸರು, ಚಿಂತಕರು ಅದರಲ್ಲಿ ಲೇಖನಗಳನ್ನು ಬರೆದಿದ್ದಾರೆ. ಕರ್ನಾಟಕವನ್ನು ಕುರಿತ ಅತ್ಯಂತ ಮಹತ್ವದ ಗ್ರಂಥಗಳಲ್ಲಿ ಅದೂ ಒಂದು. ಕರ್ನಾಟಕದ ಚರಿತ್ರೆ, ಸಾಹಿತ್ಯ, ತತ್ವ, ಕಲೆ, ಮಹಾವ್ಯಕ್ತಿಗಳು, ಸ್ಥಳಗಳು, ಪತ್ರಿಕಾರಂಗ, ಭಾಷೆ, ಸಂಸ್ಕೃತಿ, ಭೂಪ್ರದೇಶ, ಉದ್ಯಮ, ಇಂಜನಿಯರಿಂಗ್, ಸಹಕಾರಿರಂಗ, ಬ್ಯಾಂಕಿಂಗ್—ಹೀಗೆ ಹಲವು ವಿಷಯ ಮತ್ತು ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಮೌಲಿಕವಾದ ಲೇಖನಗಳು ಅದರಲ್ಲಿವೆ. ಪ್ರಸಿದ್ಧ ಸಾಹಿತಿಯೂ ಆಗಿದ್ದ ಅವರು ೧೯೩೮ರಲ್ಲಿ ಬಳ್ಳಾರಿಯಲ್ಲಿ ನಡೆದ ೨೩ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಕರ್ನಾಟಕ ವಿಶ್ವವಿದ್ಯಾಲಯ ಅವರಿಗೆ ಗೌರವ ಡಾಕ್ಟರೇಟ್ ಪ್ರಶಸ್ತಿ ನೀಡಿ ಗೌರವಿಸಿತ್ತು.

ಪ್ರೊ. ಎಂ. ವಿ. ಸೀತಾರಾಮಯ್ಯ

ಕನ್ನಡದ ಹಿರಿಯ ಸಾಹಿತಿಗಳೂ ಸಂಶೋಧಕರೂ ಬಿ.ಎಂ.ಶ್ರೀ. ಪ್ರತಿಷ್ಠಾನದ ಸ್ಥಾಪಕರೂ ಆಗಿದ್ದ ಪ್ರೊ. ಎಂ.ವಿ. ಸೀತಾರಾಮಯ್ಯನವರು ಮಾರ್ಚಿ ೧೨, ೧೯೯೦ ರಂದು ಬೆಂಗಳೂರಿನಲ್ಲಿ ನಿಧನಹೊಂದಿದರು. ‘ಪ್ರಬುದ್ಧ ಕರ್ಣಾಟಕ’ ಶ್ರೀಯುತರ ನಿಧನಕ್ಕಾಗಿ ತೀವ್ರ ಸಂತಾಪ ವ್ಯಕ್ತಪಡಿಸುತ್ತದೆ.

ನಾಡಿನ ಅಗ್ರಪಂಕ್ತಿಯ ಸಂಶೋಧಕರಲ್ಲಿ ಒಬ್ಬರೆನಿಸಿದ್ದ ಸೀತಾರಾಮಯ್ಯನವರು ಅಧ್ಯಯನ ಮತ್ತು ಅಧ್ಯಾಪನ ಎರಡೂ ಕ್ಷೇತ್ರಗಳಲ್ಲಿ ಅಪಾರ ಅನುಭವ

ಸಂಪಾದಿಸಿಕೊಂಡಿದ್ದವರು. ಸೆಪ್ಟೆಂಬರ್ ೯, ೧೯೧೦ರಲ್ಲಿ ಮೈಸೂರಿನಲ್ಲಿ ಜನಿಸಿದ ಅವರು ೧೯೩೧ರಲ್ಲಿ ಬಿ.ಎ. ಪದವಿಯನ್ನೂ ೧೯೩೩ರಲ್ಲಿ ಎಂ.ಎ. ಪದವಿಯನ್ನೂ ಪಡೆದುಕೊಂಡರು. ೧೯೩೪–೩೯ರ ಅವಧಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಸಹಕಾರ್ಯದರ್ಶಿಯಾಗಿಯೂ ೧೯೩೯–೪೬ರ ಅವಧಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ–ಇಂಗ್ಲಿಷ್ ನಿಘಂಟಿನ ಸಹಸಂಪಾದಕರಾಗಿಯೂ ಕೆಲಸಮಾಡಿದರು. ೧೯೪೬ ರಿಂದ ಸರ್ಕಾರಿ ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿಯನ್ನು ಪ್ರಾರಂಭಿಸಿ ೧೯೬೭ರಲ್ಲಿ ನಿವೃತ್ತರಾದರು. ಅನಂತರ ೧೯೬೮ ರಿಂದ ೭೩ರ ವರೆಗೆ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಯು.ಜಿ.ಸಿ. ಪ್ರಾಧ್ಯಾಪಕರಾಗಿಯೂ ೧೯೭೩–೭೪ರಲ್ಲಿ ಗೌರವ ಪ್ರಾಧ್ಯಾಪಕರಾಗಿಯೂ ಸೇವೆಸಲ್ಲಿಸಿದರು.

‘ರಾಘವ’ ಎಂಬ ಕಾವ್ಯನಾಮದಿಂದ ಖ್ಯಾತರಾಗಿದ್ದ ಶ್ರೀಯುತರು ನಾಡಿನ ಒಬ್ಬ ಗಣ್ಯ ಸಾಹಿತಿಯಾಗಿ, ವಿದ್ವಾಂಸರಾಗಿ ಕಾವ್ಯ, ನಾಟಕ, ಸಣ್ಣಕತೆ, ಕಾದಂಬರಿ, ಜೀವನಚರಿತ್ರೆ, ಗ್ರಂಥಸಂಪಾದನೆ, ಕಾವ್ಯಮೀಮಾಂಸೆ, ಮಕ್ಕಳ ಸಾಹಿತ್ಯ ಮುಂತಾದ ಹಲವಾರು ಸಾಹಿತ್ಯಕ್ಷೇತ್ರಗಳಲ್ಲಿ ದುಡಿದು ಒಟ್ಟು ನೂರಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದರು. ಅವರು ಸಂಪಾದಿಸಿದ ‘ಕವಿರಾಜಮಾರ್ಗ’ ವಿಶೇಷ ಉಲ್ಲೇಖಕ್ಕೆ ಅರ್ಹವಾದ ಗ್ರಂಥ. ೧೯೮೩ರಲ್ಲಿ ಎಂ.ವಿ.ಸೀ.ಯವರ ಗೆಳೆಯರು, ಶಿಷ್ಯರು, ಅಭಿಮಾನಿಗಳು ಅವರಿಗೆ ‘ಆಸ್ವಾದ’ ಎಂಬ ಅಭಿನಂದನ ಗ್ರಂಥವನ್ನು ಸಮರ್ಪಿಸಿ ಗೌರವಿಸಿದರು.

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನವನ್ನು ಸ್ಥಾಪನೆಮಾಡಿ (೧೯೭೯) ಅದರ ವತಿಯಿಂದ ಹಲವಾರು ಉಪಯುಕ್ತ ಸಾಹಿತ್ಯಿಕ ಯೋಜನೆಗಳನ್ನು ಕಾರ್ಯಗತ ಮಾಡಿದ್ದು ಎಂ.ವಿ.ಸೀ.ಯವರ ಕೊಡುಗೆಗಳಲ್ಲಿ ಮಹತ್ವಪೂರ್ಣವಾದುದು. ತಮ್ಮ ಗುರುವರ್ಯರಾಗಿದ್ದ ಆಚಾರ್ಯ ಶ್ರೀಯವರ ಬಗೆಗೆ ಎಂ.ವಿ.ಸೀ.ಯವರು ಇಟ್ಟುಕೊಂಡಿದ್ದ ಅಪಾರ ಶ್ರದ್ಧಾಭಕ್ತಿ ಈ ಪ್ರತಿಷ್ಠಾನದ ಸ್ಥಾಪನೆಗೆ ಮೂಲ ಪ್ರೇರಣೆ. ಸಂಪಾದನೆ, ಸಂಶೋಧನೆ, ಪುಸ್ತಕ ಪ್ರಕಟಣೆ, ಪ್ರದರ್ಶನ, ಹಸ್ತಪ್ರತಿಗಳ ಸಂಗ್ರಹ ಹೀಗೆ ಹಲವಾರು ದಿಕ್ಕುಗಳಲ್ಲಿ ಅವರ ನಿರಂತರ ಆಸ್ಥೆಯಿಂದ ಪೋಷಣೆ ಪಡೆದ ಪ್ರತಿಷ್ಠಾನ ಯಶಸ್ವಿಯಾಗಿ ಕೆಲಸಮಾಡುತ್ತಿದೆ. ಈ ಹೊತ್ತಿಗೆ ಸುಮಾರು ನಲವತ್ತು ಕೃತಿಗಳು ಪ್ರತಿಷ್ಠಾನದಿಂದ ಹೊರಬಂದಿವೆ. ಹೀಗೆ ಅನೇಕ ಮೌಲಿಕ ಸಾಹಿತ್ಯಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದರ ಜೊತೆಗೆ ಅದು ಹಸ್ತಪ್ರತಿಶಾಸ್ತ್ರವನ್ನು ಕುರಿತಂತೆ ಒಂದು ತರಪೇತಿ ಶಿಕ್ಷಣವನ್ನು ಕೂಡ ನಡೆಸುತ್ತಿದೆ.

ಎಂ.ವಿ.ಸೀ. ಯವರು ತಮ್ಮ ಅನಾರೋಗ್ಯವನ್ನು ಲೆಕ್ಕಿಸದೆ ನಾಡುನುಡಿಗಳ ರಕ್ಷಣೆಗೆ, ಏಳಿಗೆಗೆ ಹೋರಾಟ ನಡೆಸಿದವರು. ಕನ್ನಡದ ಬಗೆಗೆ ಅವರಲ್ಲಿದ್ದ ಅಪಾರ ಕಳಕಳಿ ಅವರನ್ನು ಕನ್ನಡದ ಒಬ್ಬ ಕಟ್ಟಾಳುವಾಗಿ ಮಾಡಿತ್ತು. ಇಳಿವಯಸ್ಸಿನಲ್ಲೂ ಕನ್ನಡನಾಡು–ಕನ್ನಡ ಭಾಷೆಯ ಕೈಂಕರ್ಯಕ್ಕೆ ತಮ್ಮನ್ನು ಅರ್ಪಿಸಿಕೊಂಡು

ನಾಡಿನಾದ್ಯಂತ ಸಂಚರಿಸಿ ಜನತೆಯಲ್ಲಿ ಕನ್ನಡತನವನ್ನು ಎಚ್ಚರಿಸಿ ಎಬ್ಬಿಸುತ್ತಿದ್ದ ಅವರ ಪುಟಿಯುತ್ತಿದ್ದ ಆಸಕ್ತಿ ಅಚ್ಚರಿಯನ್ನುಂಟುಮಾಡುವಂತಿತ್ತು. ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರಮಹೋತ್ಸವ ಸಂದರ್ಭದಲ್ಲಿ ಗ್ರಂಥಸಂಪಾದನ ಕ್ಷೇತ್ರದಲ್ಲಿ ಮಾಡಿದ ಸೇವೆಗಾಗಿ ಪ್ರಶಸ್ತಿ (೧೯೭೫), ರಾಜ್ಯಸರ್ಕಾರದಿಂದ ಆಜೀವಗೌರವ ಮಾಸಿಕವೇತನ (೧೯೭೮), 'ಕನ್ನಡ ವ್ಯಾಕರಣಗಳು' ಪುಸ್ತಕಕ್ಕೆ ರಾಜ್ಯಸಾಹಿತ್ಯ ಅಕಾದೆಮಿ ಪ್ರಶಸ್ತಿ (೧೯೮೦) ಅವರಿಗೆ ಸಂದಿತ್ತು. ಅವರ ನಿಧನದಿಂದ ಕನ್ನಡ ನಾಡುನುಡಿಗಳ ಏಳಿಗೆಗಾಗಿ ತೀವ್ರ ಕಳಕಳಿಯನ್ನು ವ್ಯಕ್ತಪಡಿಸುತ್ತಿದ್ದ ಗಣ್ಯ ಸಾಧಕ-ವಿದ್ವಾಂಸರೊಬ್ಬರನ್ನು ನಾವು ಕಳೆದುಕೊಂಡಂತಾಗಿದೆ.

ಪ್ರೊ. ಬಿ. ಎಚ್. ಶ್ರೀಧರ

ಏಪ್ರಿಲ್ ೨೫, ೧೯೯೦ರಂದು ನಿಧನರಾದ ಪ್ರೊ. ಬಿ. ಎಚ್. ಶ್ರೀಧರ ಕನ್ನಡ ನಾಡಿನ ಬಹುಶ್ರುತ ವಿದ್ವಾಂಸರಲ್ಲಿ ಒಬ್ಬರು. ಸಂಸ್ಕೃತ, ಕನ್ನಡ, ಇಂಗ್ಲಿಷ್ ಭಾಷೆಗಳನ್ನು ಚೆನ್ನಾಗಿ ತಿಳಿದವರಾಗಿದ್ದ ಅವರು ಅಧ್ಯಾಪಕರಾಗಿ, ಲೇಖಕರಾಗಿ, ಅನುವಾದಕರಾಗಿ ಕೆಲಸಮಾಡಿದವರು. ಅವರ ಅಧ್ಯಯನ ಹಾಗೂ ಬರವಣಿಗೆಯ ಆಸಕ್ತಿ ಬಹುಮುಖಿಯಾಗಿತ್ತು.

ದಕ್ಷಿಣಕನ್ನಡ ಜಿಲ್ಲೆಯ ಕುಂದಾಪುರದಲ್ಲಿ ಮಾರ್ಚಿ ೫, ೧೯೧೮ ರಂದು ಜನಿಸಿದ ಶ್ರೀಧರ ಅವರ ಕಾರ್ಯಕ್ಷೇತ್ರವೆಲ್ಲ ಬಹುಮಟ್ಟಿಗೆ ಉತ್ತರಕನ್ನಡ ಜಿಲ್ಲೆಯೆ ಆಗಿತ್ತು. ಪುಣೆಯ ಸೈನಿಕ ಕಚೇರಿಯೊಂದರಲ್ಲಿ ವೃತ್ತಿಜೀವನವನ್ನು ಪ್ರಾರಂಭಿಸಿದ ಅವರು ಅನಂತರ ಅಧ್ಯಾಪನ ಕ್ಷೇತ್ರಕ್ಕೆ ಮಡಿಪಾಗಿ ಕುಮಟಾ, ಸಿರ್ಸಿ ಮುಂತಾದೆಡೆಗಳಲ್ಲಿ ಸೇವೆಸಲ್ಲಿಸಿ ಸಿದ್ಧಾಪುರ ಕಾಲೇಜಿನಲ್ಲಿ ಪ್ರಿನ್ಸಿಪಾಲರಾಗಿ ನಿವೃತ್ತರಾದರು.

ಶ್ರೀಧರರವರ 'ಕಾವ್ಯಸೂತ್ರ' ಗ್ರಂಥಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣಮಹೋತ್ಸವ ಪ್ರಶಸ್ತಿ, ತೀ.ನಂ.ಶ್ರೀ. ಸ್ಮಾರಕ ಬಹುಮಾನ, ಕರ್ನಾಟಕ ಸಾಹಿತ್ಯ ಅಕಾದೆಮಿ ಬಹುಮಾನ ದೊರೆತಿವೆ. ಅವರು ಸುಮಾರು ಆರು ಕವನ ಸಂಗ್ರಹಗಳನ್ನೂ ಮೂರು ಅನುವಾದ ಕೃತಿಗಳನ್ನೂ ಹೊರತಂದಿದ್ದಾರೆ. 'ಭಾರತೀಯ ನಾಗರಿಕತೆಗೆ ಮನುವಿನ ಕೊಡುಗೆ', 'ಪಂಚಮುಖಿ', 'ರಾಷ್ಟ್ರಸೂತ್ರ' ಮುಂತಾದುವು ಅವರ ಕೆಲವು ಪಾಂಡಿತ್ಯಪೂರ್ಣ ಕೃತಿಗಳು. 'ಮರುಳಸಿದ್ಧನ ಮಹಾವಚನಗಳು' ಮತ್ತು 'ಭಾಷಣ ಭೈರವರ ಒಡ್ಡೋಲಗ' ಶ್ರೀಧರ ಅವರ ವಿಡಂಬನಶೈಲಿಯ ಕೃತಿಗಳು. 'ಭಾರತೀಯ ಮೂರ್ತಶಿಲ್ಪ' ಹಾಗೂ 'ಜ್ಞಾನಸೂತ್ರ' ಎಂಬ ಅವರ ಕೃತಿಗಳು ಕೂಡ ಇಲ್ಲಿ ಉಲ್ಲೇಖಾರ್ಹವಾಗಿವೆ.

ಹೊಸಗನ್ನಡ ಗದ್ಯಶೈಲಿಯ ಬಗೆಗೆ ವಿಶ್ಲೇಷಣೆ ಮಾಡಿದ ನಮ್ಮ ಪ್ರಮುಖ ಲೇಖಕರಲ್ಲಿ ಶ್ರೀಧರ ಅವರು ಕೂಡ ಒಬ್ಬರು. ಉತ್ತರಕನ್ನಡ ಜಿಲ್ಲೆಯ

ಮೂರನೆಯ ಜಿಲ್ಲಾ ಸಾಹಿತ್ಯ ಸಮ್ಮೇಳನಕ್ಕೂ ೫೫ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಾಹಿತ್ಯಗೋಷ್ಠಿಗೂ ಅವರು ಅಧ್ಯಕ್ಷರಾಗಿದ್ದರು.

ಬದುಕು, ಸಾಹಿತ್ಯ, ಸಂಸ್ಕೃತಿಗಳ ವಿಚಾರದಲ್ಲಿ ಅಪಾರ ಕಾಳಜಿಯನ್ನು ಹೊಂದಿದ್ದ ಪ್ರೊ. ಶ್ರೀಧರ ಅವರ ನಿಧನಕ್ಕಾಗಿ 'ಪ್ರಬುದ್ಧ ಕರ್ಣಾಟಕ' ಸಂತಾಪ ಸೂಚಿಸುತ್ತದೆ.

ಡಾ. ಗುಂಡ್ಮಿ ಚಂದ್ರಶೇಖರ ಐತಾಳ

ಮಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಇಲಾಖೆಯಲ್ಲಿ ಪ್ರಾಧ್ಯಾಪಕರಾಗಿದ್ದ ಹೆಸರಾಂತ ವಿದ್ವಾಂಸ-ಸಾಹಿತಿ ಡಾ. ಗುಂಡ್ಮಿ ಚಂದ್ರಶೇಖರ ಐತಾಳರು ಫೆಬ್ರವರಿ ೧೪, ೧೯೯೦ರಂದು ನಿಧನಹೊಂದಿದರು. ಗುಂಡ್ಮಿಯವರ ನಿಧನಕ್ಕಾಗಿ 'ಪ್ರಬುದ್ಧ ಕರ್ಣಾಟಕ' ಸಂತಾಪ ಸೂಚಿಸುತ್ತದೆ.

ಸುಮಾರು ಮೂವತ್ತೈದು ಗ್ರಂಥಗಳನ್ನೂ ನೂರಾರು ವಿದ್ವತ್ಪೂರ್ಣ ಲೇಖನಗಳನ್ನೂ ಪ್ರಕಟಿಸಿದ್ದ ಗುಂಡ್ಮಿಯವರ ಸಾಹಿತ್ಯಾಸಕ್ತಿ ವೈವಿಧ್ಯಮಯವಾಗಿತ್ತು. ಅವರ ಜಾನಪದ ಕೃತಿಗಳಾದ 'ಕೈಲಿಯ ಕರೆದ ನೊರೆಹಾಲು' (೧೯೭೨) ಪುಸ್ತಕಕ್ಕೆ ರಾಜ್ಯ ಸಾಹಿತ್ಯ ಅಕಾದೆಮಿ ಪ್ರಶಸ್ತಿಯೂ 'ಮದ್ದಂಟ್ ಜನನ ಮರಣಕ್ಕೆ' (೧೯೭೬) ಪುಸ್ತಕಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣೋತ್ಸವ ಪ್ರಶಸ್ತಿಯೂ ದೊರೆತಿದ್ದವು. 'ಮಾತೃಸಂಹಿತೆ' (೧೯೭೦) ಶ್ರೀಯುತರು ರಚಿಸಿದ ೧೦೦ ವಚನಗಳ ಸಂಕಲನ. 'ಗುಂಡುಸೂಜಿ' ಅವರ ಆತ್ಮಸಂವೇದನೆಯ ಕವನ ಸಂಗ್ರಹ. 'ಪೂರ್ಣಕುಂಭ' ಹಾಗೂ 'ಮಂಗಳ ಗಂಗೆ' ಅವರು ಸಂಪಾದನೆ ಮಾಡಿದ ಗ್ರಂಥಗಳು. 'ಸಿರಿಯಾಳ', 'ಬೆಳಕಿನ ಬೀಜ', 'ಸಮಾರಾಧನ' ಅವರ ಇತರ ಕೆಲವು ಉಲ್ಲೇಖಾರ್ಹ ಕೃತಿಗಳು. 'ಡಿ.ವಿ.ಜಿ. ಅವರ ಸಾಹಿತ್ಯ ಕೃತಿಗಳು-ಒಂದು ಅಧ್ಯಯನ' ಗುಂಡ್ಮಿಯವರ ಸಂಶೋಧನ ಮಹಾಪ್ರಬಂಧ.

ಜನವರಿ ೨೦, ೧೯೩೬ರಲ್ಲಿ ಉಡುಪಿ ತಾಲ್ಲೂಕಿನ ಗುಂಡ್ಮಿಯಲ್ಲಿ ಜನಿಸಿದ ಚಂದ್ರಶೇಖರ ಐತಾಳರು ೧೯೬೧ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಎಂ.ಎ. ಪದವೀಧರರಾಗಿ ಅನಂತರ ಹೆಚ್ಚುಕಾಲ ಸೇವೆಸಲ್ಲಿಸಿದ್ದು ಮಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಇಲಾಖೆಯಲ್ಲಿಯೆ. ನಿಧನರಾಗುವ ಸ್ವಲ್ಪ ಮೊದಲಿಗೆ ಅವರು 'ಕಲಾದರ್ಶನ' ಪತ್ರಿಕೆಯಲ್ಲಿ ಬರೆಯಲಾರಂಭಿಸಿದ್ದ 'ನನ್ನ ಜೀವನ ದರ್ಶನ' ಎಂಬ ಧಾರಾವಾಹಿಮಾಲಿಕೆ ಸಾಕಷ್ಟು ಜನಪ್ರಿಯತೆಯನ್ನು ಗಳಿಸಿತ್ತು.

ಕೆ.ಸಂ. ೩೧೫೯೪—ಎಂ.ಯು.ಪಿ.ಎಂ.—೮೨೫ ಪ್ರತಿಗಳು—೨-೪-೯೧

‘ಪ್ರಬುದ್ಧ ಕರ್ಣಾಟಕ’ಕ್ಕೆ ವಿನಿಮಯವಾಗಿ ಬರುವ ಪತ್ರಿಕೆಗಳು

Annals of Oriental Research, University of Madras, *Brahmavidya*, Adyar, Madras; *Bulletin of the School of Oriental and African Studies*, London; *Journal of the Andhra Historical Research Society*, Rajahmundry; *Journal of the Karnataka Historical Research Society*, Dharwar; *Quarterly Journal of the Mythic Society*, Bangalore; *The Indian P.E.N.*, Bombay; *Annals of the Venkateswara Oriental Institute*, Tirupati; *The Jaina Siddhanta Bhaskara and the Jaina Gazette*, Arrah; *Bulletin of the Deccan College Research Institute*, Poona; *Publication of the Kannada Research Office*, Dharwar; *Annals of the Bhandarkar Oriental Research Institute*, Poona; *Journal of the Karnataka University*, Dharwar; *Public Affairs*, Bangalore.

‘ಪ್ರಪಂಚ’, ಹುಬ್ಬಳ್ಳಿ; ‘ಆಂಧ್ರ ಸಾಹಿತ್ಯ ಪರಿಷತ್ಪತ್ರಿಕೆ’ (ತೆಲುಗು), ಕಾಕಿನಾಡ; ‘ಪುಸ್ತಕ ಪ್ರಪಂಚ’, ಮೈಸೂರು; ‘ಕನ್ನಡ ನುಡಿ’, ಬೆಂಗಳೂರು; ‘ಸೋವಿಯೆತ್ ದೇಶ’, ಮದ್ರಾಸು; ‘ಪ್ರಕಾಶ’, ಉಡುಪಿ; ‘ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ’, ಬೆಂಗಳೂರು; ‘ಕರ್ಣಾಟಕ ಭಾರತಿ’, ಧಾರವಾಡ; ‘ಸಾಧನೆ’, ಬೆಂಗಳೂರು. ‘ಪರಂಜ್ಯೋತಿ’, ಹುಬ್ಬಳ್ಳಿ; ‘ಸಪ್ತಗಿರಿ’, ತಿರುಪತಿ; ‘ಲೋಚನ’, ಬೆಂಗಳೂರು; ‘ತುಳುವ’, ಉಡುಪಿ.

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

★ ಪ್ರಬುದ್ಧ ಕರ್ನಾಟಕ

★ ಮಾನವಿಕ ಕರ್ನಾಟಕ

★ ವಿಜ್ಞಾನ ಕರ್ನಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ಐದು ರೂಪಾಯಿ
ಇತರರಿಗೆ	....	ಹತ್ತು ರೂಪಾಯಿ
ಸಂಸ್ಥೆಗಳಿಗೆ	....	ಹದಿನೈದು ರೂಪಾಯಿ

(ಆಜೀವ ಸದಸ್ಯತ್ವ: ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ನಿರ್ದೇಶಕರು
'ಪ್ರಸಾರಾಂಗ'
ಮಾನಸಗಂಗೋತ್ರಿ, ಮೈಸೂರು–೫೭೦ ೦೦೬